OSMANIA UNIVERSITY
COLLEGE LIBRARY.

ಕರ್ಣಾಟಕ ಕಾವ್ಯಕಲಾನಿಧಿ. ಸಂ. ೨೩

# ಭಾಸ್ಕರ ಕವಿ

ರಚಿತ

# ಜೀವಂಧರ ಚರಿತೆ

|| ಭಾಮಿನೀ ಷಟ್ಪದಿ ||

ಮಂ. ಆ. ರಾಮಾನುಜಯ್ಯಂಗಾರ್ಯರಿಂದ
ಪರಿಶೋಧಿಸಲ್ಪಟ್ಟಿತು.

ಕವಿಚರಿತೆ ವಿಷಯಸೂಚಿ ಪಾಠಾಂತರಗಳೊಡನೆ

ಮೈಸೂರು
ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಮುದ್ರಿತವಾಯಿತು.
1908.

UNIVERSAL LIBRARY
OU_200555
UNIVERSAL LIBRARY

OSMANIA UNIVERSITY LIBRARY

Call No. K81·1/B96T Accession No. K77

Author [illegible]

Title [illegible] 1908

This book should be returned on or before the date last marked below.

Registered according to Act XXV of 1867.

# ವಿಷಯಸೂಚಿ


**ಸಂಧಿ ೧—ಪೂರ್ವಪ್ರಸಂಗ—(ಪುಟ ೧—೧೧)**

ಜಿನಸ್ತುತಿ ; ಸಿದ್ಧ, ಆಚಾರ್ಯ, ಉಪಾಧ್ಯಾಯ, ಸಾಧು—ಇವರುಗಳ ಸ್ತುತಿ ; ಸರಸ್ವತಿಯ ಸ್ತುತಿ ; ಅನುಬದ್ಧಕೇವಲಿಗಳು ಮೊದಲುಗೊಂಡು ಸಚ್ಚಾರಿತ್ರ ಭೂಷಣರ ವರೆಗೆ ಗುರುಗಳ ಸ್ತವನ ; ಕವಿತಾ ಪ್ರಶಂಸೆ; ಸಮವಸರಣ ; ಸುಧರ್ಮ ಮುನಿಪನು ಜೀವಂಧರನ ಚರಿತೆಯನ್ನು ಮಗಧೇಂದ್ರನಿಗೆ ಹೇಳುತ್ತಾನೆ.

**ಸಂಧಿ ೨—ಅಧಿರಾಜವರ್ಣನ—(ಪುಟ ೧೧—೨೫)**

ಆರ್ಯಖಂಡದ ಹೇಮಾಂಗವಿಷಯದ ರಾಜಪುರಿಯಲ್ಲಿ ಸತ್ಯಂಧರನ ಮತ್ತು ಆತನ ಪತ್ನಿಯ ವರ್ಣನೆ.

**ಸಂಧಿ ೩—ಕಾಷ್ಠಾಂಗಾರನ ಪೂರ್ವಕಥೆ—(ಪುಟ ೨೫—೩೩)**

ಸತ್ಯಂಧರನು ಕಾಷ್ಠಾಂಗಾರನ ಹವಣರಿದು, ಆತನನ್ನು ತನಗೆ ಮಂತ್ರಿಯಾಗಿ ಮಾಡಿಕೊಂಡುದು.

**ಸಂಧಿ ೪—ಸತ್ಯಂಧರನ ವಧಸ್ಥಿತಿ—(ಪುಟ ೩೪—೫೪)**

ವೃದ್ಧರಾದ ಮಂತ್ರಿಗಳು ಬೇಡವೆಂದರೂ ಕೇಳದೆ, ಸತ್ಯಂಧರನು ಕಾಷ್ಠಾಂಗಾರನಿಗೆ ಮಂತ್ರಿತ್ವವನ್ನು ಕೊಟ್ಟು, ಆ ದುರುಳನಿಂದ ಸುರಪುರವನ್ನೈದಿದುದು.

**ಸಂಧಿ ೫—ಕುಮಾರೋದಯವರ್ಣನೆ—(ಪುಟ ೫೪—೬೩)**

ಜೀವಂಧರನು ವನದೊಳಗೆ ಜನಿಸಿ, ಗಂಧೋತ್ಕಟನೆಂಬ ವಣಿಗ್ವರನ ಮನೆಯಲ್ಲಿ ಐನೂರು ಕುಮಾರರೊಡನೆ ಬಳೆದು ಸಕಲ ವಿದ್ಯೆಗಳಲ್ಲಿ ವಿಶಾರದನಾಗಿ ರಂಜಿಸಿದುದು.

**ಸಂಧಿ ೬—ಗೋಗ್ರಹಣಪ್ರಶಸ್ತಿ—(ಪುಟ ೬೩—೮೦)**

ದುರುಳ ಕಾಷ್ಠಾಂಗಾರನು ಶಬರರು ಹಿಡಿದು ಕೊಂಡುಹೋದ ತುರುಗಳನ್ನು ಮರಳಿಸಲಾಗದೆ ಹೋಗಲು, ಜೀವಂಧರನು ಆ ಶಬರರನ್ನು ಒರಸಿ, ಆ ತುರುಗಳನ್ನು ಮರಳಿಸಿದುದು.

**ಸಂಧಿ ೭—ಸ್ವಯಂವರಮಂಟಪಸ್ತುತಿ—(ಪುಟ ೮೨—೯೩)**

ವಾಣಿಜವರನಾದ ಶ್ರೀದತ್ತನು ಗಂಧರ್ವದತ್ತೆಗೆ ಸ್ವಯಂವರವೆಂದು ನಾನಾ ದೇಶದ ಅರಸುಗಳಲ್ಲಿ ಸಾರಿಸಲು, ಅರಸುಗಳ ಬರುವಿಕೆ.

**ಸಂಧಿ ೮—ಸಕಲಭೂಪಾವಲೋಕನ—(ಪುಟ ೯೩—೧೦೭)**

ಗಂಧರ್ವದತ್ತೆಯು ಸ್ವಯಂವರಮಂಟಪಕ್ಕೆ ಬಂದು, ಅಲ್ಲಿ ನೆರೆದಿದ್ದ ಭೂಮಿಪಾಲಕರ ಕುಡಿತೆಗಣ್ಣಲಿ ಮೊಗೆದು ಸೂಸಿದುದು.

ಸಂಧಿ ೯—ವೈವಾಹಪ್ರವರ್ಣನೆ—(ಪುಟ ೧೦೭—೧೧೬)

ಸಮಸ್ತರಾಜರನ್ನು ಜರೆದುಳಿಹ ಗಂಧರ್ವದತ್ತೆಯನ್ನು ಜೀವಂಧರನು ಗಾಂಧರ್ವ ವಿದ್ಯೆಯಲ್ಲಿ ಮೆಚ್ಚಿಸಿ, ವರಿಸಿ, ಪ್ರತಿಭಟಿಸಿದ ನೃಪಾಲರನ್ನು ಗೆಲ್ದುದು.

ಸಂಧಿ ೧೦—ಗುಣಮಾಲೆಯ ವಿವಾಹ—(ಪುಟ ೧೧೬—೧೨೬)

ಜೀವಂಧರನು ಒಂದು ಶನಕಗೆ ಸದ್ಗತಿಯನ್ನು ವಿರಚಿಸಿದುದು ; ಮತ್ತು ಗುಣಮಾಲೆಯನ್ನು ಪರಿಣಯವಾದುದು.

ಸಂಧಿ ೧೧—ಪದ್ಮಾಸಂಗವರ್ಣನೆ—(ಪುಟ ೧೨೬—೧೩೨)

ಮರಣಭಯವನ್ನು ಯಕ್ಷನಿಂದ ಪರಿಹರಿಸಿಕೊಂಡು, ಸಂಚಾರಹೊರಟು, ಪದ್ಮೆಯೆಂಬವಳನ್ನು ಮದುವೆಯಾದುದು.

ಸಂಧಿ ೧೨—ಕನಕಮಾಲೆಯ ವಿವಾಹ—(ಪುಟ ೧೩೨—೧೪೨)

ಅರಣ್ಯದಲ್ಲಿ ಮಿಥ್ಯಾ ತಪಸ್ವಿಗಳಿಗೆ ಧರ್ಮಬೋಧನೆಮಾಡಿ, ಬಳಿಕ ವಿಮಳಪುರಕ್ಕೆ ಬಂದು ಅಲ್ಲಿ ಚೈತ್ಯಾಲಯದ ಕವಾಟಗಳ ತೆಗೆಯಿಸಿ, ಕ್ಷೇಮಲಕ್ಷ್ಮಿಯನ್ನು ವಿವಾಹವಾಗಿ, ಮುಂದೆ ಬರುತ್ತ, ಕ್ಷೇಮಪುರದಲ್ಲಿ ಕನಕಮಾಲೆಯನ್ನು ವಿವಾಹವಾದುದು.

ಸಂಧಿ ೧೩—ಕುಮಾರಪುರಪ್ರವೇಶ—(ಪುಟ ೧೪೨—೧೪೭)

ಜೀವಂಧರನು ತನ್ನ ಜನನಿಯು ಇರುವಿಕೆಯನ್ನು ಸಖರಿಂದ ತಿಳಿದು, ಆಕೆಯನ್ನು ಗೋವಿಂದನಲ್ಲಿರಿಸಿ, ಸಖರು ಸಹ ರಾಜಪುರಿಗೆ ಬಂದುದು.

ಸಂಧಿ ೧೪—ಸುರಮಂಜರಿಯ ಪರಿಣಯ-(ಪುಟ ೧೪೮-೧೫೪)

ರಾಜಪುರಿಯಲ್ಲಿ ವಿಮಲೆಯನ್ನೂ ಸುಂದರಿಯಾದ ಸುರಮಂಜರಿಯನ್ನೂ ವಿವಾಹವಾದುದು.

ಸಂಧಿ ೧೫—ಪಟ್ಟೋತ್ಸಾಹವರ್ಣನೆ—(ಪುಟ ೧೫೫—೧೬೬)

ಜೀವಂಧರನು ಚಾಪದೊಳತುಳಯಂತ್ರವನ್ನು ಮುರಿದು, ಲಕ್ಷ್ಮಿಯನ್ನು ಪಡೆದು, ಪ್ರತಿಭಟಿಸಿದ ಕಾಷ್ಠಾಂಗಾರನನ್ನು ಯುದ್ಧದಲ್ಲಿ ಕೊಂದು, ರಾಜ್ಯವನ್ನು ಪರಿಪಾಲಿಸಿದುದು.

ಸಂಧಿ ೧೬—ನಂದನವನವಿಹಾರಣ—(ಪುಟ ೧೬೬—೧೮೧)

ಲಲನೆಯರು ಸಹಿತ ಜೀವಂಧರನು ನಂದನವನದೊಳಗೆ ಎರಡುಮಾಸ ವಿಹಾರದಲ್ಲಿ ಕಳೆದುದು ; ರಾಜಧಾನಿಗೆ ಆಗಮನ.

ಸಂಧಿ ೧೭—ಪುರರಾತ್ರೀವಿಹಾರ—(ಪುಟ ೧೮೧—೧೯೯)

ಜೀವಂಧರನು ರಾತ್ರಿಯಲ್ಲಿ ಪುರವನ್ನು ಸಂಚರಿಸಿದುದು.

ಸಂಧಿ ೧೮—ನಿರ್ವಾಣಾದಿವರ್ಣನೆ—(ಪುಟ ೧೯೯—೨೦೩)

ಜೀವಂಧರನು ವೈರಾಗ್ಯಹೊಂದಿ, ರಾಜ್ಯಭಾರವನ್ನು ತನ್ನ ಸುತ ವಸುಂಧರಗಿತ್ತು, ತಪದುನ್ನತಿಯಿಂದ ಮೋಕ್ಷಸಂಪದವನ್ನು ಪಡೆದುದು.

ಭಾಸ್ಕರ ಕವಿರಚಿತ

# ಜೀವಂಧರ ಚರಿತೆ

|| ಭಾಮಿನಿಷಟ್ಪದಿ ||

**ಸೂಚನೆ**|| ರಾಯಮಗಧನೃಪೇಂದ್ರಚಂದ್ರನ |
ಜೀಯನೆನಿಪ ಸುಧರ್ಮಮುನಿಪನು |
ವಾಯಿಯಿಂದಱುಹಿದನು ಜೀವಂಧರನ ಸುಚರಿತೆಯ ||

ಶ್ರೀಮದಖಿಳೇಂದ್ರೋತ್ತಮಾಂಗ |
ಸ್ತೋಮಮಣಿಮಕುಟಾಂಶುಚಂಚ |
ತ್ಕೋಮಲಾಂಘ್ರಿದ್ವಯನಚಿಂತ್ಯನಜಾತನದ್ವಿತಯ ||
ಕಾಮಮದಹರನಮಳಮುಕ್ತಿ |
ಶ್ರೀಮುಖಾಬ್ಜದಿನೇಶನರ್ಹ |
ತ್ಸ್ವಾಮಿ ಮುದದಿಂದೀಗೆಮಗೆ ಕೈವಲ್ಯಸಂಪದವ || ೧

ದುರಿತಸಂತಾನಾಷ್ಟಕವನಪ |
ಹರಿಸಿ ನಿಜಗುಣವೆಂಟು ಮೆಯ್ದೋ |
ಱಿರಲು ಲೋಕಾಗ್ರದಲಿ ನಿತ್ಯಾನಂದಚಿದ್ರೂಪ ||
ಸ್ಥಿರದಲಿರೆ ಸುಜ್ಞಾನ ಪಸರಿಸಿ |
ಪರಮಮುಕ್ತಿಶ್ರೀಗೆ ಪತಿಯಾ |
ದುರುತರಶ್ರೀಸಿದ್ಧರೆಮಗೀಗೊಲಿದು ಸುಖಪದವ || ೨

ಮನಮನಮಳಗುಣಾವಳಿಗಳಿಂ |
ದನುವರದೊಳೊಡೆಪಿಗಿದು ಹೃಜ್ಜಾ |
ತನ ಭುಜೋನ್ನತಿಫಲವ ಪಂಚಾಚಾರದಿಂ ತುಱಿದು ||
ಜಿನಮತವ ಭವ್ಯಾಳಿಗೊಲಿದಿಂ |
ದನುಕರಿಸಿದಾಚಾರ್ಯರಚಲಿತ |
ರನಘರಕ್ಷಯರೀಗೆ ವಿಮಳಾಚಾರಸಂಪದವ || ೩

ಪರಮಭವ್ಯಾವಳಿಗೆ ಸವ್ಯ |
ಗ್ದರುಶನ ಜ್ಞಾನ ಪ್ರವಿಮಳಾ |
ಚರಿತಗಳು ಸುಖಪದವನನುರಾಗಾದಿಗಳು ಜನನ ||
ಮರಣಭಯಗಳನೀವುವೆಂದುರು |
ತರದಿ ಸದ್ಭೇದಗಳ ಮಿಗೆ ವಿ |
ಸ್ತರದಿ ಪೇಳುವುವಾಧ್ಯರೀಗೆಮಗಮಳಸುಖಪದವ || ೪
ಶಮತಪಶ್ಶೀಲಾದಿಗಳ ತಾ |
ಳ್ದಮಿತಕರಣಗ್ರಾಮಗಳನಾ |
ಕ್ರಮಿಸಿ ಕರುಣಾರಸವನಾತಿಥಿಮಾಡಿ ಹೃತ್ಪದಕೆ ||
ವಿಮಳತತ್ವಜ್ಞಾನವನು ಪಡೆ |
ದಮಳಗುಣಯುತರಪ್ಪ ಸಾಧುಗ |
ಳೆಮಗೆ ಮುದದಿಂ ಸಾಧುಪದಗಳನೀವುದೊಲವಿನಲಿ || ೫
ನುತಜನಾಂತರ್ದೃಷ್ಟಿ ಕವಿತೋ |
ನ್ನತಲತಾಮೃತವೃಷ್ಟಿ ಸರಸೋ |
ದಿತವಿನೂತನಸೃಷ್ಟಿ ಪರಮಬ್ರಹ್ಮತನುಪುಷ್ಟಿ ||
ಚತುರವಿಬುಧೋತ್ಕೃಷ್ಟಿ ರತ್ನ |
ತ್ರಿತಯಮಾಲಾಯಷ್ಟಿ ಪರಿಶೋ |
ಧಿತಸರಸ್ವತಿ ಸಾರ್ದಿರೆನ್ನಯ ಹೃದಯಕಮಲದಲಿ || ೬
ಅನಘರಜರನುಬದ್ಧಕೇವಲಿ |
ಯೆನಿಸಿದಮಳಸುಧರ್ಮಗೌತಮ |
ವಿನುತಜಂಬೂಗಣಧರರು ಸಾಧನವಿದೆಂದೆನಿಪ ||
ಅನುಪಮಶ್ರುತಪೂಜೆಯನು ಭವ |
ಘನತಮವನೊಟ್ಟೈಸಿ ಬೆಳಗುವ |
ನನುನಯದ ರತ್ನತ್ರಯವನೆಮಗೀವುದೊಲವಿನಲಿ || ೭
ನುತನವಶ್ರುತಕೇವಲಿಗಳೆಂ |
ಬತುಳವಿಷ್ಣುವ್ರತಿಪನಪರಾ |
ಜಿತಮುನೀಶ್ವರನಂದಿಯತಿಪತಿಭದ್ರಬಾಹುಮುನಿ ||
ವಿತತಗೋವರ್ಧನಮುನೀಶ್ವರ |
ರತಿಶಯಾನಂದದಲಿ ನಿರ್ಮಳ |
ಶ್ರುತಸಮಾರಾಧನೆಯನೆಮಗೊಲಿದೀವುದೊಲವಿನಲಿ || ೮

ಭೂತಬಲಿಮುನಿ ಪುಷ್ಪದಂತ |
ಖ್ಯಾತರುಜ್ವಲವೀರಜಿನಸೇ |
ನಾತಿಶಯರಕಳಂಕಕವಿಪರಮೇಷ್ಠಿಸೂರಿಗಳು ||
ಪೂತಚರಿತಸಮಂತಭದ್ರರ |
ಜಾತರೆನಿಸುವ ಕುಂಡಕುಂದಾ |
ದ್ಯಾತಿಶಯದಾಚಾರ್ಯರೀಗೆಮಗಮಳಸುಖಪದವ || ೯

ಘೋರಭವವಾರಾಶಿತೀರೋ |
ತ್ತಾರರಕ್ಷಯರಚಲಘನಕಾಂ |
ತಾರವಿಪಿನಕುಠಾರರನುಪಮರಮಳ[ಗುಣ]ಯುತರು ||
ಮಾರಹರರುರುವಾದಿಗಜಕಂ |
ಠೀರವರು ತಾವೆನಿಪ ಪೂರ್ವಾ |
ಚಾರಿಯರು ಕಾರುಣ್ಯದಿಂದೆಮಗೀಗೆ ಸನ್ಮತಿಯ || ೧೦

ನೆಟ್ಟುಗೊಂಡಘಕಾಷ್ಟಮದಗಳ |
ಕಟ್ಟಿ ಪರವಾದಿಗಳ ಗೆಲಿದೆ |
ಜ್ಜಿಟ್ಟಿ ಜಿನಧರ್ಮವನು ಸಂಸ್ಥಾಪಿಸಿ ಭವಾಟವಿಯ ||
ಸುಟ್ಟಘವನೊಡಮೆಟ್ಟಿ ಕಾಮನ |
ಸಿಟ್ಟಿಲುವ ಮುರಿದಚಳಿತನ ಮನ |
ಮುಟ್ಟಿ ನೆನೆವೆನು ವಿಮಳಪಂಡಿತದೇವಮುನಿವರನ || ೧೧

ಸಾರಜೈನಾಚಾರಪಾರಾ |
ವಾರವರ್ಧನಚಂದ್ರನಘಮದ |
ವಾರಣೇಂದ್ರಮೃಗೇಂದ್ರನುರುಭವ್ಯಾಬ್ಜದಿವಸೇಂದ್ರ ||
ಮಾರಮಾಘಸಮೀರ ಘನಸಂ ||
ಸಾರವಿಪಿನಕುಠಾರ ಧೀರ ಕು |
ಮಾರಸೇನಮುನೀಂದ್ರನೆಮಗೊಲಿದೀಗೆ ಸುಚರಿತವ || ೧೨

ದುರಿತಗಳನೊಡೆಮೆಟ್ಟಿ ಗುಣಗಳ |
ಧರಿಸಿ ಕಾಮನ ಕಾರ್ಮುಕವ ಕ |
ತ್ತರಿಸಿ ಪುಸ್ತಕಕೆಸೆವ ಕಂಪಿಯ ರಚಿಸಿ ಸದ್ಗುಣವ ||
ಭರದಿ ದಾರವ ಮಾಡಿ ಧರಿಸಿದ |
ವರರತಿಯ ಜಱಿದಚಳಿತನ ಸು |
ಸ್ಥಿರದಿ ನೆನೆವೆನು ವರ್ಧಮಾನಮುನೀಂದ್ರಚಂದ್ರಮನ || ೧೩

ಕರ್ಮಗಳನೊಡೆದುಱಿದು ಮಿಥ್ಯಾ |
ದುರ್ಮತಂಗಳನುಱಿದು ನಿರುಪಮ |
ನಿರ್ಮಳತ್ವವ ತಳೆದು ಭವಗಳನುಱಿದು ಸ್ಯಾದ್ವಾದ ||
ಧರ್ಮಶಾಸ್ತ್ರಜಿನಾಗಮುವನತಿ |
ಕೂರ್ಮೆಯಲಿ ಭವ್ಯಾಳಿಗಱುಹುವ |
ಧರ್ಮಭೂಷಣಮುನಿಪನೊಲವಿಂದೀಗೆ ಸದ್ಗುಣವ || ೧೪

ಶಾರದೆಯು ತಾಯುವುಳಪುರುಷಾ |
ಕಾರವನು ತಾಳ್ವಂತೆ ಧೀರಕು |
ಮಾರಸೇನಯತೀಶ್ವರನ ಕರುಣಾವಭಾವದಲಿ ||
ಚಾರುವಿದ್ಯಾವಳಿಯ ಪಡೆದಾ |
ಚಾರವನು ಭವ್ಯಾಳಿಗಱುಹುವ |
ವೀರಸೇನಮುನೀಂದ್ರನೆಮಗೊಲಿದೀಗೆ ಸುಚರಿತವ || ೧೫

ಗೋತ್ರಧೈರ್ಯನಕಾಂಕ್ಷನಮಳಪ |
ವಿತ್ರನನುಪಮಭವ್ಯಜನಶತ |
ಪತ್ರಮಿತ್ರನೆ ಸಾರಸಂಸಾರಾರ್ಣವೋತ್ತಾರ ||
ಧೈತ್ರನುಜ್ಜ್ವಲಗಾತ್ರನುರುರ |
ತ್ನತ್ರಯಾಭರಣಾಂಕ ಸಚ್ಚಾ |
ರಿತ್ರಭೂಷಣ ಮುನಿಪನೊಲವಿಂದೀಗೆ ಸತ್ಪಥವ || ೧೬

ಯುಕ್ತಿಯಿಲ್ಲದ ಭೂವರನು ಪತಿ |
ಭಕ್ತಿಯಿಲ್ಲದ ಕಾಂತೆ ಸರ್ವವಿ |
ಮುಕ್ತನಲ್ಲದ ಮುನಿಪನೋದದ ಪಾರ್ವ ಸನ್ಮಂತ್ರ ||
ಶಕ್ತಿಯಿಲ್ಲದ ಸಚಿವ ಸದ್ಗುಣ |
ಯುಕ್ತನಲ್ಲದ ಮಿತ್ರ ನವಚತು |
ರೋಕ್ತಿಯಿಲ್ಲದ ಕಾವ್ಯರಚನೆ ನಿರರ್ಥವವನಿಯಲಿ || ೧೭

ಪ್ರಸವಕಾಲದ ವೇದನೆಯು ಸಾ |
ಹಸವ ಬಲ್ಲಳೆ ಬಂಜೆ ಮಿಗೆ ರಂ |
ಜಿಸುವ ರತ್ನಪರೀಕ್ಷೆಯಱಿವುದೆ ಕಪಿ ನಿರಂಜನನ ||
ದೆಸೆಯನಱಿವನೆ ಪಾಪಿ ಸತ್ಕವಿ |
ಯೆಸಗಿದನುಪಮಕಾವ್ಯವನು ನವ |
ರಸಿಕನಲ್ಲದೆ ತಿಳಿವರೇ ಮೂರ್ಖರು ಧರಿತ್ರಿಯಲಿ || ೧೮

ಜಲವುಳಿದು ಹಾಲುಂಬ ಹಂಸನ |
ವೊಲು ಮಹಾತ್ಮರು ಕಾವ್ಯದೋಷವ |
ನುಳಿದು ತತ್ಸಾರವನೆ ಸವಿವರು ದಿವ್ಯಪರಿಮಳಕೆ ||
ತೊಲಗಿ ನೊಳ ದುರ್ಗಂಧಗಳಿಗ |
ವ್ವಳಿಸುವಂದದಿ ಖಳರು ಗುಣಗಳ |
ನುಳಿದು ದೋಷವ ಪಿಡಿವರಂತದು ಸಹಜವವನಿಯಲಿ || ೧೯

ಖರ ಸುಗಂಧವ ಹೇಱಲದಱಂ |
ತರವ ಒಲ್ಲದೆ ಸೆಟ್ಟು ಪಾಕದ |
ಪರಿಯನಱವುದೆ ತಾಳಪತ್ರಗಳಱವುವೇ ಲಿಪಿಯ ||
ಧರೆಯೊಳಜ್ಞ ಸುಶಾಸ್ತ್ರಗಳನು |
ಚ್ಚರಿಸಿದೊಡೆ ಸಾಹಿತ್ಯವಾತಗೆ |
ದೊರಕುವುದೆ ಗಿಣಿಯೋದಿದಂತೆ ನಿರರ್ಥವವನಿಯಲಿ || ೨೦

ಬಿಸಜಸಂಭವ ಷಡ್ರಸವ ನಿ |
ರ್ಮಿಸೆ ಕವೀಶ್ವರ ಧಾತ್ರಿಯೊಳು ನವ |
ರಸವ ಸೃಜಿಸಿದೊಡಾಚತುರ್ಮುಖನಿಂದ ಕವಿವರನು ||
ವಸುಧೆಯೊಳು ನರಮಿಗಿಲೆನಿಸಿ ಪಸ |
ರಿಸಲು ಲೋಕತ್ರಯವು ಸತ್ಕಪಿ |
ಯೆಸಗಿದಂದದೊಳೊಪ್ಪಿಹುದು ತಿಳಿವರೆ ಧರಿತ್ರಿಯಲಿ || ೨೧

ಇಷ್ಟವಾಗೆ ಪದಾರ್ಥಶಬ್ದ |
ಸ್ಪಷ್ಟ ಪೊಸಬಗೆಗೂಡಿ ಕೃತಿಯ ಪ್ರ |
ತಿಷ್ಠಿಸದೆ ಪರರೂಹೆಯಿಂದೋದಿಸಿದ ಕಾವ್ಯವದು ||
ಸೃಷ್ಟಿಯೊಳಗದು ಹೀನ ಜೈನೋ |
ಚ್ಛಿಷ್ಟವೀಜಗವೆಂದುದೊಂವೇ |
ಕಷ್ಟ ಸಾಲದೆ ಕಪಿಯೆನಿಸಿಕೊಂಡವರಿಗವನಿಯಲಿ || ೨೨

ಮುಂದೆ ನಿನ್ನಯ ಕವಿತೆಗೆಣೆಯಿ |
ಲ್ಲೆಂದು ನಾನಾ ತೆಱದೆ ಬಣ್ಣಿಸಿ |
ಹಿಂದೆ ತಾಳ್ದುದಬದ್ಧವೆಂದಜ್ಞರೊಳು ತಾವೆಸಗಿ ||
ಸಂಧಿಸಿದ ಕೃತಿಯನ್ನು ಮನೆಗಳ |
ಸಂದಿಗೊಂದಿಯೊಳೊದಱ ನರಕದೊ |
ಳೊಂದುತಿಹ ದುರ್ಜನರ ಜಯಿಸುವರಾರು ಲೋಕದಲಿ || ೨೩

ಲಲಿತದೇವಾನ್ನವನು ನೊಣಸೆಂ |
ಜಲಿಸೆ ತೊಱೆವರೆ ಶೈವಲಕೆ ನೀ |
ರುಱೆವರೇ ಜಲನಿಧಿಯು ಮಣಿಗಳ ನೆಗಱೆ ಭಯಕಂಜಿ ||
ತಳೆಯದಿಹರೆ ನಿಕೇತನವಸಿಲಿ |
ಗಳುಕಿ ಬಿಡುವರೆ ಖಳರು ಮೆಚ್ಚದೆ |
ಹಱೆಯೆ ಸತ್ಕವಿ ಮಾಣ್ಬನೇ ರಚಿಸಲು ಮಹಾಕೃತಿಯ || ೨೪
ಏನುತಕವಿತಾಂಗನೆಗೆ ಸತ್ಕವಿ |
ಜನಕನನುಪಮಪಾಠಕರು ತ |
ಜ್ಜನನಿ ವಿಮಳರಸಜ್ಞ ಪತಿ ಮೂಢಾವಿವೇಕಿಗಳು ||
ಅನುಜರಗ್ರಜರಂತು ಕಾರಣ |
ಸನುನಯದೊಳೀಕೃತಿಯು ಕೋವಿದ |
ಜನರು ತಿದ್ದುವುದೊಲಿದು ಘನತೆಯ ಮಾಱ್ಪುದವನಿಯಲಿ || ೨೫
ಪರಿಮಳವನಳಿ ಪೀರ್ವವೊಲು ಮ |
ಕ್ಷ್ಮರಕ ಬಲ್ಲುದೆ ಚೈತ್ರದಲಿ ಮಾ |
ಮರನಲರ್ವಂತೊಣಮರನು ಚಿಗುರುವುದೆ ಶಶಿಕಾಂತ ||
ಕರಗುವಂದದೆ ಚಂದ್ರಿಕೆಯೊಳಗಱೆ |
ಯುರುತರದಿನೊಸರುವುದೆ ಸತ್ಕವಿ |
ವರನು ಸೋಲ್ವಂತಜ್ಞ ಸೋಲುವನೇ ಧರಿತ್ರಿಯಲಿ || ೨೬
ಮಾನಿತಾರ್ಥಪ್ರಾಸಪದಸಂ |
ಧಾನರಚನೆ ವಿಚಿತ್ರರಸಭಾ |
ವಾನುರಕ್ತಿದಿ ಸುಕವಿ ರಚಿಸಿದ ಕಾವ್ಯಮೊಪ್ಪುವುದು ||
ಏನು ವಿಸ್ಮಯವಿಲ್ಲದರ್ಥವಿ |
ಹೀನನಾಗಿ ಯಥಾಸ್ಥಿತಿಯೊಳ |
ಜ್ಞಾನಿ ರಚಿಸಿದ ಕಾವ್ಯ ತಾನೊಪ್ಪುವುದೆ ಧರಣಿಯಲಿ || ೨೭
ನಡೆವನೆಡಹುವನಲ್ಲದುಱೆದವ |
ರೆಡಹುವರೆ ಕೃತಿನಡೆಸುವರೊಳೊಂ |
ದಡೆಯಲನು ತಪ್ಪಿದರೆ ತಪ್ಪಲ್ಲಿಕ್ಷುಸಾರದಲಿ ||
ತೊಡರ್ದ ದೋಷವನುಱೆಯಲದು ತಾ |
ಕಡೆಗೆ ಶರ್ಕರೆಯಹುದು ತಪ್ಪು |
ಳ್ಳೆಡೆಯ ತಿದ್ದಿ ವಿದಗ್ಧರಧಿಕವ ಮಾಱ್ಪುದವನಿಯಲಿ || ೨೮

ಸರಸಭಾವ ವಿಚಿತ್ರದರ್ಥೋ |
ತ್ಕರ ಚಮತ್ಕೃತಿಯುಮುಕ ಪದ ನಯು |
ಸರಸ ಜಾಣ್ನುಡಿ ಪುಗದೆ ಬಱಿಯು ಸುಲಕ್ಷಣೋಕ್ತಿಯಲಿ ||
ವಿರಚಿಸಿದ ಕೃತಿ ಸರ್ವರ ಮನೋ |
ಹರಮದಾಗದು ಶಾಸ್ತ್ರಯುತವಹ |
ಜರಠೆ ನರ್ತಿಸಿದಂತೆ ಕಣ್ಗಿಂಬಾಗದವನಿಯಲಿ || ೨೯

ವಿಸುತನೇಮಿಯ ರೀತಿ ಗುಣವ |
ರ್ಣನ ಚಮತ್ಕೃತಿ ನಾಗವರ್ಮನ |
ನೆನಹು ಹೊನ್ನನ ದೇಸೆ ವಿಜಯನ ಭಾವವಗ್ಗಳನ ||
ಸನುನಯೋಕ್ತಿ ಗಜಾಂಕುಶನ ಬಿ |
ನ್ನಣ ಯಶಶ್ಚಂದ್ರನ ಬಹುಜ್ಞತೆ |
ಯನುಕರಿಸಲೀಕಾವ್ಯದೊಳಗೆನಗವರ ಕರುಣದಲಿ || ೩೦

ತೊಡಗಿದಮಲಪ್ರಾಸ ಕಡೆಗದು |
ನಡೆಯದಿರೆ ಬೇಸತ್ತು ಮೋನವ |
ಹಿಡಿದು ಕಾಣದೆ ನೋಡಿ ಪರಿಕಿಸಿ ನೆಗಳ್ದ ಪದಗಳನು ||
ತೊಡೆದು ಮರಳಿ ಪರೋಕ್ತಿಗಳನಳ |
ವಡಿಸಿ ಕೊಂಡಕ್ರಮದಿ ಸದರದ |
ನುಡಿಯನೊಂದಿಸಿ ಪೇಳ್ವವನು ಕವಿಯೋ ಧರಿತ್ರಿಯಲಿ || ೩೧

ಗರುಡನಭ್ರವನಡರೆ ಪಿಕವಾ |
ಪರಿಯ ನೆಗೆವಂತನಿಲಸುತ ಸಾ |
ಗರನ ದಾಂಟಲು ನವಿಲು ಲಂಘಿಪ ತೆಱದಿ ಗಣಧರರು ||
ವಿರಚಿಸಿದ ಸತ್ಕೃತಿಯನಿದ ವಿ |
ಸ್ತರಿಸಲಾನೆನಿತಱವ ಕರುಣದಿ |
ಪರಮಭಕ್ತ್ಯಂಗನೆಯ ವಶದಿಂ ಪೇಟಿಕ್ವೆನೀಕೃತಿಯ || ೩೨

ಕೃತಿಗೆ ನಾಮ ವಿಶುದ್ಧಗುಣನ |
ಪ್ರತಿಮಜೀವಂಧರನ ಕಥೆ ತ |
ತ್ಕೃತಿಗಧಿಪ ಸರ್ವಜ್ಞನೀಕೃತಿರಚಿತಕವಿವರನು ||
ವಿತತಪಿಶ್ವಾಮಿತ್ರಗೋತ್ರಾ |
ನ್ವಿತ ಸರಸಬಸವಾಂಕಸುತ ವಿ |
ಶ್ರುತನು ಭಾಸ್ಕರನೆಂದೊಡೊಪ್ಪುವುದರಿದೆ ಧರಣಿಯಲಿ || ೩೩

ವಾದಿಮದಗಜಸಿಂಹಸೂರಿಗ |
ಳಾದಿಯಲಿ ನವಸಂಸ್ಕೃತದೆ ಸಂ |
ಪಾದಿಸಿದ ಭೂವಿನುತಜೀವಂಧರನ ಚರಿತವನು ||
ವೇದಿಸುವೆಸುರುಭಾಮಿನಿಯ ಷ |
ಟ್ಪಾದದಿಂ ಕನ್ನಡದೊಳೊಲಿದಿದ |
ನಾದರಿಸಿ ಕೇಳುವುದು ಭವ್ಯಸಮೂಹವೊಲವಿನಲಿ || ೧೪
ಶ್ರೀಮದನುಪಮವೀರ ಜಿನಪದ |
ತಾಮರಸಮಧುಕರನು ಸದ್ಧ |
ರ್ಮಾಮೃತಾಂಭೋರಾಶಿವರ್ಧನಚಂದ್ರನೆಂದೆನಿಪ ||
ಭೂಮಿಪಾಲಲಲಾಮನಭಿನವ |
ಕಾಮನವಮಳಗುಣಾಭಿರಾಮ ಮ |
ಹಾಮಹಿಮ ಮಗಧೇಂದ್ರ ಪಾಲಿಸುತಿರ್ದನೊಲವಿನಲಿ || ೧೫
ಲೀಲೆಯಿಂದೀಪರಿಯಲವನಿಯ |
ಪಾಲಿಸುತ್ತಿರಲೊಂದು ದಿನ ವನ |
ಪಾಲನೆಯ್ತಂದೆಱಗಿ ವಿಪುಳಾದ್ರಿಯಲಿ ಸನ್ಮತಿಯ ||
ಲಾಲಿತಶ್ರೀಸಮವಸರಣ ಸು |
ಲೀಲೆಯಿಂ ನೆಲಸಿರ್ದುದೆನೆ ಭೂ |
ಪಾಲ ಪೀಠವನಿೞಿದು ಭಯಭಕ್ತಿಯಲಿ ವಂದಿಸಿದ || ೧೬
ಒಸಗೆದಂದಂಗಂಗಚಿತ್ತವ |
ನೆಸಗಿ ವಿಮಳಾನಂದಭೇರಿಯ |
ನೊಸೆದು ಪೊಯ್ಸಿಯೆ ಸಮವಸರಣಕೆ ಭವ್ಯಜನಸಹಿತ ||
ವಸುಮತೀಶ್ವರ ಬಂದು ಘನಸಂ |
ತಸದಿ ಒಲಗೊಂಡಕ್ಷಯುಗೆ ವಂ |
ದಿಸಿ ಕರಾಗ್ರವ ಮುಗಿದು ಸಂಸ್ತುತಿಸಿದನು ಜಿನಪತಿಯ || ೧೭
ಜಯಜಯ ಮಹಾಮಹಿಮ ಮುಕ್ತಾ |
ಶ್ರಯ ಗುಣಾನ್ವಿತ ಭಕ್ತವತ್ಸಲ |
ಲಯವಿಹೀನ ಮಹೇಶ ಮಾಯಾತೀತ ಮದನಹರ ||
ಭಯರಹಿತ ಸರ್ವಜ್ಞ ಲೋಕ |
ತ್ರಯನಮಿತಪದಕಮಲ ತತ್ವಾ |
ಲಯ ವಿಶುದ್ಧಜ್ಞಾನಮೂರ್ತಿಯೆ ಕರುಣಿಸೆನಗೆಂದ || ೧೮

ದೇವದೇವ ಸುರೇಂದ್ರನುತ ಭ |
ವ್ಯಾವಲೋಕನ ವಿಮಳವಮುಕ್ತ |
ಶ್ರೀವರ ಜಗನ್ನಾಥ ಜನನಪಿದೂರ ಸಾಕಾರ ||
ಪಾವನ ಪರಂಜ್ಯೋತಿ ಶಾಶ್ವತ |
ಜೀವರೂಪ ಕೃಪಾಂಬುನಿಧಿ ರಾ |
ಜೀವಲೋಚನ ಸದ್ಗುಣಾತ್ಮಕ ಕರುಣಿಸೆನಗೆಂದ || ೩೯
ನಿರುಪಮ ನಿರಾಪೇಕ್ಷ ನಿರ್ಭಯ |
ನಿರತಿಶಯ ನಿರ್ಮಾಯ ನಿಸ್ಪೃಹ |
ನಿರಜ ನಿರಹಂಕಾರ ನಿರ್ಮಲ ನಿತ್ಯ ನಿರ್ಲೇಪ ||
ನಿರತ ನಿತ್ಯಾನಂದ ನಿರ್ಮದ |
ನಿರಘ ನಿಷ್ಕಳ ನಿರ್ಮಲಾತ್ಮಕ |
ನಿರಜ ನಿಜ ನಿಷ್ಕಾಮ ನಿಶ್ಚಲ ಕರುಣಿಸೆನಗೆಂದ || ೪೦
ಸರ್ವಗತ ಸರ್ವಜ್ಞ ಸದಮಲ |
ಸರ್ವಮಯ ಸರ್ವಾಮರಾರ್ಚಿತ |
ಸರ್ವಲೋಕೇಶ್ವರ ಸಮಾಹಿತಸರ್ವಗುಣನಿಲಯ ||
ಸರ್ವಭೂತಾತ್ಮಕ ಭವಾಂತಕ |
ಸರ್ವಸಂಗವಿಮುಕ್ತ ಸನ್ನುತ |
ಸರ್ವದುರಿತವಿದೂರ ಸನ್ಮತಿ ಕರುಣಿಸೆನಗೆಂದ || ೪೧
ವಿಶ್ವಮಯ ವಿಶ್ವೇಶ ವಿಶ್ವಗ |
ವಿಶ್ವತೋಮುಖ ವಿಶ್ವಪೂಜಿತ |
ವಿಶ್ವಲೋಚನ ವಿಶ್ವಪೂರಿತ ವಿಶ್ವದಾತಾರ ||
ವಿಶ್ವರೂಪ ಮಹೇಶ್ವರೇಶ್ವರ |
ವಿಶ್ವಗತ ವಿಶ್ವಾತ್ಮ ವಿಶ್ರುತ |
ವಿಶ್ವಮೂರ್ತಿ ವಿಶುದ್ಧ ಸನ್ಮತಿ ಕರುಣಿಸೆನಗೆಂದ || ೪೨
ಶ್ರೀಮದಪವರ್ಗಾಂಗನಾಸು |
ಪ್ರೇಮ ನಿರ್ಜಿತಕಾಮ ಸುಗುಣಾ |
ರಾಮ ಧರ್ಮೋದ್ಧಾಮ ನುತಸುತ್ರಾಮ ನಿಸ್ಸೀಮ ||
ಸೋಮರವಿಶತಕೋಟಿತೇಜಸ |
ನಾಮ ವಿಮಲಗುಣಾಭಿರಾಮ ಮ |
ಹಾಮಹಿಮ ಭವಭೀಮ ಶಂಕರ ಕರುಣಿಸೆನಗೆಂದ || ೪೩

ಧರಣಿಪತಿ ಜಿನಪತಿಯನಿಂತೀ |
ಪರಿಯ ಸನ್ನುತಿಗೈದು ಬಟಿಕ |
ತ್ರೈಣದೊಳಿರ್ದ ಸುಧರ್ಮಜಂಬೂಗೌತಮಪ್ರಮುಖ ||
ಪರಮಗಣಧರಸಂಕುಲಕೆ ಭಯ |
ಭರಿತಭಕ್ತಿಯೊಳೆಱಗಿ ಹರುಷದೊ |
ಳಿರುತಿರ್ದನು ಧರ್ಮಪಾರಾಯಣಪ್ರಸಂಗದಲಿ || ೪೪
ಅರುಹನನು ಹೃತ್ಪದ್ಮದಲಿ ತಂ |
ದಿರಿಸಿ ರವಿಮಂಡಲಕೆ ದೃಷ್ಟಿಯ |
ಹರಿಸಿ ಬಹಿರಿಂದ್ರಿಯದ ಬಟಲಿಕೆಯುಟಿದು ಸಾಕ್ಷಾತ ||
ನಿರುಪಮಾಸಂದ್ಯೈಕತೇಜ |
ಸ್ಫುರಿತಮಯ ತಾನಾಗಿ ತಪಮಾ |
ಚರಿಪ ಮುನಿಪನ ಕಂಡು ಗೌತಮಗರಸನಿಂತೆಂದ || ೪೫
ಧರಣಿಯೊಳು ಮನುಜರಿಗೆ ತಪಮಾ |
ಚರಿಸುವುದು ಕರ್ತವ್ಯಮುಮರೋ |
ತ್ಕರಕ ಸಲ್ಲದಿದೇನು ವಿಸ್ಮಯಮೀಗಳೀದೇವ ||
ಸುರುಚಿರದೊಳುಗ್ರೋಗ್ರತಪವನು |
ವಿರಚಿಸುತ ಚಿದ್ರೂಪನಾದೀ |
ಪರಿಯಿದೇನೆನೆ ಭೂಮಿಪತಿಗೆ ಸುಧರ್ಮನಿಂತೆಂದ || ೪೬
ಈತ ಮರ್ತ್ಯನು ದೇವನಲ್ಲ ಪ |
ಹಾತಿಶಯದ ತಪೋಗ್ನಿಯಿಂದಿದಿ |
ರಾತ ಕರ್ಮಾರಣ್ಯವನು ಖಂಡಿಸಿ ಭವಾಟವಿಗೆ ||
ಜ್ಯೋತಿಮಯ ತಾನಾಗಿ ಭುವನ |
ಖ್ಯಾತಿವೆತ್ತನು ತಪದ ಮಹಿಮೆಗಿ |
ದೇತಱತಿಶಯವೆಂದು ಭೂಮಿಪಗಱುಹಿದನು ಮುನಿಪ || ೪೭
ಎನಲು ಭೂಮಿಪನೀತ ಮುನ್ನಾ |
ರನುಪಮದ್ವಿಜನೋ ಮಹೀಪಾ |
ಲನೊ ಪಣಿಗ್ವಂಶಜನೊ ರೌಪ್ಯಾಚಲದ ಖೇಚರನೊ ||
ಎನಗೆ ಪೇಟೀತನ ಲಸದ್ವ |
ರ್ತನೆಯನನಿತುಮನೆಸಲು ಕೇಳಿಲಿ |
ಜನಪ ಎಂದು ಸುಧರ್ಮಮುನಿಪತಿ ಪೇಟಲನುಗೆಯ್ದು || ೪೮

ಇದು ವಿನಮದಮರೇಂದ್ರಶ್ರೀಜಿನ |
ಪದಕಮಲಷಟ್ಚರಣವಾಣೀ |
ವದನದರ್ಪಣ ಭೂಸುರೋತ್ತಮ ಬಸವಣಾಂಕಸುತ ||
ಚದುರಭಾಸ್ಕರರಚಿತ ಧರ್ಮ |
ಪ್ರದನ ಜೀವಂಧರನ ಚರಿತೆಯೊ |
ಳಿದುವೆ ಪೂರ್ವಪ್ರಸಂಗವವನೀಪಾಲ ಕೇಳೆಂದ || ೪೯

ಮೊದಲನೆಯ ಸಂಧಿ ಮುಗಿದುದು.

---

## ಎರಡನೆಯ ಸಂಧಿ

ಸೂಚನೆ|| ರಾಜರಾಜನ ಪುರವ ನಗುತಿಹ |
ರಾಜಪುರಿಯಲಿ ಸಕಲವಹಿಯನು |
ರಾಜಮುಖಿ ಸತ್ಯಂಧರನು ಪಾಲಿಸಿದನೊಲವಿನಲಿ ||

ಅರಸ ಕೇಳ್ ಹರಿಮಕರಮೀನೋ |
ತ್ಕರದಿ ಗಗನವನೊದೆವ ಪೆರ್ದೆರೆ |
ನೊರೆ ಘನಾವರ್ತಂಗಳಿಂ ಘುಮುಘುಮುನಿನಾದದಲಿ ||
ಸ್ಫುರಿತಮಣಿಮೌಕ್ತಿಕದಿ ವಸುಧಾ |
ತರುಣಿ ನಿರಿಹಿಡಿದುಟ್ಟ ಪಟ್ಟಾಂ |
ಬರವಿದೆನೆ ಲವಣಾಬ್ಧಿ ಮಿಗೆ ರಂಜಿಸುವುದವನಿಯಲಿ || ೧

ಇಳೆಯ ಪತಿ ಕೇಳಾ ಮಹಾಂಬುಧಿ |
ಯೊಳಗೆ ಮಧ್ಯಮಲೋಕಲಕ್ಷ್ಮಿ ಯ |
ಲಲಿತನಾಭಿಯಿದೆಸಲು ಜಂಬೂದ್ವೀಪವಾನಡುವೆ ||
ಹೊಳೆವ ಮಣಿವಸುಚಂದ್ರಕಾಂತೋ |
ಪಲವನಾವಳಿಯಿಂದ ಮಂದರ |
ವಿಳೆಗೆ ಮೂಲಸ್ತಂಭವೆನೆ ಮುಟ್ಟಿದುದು ಘನಪಥವ || ೨

ಅನುಹಾಮೇರುವಿನ ದಕ್ಷಿಣ |
ಸೀಮೆಯಲಿ ಸಿರಿಕಂಡದವೊಲಭಿ |
ರಾಮವಾದುದು ಲೋಕನೋತ್ಸವಸಂಪದವ ಪಡೆದು ||
ಭೂಮಿಯಖಿಳಕ್ಷೇತ್ರಗಳಿಗು |
ದ್ದಾಮವೆಂದೆನಿಪಾರ್ಯಖಂಡ ಮ |
ಹಾಮಹಿಮೆಯಿಂದೆಸೆವುದವನೀಮುಕುರದಂದದಲಿ || ೩

ಮುದದೊಳಂಬುಜಭವನು ಮೂಲೋ |
ಕದ ಲಸತ್ಸಾರಾಯುವನು ತೆಗೆ |
ದೊದವಿ ರಚಿಸಿದನೆನಲಖಿಳ ಸೌಭಾಗ್ಯಸಂಯುತದ ||
ಸದಮಳಗ್ರಾಮಗಳ ನೆರೆ ತೀ |
ವಿದ ತಟಾಕಗಳಿಂದ ಹೇಮಾಂ |
ಗದ ವಿಷಯ ರಂಜಿಸುವುದವನೀಪಾಲ ಕೇಳೆಂದ || ೪

ಪರಮಸತ್ಯದ ಸೀಮೆ ಗುಣದಾ |
ಗರ ಸುಧರ್ಮದ ಪೇಟೆ ಪಾವನ |
ದಿರವನಂಗನ ಬೀಡು ತಣ್ಣೆಲರಿಕ್ಕೆ ರತಿಯ ಮನೆ ||
ಸಿರಿಯ ನೆಲೆ ಸುಖದೆಡೆ ಲಸತ್ಸಿಂ |
ಗರದ ತಾಣ ವಸಂತನೃಪನೋ |
ವರಿಯಿದೆನೆ ತದ್ವಿಷಯವತಿ ರಂಜಿಸುವುದವನಿಯಲಿ || ೫

ಅರಸ ಕೇಳಾವಿಷಯದನುಪಮ |
ಪುರಗಳಮರಾವತಿಯನಬ್ಜಾ |
ಕರಗಳಬ್ಧಿಯನುಪವನಗಳಾಚೈತ್ರರಥವನಿಭ ||
ಸುರಕರಿಯನಶ್ವಾಳಿ ಸೂರ್ಯನ |
ತುರಗವನು ಗೋಸಂಕುಲಗಳುರು |
ತರದಿ ಸುರಭಿಯ ನಗುವುವೆನೆ ವರ್ಣಿಸುವಸಾರೆಂದ || ೬

ಹಸ್ತಿ ಹಯ ಜನ್ಮಿಸದ ಮಲೆ ಬಿಲ |
ನರ್ತನದಿನುಚ್ಚೈಸದಿಳೆ ಜಲ |
ಮುತ್ತುಮಣಿ ಜನಿಯಿಸದ ರೋಹಾಚಳ ಮರಾಳಹರಿ ||
ಪೆತ್ತಿರದ ಕೊಳನಟವಿಕಾಯದೊ |
ಳೊತ್ತಿರದ ಮರಬಳ್ಳಿ ಮದವೊಸ |
ರ್ವೊತ್ತೊಗೆಯದಳಿನಿವಹ ವನವಿಲ್ಲಾಪ್ರದೇಶದಲಿ || ೭

ನಾರಿಕೇಳಫಲೋದಕವು ಸಹ |
ಕಾರಕಿಟಿಯಲು ಚೂತಫಲದಾ |
ಸಾರ ದಾಡಿಮುಕಡರೆ ತದ್ರಸ ಕದಳಿಗಳ ಮೇಲೆ ||
ದಾರಿಡಲು ತತ್ಸಾರವಿಕ್ಷುವ |
ಪೇಱಿ ತದ್ರಸದಿಂದ ಬೆಳೆವುವು |
ಚಾರುಧಾನ್ಯಾವಳಿಗಳೊಲವಿಂದಾಪ್ರದೇಶದಲಿ || ೮
ಲಲನೆಯರನುರುನಗರ ತತ್ಪುರ |
ಗಳಲಿ ಮಣಿಮಯಕೋಟೆ ಕೋಟಾ |
ವಳಯವನು ಪರಿಖೆಗಳು ಪರಿಖೆಯನೊದವಿ ಬನ ಬನವ ||
ಬಳಸಿ ಕೆಱೆಯಾಕೆಱೆಯ ವೇಷ್ಟಿಸಿ |
ಬೆಳೆವ ಹೊಲನಾಹೊಲನ ಸುತ್ತಿಯೆ |
ತೊಳಲುತಿರ್ಪುದು ಪಾಮರೀಜನವರಸ ಕೇಳೆಂದ || ೯
ಶಾಲಿಗೆಱಗಿದ ಗಿಳಿಯನಬಲೆಯ |
ರಾಲಿವರಲಿಂದಿಡಲು ತಪ್ಪಿ ವಿ |
ಶಾಲಪುಂಡ್ರೇಕ್ಷುಗಳ ಕೊಳೆ ಗಂಟೊಡೆದು ರಸವಿಟಿಯೆ ||
ಮೇಳವದಿ ಪಥಿಕರ್ಕಳೀಂಟಿ ಪ |
ಲೋಲಪಾಮರಿಯರ ಕಟಾಕ್ಷದ |
ಜಾಲದಲಿ ಸಿಲುಕಿರ್ಪರಿಂದಿಂದಾಪ್ರದೇಶದಲಿ || ೧೦
ಕುಂದು ಹೆಚ್ಚುಂಟೆಂಬುದಬ್ಧಿಯೊ |
ಳಿಂದುವಿನೊಳಟಿಯಾಸೆ ನವಮುಕ |
ರಂದದಲಿ ಕೌಟಿಲ್ಯ ಕಠಿನತೆ ಮುಳಿಸತಿಕ್ಷಾಮ ||
ಮಾಂದ್ಯವಬಲೆಯರಳಕ ಘನಕುಚ |
ಬಂಧುರಭ್ರೂಮಧ್ಯಯಾನಗ |
ಳಿಂದಲಲ್ಲದೆ ನಾಡೊಳಿಲ್ಲವನೀಶ ಕೇಳೆಂದ || ೧೧
ಭಂಗ ವೀಚಿಯೊಳುನ್ಮದವು ಮಾ |
ತಂಗದೊಳು ಧರ್ಮಚ್ಯುತವು ಬಾ |
ಣಂಗಳೊಳಗಹಿತತ್ವ ಗಾರುಡದಲ್ಲಿ ವಿಭ್ರಾಂತಿ ||
ಭೃಂಗನಿವಹದಿ ವಕ್ರಗತಿ ಭಗ |
ಣಂಗಳೊಳಗೆ ಮಹಾಲಯವು ಗೇ |
ಹಂಗಳೊಳಗಲ್ಲದೆ ಮಗುಳ್ದಾನಾಡೊಳಿಲ್ಲೆಂದ || ೧೨

ಪಿಡಿತ ಚಮರಚ್ಛತ್ರದಲಿ ಸಂ |
ಗಡಿತ ಕುಚಗಳ ಮಧ್ಯದಲಿ ಮಿಗೆ |
ಬಿಡದಿಹಣ ಸಕ್ಯದಲಿ ಗೋತ್ರವಿರೋಧವಿಂದ್ರನಲಿ ||
ಜಡತೆ ವಾರಿಯೊಳುಗ್ರಪೀಶನೊ |
ಳುಡಿತ ರಂಭಾವನದಿ ಸಂತತ |
ಹೊಡೆಹು ವಾದ್ಯದ ರವದೊಳಲ್ಲದೆ ನಾಡೊಳಿಲ್ಲೆಂದ || ೧೩

ಭುವನಕಂಟಕಪಬ್ಜನಾಳದೊ |
ಳವನಿಕಂಟಕ ಕೇತಕಿಯೊಳ |
ಧ್ರುವಮಘದಿ ಸಂಚಳ ಸಮೀರಣನಲ್ಲಿ ಮಧುವಿಕೃತಿ ||
ನವರಸಾಲದಿ ನಿಗಳ ಮದಗಜ |
ನಿವಹದೊಳು ವಂಶಕ್ಷಯವು ಸಂ |
ಭವಿಸುವುದು ಮೇದರೊಳಗಲ್ಲದೆ ನಾಡೊಳಿಲ್ಲೆಂದ || ೧೪

ಆವಿಷಯದವನಿಯೊಳು ಸಂತತ |
ದೇವನದಿಮಾತೃಕದಲಿಕ್ಷುರ |
ಸಾವಳಿಯ ಮಾತೃಕಗಳಲಿ ರಂಭಾಮ್ರಫಳರಸವು ||
ತೀವಿದನುಪಮಮಾತೃಕದಿ ವಿ |
ದ್ರಾವಿಸುವ ಶಶಿಕಾಂತಮಾತೃಕ |
ದಾವಿಳಾಸದಿ ಬೆಳೆಯಲಭಿರಾಜಿಸುವುದೊಲವಿನಲಿ || ೧೫

ಹೃದಯದಲಿ ರತಿಭೋಜನನು ತಳೆ |
ದುದಕವೆಱೆದಪರೆಸಲು ಕುಚಕ |
ಕ್ಷದ ಹೊಗರು ತೋರ್ಪಂತೆ ಕಳಸವನೆತ್ತಿ ನೀರೆಱೆಯೆ ||
ಇದುವೆ ಬೞಿಗಿರಿಕೆಗೆನೆ ತಾ ಕುಡಿ |
ದೊದವಿ ಲಾವಣ್ಯಾಂಬುವನು ನೇ |
ತ್ರದಲಿ ಕುಡಿವರ್ ಪಥಿಕರಾವಿಷಯಪ್ರಪಾಳಿಯಲಿ || ೧೬

ಚಂದ್ರಕಾಂತದ ಘಟದೊಳಧ್ವಗ |
ವೃಂದಕುದಕವನಬಲೆಯರು ಸಲ |
ವಿಂದೆಱೆಯೆ ತದ್ವಾರಿ ತೀರಲು ತಂದು ಮುಖಶಶಿಯ ||
ಚಂದ್ರಿಕೆಯಲಾಕಲಶವನು ಸಾ |
ನಂದದಿಂದವೆ ತೀವಿ ಪಥಿಕರಿ |
ಗೊಂದಿ ನೀರೆಱೆದೆಸೆವರಾವಿಷಯಪ್ರಪಾಳಿಯಲಿ || ೧೭

ಇಂತೆಸೆವ ವಿಷಯದೊಳು ಶೋಭಿಸ |
ನಂತಪುರಮಾಲಾನ್ವಿತದಿ ಚೆ |
ಲ್ವಂ ತಳೆದು ನಡುವೆಸೆವ ನಾಯಕರತ್ನದಂದದಲಿ ||
ಸಂತತಮಹಾಲಕ್ಷ್ಮಿಗಿರಲು ನಿ |
ಶಾಂತವಾಗಿಯೆ ಭೂಸತಿಯ ಮುಖ |
ದಂತೆ ಮೆಱೆವುದು ರಾಜಪುರಿ ಮಧ್ಯಪ್ರದೇಶದಲಿ || ೧೮

ವಿನುತಪುರಲಕ್ಷ್ಮಿಯನು ದಿಕ್ಕಾ |
ಮಿನಿಯರೀಕ್ಷಿಸೆ ದೃಷ್ಟಿಯಹುದೆಂ |
ದೆನುತ ಭೂಪತಿ ಸುತ್ತ ಪಚ್ಚೆಯ ಜವನಿಕೆಯನೊಸೆದು ||
ಅನವರತ ಪಿಡಿದಿರ್ದಳೆನಲುಪ |
ವನಸಹಸ್ರದ ಶೋಭೆಗಿದೆ ತಾ |
ಯ್ವನೆಯೆನಿಸಿ ತತ್ಪುರ ವಿರಾಜಿಸಿತರಸ ಕೇಳೆಂದ || ೧೯

ಕುಲಗಿರಿಗಳಂ ತಂದು ಸುತ್ತಲು |
ನಿಲಿಸಿ ಹೊಂದಗಡುಗಳ ಮೇಲಳ |
ವಳಿಸಿದಂತೆ ಸುವರ್ಣಕೋಟೆ ನಭಸ್ಥಳವನಡರೆ ||
ಹೊಳೆವ ಕನಕಾಗ್ರದಲಿ ಮಿಗೆ ಬೆಳೆ |
ದೆಳಲತೆಯವೊಲು ಪದ್ಮರಾಗಾ |
ವಳಿಯ ತೆನೆಯಟ್ಟಳೆಗಳಿಂದೆಸೆದಿರ್ದುದೊಲವಿನಲಿ || ೨೦

ಅನವರತ ಪಾತಾಳದಹಿಕಾ |
ಮಿನಿಯರಾಪರಿಖೆಯಲಿ ಪೊಱಮ |
ಟ್ಟನುನಯದಿ ತತ್ಪುರದ ಮಣಿಮಯಕೋಡುಗಳನೇಱಿ ||
ಮನವೊಲಿದು ಸುರನದಿಯೊಳಾಡುವ |
ರೆನಲು ಪರಿಖೆಯ ಖಾತವನು ತ |
ತ್ಕನಕಕೋಟೆಯ ಘನತೆಯನು ವರ್ಣಿಸುವರಾರೆಂದ || ೨೧

ಸುರಪುರದ ಸಡಗರವನಳಕಾ |
ಪುರದ ಸೊಬಗಸನಂತಪುರದೈ |
ಶ್ವರಿಯವನು ಲಂಕಾಪುರದ ವಿಭವವನು ಕೈಲಾಸ ||
ಪುರದ ವಿಸ್ತಾರವನಯೋಧ್ಯಾ |
ಪುರದ ಸೊಂಪ ರಮಾವರನ ಪುರ |
ಸಿರಿಯನೊಳಕೊಂಡಿರ್ಪುದಾಪುರವರಸ ಕೇಳೆಂದ || ೨೨

ಲಲಿತಕೂಪೋದ್ಯಾನಹರ್ಮ್ಯ |
ವಳಿಗಳಿಲ್ಲದ ವಾಸ ಮಣಿಮಯ |
ಕಳಶವೆತ್ತದ ವಿಪಣಿ ನಿರ್ಜನದೆಡೆ ಕುರೂಪಾದ ||
ಲಲನೆ ಪೂವಲಿಗೊಡದ ಮಾರ್ಗ |
ಸ್ಥಳದ ಕೋವಿದಮನುಜರಿಲ್ಲನೆ |
ಹೊೞಲ ಮಹದೈಶ್ವರ್ಯವನು ವರ್ಣಿಸುವರಾರೆಂದ || ೨೩
ಧರೆಗೆ ಪುರವಿದನಂತಪಾವನ |
ತರವೆನುತೆ ಚೌವೀಸತೀರ್ಥಂ |
ಕರರು ತಮ್ಮಯ ಸಮವಸರಣಸಮೇತ ಬಂದೊಲಿದು ||
ಸುರುಚಿರದೊಳೆಸೆದಿರ್ದರೆನಲಂ |
ಬರವ ಮುಟ್ಟಿಹ ರತ್ನಮಯಗೋ |
ಪುರಗಳಿಂ ಚೈತ್ಯಾಲಯಗಳೊಪ್ಪಿರ್ದುವೊಗ್ಗಿನಲಿ || ೨೪
ಪರಮಧರ್ಮ ಪುರಾಣದರ್ಥೋ |
ತ್ಕರವ ತಿಳಿಪುದೆ ಕಮಲಭವನಾ |
ಪುರದ ಭೂಸುರರೆಡೆಗೆ ಬಂದದನಱಿದವಾದ್ವಿಜರ ||
ಹೊರೆಯುಲಸುಪಮನೀತಿಶಾಸ್ತ್ರೋ |
ತ್ಕರವನಭ್ಯಾಸಿಸುವನಾಸುರ |
ಗುರುವೆನಲು ತತ್ಪುರದ ವಿಬುಧರ ಪೊಗಳ್ವನಾರೆಂದ || ೨೫
ಘನರಜೋಮಯ ಬಿಸಜ ಮಧುಭಾ |
ಜನ ಸಕಂಟಕವಾಱಿಡಿಯ ತಾ |
ಯ್ವನೆ ಜಡಾಶ್ರಯ ಕುವಲಯದ್ರೋಹಾನುರಕ್ತವದು ||
ವಿನುತರಾಜಾರಾತಿಯೆಂದಾ |
ವನಜವನು ಸಿರಿಯುೞಿದು ವಣಿಜರ |
ಕನಕಹರ್ಮ್ಯದೊಳಿರ್ದಳೆನೆ ವರ್ಣಿಸುವರಾರೆಂದ || ೨೬
ಧನಕನಕ ಮೊದಲಾದಪೂರ್ವದ |
ಘನತರದ ವಸ್ತುಗಳಿಗೋಸುಗ |
ಧನದ ತಾನಾಪುರದ ವಣಿಜಾಪಣಕೆ ಬಂದೊಸೆದು ||
ವಿನುತವಸ್ತೂತ್ಕರಗಳನು ಕೊಂ |
ಡನವರತ ಪುರಿಗುಯ್ವುತಿಹನೆಂ |
ದೆನಲು ವಣಿಜರ ಮಹಿಮೆಯನು ತಾ ಹೊಗಳ್ವನಾರೆಂದ || ೨೭

ಒರೆಯುದಷ್ಟಾಪದದ ವರ್ಣಾಂ |
ತರವನೀಕ್ಷಿಸಿ ಪೇಳ್ವ ಘಟ್ಟಿಯು |
ಭರವ ಕೈತೂಕದಲಿ ತಪ್ಪದೆ ಪೇಳ್ವ ಗಣಿಯಿಸದೆ ||
ಭರದಿ ಲೀಲಾಮಾತ್ರದಿಂದುರು |
ತರದ ಮಚ್ಚವ ಕಟ್ಟುವತಿಚಾ |
ತುರಿಯರಿಪ್ಪರು ಚಿನ್ನವರದರು ತತ್ಪುರಾಂತದಲಿ || ೨೮
ಲಲಿತಯಮುನೆಯೊಳುಡುನಿಕರ ಮಾ |
ರ್ಪೊಳೆವವೊಲು ನೀಲಾಂಬರದಿ ಮಣಿ |
ಬಳಸಿರಲು ಮಣಿವಾಳರಂಗಡಿಯೆಸೆದುವಬ್ಜಸಖ ||
ಹೊಳಲ ನೋಡುವೆನೆಂದು ಗ್ರಹಸಂ |
ಕುಳಸಹಿತ ಬಂದಿರ್ದನೆನೆ ಕ |
ಣ್ಗೊಳಿಸಿ ಮೆಱೆದುವು ಕಂಚುಗಾಱರ ಪಸರವೊಗ್ಗಿನಲಿ || ೨೯
ಮಕರಕೇತನನಂಕಮಾಲಾ |
ಪ್ರಕಟಿತಧ್ವಜವೆತ್ತಿದುರುವಾ |
ಕ್ತಿಕದ ಹರ್ಮ್ಯಾವಳಿಯ ಶುಕಶಾರಿಕಪಿಕಾರವದ ||
ಸಕಲರಾಜಭುಜಂಗತಾಟಿತ |
ನಿಕಟಘಂಟಾರವದ ವೈದೂ |
ಷಿಕವಿಟಾನ್ವಿತಸೂಳೆಗೇರಿಗಳೆಸೆದುವೊಗ್ಗಿನಲಿ || ೩೦
ಪ್ರಕೃತಿಗತಿಸ್ತಂಭಸಹಿತಾ |
ಲೋಕನವೆ ಜನವಶ್ಯವಾದವೊ |
ಲಾಕರುಷರತಿ ಯುನ್ಯಸುರತೋಚ್ಚಾಟನ ತ್ಯಜಿತ ||
ಪ್ರಾಕಟದ ಮಾರಣದ ಕೃತ್ಯವ |
ನಾಕುಶಲ ಮೋಹನದ ಮಂತ್ರಾ |
ನೀಕವೆನಿಸುವ ಗಣಿಕೆಯರು ಮೆಱೆದಿರ್ಪರೊಗ್ಗಿನಲಿ || ೩೧
ಪೊಳೆವ ನಯನೋಪಾಂಶುಗಳಲು |
ತ್ಪಳದೆಸೆಯಿ ರಕ್ತಾಂಬುರುಹವೆಂ |
ದೆಳಸಿ ಕೊಂಡೆಯ್ದಲ್ಕೆ ಮಲ್ಲಿಗೆಯಾಗೆ ಮುಗುಳ್ದವರ ||
ಮುಳಿದು ಸಲುವುದೆ ತೌಳಿಕದ ಮಾ |
ಱಿಳಿಯೊಳೆನೆ ಕೈವೊಯ್ದು ನಗುತು |
ಜ್ಜ್ವಳಿಸುತಿರ್ಪರು ಪೂಲೆಗಾತಿಯರಾಪುರಾಂತದಲಿ || ೩೨

ಬಳಸಿದಳಿ ನೀಲಾಭ್ರವಕ್ಷಿಯ |
ಹೊಳಹು ಮಿಂಚು ವಿಭೂಷಣಾರವ |
ಮೊೞಗು ಮಣಿಮೇಖಲೆಯೆ ಸುರಧನು ಘರ್ಮಜಳ ಕರಕ ||
ಚಳಿತಕಚ ನಸಲಾಟ ಕುಸುಮಾ |
ವಳಿಯು ರಸ ಮುೞಿಯಾಗೆ ಮೊೞಗಿದಿಹ |
ರೊಲಿದು ಘನ ಕಾರ್ಗಾಲದಂದದಿ ಮಾಲೆಗಾರ್ತಿಯರು || ೩೩

ಚಾರುಚಂದ್ರಿಕೆಯೊಳು ಕಳಂಕವ |
ಸೇರಿಸುವವೊಲು ಕಪ್ಪುರದಿ ಕ |
ಸ್ತೂರಿಯನು ಮೇಳೈಸಿ ತನುಸೌರಭವನಳವಡಿಸಿ ||
ಹಾರಕುಚ ಕುಣಿದಾಡಲಳಿಝುಂ |
ಕಾರಕಗಿಯುತ ಗಂಧವನು ವಿ |
ಸ್ತಾರದಿಂ ತೆಗೆದೆಸೆವರಲ್ಲಿಯ ಘಟ್ಟಿವಳ್ತಿಯರು || ೩೪

ಪದನಖಾಂಶುಗಳಿಂದ ಶಶಿಕಾಂ |
ತದವೊಲಿರಲಳಕದಲಿ ಹರಿನೀ |
ಲದವೊಲಿರಲಂಗಪ್ರಭೆಯೊಳದು ಗೌರದಂತಿರಲು ||
ಅಧರದೀಪ್ತಿಯೊಳಬ್ಜರಾಗದ |
ವಿಧದೊಳಿರೆ ಕಂಡಗಿದು ಮಾಯಾ |
ಪ್ರದದಿ ಚೆಂಡೆಂದುೞಿವರತಿಮುಗ್ಧೆಯರು ನಗರದಲಿ || ೩೫

ವಿನುತವಸ್ತ್ರಾಭರಣವನುಲೇ |
ಪನಕುಸುಮಸಂಕುಳದಿ ಕೈಗೆ |
ಯ್ದನುನಯದಿ ಗಿಳಿಗೋದಿಸುತ ಮೃದುಗದ್ಯಪದ್ಯಗಳ ||
ಮನುಮಥನ ಪರದೇವತೆಯರೆಂ |
ದೆನಲಖಿಳ ಸೊಬಗಿಂದ ಪುರದಂ |
ಗನೆಯರೆಸದಿಹರೆತ್ತ ನೋಡಿದೊಡರಸ ಕೇಳೆಂದ || ೩೬

ಧರಣಿಯಮರರ ಶಾಸ್ತ್ರಘೋಷೋ |
ತ್ಕರ ವಿಜೃಂಭಿತಪಂಚವಾದ್ಯ |
ಸ್ವರವು ಹಯಹೇಷಾರವವು ಗಜಬೃಂಹಿತಧ್ವಾನ ||
ಸರಸಗಾನನಿನಾದ ಪಿಕಮಧು |
ಕರಗಳಾರವವಬಲೆಯರ ನೂ |
ಪುರದ ರವವಲ್ಲದೆ ಪುರದೊಳಪಶಬ್ದವಿಲ್ಲೆಂದ || ೩೭

ದಾನಿಗಳನಚಲಿತರ ವಿಮಲ |
ಜ್ಞಾನಿಗಳನುತ್ತಮರ ನಯಸ |
ನ್ಮಾನಿಗಳ ಮದನಾನುರೂಪರ ಸರಸಕೋವಿದರ ||
ಭೂನುತರಸುಜ್ಜ್ವಲರನಮಲಗು |
ಣಾನುರಕ್ತರ ಧಾರ್ಮಿಕರನವ |
ಧಾನಿಗಳನಲ್ಲದೆ ಪುರಾಂತದಿ ಕಾಣೆ ನಾನೆಂದ || ೩೮
ವರಸಮುದ್ರದ ನಡುವೆ ಮೆಱೆವುರು |
ತರದ ವಜ್ರದ ವೇದಿಕೆಯವೊಲು |
ಪುರದ ಮಧ್ಯದ ಮಣಿಮಯದ ಹೊಂಗೋಂಟೆ ರಂಜಿಸಲು ||
ಸುರಗಿರಿಯ ಮೇಲತುಳಗಿರಿಗಳ |
ನಿರಿಸಿದಂದದಿ ಕನಕಮಯದು |
ಪ್ಪರಿಗೆಗಳು ರಂಜಿಸಿತು ಗೋಪುರವರಸ ಕೇಳೆಂದ || ೩೯
ಕನಕದಲಿ ಸಮೆದಖಿಳಸಚಿವರ |
ಮನೆಗಳಿರೆ ಶಸ್ತ್ರೇಭಶಾಲಾ |
ಏನುತಹಯಮಂದಿರಗಳಿಂದರಸಿಯರ ಮಣಿಮಯದ ||
ಘನವೆನಿಪ ಹರ್ಮ್ಯಾಳಿ ದೇವಾ |
ರ್ಚನೆಯ ಗೃಹ ಮಣಿಮಂಟಪೋದ್ಯಾ |
ದ್ವನಗಳಿಂದರಮನೆ ವಿರಾಜಿಸಿತಖಿಳವಿಭವದಲಿ || ೪೦
ಆಮಹಾಮಂದಿರದೊಳವನೀ |
ಭಾಮಿನೀಸುಪ್ರೇಮ ರಾಜಲ |
ಲಾಮ ವಿದ್ಯಾಸೀಮ ವರವಿತರಣಗುಣಾರಾಮ ||
ಕಾಮರೂಪ ಕಳಾಭಿರಾಮ ಮ |
ಹಾಮಹಿಮ ಗುಣಧಾಮ ಜಯಸಂ |
ಗ್ರಾಮನೊಲವಿಂದಿರ್ದ ಸತ್ಯಂಧರಮಹೀಪಾಲ || ೪೧
ತನುರುಚಿಯ ಮುಂದಿನನ ರುಚಿ ಕ |
ಪ್ಪನುಪಮಾಕಾರದಲಿ ಹೃಜ್ಜಾ |
ತನು ಕುರೂಪನು ಶಾಂತದಲಿ ಶಶಿ ಬಿಸಿ ಗಭೀರದಲಿ ||
ವನಧಿ ತೆಳ್ಳನೆ ಸತ್ಯದಲಿ ಧ |
ರ್ಮನು ಹುಸಿಕನತಿರೋಷದಲಿ ತ |
ಣ್ಣನೆ ದವಾನಳನೆಂದೊಡರಸನ ಪೊಗಳ್ವನಾರೆಂದ || ೪೨

ಸ್ಮರನನಂಗ ಮೃಗಾಂಕ ದೋಷಾ |
ಕರ ದಿನಾಧಿಪನುಷ್ಣಕರ ಶಂ |
ಕರ ಕಪಾಲಿ ರಮೇಶ ಪುಣ್ಯಜನಾರಿ ಧಾತ ವಿಧಿ ||
ಸುರಪಪಾರದ್ವಾರ ನಳಕೂ |
ಬರ ಹಯಾಸ್ಯನು ಗಂಧವಹನತಿ |
ತರಳನಿನ್ನಾರೆಣೆ ನೃಪಾಲಂಗರಸ ಕೇಳೆಂದ || ೪೩

ಅರಸನಾಶ್ರಿತಜನವ ತನ್ನಯ |
ಪರಿಯ ಮಾಡಲು ನಾಚಿ ಮಲಯಜ |
ವಿರದೆ ಮರನಾಗಿರ್ದುದಾಸುರಧೇನು ಮೌನವನು ||
ಧರಿಸಿತಮರದ್ರುಮವು ಸ್ವರ್ಗಾಂ |
ತರಕೆ ಸರಿದುದು ಸಿದ್ಧರಸ ನೆಱಿ |
ಕರಗಿತೆನಲಾಭೂಮಿಪನ ವರ್ಣಿಸುವನಾರೆಂದ || ೪೪

ಧರೆಗೆ ವನನಿಧಿ ಜಸಕೆ ದೆಸೆಯೈ |
ಶ್ವರಿಯಕಿಂದ್ರನುದಾರತೆಗೆ ಭೂ |
ಸುರರ ದಣಿಸುವುದರ್ಹಭಕ್ತಿಗೆ ಮುಕ್ತಿ ಚೆಲ್ವಿಕೆಗೆ ||
ಸ್ಮರಜಯವು ಭುಜಬಲಕೆ ರಿಪುಸಂ |
ಹರತೆ ವಿದ್ಯದಲಖಿಳಕಳೆಗಳ |
ಪರಿಣತತ್ವವದವಧಿಯಾನೃಪಗರಸ ಕೇಳೆಂದ || ೪೫

ಅರುಹಭಕ್ತಿಯೊಳಾ[ಪ್ತ]ವಿಬುಧೋ |
ತ್ಕರರ ಕಾಂಕ್ಷೆಯ ಹತಿಸುವಲಿ ನಿ |
ಷ್ಠುರನು ಪಾಪದಿ ಹೇಡಿ ನಿಂದ್ಯಾಳಾಪದಲಿ ಬಧಿರ ||
ಪರಸತಿಯರೆಡೆಗಂಧನತಿದು |
ಶ್ಚರಿತದೆಡೆಯುಲಿ ಮಂದನಾಗಿಹ |
ನರಸನೆನಲಾಭೂಮಿಪಾಲನ ಪೊಗಳ್ವನಾರೆಂದ || ೪೬

ಸದಮಳನ ಪೂರ್ಣೇಂದುಸನ್ನಿಭ |
ವದನನನು ಕೀರ್ತ್ಯಂಗನಾನಿಜ |
ಸದನನನು ಮುಕ್ತಾಳಿರದನನ ನವ್ಯರೂಪಜಿತ ||
ಮದನನನು ಪೌರಾಣನಯಕೋ |
ವಿದನ ರತ್ನಚ್ಛದನನನು ಜಯ |
ಕದನನನು ವರ್ಣಿಸುವನಾರವನೀಶ ಕೇಳೆಂದ || ೪೭

ಲಲಿತಧರ್ಮೋತ್ಸಾಹಪತರಣ |
ಗಳಲಿ ರಘುನಂದನನ ತೇಜೋ |
ಬಲಮನೋಜಯದಲ್ಲಿ ಮರುತಾತ್ಮಜರ ಸಾಕಾರ ||
ಬಲಪರಾಕ್ರಮಚಾಪಕುಶಲತೆ |
ಗಳಲಿ ಶಕ್ರನ ತನಯರನು ಗೆಲಿ |
ದಿಳೆಯೊಳೆಣೆಯಿಲ್ಲೆನಿಸಿ ಮಿಗೆ ರಂಜಿಸಿದನವನಿಯಲಿ || ೪೮

ಧರೆಯ ಪಾತಾಳಕ್ಕೊಗೆದು ಕುಲ |
ಗಿರಿಯ ಕಿತ್ತೀಡಾಡಿ ಘಸದಿ |
ಕ್ಕರಿಯ ಶಿರಗಳ ಮೆಟ್ಟಿ ಕುಡುದಾಡೆಗಳ ನೆರೆ ಕೀಳ್ವ ||
ಶರನಿಧಿಯ ಪೀರ್ವತುಳಮೃತ್ಯುವ |
ನುರುತರದೊಳಱಿಯಟ್ಟುವ ಭಟೋ |
ಕ್ಕರದ ಸಂಖ್ಯೆಯನಾರು ಬಲ್ಲರು ಭೂಪ ಕೇಳೆಂದ || ೪೯

ಓಲಗದ ದಂತಿಗಳ ಮದಧಾ |
ರಾಳಿಯಲಿ ನದಿಯಾಗೆ ಬಹುಭೂ |
ಪಾಳಕರ ಭೂಷಾಳಿರುಕ್ಕೇಡಿತದಿ ಕಾಂಚನದ ||
ಧೂಳಿಯುದಿರಲು ತನ್ಮಹಾನದಿ |
ಹೂಳಿದಪುದೆನಲೆಸೆವ ಕರಿಗಳ |
ಜಾಲವನು ಭೂಮಿಪರ ಸಂಖ್ಯೆಯನಱಿವನಾರೆಂದ || ೫೦

ಭರದೊಳೋಡಿ ಸಮೀರಣನ ವಿ |
ಸ್ತರದಿ ಝಳಕಿಸಿ ತಿರುಗುತಿಹ ಬಂ |
ಧುರದ ಬೀಸಣಿಗೆಯನು ಭಂಜಣಿಗೆಯಲಿ ಮೆಲ್ನಡೆಯ ||
ವರಮರಾಳನ ಪೋಲ್ತುದಾಯೆನೆ |
ಚರಿಸಿ ಹೋಯೆನೆ ನಿಂದು ಸಿಂಹೋ |
ತ್ಕರಗಳೆನೆ ಜಾತ್ಯಶ್ವಸಂಕುಳವೆಸೆದುವೊಗ್ಗಿನಲಿ || ೫೧

ಹುಸಿ ಕಳವು ದುಷ್ಕೃತ ಪರಸ್ತ್ರೀ |
ವ್ಯಸನವಾರಡಿ ಬಂದಿ ದಳದುಳ |
ನುಸುಳು ಹಿಂಸೆ ವಿವಾದ ಕಲುಷೋನ್ಮಾದವಜ್ಞಾನ ||
ಪಿಸುಣತನ ಕೊಲೆ ಕೊಂಕು ಮದ ಕ |
ರ್ಕಶವಚನ ವಾಸೋದದೋಷ |
ಪ್ರಸರವಿಲ್ಲಾನೃಪನ ಕಾಲದೊಳರಸ ಕೇಳೆಂದ || ೫೨

ಕ್ಷೋಣಿಪತಿ ಕೇಳಾಮಹೀಶನ |
ರಾಣಿಯುನು ಪ್ರೋತ್ತುಂಗಪುಳಿನ |
ಶ್ರೋಣಿಯುನು ರಕ್ತಾಬ್ಜಪಲ್ಲವಪಾಣಿಯುನು ಬರ್ಹಿ ||
ವೇಣಿಯುನು ಜಾಣೆಯುನು ವೀಣಾ |
ವಾಣಿಯುನು ಸೌಭಾಗ್ಯವಿಜಿತೇಂ |
ದ್ರಾಣಿಯುನು ವರ್ಣಿಸುವನಾರವನೀಶ ಕೇಳೆಂದ || ೫೩
ನುತ ಸೊಬಗು ಸುಪತಿವ್ರತಾಗುಣ |
ದತಿಶಯದಲಾಕಾರದಲಿ ಸು |
ವ್ರತದಿ ಸೌಭಾಗ್ಯದ ಸುಲಕ್ಷಣದಲಿ ಸುಶೀಲದಲಿ ||
ಚತುರತೆಯೊಳನುನಯದಿ ಲೋಕದ |
ಸತಿಯರನು ಗೆಲಿದುದರಿವಿಜಯಾ |
ವತಿಯೆನಿಪ ಪೆಸರಾದುದಾ ಸತಿಗರಸ ಕೇಳೆಂದ || ೫೪
ಗುಣಿಯನಬಲಾಮಣಿಯು ಮುನಿಪ |
ಸೃಣಿಯನಂಗಜ ಕುಣಿಸುತಿರ್ಪರ |
ಗಿಣಿಯು ಕುಮುದೇಕ್ಷಣೆಯು ಶುಭಲಕ್ಷಣೆಯು ರೂಪಕದ ||
ಕಣಿಯು ಸಕಲಜನರ ಮನೋಹಾ |
ರಿಣಿಯು ಪಲ್ಲವಪಾಣಿಯು ವಿಚಾ |
ರಿಣಿಯು ಚಿಂತಾಮಣಿಯು ರೂಪನು ಪೊಗಳ್ವನಾರೆಂದ || ೫೫
ಬಾಲೆಯುನು ಮನಸಿಜನ ಶಸ್ತ್ರದ |
ಶಾಲೆಯುನು ಚಾರಿತ್ರಗುಣಮಣಿ |
ಮಾಲೆಯನು ಶೃಂಗಾರರಸಪೂರಿತಮಹಾಂಬುಧಿಯ ||
ವೇಲೆಯುನು ರತಿಪತಿಯ ಮಂಗಳ |
ಲೀಲೆಯುನು ಖಂಡೇಂದುಸನ್ನಿಭ |
ಭಾಳೆಯುನು ನುತಶೀಲೆಯುನು ವರ್ಣಿಸುವನಾರೆಂದ || ೫೬
ನಾರಿಯುನು ಸತ್ಯಂಧರಮನೋ |
ಹಾರಿಯುನು ನಾಕಪ್ರಸುಖಸಾ |
ಕಾರೆಯುನು ಧೀರೆಯುನು ನವಲಾವಣ್ಯವಾರಿಧಿಯ ||
ಏಱಿಯುನು ಮುನಿನಿಕರಧೀರಪ |
ಹಾರಿಯನುದಾರೆಯುನು ವಿಗತವಿ |
ಕಾರೆಯುನು ವರ್ಣಿಸುವನಾರವನೀಶ ಕೇಳೆಂದ || ೫೭

ಕುಶಲತೆಯೊಳಂಭೋಜಭವ ಚಿ |
ತ್ರಿಸಿ ಸಜೀವವ ಪಡೆದನೋ ಮೋ |
ಹಿಸುವ ವಸ್ತುಸಮೂಹಗಳ ರೂಪಾಗಿ ಮಾಡಿದನೋ ||
ಕುಸುಮಶರನು ಜಗಜ್ಜಯಕೆ ಮಾ |
ಡಿಸಿದ ನಿಶಿತಾಯುಧವೊ ತಾನೆನ |
ಲಸಿತಕುಂತಳೆಯೆಸೆದಳವನೀಪಾಲ ಕೇಳೆಂದ || ೫೮

ಸರಸಿಜಾಕ್ಷಿಯ ರೂಪ ನೋಡಲು |
ಸುರಪ ಸಾಸಿರ ಕಣ್ಗಳನು ವಿ |
ಸ್ತರದಿ ಪಡೆದನೊ ತನ್ಮೃಗಾಕ್ಷಿಯ ವಿಪ್ರಲಂಭದಲಿ ||
ಸ್ಮರನು ದೇಹವನುಳಿದನೊ ಹಿಮ |
ಕರನು ನೆರೆ ಕುಂದಿದನೆನಲ್ಕಾ |
ತರುಣಿಯನು ವರ್ಣಿಸುವನಾರವನೀಶ ಕೇಳೆಂದ || ೫೯

ಅರಳ ಸರಳ್ಗೈದೊಂದು ಬಿಲ್ಲಿಂ |
ದಳಿದು ಲೋಕವ ಜಯಿಸಲೆನಗೀ |
ತರುಣಿಯಕ್ಷಿಯುಗಾಸ್ತ್ರದಿಂದೇಳಿಂಬು ಭ್ರೂಚಾಪ ||
ಬೆರಸಿದನು ಮೂಱಾದುವೆನಗೆಂ |
ದರಸಿಯೊಳು ಕೈವೊಯ್ದು ನಗುತು |
ಬ್ಬರಿಸುತಿರ್ದನು ಕಂತುವೆಸೆ ವರ್ಣಿಸುವನಾರೆಂದ || ೬೦

ಹರನದೂರ್ವ ತನೂಭವನ ಮುನಿ |
ದುರುಹಿದುದಕತಿಮುಳಿದವೊಲು ಸಾ |
ಸಿರ ಮನೋಜರನಬಲೆ ಜನಸಂಕುಲಕೆ ಪುಟ್ಟಿಸುತ ||
ಸ್ಮರನ ಮಂತ್ರದ ದೇವತೆಯವೊಲು |
ತರುಣಿಯರಿಗೆ ಲಲಾಮವಾಗಿಯೆ |
ಸರಸಿಜಾಂಬಕಿಯೆಸೆದಳವನೀಪಾಲ ಕೇಳೆಂದ || ೬೧

ಸುದತಿಯಾನನಕಂಘ್ರಿ ಮೇಲ್ಮುಡಿ |
ಗಧರ ಸೋರ್ಮುಡಿಗುನ್ನತಸ್ತನ |
ಮೃದುತನುಚ್ಛವಿಗಳಕ ನಡುವಿಗೆ ಯಾನ ಭುಜಕಕ್ಷಿ ||
ರದನಗಳಿಗುತ್ತುಂಗ ಕಟಿ ನೆರೆ |
ಹೆದಱಿದಪುವೆಂದೆನೆ ವಿಚಿತ್ರಾಂ |
ಗದ ಸತಿಯ ರೂಪಾತಿಶಯವನು ಹೊಗಳ್ವನಾರೆಂದ || ೬೨

ಕುಮುದಕೇಸರಿನೇತ್ರಗಂಧಿಯು |
ನಮಳಶಶಿಬಿಂಬಾನನೋಷ್ಠ್ಯಯು |
ಸಮದವಾರಣಕುಂಭಯಾನಸ್ತನೆಯು ಹರಿನೀಲ ||
ವಿಮಲಮಧ್ಯಾಳಕೆಯು ವರಪಿ |
ದ್ರುಮಲತಾಹಸ್ತಾಂಗೆಯನು ಮೃದು |
ಕಮಲನಾಳನವಾಂಘ್ರಿ ಬಾಸೆಯು ಪೊಗಟ್ವನಾರೆಂದ || ೬೩

ಕ್ಷಿತಿಪ ಕೇಳಿಂತೆಸೆವ ವಿಜಯಾ |
ವತಿಯನಾಸತ್ಯಂಧರನು ನವ |
ಚತುರತೆಯೊಳಭಿನವಮನೋಜನ ವಿಧದೊಳನವರತ ||
ಕೃತಕಶೈಲಾರಾಮ ಪುಳಿನ |
ಪ್ರಕತಿಯುಲಿ ಶಶಿಕಾಂತಗೃಹದೊಳ |
ಗತಿಶಯಾನಂದದಲಿ ರಮಿಯಿಸುತಿರ್ದನೊಲವಿನಲಿ || ೬೪

ತಳಿತ ಘರ್ಮಜಲಾಂಬು ಭಾಳದ |
ತಿಲಕ ಗಂಧ ಸುದಂತದಕ್ಷತೆ |
ಸುಲಲಿತಾನನಕಮಳಸೌರಭ ಧೂಪ ದೃಗ್ದೀಪ ||
ಹೊಳೆವಧರ ನೈವೇದ್ಯ ರತಿ ಸ |
ತ್ಫಲಗಳಾಗೆ ನೃಪಂಗೆ ಮಾಡಿದ |
ಳೆಳೆಯೊಳಷ್ಟವಿಧಾರ್ಚನೆಯ ತನ್ನಂಗಶೋಭೆಯಲಿ || ೬೫

ಕೀರ ಮೃದುಫಲರಸವನಮಲ ಚ |
ಕೋರ ಚಂದ್ರಿಕೆಯನು ಮಯೂರವ್ರ |
ಕಾರ ನವಷಟ್ಪದ ಸುಗಂಧವ ಚಕ್ರವಾದಿವವ ||
ಸಾರಸಾಧಿಪ ಕೋಗಿನ ಪಿಕ ವಿ |
ಸ್ತಾರವನವನು ಮೆಚ್ಚಿದಂದದೆ |
ಧಾರಿಣೀಪತಿ ಸತಿಗೆ ಮನವೆಳಸಿರ್ದನೊಲವಿನಲಿ || ೬೬

ತನುವನಾಕೆಯು ದೇಹದಾಲಿಂ |
ಗನದಿ ಕಂಗಳನಾಸತಿಯು ರೂ |
ಪಿನಲಿ ಕರ್ಣವನಬಲೆಯಾಳಾಪದಲಿ ನಾಸಿಕವ ||
ತನುವಿನಾಕಸ್ತೂರಿದದಲಿ ಜಿಹ್ವೆಯ |
ನಿನಿಯಳಧರಾಮೃತದಿ ತೃಪ್ತಿಯ |
ಜನಪ ಮಾಡುತ್ತಿರ್ದನಿಂತವನೀಶ ಕೇಳೆಂದ || ೬೭

ಇದು ವಿನಮದಮರೇಂದ್ರ ಶ್ರೀಜಿನ |
ಪದಕಮಲಷಟ್ಚರಣವಾಣೀ |
ವದನದರ್ಪಣ ಭೂಸುರೋತ್ತಮ ಬಸವಣಾಂಕಸುತ ||
ಚದುರ ಭಾಸ್ಕರರಚಿತ ಧರ್ಮ |
ಪ್ರದನ ಜೀವಂಧರನ ಚರಿತೆಯೊ |
ಓದುವೆ ತಾನಧಿರಾಜವರ್ಣನವರಸ ಕೇಳೆಂದ || ೬೮

ಎರಡನೆಯ ಸಂಧಿ ಮುಗಿದುದು.

---

## ಮೂಱನೆಯ ಸಂಧಿ.

**ಸೂಚನೆ**|| ದುರುಳಕಾಷ್ಠಾಂಗಾರಕನ ಹವ |
ಜಱಿದು ಸತ್ಯಂಧರನು ಮಂತ್ರೀ |
ಶ್ವರನ ಮಾಡಿದ ತೆಱನ ವಿವರಿಸಿದನು ಮುನೀಶ್ವರನು ||

ಧರಣಿಪತಿ ಕೇಳೀಪ್ರಕಾರದಿ |
ವರನೃಪಾಗ್ರಣಿಯೆನಿಪ ಸತ್ಯಂ |
ಧರನಕಾರಣದಿಂದ ಪೂರ್ವದ ಮಂತ್ರಿವರ್ಗಗಳ ||
ತೊಱೆದು ಕಾಷ್ಠಾಂಗಾರಕನ ವಿ |
ಸ್ತರದಿ ಸಚಿವನ ಮಾಡಿ ತಾ ಸುರ |
ಪುರಕೆ ಸರಿದನು ಕುಜನಸಂಗದೊಳುಂಟೆ ಸುಖವೆಂದ || ೧

ಎನಲು ಮಗಧನೃಪಾಲ ಗೌತಮ |
ಮುನಿಗೆ ತಾನಿಂತೆಂದ ಪರಿಣತ |
ನೆನಿಪ ಸತ್ಯಂಧರನು ಕಾಷ್ಠಾಂಗಾರನೆಂಬವಗೆ ||
ಅನುಚಿತದಿ ಮಂತ್ರೀಶಪಟ್ಟವ |
ನನುಕರಿಸಿ ಪಾಲಿಸಿದನೇಕಾ |
ತನ ಸುವೃತ್ತಾಂತವನು ತಿಳುಹೆನೆ ಮುನಿಪನಿಂತೆಂದ || ೨

ಅರಸ ಕೇಳಾತೆಱದಿ ಸತ್ಯಂ |
ಧರನು ರಾಜ್ಯಾಂಗನೆಯ ಭೋಗಿಸು |
ತಿರಲು ನಗರಾಂತರದಿ ಕಾಷ್ಠಾಂಗಾರನಿವ ತಾನು ||
ನಿರುತದಿಂದಡುಗಬ್ಬ ತಂದಾ |
ಪುರದೊಳಗೆ ವಿಕ್ರಯಿಸಿ ತನ್ನನು |
ಹೊರೆದು ಕೊಳುತಿಹನೀಪರಿಯೊಳತಿಕಷ್ಟವೃತ್ತಿಯಲಿ || ೩
ಒಂದು ದಿನ ಘನಕಾಷ್ಠಭಾರವ |
ನೊಂದಿ ಕಾಷ್ಠಾಂಗಾರ ಹಱುವದಿ |
ತಂದು ವೇಶ್ಯಾರತ್ನಪದ್ಮಾವತಿಯ ಮಂದಿರದ ||
ಮುಂದಿಱುಹಿ ಬೇಸಗೆಯ ಬಿಸಿಲೊಳು |
ಬೆಂದುಡುಗೆ ಹೊಯ್ವಳ್ಳಿಯಲಿ ಕರಿ |
ಗಂದಿ ತಾಳಿಗೆಯೊಣಗಿ ಕುಸಿದಿರ್ದನು ಕುಚೇಷ್ಟೆಯಲಿ || ೪
ಚತುರವಿಟನ ಸಮೇತ ಪದ್ಮಾ |
ವತಿ ಸುಹರ್ಮ್ಯದೊಳಿರ್ದು ನೆರೆ ದಾ |
ವತಿಬಡುತ್ತಳವಱಿವ ಕಾಷ್ಠಾಂಗಾರಕನ ಕಂಡು ||
ಕ್ಷಿತಿಯೊಳಿವನೀತಿಲ್ಲ ಬಿಡದ |
ಧೃತಿ ಬಡುವ ನರನೆಂದು ವಿಟಗ |
ದ್ಭುತದಿ ತೋಱಿಸಲಣಕದಿಂ ಸತಿಗೆಂದನವ ನಗುತ || ೫
ಇಂದುಮುಖಿ ಕೇಳ್ ನಿನ್ನ ವರಿಸಲು |
ಬಂದನಿವನೆನೆ ಛಿ ! ಪೊಯೆ ಥೂ ಥೂ |
ಎಂದು ಮನದಲಿ ಹೇಸಿ ಕಾಂತನ ಜಱಿದು ತಾನಿವನ ||
ಹೊಂದುವುದಱಿಂದುರಿಯೊಳೊಂದುವು |
ದೆಂದವನನಣಕಿಸುತ ಸತಿ ಹಲ |
ವಂದದಲಿ ಜಱಿದವನ ಮೇಲುಗುಱಿದಳು ನಸು ನಗುತ || ೬
ತರುಣಿ ಜಱಿದೀಪರಿಯೊಳಿನಿಯನ |
ಕರತಳವ ಹೊಯ್ದಣಕದಲಿ ನಗು |
ತಿರಲು ಕಾಷ್ಠಾಂಗಾರ ಕೇಳಿದು ನಾಚಿ ಮನನೊಂದು ||
ಮಱುಗಿ ವಾಸಿಯೊಳಿವಳ ನಾನಾ |
ತೆಱದಿ ಭೋಗಿಸಬೇಕೆನುತ ಕಾ |
ತರಿಸಿ ತನ್ನಯ ಮನದೊಳಾಳೋಚಿಸಿದನಾವಿಧವ || ೭

ವನಿತೆಗೊತ್ತೆ ಸಹಸ್ರಕಾಂಚನ |
ವನಿತನಾರ್ಜಿಸಲರಿದು ತಾನೊಂ |
ದನುವಿನಲಿ ಕೂಡುವೆನೆನುತ ನಿಶ್ಚೈಸಿ ಕಾಷ್ಠಗಳ ||
ದಿನಕೆ ನಾಲ್ಕೈದಾ [ಅತಿನಿಪ ಸೂ |
ಚಿನಲಿ] ತಂದವ ಮಾಱಿ ಪೊಂಗಳ |
ನನುನಯದಿ ಸಂಪರಿಸುತಿರ್ದನು ಹಲವು ಕಾಲದಲಿ || ೮

ಧರಣಿಪತಿ ಕೇಳೊಂದು ದಿನವಾ |
ಪುರದ ಚೈತ್ಯಾಲಯದಿ ಗುರುಗಳ |
ಹೊರೆಯೊಳುರುಭವ್ಯಾಳಿ ಬಹುವಿಧದಿಂದಣುವ್ರತವ ||
ಸುರುಚಿರದಿ ಕೈಕೊಳಲು ವಿಸ್ಮಯು |
ತರದಿ ಕಾಷ್ಠಾಂಗಾರನಲ್ಲಿಗೆ |
ಭರದಿ ಬಂದಾಮುನಿಗಳಡಿಗಳಿಗೆಱಗಿ ತಾ ನುಡಿದ || ೯

ಮುನಿಪ ಕೇಳ್ ತನಗೊಂದು ಸುವ್ರತ |
ವನು ನಿರೂಪಿಸಿ ಕಾಯಬೇಕೆಂ |
ದೆನಲು ನಗುತಾಮುನಿಗಳೀವ್ರತವಾರು ಸೀನಾರು ||
ಅನುಕರಿಸದದು ಬೇಡ ಹೋಗೆಂ |
ದೆನಲು ಮುನಿಗಳು ನೆನೆದು ನುಡಿದರ |
ಸುನಯದಲಿ ಸತ್ಕೃಪೆಯೊಳಾತಗೆ ತಕ್ಕ ಸುವ್ರತವ || ೧೦

ಸುತನೆ ನೀ ಪೌರ್ಣಿಮಿಯು ದಿನದಲಿ |
ಸತಿಯು ಹೊದ್ದಲು ಬೇಡವಿದು ಸು |
ವ್ರತವನುಲ್ಲಂಘಿಸದೆ ನಡೆಸುವುದೆಂದು ಕರುಣದಲಿ ||
ಯತಿಗಳಱುಹೆ ಹಸಾದವೆಂದಾ |
ಶ್ರುತಮುನೀಶರಿಗೆಱಗಿ ಬೀಳ್ಕೊಂ |
ಡತಿಮುದದಿ ಮರಳಿದನು ಕಾಷ್ಠಾಂಗಾರನಾಲಯಕೆ || ೧೧

ಕೆಲವು ಕಾಲಕೆ ಕಟ್ಟಳೆಯು ಪೊಂ |
ಗಳನು ನಿಖಿಲೋಪಾಯದಿಂದವೆ |
ಗಳಿಸಿ ಬುಧರಿಂ ಸಕಲಕಲೆಗಳನಱಿದು ವಿಟಮತವ ||
ತಿಳಿದು ವಿವಿ ಸುಗಂಧಸಹಿತ |
ಗ್ಗಳನು ಪದ್ಮಾವತಿಯು ಮನೆಗೆಂ |
ದೆಳಸಿ ಬರಲನುಗೈದು ಕೈಗೆಯ್ದನು ವಿಳಾಸದಲಿ || ೧೨

ಧರಿಸಿದನು ಚೀನಾಂಬರವನಾ |
ಭರಣಗಳ ತಾಳ್ದೆಸೆವ ಪೂಗಳ |
ತುಱುಬಿ ಸಾದು ಜವಾಜಿಗಂಧವ ಲೇಪನಂಗೆಯ್ದು ||
ಬೆರಸಿ ಹಡಪದ ಬಾಲನೆಯ್ತರು |
ತಿರಲು ಕಾಷ್ಠಾಂಗಾರ ಸುರಗಿಯ |
ತಿರುಹುತಲಿ ನಟನೆಯಲಿ ಗಣಿಕೆಯ ಮನೆಗೆ ನಡೆತಂದ || ೧೩

ಬಂದು ಕಾಷ್ಠಾಂಗಾರ ದೋರದಿ |
ಹೊಂದಿಸಿಹ ಹೊಂಗಂಟೆಯನು ಸಾ |
ನಂದದಲಿ ದನಿಗೆಯ್ಯೆ ಚೇಟಿಯರಾಗಳೆಯ್ತಂದು ||
ಇಂದುಮುಖಿಗೊತ್ತೆಯನು ಕೊಂಡೊಲ |
ವಿಂದಲಾತನ ಕರೆಸಲವನಾ |
ಮಂದಿರದ ರಚನೆಯ ವಿಳಾಸವ ಹೊಕ್ಕನಟ್ಟೆಯಲಿ || ೧೪

ಲಲನೆ ಕಳೆ ಕಪ್ಪುರದ ಕಸವನು |
ತಳಿ ಸುಗಂಧೋದಕವನಗಿಲ ಹೊಗೆ |
ಗೊಳಿಸು ನಗದೊಲಿದಿಕ್ಕು ಮುತ್ತಿನ ರಂಗವಲ್ಲಿಯನು ||
ಬೆಳಗು ಮಣಿದೀಪವನು ತೊಡಿಗೆಯ |
ನಳವಡಿಸಿಕೊಳ್ಳೆಂಬ ಚೇಟಿಯ |
ರುಲುಹನಾಲಿಸುತೋವರಿಗೆ ಬರುತಿರ್ದನೊಲವಿನಲಿ || ೧೫

ಗಿರಿಶನಟ್ಟಿದನೊತ್ತೆಗಂದೇ |
ಪೆಱತಿಯನೋಪಿಗೆ ಕೊಟ್ಟ ವಜ್ರವ |
ಸುರಪ ಬಿಡಿಸಲು ಬಂದನಜ ಕುಂಡಲವ ಹರಿಮಣಿಯ ||
ವರುಣ ಹಾರವ ತಂದನೊತ್ತೆಗೆ |
ಕರೆವೆನಾರುವನಕ್ಕ ಬೆಸಸೆಂ |
ದಱುಹುತಿಹ ದೂತಿಯ ನುಡಿಯನಾಲಿಸುತ ಬರುತಿರ್ದ || ೧೬

ಲಲಿತಚಿತ್ರದ ರಂಗದೋವರಿ |
ಯೊಳಗೆ ಕುಸುಮದ ಹರಹಿನಲಿ ಮೆಱೆ |
ವಲಘುಮಣಿಮಂಚವನು ಕಾಷ್ಠಾಂಗಾರ ಸಾರ್ದಿರಲು ||
ಲಲನೆಯರ ಮೃದುಗೀತ ಶುಕಕೋ |
ಕಿಲಮರಾಳಾಲಾಪಗಳ [ಮನ] |
ವೊಲಿದು ಕೇಳುತ್ತಿರಲು ರವಿಯಸ್ತಾದ್ರಿಗೆಯ್ತಂದ || ೧೭

ಜಳಜ ಮುಕುಳಿತವಾಗೆ ಚಕ್ರಂ |
ಗಳು ವಿಶೋಕಮನೆಯ್ದೆ ನೀಲೋ |
ತ್ಪಳ ವಿಕಾಸಮನೆಯ್ದೆ ತಾರೆಗಳಂಬರದೊಳೊಗೆಯೆ ||
ಅಲರ ಬಾಣನ ಚಕ್ರವೋ ಸ |
ಲ್ಲಲಿತಪೂರ್ವದಿಶಾಂಗನಾಕುಂ |
ಡಲವೊ ತಾನೆನಲುದಯಿಸಿದ ಶಶಿ ಮೂಡಣದ್ರಿಯಲಿ || ೧೮

ಆಮಹಾಚಂದ್ರೋದಯದೊಳಾ |
ಕಾಮಿನಿಯೊಳೊಡಗೂಡಲೆಂದಿರೆ |
ಭಾಮೆಯೊರ್ವಳು ಬರಲು ನಿಮ್ಮಯ ಮನೆಯೊಳಿಂದೀಗ ||
ಈಮಹೋತ್ಸವವೇನೆನಲ್ಕಭಿ |
ರಾಮಪೌರ್ಣಮಿಪರ್ವವಿಂದೆಂ |
ದಾಮೃಗಾಕ್ಷಿಗೆ ತಿಳುಹಿದರು ಚೇಟಿಯರು ನಲವಿನಲಿ || ೧೯

ವನಿತೆಯರು ಪೌರ್ಣಮಿಯ ದಿನವೆಂ |
ದೆನಲು ಕಾಷ್ಠಾಂಗಾರನಂತಾ |
ಧ್ವನಿಯ ಕೇಳಿದು ಮನದೊಳತಿಸಂತೋಷಬಟ್ಟಂದು ||
ಮುನಿಗಳಿತ್ತಾವ್ರತವು ಕೆಡದಂ |
ತನುಕರಿಸಿತಿದು ದೈವವುಂಟೆನ |
ಗೆನುತಲಾತನು ಮನದೊಳಾಲೋಚಿಸಿದ ಹರುಷದಲಿ || ೨೦

ಲಲನೆಗರ್ಘವ ತಂದು ಕೊಟ್ಟಾ |
ಗಳೆ ಲತಾಂಗಿಯು ನೆರೆದನೆನ್ನಯ |
ಚಲವು ಸಂದುದು ಮನದೊಳಲ್ಪಸುಖಕ್ಕೆ ಗುರುವಿತ್ತ ||
ಸುಲಲಿತವ್ರತವಳಿಯೆ ನರಕದೊ |
ಳಿಳಿವೆನೆಂದಂಗಜನ ಗೆಲಿದಾ |
ಲಲನೆಗೆಳಗದೆ ಮುದದಿ ಮೋನದೊಳಿರ್ದು ಪವಡಿಸಿದ || ೨೧

ಎಂದು ವೇಸಿಯನುಳಿದು ಪರಮಾ |
ನಂದದಲಿ ಮುಸುಕಿಟ್ಟು ಮಲಗಿರ |
ಲಂದು ಪದ್ಮಾವತಿ ಲಸಚ್ಛೃಂಗಾರಶೋಭೆಯಲಿ ||
ಬಂದೊಡನೆ ಸೆಳೆಮಂಚವೇರಿರೆ |
ಹಿಂದುಮುಂದವನಾಗೆ ವಿಸ್ಮಯ |
ವೆಂದಿದೇನೆಂದವನನೀಕ್ಷಿಸುತಿರ್ದಳಾಕಾಂತೆ || ೨೨

ನೆಟ್ಟನೆನಗೆ ಸಹಸ್ರ ಪೊಂಗಳ |
ಕೊಟ್ಟ ನರಸಿವ ಮರುಳನೋ ಮೇಣ್ |
ದುಷ್ಟನೊ ನಪುಂಸಕನೊ. . . . . . . . . . . . . . ||
ಭ್ರಷ್ಟನೋ ತಾನಾಗಿ ಪುರುಷರ |
ಮುಟ್ಟುವುದು ಸತಿಯರಿಗೆ ಹೀನವ |
ನಿಷ್ಟವೆನಗಾಯ್ತೆಂದು ಬೆಱಗಾದಳು ಸರೋಜಾಕ್ಷಿ || ೨೩

ನಿದ್ದೆಗಯ್ದನೊ ಸಟೆಯೊಳೇ ಒಱ |
ಗಿದ್ದಪನೊ ತಾ ನೆರೆಯದಿದ್ದರೆ |
ಹೊದ್ದುವುದು ಪಾತಕವು ಕೊಟ್ಟ ಸುವರ್ಣ ಋಣವಹುದು ||
ಮುಗ್ಧೆಯರೊಳತಿಹೀನವಹುದೆಂ |
ದೆದ್ದು ನೋಡುವ ಮಱೆದು ಮಲಗಿರೆ |
ಮಧ್ಯರಾತ್ರಿಯೊಳೆದ್ದು ಕಾಷ್ಠಾಂಗಾರ ಸೈವರಿದ || ೨೪

ತರುಣಿ ಬೞಿಕೆಚ್ಚತ್ತು ನಲ್ಲನ |
ನಿರವ ಕಾಣದೆ ಕೆಟ್ಟೆನಕಟೆಂ |
ದರಸ ಸತ್ಯಂಧರನೆಡೆಗೆ ಬಂದೆಱಗಿ ವಿಟನೆನ್ನ ||
ಇರುಳು ತಂದೆನಗೊತ್ತೆಯನು ವಿ |
ಸ್ತರದಿ ಕೊಟ್ಟೆನ್ನನು ನೆರೆಯದೆ |
ಮರಳಿ ಹೋದಸಿದೇನು ವಿಸ್ಮಯವೆಂದಳಿಂದುಮುಖಿ || ೨೫

ಸ್ಮರಜಯಂತಾದ್ಯರುಗಳೆನ್ನಯ |
ಹೊರೆಗೆ ಬಂದೆನ್ನನು ನೆರೆಯದೆ |
ಮರಳರಿವನು ಮುಗುೞ್ದದಚ್ಚರಿಯೆನಲು ನೃಪ ನಗುತ ||
ಪುರದ ಹೆಬ್ಬಾಗಿಲುಗಳೆಲ್ಲವ |
ಭರದಿ ಮುಚ್ಚಿಸಿ ಬಾಗಿಲೊಂದನು |
ತೆರೆಸಿ ತತ್ಕಾಮಿನಿಗೆ ಭೂಮಿಪಾಲನಿಂತೆಂದ || ೨೬

ತರುಣಿ ನೀನಿಂದಿರುಳು ಬಂದನ |
ಕುಱುಹ ಬಲ್ಲೊಡೆ ಸೆಱಗ ಹಿಡಿಯೆಂ |
ದರಸನಾದ್ವಾರದೊಳಗಾಕೆಯನಿರಿಸಿ ಹೊೞಲೊಳಗೆ ||
ಪುರುಷರಿರ್ದೊಡೆ ದಂಡಿಸುವೆನೆಂ |
ದಿರದೆ ಸಾರಿಸೆ ಜನವು ಹೊಱವಡು |
ತಿರಲು ಪದ್ಮಾವತಿ ನಿರೀಕ್ಷಿಸುತಿರ್ದಳಾವಿಟನ || ೨೭

ಪುರದ ಜನವಂದೆಯ್ದೆ ಪೊಱಮಡು |
ತಿರಲು ಕಾಷ್ಠಾಂಗಾರ ಹಗಲಲಿ |
ಪರಶು ಕೈಯಲಿ ನೇಣ್ಗಳನು ಶಿರದಲ್ಲಿ ಕಂಬಱಿಯ ||
ಧರಿಸಿ ಮುನ್ನಿನ ತೆಱದಿ ಹೋಗಲು |
ತರುಣಿ ಸಿಕ್ಕಿದ ತುಂಟನೆಂದೊಡ |
ನೆರಸಿ ತಂದಿಕ್ಕಿದಳು ಭೂಮಿಪಾಲನಿದಿರಿನಲಿ || ೨೮
ಇರುಳು ಬಂದವನಿವ ವಿಚಾರಿಸು |
ಧರಣಿಪತಿ ಎಂದಬಲೆಯೆನಲಾ |
ನೆರವಿ ನಗುತಿವನಾರು ಸಾಸಿರ ಹೊನ್ನು ಇವಗೆಂತು ||
ದೊರಕುವುದು ನಾವಱಿಯೆ ಕಾಷ್ಠವ |
ಪುರದೊಳಗೆ ಮಾಱುವನು ಮೂರ್ಖೆಯೊ |
ಮರುಳೆಯೋ ನೀನೆಂದು ಜಱಿದು ನೃಪಾಲನಿಂತೆಂದ || ೨೯
ಎಲವೊ ನೀನಿರುಳೀಸತಿಯುನೇ |
ಕುಱಿದೆ ರೂಪೈಶ್ವರ್ಯದಲಿ ಕೌಶಲ |
ಗಳಲಿ ತನಗಿಂತಿವಱೊಳೊಂದಿಲ್ಲಿವಳ ನಾನೆಂತು ||
ಎಳಸುವೆನು ತಾನಿವಳ ನೆರೆಯದೆ |
ಹಱಿವೆ ತಾನಲ್ಲಿರುಳು ಬಂದವ |
ನೆಲೆ ಮಹೀಪತಿ ಎನಲು ಬೆಱಗಿನೊಳಿದ್ದನಾಭೂಪ || ೩೦
ಬೆಱಗಿದೇಕವನೀಶ ಕೇಳಿವ |
ನಿರುಳು ಬಂದವನಲ್ಲದಿರೆ ಸತಿ |
ಯರಿಗೆ ಹೊಱುವೆನು ನೀರನೆನೆ ನೃಪನವನ ಹತ್ತಿರಕೆ ||
ಕರೆದು ತಪ್ಪದೆ ಹೇಱು ನಿನ್ನೊಳು |
ಕೊಱತೆಯಿಲ್ಲೆನಲಹುದು ತಾನಾ |
ತೆಱನ ಹೇಱುವೆನೆನುತ ಕಾಷ್ಠಾಂಗಾರನೃಪಗೆಂದ || ೩೧
ಜನಪ ಕೇಳಾನೊಂದುದಿನವಿಂ |
ಧನವ ತರುತಿರಲೆನ್ನ ಕಂಡೀ |
ವನಿತೆ ತನ್ನನಿಯನ ಸಮೀಪದಿ ಹಱಿಯೆ ತಾನಿವಳ ||
ಅನುಭವಿಸಿ ಲಜ್ಜಿಸುವನೆಂಬಾ |
ಧನವ ಕಾಷ್ಠವ ಮಾಱಿ ಗಳಿಯಿಸು |
ತಿನಿಯಳನು ಪೌರ್ಣಮಿಯ ದಿನವೆಂದುಱಿದೆ ತಾನೆಂದ || ೩೨

ಎನಲರಸ ಪೌರ್ಣಮಿಯ ದಿನವಂ |
ಗನೆಯ ನೆರೆಯದುದೇನು ಕಾರಣ |
ವೆನಲೆನಗೆ ಗುರುವಿತ್ತ ಸುವ್ರತಭಂಗವಹುದೆಂದು ||
ವನಜವದನೆಯನುೞಿದೆನೆನಲಾ |
ತನ ಛಲೋಪಾಯಾಂತರಂಗದ |
ನೆನಹು ಗುರುಭಾವನೆಗೆ ಬೆಱಗಾದನು ಮಹೀಪಾಲ || ೩೩

ತರುಣಿ ನೀಮುನ್ನಿವನ ಹೞಿದುದು |
ನಿರುತವೇ ಹೇೞೆಂದು ಭೂಮೀ |
ಶ್ವರನು ಬೆಸಗೊಳೆ ನಾಚಿ ಸತಿಯುಂಟೆಂದು ತಲೆವಾಗೆ ||
ಧರಣಿಯೊಳು ಬೆಲೆವೆಣ್ಣಿಗಘೋರ್ |
ತ್ಕರವದಲ್ಲದೆ ರೂಪುಗುಣಚಾ |
ತುರಿಯವೇಕೆಂದವಳ ಕಾಷ್ಠಾಂಗಾರ ಲಜ್ಜಿಸಿದ || ೩೪

ದೇಶಜನದುಚ್ಛಿಷ್ಟ ದೋಷನಿ |
ವಾಸದನಿಬರುಮುಗುೞ್ವ ತಂಬುಲ |
ದೋಷದೆಡೆ ಹದಿನೆಂಟು ಜಾತಿಗಳುಂಬ ಭಾಜನವು ||
ಹೇಸಿಕೆಯ ರಕ್ತೇಂದ್ರಿಯಾಸ್ಪದ |
ವೈಶಿಕಾಶ್ರಯ ಕುಟಿಲಕಾಗರ |
ವೇಸಿ ಸುಡು ಛೀವ್ರೋಯೆ ಥೂಥೂ ಎಂದು ವಿಟ ಜಱಿದ || ೩೫

ಹೊನ್ನಿನಾಸೆಗೆ ಬಧಿರನಂಧಕ |
ತೊನ್ನ ಚೋರ ಕೃತಘ್ನ ಖಲರಿಗೆ |
ತನ್ನನಿತ್ತೆದೆಗೊಯ್ಸಿಕೊಂಡನುಭವಿಸಿ ನಾಣ್ದೊಱಿದು ||
ನನ್ನಿಗೆಟ್ಟೊಗಡಿಸದೆ ನಾನಾ |
ವರ್ಣದೆಂಜಲ ತಿಂದು ಬಾೞುವ |
ಗನ್ನಗತಕದ ವೇಶ್ಯೆಯರ ಸುಡಲೆಂದು ವಿಟ ಜಱಿದ || ೩೬

ಇತ್ತ ಧನ ಋಣವಹುದು ಪಾತಕ |
ಹೊತ್ತಪುದು ದಿಟವೆಂದಿವಳು ತಾ |
ನುತ್ತಮಳು ಎಂದರಸ ನಿಮಗಱುಹಿದಳು ಲೋಕದಲಿ ||
ಕತ್ತೆ ಗಜವನು ಪಿಕ ಮರಾಳನ |
ನೆತ್ತು ಸುರಭಿಯನೀವ್ರೊಡದುವೆ ಸು |
ವೃತ್ತ ವೇಸಿಯೊಳುಂಟೆ ಸುಪ್ರಿಯವೆಂದು ಭಂಗಿಸಿದ || ೩೭

ಇಳೆಯು ಪತಿ ಕೇಳೆನ್ನ ಹುಟ್ಟಿದೊಡೆ |
ಚಲನಿಮಿತ್ತದಿನಿವಳ ನೆರೆದೆನು |
ಮುಳಿವೆನೆಂದುದ್ಯೋಗಿಸದೆ ..ಕುವೇಶ್ಯರಿಗೆ ||
ಸಿಲುಕಿದವ ಸರ್ವಜ್ಞನಾಗಲಿ |
ಕುಲಸುಶೀಲವು ಧರ್ಮಸುಗುಣಾ |
ವಳಿಗಳಿನಿತುಱಿ ಹಾನಿಯುಹುದವನೀಶ ಕೇಳೆಂದ || ೩೮

ಕುಟಿಲದೆಡೆ ವೈಶಿಕದ ಮನೆಯುಟ |
ಮಟದ ಬೀಡನ್ಯಾಯದಾಗರ |
ಸಟೆಯ ನೆಲೆ ಸಂವಾದದಿಕ್ಕೆ ಕುಮಂತ್ರಕುಹಕಗಳ ||
ಮಟ ದುರಾಸೆಯು ಪೇಟೆ ಘನದು |
ಘರ್ಟಭಯಾಸ್ಪದವತುಳರೋಷೋ |
ತ್ಕಟನಿಜಾಶ್ರಯುರಪ್ಪ ವೇಶ್ಯರೊಳೇನು ಫಲವೆಂದ || ೩೯

ಎಂದು ಕಾಷ್ಠಾಂಗಾರಕನು ಹಲ |
ವಂದದಿಂ ವೇಶ್ಯೆಯರ ಹುಟ್ಟಿಯೆ ನೃ |
ಪೇಂದ್ರಸತ್ಯಂಧರನವನ ಧೈರ್ಯಚಟ್ಟಲಕೆ ಮೆಚ್ಚಿ ||
ಅಂದವಗೆ ಮಂತ್ರೀಶಪಟ್ಟವ |
ಮುಂದೆ ಪರಿಕಿಸದೊಲಿದು ಕಟ್ಟಿದ |
ನೆಂದು ಮಗಧನೃಪಂಗೆ ಮುನಿ ವಿವರಿಸಿದನಾತೆಱನ || ೪೦

ಇದು ವಿನಮದಮರೇಂದ್ರ ಶ್ರೀಜಿನ |
ಪದಕಮಲಷಟ್ಚರಣವಾಣೀ |
ವದನದರ್ಪಣ ಭೂಸುರೋತ್ತಮ ಬಸವಣಾಂಕಸುತ ||
ಚದುರ ಭಾಸ್ಕರರಚಿತ ಧರ್ಮ |
ಪ್ರದನ ಜೀವಂಧರನ ಚರಿತೆಯೊ |
ಳಿದುವೆ ಕಾಷ್ಠಾಂಗಾರಕನ ತೆಱನರಸ ಕೇಳೆಂದ || ೪೧

ಮೂಱನೆಯ ಸಂಧಿ ಮುಗಿದುದು.

# ನಾಲ್ಕನೆಯ ಸಂಧಿ.

---

ಸೂಚನೆ|| ಧರಣಿಯನು ಮಂತ್ರಿಗಳು ಬೇಡೆನ |
ಲಿರದೆ ಕಾಷ್ಠಾಂಗಾರಗಿತ್ತು |
ದುರುಳನಿಂದ್ಯೆದಿದನು ಸತ್ಯಂಧರನು ಸುರಪುರವ ||

ಧರಣಿಪತಿ ಕೇಳಿಂತು ಸತ್ಯಂ |
ಧರನೃಪತಿ ರಾಜ್ಯಾಂಗನೆಯನಪ |
ಹರಿಸಿ ಸತಿಯ ಕುಚಂಗಳನು ಗಿರಿದುರ್ಗವೆಂದೆನಿಪ ||
ಕುರುಳುಗಳ ವನದುರ್ಗವೆಂದುರು |
ತರದ ಲಾವಣ್ಯಾಂಬು ಜಲಸಂ |
ಸ್ಫುರಿತದುರ್ಗವಿದೆಂದು ಪಾಲಿಸುತಿರ್ದನೊಲವಿನಲಿ || ೧

ಧರಣಿಯೊಳಗತ್ಯಂತವಿಷಯಾ |
ತುರರಿಗಾಯುರ್ನಷ್ಟವಖಿಳೈ |
ಶ್ವರಿಯವೋಸರಿಪುದು ಕೀರ್ತ್ಯಂಗನೆಗೆ ಕೇಡಹುದು ||
ಗರುವತನ ಹಿಂಗುವುದು ಧೈರ್ಯದ |
ಶರಧಿ ನೆಱಿ ಬತ್ತುವುದು ಕುಲ ಪೈ |
ಸರಿಸುವುದು ಸಂದೇಹವಿಲ್ಲದಕರಸ ಕೇಳೆಂದ || ೨

ಸತತವಿಷಯಾಸಕ್ತನನ ಸು |
ವ್ರತವನುಲ್ಲಂಘಿಸುವ ಮಾನ |
ಚ್ಯುತಿಗಳುಕ ಪರಧನಕೆ ಹೇಸನಭಿಜ್ಞತೆಯ ಬಿಡುವ ||
ವಿತತಧರ್ಮಾಚಾರವುೞಿದು |
ದ್ಧತಿಬಡುವ ಮುಂಗಾಣನವನೀ |
ಕ್ಷಿತಿಯೊಳಗೆ ಹಗೆಯಾಗಿಹನು ಭೂಪಾಲ ಕೇಳೆಂದ || ೩

ಭೂವರನೆ ಕೇಳ್ ವಿಷಯವಶದಿಂ |
ರಾವಣನು ಹತವಾದನಶ್ವ |
ಗ್ರೀವನಪಗತನಾದನಾಕೀಚಕನು ಮೃತನಾದ ||
ದೇವಪತಿ ನಿಂದ್ಯಾತ್ಮನಾದುದ |
ಕೋವಿ ಕಂಡೀವಿಷಯದೊಳಗಹು |
ದೋವದನುನಯವೀನೃಪಗೆ ಭೂಪಾಲ ಕೇಳೆಂದ || ೪

ಅರಸ ಕೇಳ್ ವಿಷಯಾತುರನು ಕಿಂ |
ಕರತೆಗಳುಕನು ತಸ್ಕರತೆಗೋ |
ಸರಿಸ ನಿಂದೆಗೆ ತೊಲಗನವಮಾನಕ್ಕೆ ಮೊಗದಿರುಹ ||
ಪರಿಭವಕೆ ಹೆಱಸಾರ ಮುಂದಿ |
ರ್ದರನು ಕಾಣನು ಮರಣಭಯಕೆದೆ |
ಜರಿಯನಾರೆಂದಱಿಯನಾಕಾಮುಕನು ಧರಣಿಯಲಿ || ೫

ಮನವನಂಗವಿಕಾರದಲಿ ಮುನಿ |
ಮುನಿಸಿನಿಂದವಮಾನ ಮಾನದಿ |
ವನಿತೆ ತನ್ನಿಚ್ಛೆಯಲಿ ಧರಣೀಶ್ವರನಶಾಸ್ತ್ರದಲಿ ||
ಧನಿಕನಪನೀತಿಯಲಿ ಕುಲವ |
ರ್ತನೆಯನಾಚಾರದಲಿ ವಿಷಯದಿ |
ಜನಕೆ ತಪ್ಪದು ಕೇಡು ಭೂಮೀಪಾಲ ಕೇಳೆಂದ || ೬

ಅರಸ ಕೇಳೀಪರಿಯ ವಿಷಯಾ |
ತುರಿತನಾದುದಱಿಂದೆ ಸತ್ಯಂ |
ಧರನು ವಿಧಿವಶದಿಂದೆ ಕಾಷ್ಠಾಂಗಾರನೆಂಬವಗೆ ||
ಪರಿಣತೆಯನುಱಿದಿಳೆಯನವಗನು |
ಕರಿಸಿ ಮುದದೊಳಮಾತ್ಯಪಟ್ಟವ |
ಭರದಿ ಕಟ್ಟುವೆನೆಂದು ನಿಶ್ಚೈಸಿದನು ಮನದೊಳಗೆ || ೭

ಎಂದು ನೃಪನೀಮತವ ನೆನೆದೊಲ |
ವಿಂದೆ ಕಾಷ್ಠಾಂಗಾರಕಗೆ ಸಚಿ |
ವೇಂದ್ರಪಟ್ಟವ ಕಟ್ಟಲುದ್ಯೋಗಿಸಲು ಮಂತ್ರಿಗಳು ||
ಬಂದೆಱಗಿ ಕೈಮುಗಿದಿದೇನು ನ |
ರೇಂದ್ರ ತಾನಿವನಾರು ನಿಮಗೀ |
ಮಂದಬುದ್ಧಿಯದೇನೆನುತ ಬಿನ್ನೈಸಿದರು ನೃಪಗೆ || ೮

ಸಮತೆಯಿಂದೆ ತ್ರಿವರ್ಗವನು ಸ |
ತ್ಕ್ರಮದಿ ಸೇವಿಸೆ ಮೋಕ್ಷವಾತಗೆ |
ಸಮನಿಸುವುದಂತವಱೊಳೊಂದನೆ ಪಿಡಿಯೆ ಸರ್ವಹತ ||
ವಿಮಳ ಧರ್ಮೋದ್ಯಮವನು ಬಿಟ್ಟ |
ಕ್ರಮದಿ ಕಾಮವನೊಂದಿ ಭೂಮೀ |
ರಮಣ ನೀವಿದ ನೆನೆದಿರೆಂದುಸಿರಿದನು ಮಂತ್ರೀಶ || ೯

ಮೊದಲು ಧನಹಾನಿಯುನು ಬೞಿಕಾ |
ತುದಿಯ ಫಲದುನ್ನತಿಯನಾಪ್ತರೊ |
ಳೊದವಿ ಪರಿಕಿಸಿ ಕಾರ್ಯವನು ತೊಡಗುವುದು ನೀವಿವನ ||
ವಿದಿತ ಕುಲಶೀಲಾದಿಗಳನಱಿ |
ಯದೆ ಸುನಿಶ್ಚೈಸಿದಿರಿ ತನ್ನಯ |
ಹೃದಯವನು ತಾ ನಂಬ ಬಹುದೇ ನೃಪರಿಗವನಿಯಲಿ || ೧೦
ಅತಿಕುಲೀನನನುಜ್ಜ್ವಲನ ವಿ |
ಶ್ರುತನ ಚತುರೋಪಾಯರೂಪಾ |
ನ್ವಿತನ ಧೀರೋದಾರಗುಣಯುತನನು [ಕಳಾ]ವಿದನ ||
ವ್ರತಸುಶೀಲಾಚಾರಬಲಸಂ |
ಯುತನ ಸಚಿವನ ಮಾಡುವುದು ಸ |
ನ್ಮತವು ಭೂಪರಿಗೆಂದು ಬಿನ್ನೈಸಿದನು ಮಂತ್ರೀಶ || ೧೧
ಕ್ಷೀರ ರೋಗಾನ್ವಿತಗೆ ಚಂದ್ರಿಕೆ |
ಚೋರಗೋವದ ತೆಱದೆ ವಿವಿಧವಿ |
ಚಾರದಿಂ ಮಂತ್ರಿಗಳು ಪೇೞುತ್ತಿರಲು ಕೈಕೊಳದೆ ||
ಧಾರಿಣೀಶ್ವರ ಧರೆಯ ಕಾಷ್ಠಾಂ |
ಗಾರಗೊಂದಿಸೆ ಮಗುೞ್ದು ತಮ್ಮಾ |
ಗಾರಗಳಿಗೈದಿದರು ಮಂತ್ರಿಗಳಧಿಕ ದುಗುಡದಲಿ || ೧೨
ಸುರಪನನ್ಯಸ್ತ್ರೀಯ ಗಮನವು |
ಪರಮಪಾತಕವೆಂದು ತಾನೇ |
ನಱಿಯನೇ ನಳ ಜೂಜು ನಾಶನವೆಂದು ಪರಿಕಿಸನೆ ||
ಧರಣಿಯೊಳು ರಾಘವನು ಹೊಮ್ಮಿಗ |
ವುರುಕಪಟವೆಂದಱಿಯನೇ ಪರಿ |
ಹರಿಸ ಬಾರದು ಕರ್ಮವಶವನು ಭೂಪ ಕೇಳೆಂದ || ೧೩
ನೆರೆದೆ ಪುಷ್ಪಿತಪದ್ಮಿನಿಯ ಮೈ |
ಯ್ವೆರಸಿದೆನು ವಾರುಣಿಯ ಗೋತ್ರೋ |
ತ್ಕರಕೆ ನೀಡಿದೆ ಮಂಡಲಾಗ್ರವ ಕರವ ಕುವಲಯಕೆ ||
ತೆರಳಿಸಿದೆ ತನಗಿಂದಧೋಗತಿ |
ನಿರುತವೆಂದು ವಿರಕ್ತದಿಂದಂ |
ಬರವನುೞಿದುರುಳಿದನು ಭಾಸ್ಕರನಪರವಾರ್ಧಿಯಲಿ || ೧೪

ವರುಣದಿಕ್ಸತಿಯುಟ್ಟ ರಕ್ತಾಂ |
ಬರರುಚಿಯೊ ಭಾಸ್ಕರನ ರಥಹಯ |
ಖುರಹತಿಯೊಳುದ್ಭವಿಸಿದಪರಾಚಳದ ಕೆಂದೂಳೊ ||
ವರರಥಾಂಗೌಘದ ನಿಯೋಗಾ |
ವಿರಹದಾವಿಗೆಗಿಚ್ಚೊ ಎನಲಾ |
ವರಿಸಿದುದು ಸಂಧ್ಯಾರುಣವು ಧರಣೀದಿಗಂತರವ || ೧೫

ನುಡಿಸಿ ತುಂಬಿಯನೆಲರ ದಟ್ಟಡಿ |
ಯಿಡಿಸಿ ಗೂಡಿನ ತೊಟ್ಟಿಲೊಳು ಖಗ |
ವಿಡಿದು ನಗಿಸಿಯೆ ಕುಮುದಿನಿಯ ತೂಕಡಿಸಿ ಕಮಲಿನಿಯ ||
ಕಡುತಮವನಬುಬೆಂದು ಕೋಕನ |
ಬೆಡಗನಂಜಿಸಿ ಹಲವು ಮಕ್ಕಳ |
ಹಡೆದ ತಾಯಂದದಲಿ ಸಂಧ್ಯಾನುಡದಿಯೊಪ್ಪಿದಳು || ೧೬

ಧರೆಗಗನದಶದಿಕ್ಕುಗಳ ಸಾ |
ಗರಗಳನು ನಿಶ್ಛಿದ್ರಮಪ್ಪಂ |
ತಿರೆ ಪಿತಾಮಹನಿಂದ್ರನೀಲದ ಮಣಿಯ ಕಟ್ಟೆಸಗಿ ||
ಭರಿತವಾಗಿಯೆ ಕಜ್ಜಲವ ವಿ |
ಸ್ತರದೊಳೂಡಿದನೆಂದೆನಲು ಕಾ |
ರಿರುಳು ತುಂಬಿತು ಜಗವನವನೀಪಾಲ ಕೇಳೆಂದ || ೧೭

ಜಲಜಸಖನಪರಾಬ್ಧಿಯೊಳು ಬೀ |
ಱಲು ನೆಗೆದ ನೀರ್ವನಿಗಳೋ ನಭ |
ಲಲನೆಯರ ದಂತಾವಳಿಯೊ ವಿಧುವೆಂಬ ಮೃಗರಾಜ ||
ಮುಳಿದು ತಿಮಿರೇಭೇಂದ್ರಕುಂಭ |
ಸ್ಥಲವ ಸೀಱಲು ಸಿಡಿದ ಮುಕ್ತಾ |
ವಳಿಗಳೆನೆ ನಕ್ಷತ್ರಪಙ್ಕ್ತಿಗಳೆಸೆದುವಭ್ರದಲಿ || ೧೮

ಸುರಪನೀಕ್ಷಿಸೆ ಪೂರ್ವದಿಗ್ವಧು |
ಧರಿಸಿದಮಲಸುವರ್ಣಮುಕುರವೊ |
ಸ್ಮರನ ಶಸ್ತ್ರವ ಮಸೆವ ರತ್ನದ ಸಾಣೆಯೋ ನಭದ ||
ವರಸಿತಾಂಭೋಜವೊ ಚಕೋರಗ |
ಳುರುತರದಿ ನೆರೆದುಂಬ ರತ್ನದ |
ಪರಿಯಣವೊ ತಾನೆನಲು ಶಶಿಯುದಯಾದ್ರಿಯಲಿ ಮೆಱೆದ || ೧೯

ಜನಪ ಕೇಳಾಭೂವಿಪತಿ ಸ|
ದ್ವಿನುತಸಂಧ್ಯಾವಂದನಾದಿಯ |
ನನುಕರಿಸಿ ದೇವಾರ್ಚನೆಯನಾನಂದದಲಿ ಮಾಡಿ ||
ಅನುನಯದಿ ಶಯ್ಯಾಗೃಹಕೆ ಬಂ |
ದಿನಿಯಳೊಡಗೂಡಿರ್ದು ನಿದ್ರಾಂ |
ಗನೆಯೊಳೊಂದಿದನಾರಮಣಿ ಸಹಿತರಸನೊಲವಿನಲಿ || ೨೦
ನಿದ್ರೆ ತಿಳಿಯಲು ಕುಸಿದ ಗೋಣ ನಿ |
ವಿರ್ದು ನೆಗಹಿಯೆ ಕೇಸರಗಳನ |
ಮರ್ದು ಮೇಲೋರ್ಗುಡಿಸಿ ಜೋಡಿಸಿ ಪಕ್ಕಗಳ ಬಡಿದು ||
ಸಾರ್ದು ಹೋಗೆಲೆ ರಜನಿ ರವಿಯುದ |
ಯಾದ್ರಿಗಡರಿದನೆಂದು ಸಾರ್ವಂ |
ತೆದ್ದು ಕರೆದುವು ಕುಕ್ಕುಟಗಳೆರ್ದೆ ಬಿರಿಯೆ ಕಾಮುಕರ || ೨೧
ಹರಿಕರಾಶ್ರಯನಮಳಶುಚಿಸಾ |
ಗರಜನಿತ ಸದ್ದೇವಪೂಜಾ |
ಕರಕರ್ಹನೆನಿಪೆನ್ನ ನಿಷ್ಕಾರಣದೊಳೆಂಜಲನು ||
ಗೊರವನೂಡಿದನೆಂದು ವಾಣೀ |
ವರಗೆ ಮೊರೆಯಿಡುವಂತೆ ಸುರವಂ |
ದಿರದ ಶಂಖಧ್ವನಿಗಳೆಸೆದುವು ಸುಪ್ರಭಾತದಲಿ || ೨೨
ತರಣಿಯುಪರಾಚಲವನಡರು |
ತ್ತಿರೆ ನಿಶಾಸುರೆ ವಿತಳದಿಂ ಪಾ |
ಯ್ದರರೆ ನಿಲ್ಲೆಂದಡಸಿ ಪಿಡಿದು ತದಂಶುಜಾಲದಲಿ ||
ಭರದಿ ಲೋಕನ ಜಿಗಿದು ತಾ ಬಱಿ |
ಕರುಣದಲಿ ಬಂದುದಯಗಿರಿವಿ |
ಷ್ಟರದಿ ಕುಳ್ಳಿರ್ದುಗುಬ್ಬಿಳಾಸತಿಯೆನಲು ರವಿ ಮೆಱಿದ || ೨೩
ಇನನುದಯವಾಗಲ್ಕೆ ನಿದ್ರಾಂ |
ಗನೆಯು ಬೀಱಿಕ್ಕೊಟ್ಟಸೆವ ಮಂಗಳ |
ನಿನದದಿಂದವನೀಶನುಪ್ಪವಡಿಸುವ ಕೃತ್ಯಗಳ ||
ವಿನುತಸಂಧ್ಯಾವಂದನಾದಿಯ |
ನನುಕರಿಸಿ ದೇವಾರ್ಚನೆಯನಾ |
ಜನಪನೆಸಗಿ ಸುಖಾನುಭಾವದೊಳಿರ್ದನೊಲವಿನಲಿ || ೨೪

ಅರಸ ಕೇಳ್ ಮಣಿಖಚಿತಹರಿವಿ |
ಷ್ಟರದೊಳವನೀಪಾಲನಿರೆ ಪಂ |
ಕರುಹಮುಖಿ ಬಂದಿನಿಯನರ್ಧಾಸನದಿ ಕುಳ್ಳಿರ್ದು ||
ಕರವ ಮುಗಿದವನೀಶ ನಾನಿಂ |
ದಿರುಳು ಸ್ವಪ್ನತ್ರಯಗಳನು ವಿ |
ಸ್ತರದಿ ಕಂಡೆನೆನುತ್ತ ಬಿನ್ನೈಸಿದಳು ಕಮಲಾಕ್ಷಿ || ೨೫
ಜನಪ ಕೇಳಂದೆಸೆವಶೋಕಾ ||
ವನತರು ದ್ರುಮ ಮೊದಲಿಗುಡಿದುಂ |
ಕೊನರಿಸಿತು ತದ್ವಳಯದಲಿ [ಬಳಸಿರ್ದ] ಕುಸುಮಗಳ ||
ವಿನುತಮಾಲೆಗಳೆದ್ದುವೆಂಟದ |
ಅನುವ ಹೇಱಿನೆ ಮನದೊಳಳವಱಿ |
ದಿನಿಯಳಿಗೆ ತತ್ಸ್ವಪ್ನ ಫಲವಱಿದರಸನಿಂತೆಂದ || ೨೬
ತರುಣಿ ಕೇಳ್ ನೀ ಕಂಡಶೋಕೆಯು |
ಮರದ ಕೆಲದೊಳ್ ತಳಿರು ತಾನಂ |
ಕುರಿಸಿದುದಱಿಂ ನಿನಗೆ ಸುತನುದಯಿಸುವ ಬಳಸಿರ್ದ ||
ಅರಲ ಮಾಲೆಗಳಿಂದಲಷ್ಟವು |
ತರುಣಿಯರು ಸುಕುಮಾರಗಹರೆಂ |
ದರಸಿಗಱುಹಲು ದುಗುಡದಿಂದಿಂತೆಂದಳಿಂದುಮುಖಿ || ೨೭
ಇಳೆಯೊಳುಡಿದೊಱಗಿರ್ದಶೋಕಾ |
ಫಲವ ಹೇಱಿನಲರಸಿಯೆನಗದು |
ತಿಳಿಯದೊಂದಾನೊಂದ ಹೇಱುವೆನೆನುತ ದುಗುಡವನು ||
ತಳೆಯುತಿರಲಾತತ್ಪತಿಯ ಮೊಗ |
ದೊಳು ಸುಱಿವ ಖೇದಾಂಗನೆಯು ಕಂ |
ಡಲಘುಕುಚೆ ಪತಿಗಾಯ್ತು ಹರುವೆಂದಿಳೆಯೊಳೊಱಗಿದಳು || ೨೮
ತರುಣಿ ಮೂರ್ಛೆಯೊಳವನಿಯಲಿ ಕೆಡೆ |
ದಿರಲು ಕಂಡವನೀಶನೆದೆಯಲಿ |
ಸುರಗಿ ಮುರಿದಂದದಲಿ ಹಾಯೆಂದಂಗನೆಯ ಮೇಲೆ ||
ಹೊರಱಿ ಮಿಗೆ ಮುಂಡಾಡಿ ಶೋಕಾ |
ತುರದಿ ಪರವಶನಾಗಿ ಬಱಿಕೊಂ |
ದರೆಗಳಿಗೆಗೆಚ್ಚತ್ತು ಧೈರ್ಯವ ಪಿಡಿದನಾನೃಪತಿ || ೨೯

ಬಱಿಕ ನೃಪನಬಲೆಯನು ತೊಡೆಗಳೊ |
ಳಿಱುಹಿಕೊಂಡು ಜಿನೇಶ್ವರನ ನೆನೆ|
ದೊಲಿದು ಗಂಧೋದಕವ ಕಣ್ಗಳೊಳೊತ್ತಿ ಮೂರ್ಛೆಯನು ||
ಕಳೆದು ದೇಹದ ಧೂಳಿಗಳ ಕರ |
ತಳದೊಳವನಿಪ ಕೊಡಹಿ ಮುದದಿಂ |
ದಲಿ ಕುರುಳ ನೇವರಿಸಿ ಸಂತೈಸಿದನು ಕೋಮಲೆಯ || ೩೦

ತರುಣಿ ಕೇಳುಚ್ಛಿಷ್ಟದೋಷೋ |
ತ್ಕರದಿ ಧಾತುಪ್ರಕೃತಿಗಳೊಳಾ |
ತುರದಿ ದುಸ್ವಪ್ನಂಗಳಹವಿದಕೇನು ಭೂಮಿಯಲಿ ||
ನಿರುತವೆಂಬರು ಕನಸ ಕಂಡಾ|
ಪರಿಯಲಾದರೆ ಲೇಸು ಹುಸಿಯಿದ |
ಕರಸಿ ಚಿಂತಿಸಲೇನು ಕಾರಣವೆಂದನಾಭೂಪ || ೩೧

ಧರಣಿಯೊಳು ವಿಧಿವಶದಿ ಹರಿ ಸೂ |
ಕರಝಷಾದಿ ಭವಂಗಳಿಂದವ |
ತರಿಸಿದನು ಹರ ತಿರಿದನಬ್ಜಜ ನೀಗಿದನು ಶಿರವ ||
ಸುರಪ ನಿಂದಿತನಾದ ಶಶಿಸೂ |
ರ್ಯರನು ತೊಟ್ಟನೆ ತೊಳಲಿಸಿತು ನಾ |
ವಱಿತು ಕರ್ಮಾಧೀನಕೆನಿತೆಂದನು ಮಹೀಪಾಲ || ೩೨

ಬಿಸಿಲ ತಾಪಕ್ಕಗಿದು ಶಿಖಿಯಲಿ |
ನುಸುಳುವವೊಲಾಪತ್ತಿಗುರೆ ಚಿಂ |
ತಿಸಲು ಘನವಹುದಿದಕೆ ಧೈರ್ಯವ ತಳೆದು ಧರ್ಮವನು ||
ಎಸಗಿದರೆ ತಮದೊಳಗೆ ಶಶಿ ದೀ |
ಪ್ತಿಸುವ ವಿಧದಿ ವಿಪತ್ತಿಸಂಬುಧಿ |
ಯೊಸರಿ ನಿರ್ಮಳರಪ್ಪರಂಬುಜನೇತ್ರೆ ಕೇಳೆಂದ || ೩೩

ಸರಸಿಜಾಕ್ಷಿಯನಿಂತು ನಾನಾ |
ಪರಿಯ ನಯದಿಂ ತಿಳುಹಿ ಮುನ್ನಿನ |
ಪರಿಯಲವನಿಪನಾಸತಿಯನಾನಂದಲೀಲೆಯಲಿ ||
ನೆರೆಯುತಿರೆ ತತ್ಸ್ವಪ್ನಫಲ ಭೂ |
ವರಗೆ ಮರಣವ ಸೂಚಿಸುವವೊಲು |
ತರುಣಿಗಾದುದು ಗರ್ಭವವನೀಪಾಲ ಕೇಳೆಂದ || ೩೪

ದುರುಳ ಕಾಷ್ಠಾಂಗಾರನಾಸ್ಯವ |
ನುಱುಹಲೋಸುಗ ಗರ್ಭರೋಷೋ |
ತ್ಕರದ ಶಿಖಿಧೂಮಾಳಿಯೆನೆ ಕರ್ಪುರಕುಚಾಗ್ರದಲಿ ||
ಬೆರಸಿಕುವರನ ಕೀರ್ತಿ ಹೊಱಗಾ |
ವರಿಸಿ ತೆನಲಾನನದಿ ಬೆಳ್ಪಾಂ |
ದಿರದೆ ಕುಂತಳ ನಿಮಿರಲೆಸೆದುದು ಗರ್ಭವಂಗನೆಯ || ೧೫

ಇಳೆಯೊಳೀಸುತನಿಂದೆ ಬಡತನ |
ತೊಲಗಿದಪುದೆಂದಱುಹುವಂತ |
ಗ್ಗಳಿಸಿದುದು ನಡುವೀತನಿಂ ವೈರಿಗಳ ವಂಶಾಳಿ ||
ಅೞಿವುವೆಂಬವೊಲಾಸತಿಯು ವಳಿ |
ಯೞಿಯೆ ನವಶೈವಾಳಲತೆಯುಂ |
ತಲಘುಕುಚೆಯು ಸು ಬಾಸೆಯೆಸೆದುದು ಗರ್ಭದೇೞ್ಗಿಯಲಿ || ೧೬

ಧರಣಿಯುಂಗಾರಕನ ದೇವಕಿ |
ಹರಿಯುನದಿತಿ ಸುರೇಶ್ವರನನಿಂ |
ದಿರೆ ಮನೋಜನ ಕುಂತಿ ಯಮನಂದನನನಾಕೈಕೆ ||
ಭರತನನು ಸೌಮಿತ್ರೆ ಲಕ್ಷ್ಮೀ |
ಧರನ ಗರ್ಭದಿ ಧರಸಿದಂದದಿ |
ತರುಣಿ ಕುವರನ ಗರ್ಭದಲಿ ತಾಳ್ದೆಸೆದಳೊಗ್ಗಿನಲಿ || ೧೭

ಉದರದರ್ಭಕನಖಿಳಭೂತಳ |
ಕಧಿಪನೆಂದಱುಹುವವೊಲಾಸತಿ |
ಮುದದಿ ಮೃತ್ಸೇವನೆಯ ಮಾಡುತಲೆಸೆವ ಮೇರುವಿನ ||
ತುದಿಯುಡರಿ ಜಲಕೇಳಿಯನು ಸುರ |
ನದಿಯೊಳೊಂದಿಸಿ ಲೋಕಗಳ ಹರು |
ಷದಲಿ ನೋಡುವ ಬಯಕೆ ಸತಿಗಾಯ್ತುರಸ ಕೇಳೆಂದ || ೧೮

ವಿತತಗರ್ಭದ ಚಿಹ್ನ ವಿಜಯಾ |
ವತಿಯೊಳೊಂದಿರೆ ನೋಡಿ ಭೂಮೀ |
ಪತಿ ಮೃಗಾಕ್ಷಿಯು ಕಂಡ ಕನಸಿಗೆ ದೃಷ್ಟವಾಯ್ತೆನಗೆ ||
ಹತವೆನುತ ನಿಶ್ವಸಿ ಚಿಂತಾ |
ಸತಿಗೆ ಕೈಬಸವಾಗಿ ಕಾರ್ಯ |
ಸ್ಥಿತಿಯ ತನ್ನಯ ಮನದೊಳಾಲೋಚಿಸಿದನವನೀಶ || ೧೯

ನಾರಿಯುದರದಿ ಜನಿಸುವೀಸುಕು |
ಮಾರನವನಿಯನಾಳ್ವನೆಂಬನೆ |
ಕ್ರೂರಕಾಷ್ಠಾಂಗಾರಕನ ವಶವಾಯ್ತು ಸಕಲಧರೆ ||
ಚಾರುಮಂತ್ರಿಗಳಂದು ಪೇಳ್ದ ವಿ |
ಚಾರವನು ಗರ್ಭದಲಿ ಕೇಳದ |
ಕಾರಣವು ತನಗಾಯ್ತು ವಿಧಿಯೆಂದರಸ ಬಿಸುಸುಯ್ದ || ೪೦

ಕುಸುಮಕಾಲದೊಳರಲ ಕೊಯ್ದೊಂ |
ದಿಸದೆ ಫಲಕಾಲದಲಿ ಪುಷ್ಪ |
ಪ್ರಸರವಱಿಯಲ್ಕಂಟೆ ಮಾಡುವ ಕೆಲವು ಕಾರ್ಯಗಳ ||
ಎಸಗಿ ತತ್ಕಾಲದಲಿ ಸಿರ್ವ |
ರ್ತಿಸದೆ ಒಱಿಕೊಂದಿಸುವೆನೆಸಲದು |
ಒಸವಹುದೆ ತನಗೆಂದು ಮನದೊಳಗೇಱಲಿದನು ಭೂಪ || ೪೧

ಅಱಲಿದೊಡೆ ಫಲವೇನು ವಂಶವ |
ನುಱುಹ ಬೇಕೆಂದೆನುತಲತಿ ಕೌ |
ಶಳದಿ ಕೇಕೀಯಂತ್ರದಲಿ ಗಗನಸ್ಥಳಕೆ ನೆಗೆದು ||
ಸುಳಳಿತಾರಾಮದಲಿ ನಿಂದಾ |
ಹೋಱಲಿಗೊಡನೆ ಮಗುಱ್ದು ಬರ್ಪಂ |
ತಿಳೆಯ ಪತಿ ಮಾಡಿಸಿದನವನೀಪಾಲ ಕೇಳೆಂದ || ೪೨

ಆಮಯೂರದ ಯಂತ್ರದಲಿ ಕಾಂ |
ತಾಮಣಿಯನೇಱಿಸಲದೆದ್ದಾ |
ರಾಮಕಂಬರಗತಿಯೊಳುಯ್ಯೆ ಗಜಾಶ್ವಯಾನದಲಿ ||
ಕಾಮಿನೀಜನಸಹಿತ ಭೂಪಲ |
ಲಾಮನೈತಂದಲ್ಲಿ ಸತಿಗಭಿ |
ರಾಮಪುಂಸವನಾದಿ ಶೋಭನಗಳನು ಮಾಡಿಸಿದ || ೪೩

ಸತಿಯನಿಂತು ದಿನಂಪ್ರತಿಯೊಳಾ |
ಕ್ಷಿತಿಪನಾರಾಮಕ್ಕೆ ಕೇಕೀ |
ವಿತತಯಂತ್ರದೊಳುಯ್ದು ವನಜಲಕೇಳಿಯಲಿ ಸತಿಯ ||
ಅತಿಶಯದ ದುಃಖಾತುರವ ನೆರೆ |
ಹತಿಸಿ ಪರಮೋತ್ಸಾಹದಲಿ ಭೂ |
ಸತಿಯ ಕಾಷ್ಠಾಂಗಾರಗಿತ್ತಿರ್ದನು ಮಹೀಪಾಲ || ೪೪

ಧರೆಯೊಳುತ್ತಮರಿಂಗಿತದೊಳುರು |
ತರದೊಳಱಿವರು ಮಧ್ಯಮರು ಕೇ |
ಳ್ದಱಿವರಧಮರು ಕಂಡಱಿವರತ್ಯಧಮರಾದವರು ||
ದರುಶನಶ್ರವಣೇಂಗಿತದೊಳಱಿ |
ಯರು ಸುನಿಶ್ಚಯವಖಿಳಕಳೆಯಲಿ |
ಪರಿಣತನು ನೃಪನಱಿಯದಿಹುದಿದು ಕರ್ಮವಶವೆಂದ || ೪೫

ಧಾರಿಣೀಪತಿ ಕೇಳು ಕಾಷ್ಠಾಂ |
ಗಾರನಾವಿಷಯದ ಸಮಸ್ತವು |
ಹೀರಮಣರನು ಮಕುಟವರ್ಧನಮಂಡಳೀಕರನು ||
ಶೂರಸುಭಟಾಮಾತ್ಯಕುಲಪರಿ |
ಚಾರಮನ್ನೆಯನಾಯಕರ ಸುವಿ |
ಚಾರದಿಂದೊಳಹೊಯ್ದುಕೊಂಡನುಪಾಯಕುಶಲದಲಿ || ೪೬

ದುರುಳಕಾಷ್ಠಾಂಗಾರನೊಂದಿನ |
ದಿರುಳು ರಾಜದ್ರೋಹವನು ನೆನೆ |
ದುರುತರದೊಳಿಂತೆಂದನನ್ಯಾಧೀನವಾಗಿರ್ದ ||
ಧರಣಿಯೊಡೆತನವೇಕೆ ಸಕಲೈ |
ಶ್ವರಿಯವೇಕದಱಿಂದಲಾತಗೆ |
ಮರಣ ಲೇಸೆಂದೆನುತ ಚಿಂತಿಸುತಿರ್ದನಾತ್ಮದಲಿ || ೪೭

ಮೌನವಿಲ್ಲದ ಬ್ರಹ್ಮಚರ್ಯ ಸು |
ದಾನವಿಲ್ಲದ ವಸ್ತುಚಯವಭಿ |
ಮಾನವಿಲ್ಲದ ನಾರಿ ಸಜ್ಜನರಿಲ್ಲದಾಸ್ಥಾನ ||
ಮಾನಿತಪ್ರಿಯವಿಲ್ಲದೋಲಗ |
ಗಾನವಿಲ್ಲದ ನೃತ್ಯ ತನ್ನಾ |
ಧೀನವಿಲ್ಲದ ಸಂಪದವ ಸುಡಲೆಂದು ಬಿಸುಸುಯ್ದ || ೪೮

ಧರೆಯೊಳನ್ಯಾಧೀನವಾಗಿಹ |
ನರಗೆ ತನ್ನಯ ಬಂಧುಬಳಗವ |
ಹೊರೆಯಲಿಲ್ಲಭಿಮತವ ವಿಬುಧರಿಗೀಯಲಿಲ್ಲೆಸೆವ ||
ಕರಿತುರಗ ಮಹಿಳಾಜನವ ವಿ |
ಸ್ತರದಿ ಜೋಡಿಸಲಿಲ್ಲವನು ಪಾ |
ಮರನು ಸೇವಾಪರನ ಬಾಳು ನಿರರ್ಥವವನಿಯಲಿ || ೪೯

ಉರಗನಾಥಗಹಿತ್ವವನು ಕೇ ।
ಸರಿಗೆ ಮೃಗರಾಜತ್ವವನು ಮಿಗೆ ।
ಗರುಡಗೆ ಖಗ್ರೇಂದ್ರತ್ವವಿತ್ತವರಾರು ತಮತಮ್ಮ ॥
ಉರುಭುಜದ ಬಲದಿಂದಲಂತವ ।
ಕರಸುತನವಾಯ್ತಂತೆ ಸತ್ಯಂ ।
ಧರನ ತಱಿದೀರಾಜ್ಯಕಧಿಪತಿಯಹೆನು ತಾನೆಂದ ॥ ೫೦

ಎಂದು ರಾಜಘ್ನವನು ನೆನೆದದ ।
ಕೊಂದು ಕಪಟೋಪಾಯವನು ಕಂ ।
ಡೊಂದಿ ಮಂತ್ರಿ ಪಸಾಯಿತರ ತಾ ಕರೆಸಿ ಸಭೆಯೊಳಗೆ ॥
ಬಂದು ರಾಜದ್ರೋಹದೇವತೆ ।
ಬಂದಿರುಳು ತನ್ನೆದೆಯ ಮೆಟ್ಟಿಯೆ ।
ಬಂದಿಸುವಳದನೇನ ಹೇೞುವೆನೆಂದು ಖಳ ನುಡಿದ ॥ ೫೧

ನುಡಿವುದನುಚಿತ ನುಡಿದೆನಾದೊಡೆ ।
ತೊಡರುವುದು ಪಾತಕವು ಮೇಣದ ।
ನುಡಿದೆನಾದೊಡೆ ಜಗಕೆ ಹುಸಿಯಾಗಿಪ್ಪುದದಱಿಂದೆ ॥
ನುಡಿಯದಿರೆ ತಾ ಹಿತವ ರಾಷ್ಟ್ರವು ।
ಕೆಡುವುದದು ಸಿದ್ಧಾಂತವದಱಿಂ ।
ನುಡಿಯ ಬೇಕೆಂದಾದುರಾತ್ಮನು ನುಡಿದನೊಲವಿನಲಿ ॥ ೫೨

ಜನಪ ಕೇಳ್ ಲೋಕದಲಿ ದುಷ್ಟರ ।
ನೆನಹದೊಂದಾಗಿಹುದವರ ಪಾ ।
ತಿನಲಿ ಬೇಱಕೊಂದವರು ಮಾಡುವ ಕೃತ್ಯ ತಾನೊಂದು ॥
ಇನಿಸು ಗುಣ ದುರ್ಜನರಿಗದು ಮಂ ।
ಡನವದಾಗಿಹುದಾಗಿ ಕಪಟದ ।
ನೆನಹಿಸಿಂದಾಖಳನು ನುಡಿದನು ಸಭೆಯೊಳಾಹದನ ॥ ೫೩

ಅನುದಿನವು ಬಂದಾಕುದೇವತೆ ।
ಜನಪನನು ನೀ ವಧಿಸದಿರೆ ನಿ ।
ನ್ನನುಪಮಾನ್ವಯ ಸಹಿತ ಸವಱುವೆನೆಂದೊಡೀಸುದಿನ ॥
ನೆನೆವುದನುಚಿತವೆಂದು ತಾನೇ ।
ಮುನಿಸಿನಿಂದಿರುಳೆದೆಯ ಮೆಟ್ಟಿದ ।
ಳೆನಗುಪಾಯವನಿದಕೆ ಪೇೞುವುದೆಂದು ಖಳ ನುಡಿದ ॥ ೫೪

ಮುನಿಪ ಹಿಂಸೆಯು ಹಂಸೆ ಮೇಘ |
ಧ್ವನಿಯುನಹಿ ತಾರ್ಕ್ಷ್ಯಗಮುವ ನಿ |
ರ್ಧನಿಕ ದುರ್ಭಿಕ್ಷವನು ಗಜಪತಿ ಕೇಸರಿಯು ಬರವ ||
ಜನನಿ ತನಯುನ ಮರಣವನು ಧವ |
ನಿನಿಯುಳೊಲ್ಲದ ವಾರ್ತೆಯನು ಕೇ |
ಳ್ದನಿತು ಮನದಲಿ ಹೆದರಿತಾಸಭೆ ಖಳನ ವಚನದಲಿ || ೫೫

ಖಳ ನುಡಿಯುಲಾಸ್ಥಾನ ಶೋಕದ |
ಜಲಧಿಯೊಳಗದ್ದಂತೆ ಭೀತಿಯೊ |
ಳಲುಗದಿರೆ ಪರಧರ್ಮದತ್ತಾಮಾತ್ಯನೊಡಲೊಳಗೆ ||
ಅಲಗು ಮುರಿದಂತೀಗಳಸು ಹೋ |
ಗಲಿ ನೃಪಾಲನಿಮಿತ್ತವೆಂದತಿ |
ಮುಳಿದು ಮನದಲಿ ನೆನೆಯುತಿರ್ದನು ಭೂಪ ಕೇಳೆಂದ || ೫೬

ನಾಡೊಳತಿಪಾತಕರು ಹಿಂಸೆಯ |
ಮಾಡೆ ಬೇಡೆನ್ನದಿರೆ ಕಂಡುದ |
ನಾಡದಿರ್ದರೆ ಧರ್ಮವನುಪೇಕ್ಷಿಸಿ ರಣಾಗ್ರದಲಿ ||
ಓಡಿದರೆ ಗುರುಜನಕೆ ವಿನಯುವ |
ಮಾಡದಿರಲವಗಹುದಧೋಗತಿ |
ರೂಢಿಯೊಳಗೆಂದಾತ್ಮದಲಿ ನೆನೆದೆಂದನಾಖಳಗೆ || ೫೭

ಗುರುವಿಗಾಚಾರ್ಯನಿಗೆ ತನ್ನನು |
ಹೊರೆದ ದಾತಾರಂಗೆ ಧರ್ಮವ |
ನೊರೆದವಗೆ ದುರ್ಭಿಕ್ಷದಲಿ ಸಲಹಿದ ಕೃಪಾಳುವಿಗೆ ||
ಉರಗಜಲಶಿಖಿಶಸ್ತ್ರಭಯುವನು |
ಪರಿಹರಿಸಿದವರಿಗೆ ಮುಹಾತ್ಮರಿ |
ಗೆರಡ ನೆನೆದ ದುರಾತ್ಮನಿಟಿಪ ಮುಹಾಂಧನರಕದಲಿ || ೫೮

ಲಲಿತದೇವವ್ರಾತದೊಳು ಸ |
ಲ್ಲಲಿತಗುಣಸರ್ವಜ್ಞನದ್ರಿಗ |
ಳೊಳು ಸುರಾಚಲವಿಭದೊಳುರುಚೌದಂತ ಚೌಷಷ್ಟಿ ||
ಕಲೆಗಳೊಳು ಸಾಹಿತ್ಯವಬ್ಧಿಗ |
ಳೊಳಗೆ ದುಗ್ಧಸಮುದ್ರ ಪಾತಕ |
ದೊಳಗೆ ರಾಜದ್ರೋಹಕಿಂತತ್ಯಧಿಕವಿಲ್ಲೆಂದ || ೫೯

ಪರಸತಿಯರಲಿ ಹಿಂಸೆಯಲಿ ಸ |
ದ್ಗುರುವಿನಲಿ ತಂದೆಯಲಿ ತಾಯಲಿ |
ವರತಪಸ್ವಿಗಳಲಿ ಲಸತ್ ಶ್ರುತದಲ್ಲಿ ಪಾಪಗಳ ||
ಪರಿಗತಿಗಳಲಿ ದೈವದಲಿ ವಿಬು |
ಧರಲಿ ತೀರ್ಥಂಗಳಲಿ ಭೂಪರೊ |
ಳಿರಲು ಬೇಕತಿಭೀತಿ ಮನುಜವ್ರಾತಕವನಿಯಲಿ || ೬೦

ಎಲೆಲೆ ಕಾಷ್ಠಾಂಗಾರ ಬಱಿದೇ |
ಕಿಳೆಯೊಳಪಕೀರ್ತಿಯಲಿ ನರಕದೊ |
ಳಿಟಿಯ ಬೇಡಹ ಕಾರ್ಯವಹುದಾಗದು ಕುಕಾರ್ಯವದು ||
ಫಲಿಸದದಱಿಂದಾಕುದೇವತೆ |
ಮುಳಿದು ತಾನೇ ಭೂಮಿಪಾಲನ |
ಕೊಲಲಿ ನೀನದನಾಡುವುದು ನಯನೀತಿಯಲ್ಲೆಂದ || ೬೧

ಪರಮಧರ್ಮಾದಿಪ್ರಪಂಚಗ |
ಳರಸಿನಿಂದಭಿವೃದ್ಧಿಯಾಂತಿಹ |
ವರಸಿಗನ್ಯವ ನೆನೆಯೆ ಸಪ್ತಾಂಗಕ್ಕೆ ಜಗಕೆಲ್ಲ ||
ಗುರುಗಳಾಚಾರ್ಯಾಗ್ರಹಾರೋ |
ತ್ಕರಕೆ ದೇವದ್ವಿಜರ್ಗೆ ವರಮುನಿ |
ವರಿಗೆ ಮುನಿದವನವನು ಸರ್ವದ್ರೋಹಿಯಹನೆಂದ || ೬೨

ದೇವತಾದ್ರೋಹದಲಿ ತಾನೇ |
ಸಾವನೊಬ್ಬನೆ ಜಗಕೆ ಕಣ್ಣುಂ |
ಜೀವ ತಾನಾಗಿರ್ದರಸಿಗುಪಹತಿಯನೊದವಿಸಿದ ||
ಲಾವಕನು ಕುಲಕೋಟಿಸಹಿತ ಮ |
ಹೀವಲಯದಲಿ ಲಯವನೆಯ್ದಿಯೆ |
ಜೀವಿಸುತ್ತಿಹನಾದುರಾತ್ಮ ಮಹಾಂಧನರಕದಲಿ || ೬೩

ಮರದ ಮೊದಲಿಗೆ ನೀರನೆಱೆದುರು |
ತರದಿ ಸಲಹಿಯೆ ಫಲವ ಪಡೆಯದೆ |
ತರುವಿನಾಮೂಲವನು ಕಡಿವ ದುರಾತ್ಮನಂದದಲಿ ||
ಅರಸನಭಿರಕ್ಷಿಸುವ ಸೌಖ್ಯೋ |
ತ್ಕರವನೊಂದದೆ ಮೂಲಭೂತಿಕ |
ದರಸಗುಪಹತಿ ನೆನೆದವಗೆ ಫಲಸಾರವಿಲ್ಲೆಂದ || ೬೪

ಚಾರುಚಂದ್ರಾತಪಕೆಯೊಸರ್ವುದೆ |
ಗೋಱಿಕಲ್ಲವಿದಗ್ಧ ಕವಿತೆಯು |
ಸಾರವಱಿವನೆ ಕೊಱಡು ಚಿಗುರುವುದೇ ವಸಂತದಲಿ ||
ಕ್ರೂರಕಾಷ್ಠಾಂಗಾರಗಮಳ ವಿ |
ಚಾರನೀತಿಯುನಱುಹಲವಗದು |
ಸೇರುವುದೆ ಬಱಿಕವನು ಮೊಗದಿರುಹಿದನು ಖಾತಿಯುಲಿ || ೬೫
ಉರಿವ ಶಿಖಿಗೆ ಸಮೀರಣನು ಕಂ |
ಧರವನಲಗಿಸೊಳಱಿವ ಪಾಪಿಗೆ |
ಸುರಗಿ ಕೈಸಾರ್ದಂತೆ ಮದನನೆನಿಪ್ಪ ಸಾಲಕನು ||
ದುರುಳ ಕಾಷ್ಠಾಂಗಾರಕಗೆ ಕೈ |
ನೆರವ ಬಂದವ ನುಡಿದ ಮಾತಿಗೆ |
ಶಿರವ ತೂಗಿಯೆ ಹೊಗಱಿ ಮತ್ತಿಂತೆಂದನಾಖಳಗೆ || ೬೬
ವಾರನಾರಿಯರೊತ್ತೆ ಧರಣಿಯ |
ಸಾರವಂಬಿಗಗೂಲಿ ವಿತರಣ |
ಚಾರಗುತ್ತು ನಿಯೋಗ ಜೂಜಿನ ಧನ ಸುಭಾಷಿತವು ||
ಏಱುಮಾಱು ವಿವಾಹ ರತಿಯುಪ |
ಕಾರ ನೆಗಱಿದ ರಾಜಕಾರ್ಯವಿ |
ವಾರನಾಹದ ತಪ್ಪಿ ತಪ್ಪುಗುಮೆಂದನಾಮದನ || ೬೭
ನೆನೆದ ಕಾರ್ಯವನಾರಿಗಱುಹದೆ |
ಮನದೊಳಗೆ ತಾಳ್ದೊಂದು ವೇಳೆಯೊ |
ಳನುಕರಿಸುವುದು ನೀತಿ ತುಂಬಿದ ಸಭೆಯೊಳಗೆ ನೀನು ||
ನೆನೆವುದನುಚಿತ ನೆನೆದ ಬಱಿಕೀ |
ಜನಪತಿಯು ನೀ ವಧಿಸದಿರೆ ನೆ|
ಟ್ಟನೆ ಮರಣ ನಿನಗಹುದು ಕಾಷ್ಠಾಂಗಾರ ಕೇಳೆಂದ || ೬೮
ತಡೆಯುದೀಕಾರ್ಯಸನು ನೀ ಕೈ |
ಯೊಡನೆ ಮಾಡುವುದುಚಿತವಿದನೀ |
ನೊಡಬಡದೆ ತಟ್ಟಿಯುವ ಮಾಡಲುಯೆಮ್ಮ ವಂಶಾಳಿ ||
ಕೆಡುವುದದು ಸಿದ್ಧಾಂತ ನೀನೊಂ |
ದೆಡೆಯೊಳಿರಲಾನೃಪನ ತಲೆಯುನು |
ಹೊಡೆದು ತಹೆನೀಕ್ಷಣವೆ ತಾ ವೀಳೆಯುವ ತನಗೆಂದ || ೬೯

ಈತೆಱದಿ ಕಾಲ್ಗೆಡೆದ ಮದನನ |
ಮಾತಿಗತಿಸಂತೋಷಬಟ್ಟದು |
ನೀತಿಯೆಂದನುಚಿತದಿ ಕಾಷ್ಠಾಂಗಾರ ತನ್ನಾಪ್ತ ||
ಚಾತುರಂಗದ ಬಲವನನಿತುವ |
ನಾತನಾಕ್ಷಣ ಕೂಡಿಕೊಟ್ಟು ವ |
ಹೀತಳೇಶನ ವಧಿಸಕಳುಹಿದನರಸ ಕೇಳೆಂದ || ೭೦

ಧರಣಿಪತಿ ಕೇಳಿಂತು ಸತ್ಯಂ |
ಧರನ ವಧಿಸಲು ಮದನನನು ವಿ |
ಸ್ತರದಿ ಕಾಷ್ಠಾಂಗಾರನಟ್ಟಲು ಭರದಿ ಬಂದವನು ||
ಅರಮನೆಯ ನೆಱೆ ಮುತ್ತಿ ಬಾಗಿಲ |
ಮುರಿಯುತಿರೆ ತದ್ವಾರಪಾಲಕ |
ರರಸನೆಡೆಗೈತಂದು ಬಿನ್ನೈಸಿದರು ಭೀತಿಯಲಿ || ೭೧

ದೇವ ಕಾಷ್ಠಾಂಗಾರಕನು ಸೇ |
ನಾವಳಿಯ ನೆಱೆ ಕೂಡಿಕೊಟ್ಟವ |
ನಾಮದನನನು ಕಳುಹಿದನು ತತ್ಸೈನ್ಯವರಮನೆಯ ||
ತೀವಿ ಬಳಸಿದೆ ತಕ್ಕುಪಾಯವ |
ನೀವು ಕಾಣಲು ಬೇಕು ಎನಲಾ |
ಭೂಮಿಪತಿ ಕಂಗೆಟ್ಟು ತನ್ನಯ ಮನದೊಳಿಂತೆಂದ || ೭೨

ಹೞಿಯರನು ಸೇವಕರನಾಪ್ತರ |
ಬಳಗವನು ನಿಜಮಂತ್ರಿವರ್ಗವ |
ನುೞಿದು ತಾನನುಚಿತದಿ ದುರ್ಜನರುಗಳ ಪಾಲಿಸಿದ ||
ಫಲವು ಕೈಯೊಡನಾಯ್ತು ಸಚಿವರು |
ಖಳನಿವನು ಬೇಡೆಂದು ನೀತಿಯ |
ತಿಳುಹಿದುದ ತಲೆವೊಂದಿತೆನಗೆಂದರಸನಳವೞಿದ || ೭೩

ಬೞಿಕ ನೃಪ ಚಿಂತಿಸಿದೊಡೇನಹು |
ದಳವಿನಿಂದೀಚಾತುರಂಗದ |
ಬಲವ ತತ್ತಱದೞಿದು ಕಾಷ್ಠಾಂಗಾರನೆಂಬವನ ||
ತಲೆಯ ನಲಿದೀಡಾಡಿ ಬಹೆನೆಂ |
ದಲಗ ಪಿಡಿದಕ್ಷಿಯಲಿ ಕಿಡಿಯು |
ಚ್ಚಳಿಸೆ ಕೋಪಾಟೋಪದಿಂದಿೞಿದನು ನಿಜಾಸನವ || ೭೪

ಸಿಡಿಲವೊಲು ಗರ್ಜಿಸುತ ಸಮರಕೆ |
ನಡೆವ ಭೂಪನ ನೋಡಿ ಸತಿಯಸು |
ವೊಡನೆ ಹೋದಂದದಲಿ ನಿಶ್ಚೈತನ್ಯಮಯವಾಗಿ ||
ದಡದಡಿಸಿ ಬಿಱುಗಾಳಿಗಿಳೆಯೊಳು |
ಕೆಡೆದ ಬಾೞೆಯ ಕಂಭದಂದದಿ |
ಯೊಡನೆ ತೊಪ್ಪನೆ ಬೀೞೆ ಕಂಡವನೀಶನಳವೞಿದ || ೭೫
ಧುರವನುೞಿದವನೀಶ ಮಗುೞಿದು |
ತರುಣಿಯೆಡೆಗೈತಂದು ಚಿಂತೆಯೊ |
ಳುರುೞಿ ತಾನಾಹವಕೆ ಗಮಿಸಲು ಹಿಂದೆ ಕಾಮಿನಿಯ ||
ದುರುಳ ಸೆಱೆಗೈದಪನು ಭೀತಿಯೊ |
ಳುರುೞಿ ಹೋಹುದು ಗರ್ಭವೆಂದೆದೆ |
ಜರಿದು ಮಮ್ಮಲ ಮಱುಗಿದನು ನೆನೆನೆನೆದು ಕಾಮಿನಿಯ || ೭೬
ತರುಣಿಯಧರಾಮೃತವ ಕಂಡೆದೆ |
ಗರಗಿ ಕರತಳದಿಂದಲಂಗ |
ಸ್ಪರುಶನಂಗೆಯ್ದೆಸೆವ ಗಲ್ಲವ ಹಿಡಿದು ಮುಂಡಾಡಿ ||
ಕುರುಳ ನೇವರಿಸುತ್ತ ಹಾರವ |
ಸರಿಯುತಾಕಾಂತೆಯ ವಿಯೋಗದ |
ಪರಮದುಃಖಾಂಬುಧಿಯೊಳೋಲಾಡಿದನು ಧರಣೀಶ || ೭೭
ಆರ ರಾಜ್ಯವ ಕೊಂಡೆನೋ ಮು |
ನ್ನಾರ ಸತಿಯರ ಸೆೞೆದೆನೋ ನಾ |
ನಾರ ನೆಱೆ ಬೞಲಿಸಿದೆನೋ ನಾನಾರ ವಧಿಸಿದೆನೋ ||
ಆರ ಸೂಱೆಯ ಕೊಂಡೆನೋ ಬೞಿ |
ಕಾರನುಲ್ಲಂಘಿಸಿದೆನೋ ಫಲ |
ಸಾರಿತೆನಗೆಂದರಸ ಮನಗುಂದಿದನು ಶೋಕದಲಿ || ೭೮
ಜಳಜಲೋಚನೆ ಮೂರ್ಛೆವೋಗಿರ |
ಲಿಳೆಯ ಪತಿ ಕಂಡಿನ್ನು ನಯದಲಿ |
ತಿಳುಹಬೇಕೆಂದೆನುತ ಧೈರ್ಯವ ತಳೆದು ಘನತರದ ||
ಅೞಿಲನುೞಿದತಿ ಶೈತ್ಯಕೃತ್ಯಂ |
ಗಳಲಿ ಕಾಂತೆಯನೆಚ್ಚಱಿಸಿ ಕರ |
ತಳದಿ ಮೆಯ್ದಡಹುತ್ತೆ ಸಂತೈಸಿದನು ವಿನಯದಲಿ || ೭೯

ನಳನಗಲನೇ ಸತಿಯ ಶೂದ್ರಿಕ |
ಕಳವಿನಿಂದಳಿಯನೆ ರಘೂದ್ವಹ |
ಲಳನೆಯನು ಹೋಗಾಡನೇ ಪಾಂಡವರು ಹಳುವದಲಿ ||
ತೊಳಲರೆ ಹರಿಶ್ಚಂದ್ರ ಹೊಲೆಯರ |
ಬಳಿಯಲಿರನೆ ಬಲೀಂದ್ರ ನರಕದೊ |
ಳಿಳಿಯನೇ ಸತಿ ವಿಧಿಯ ವಿಾಱುವರಾರು ಹೇಳೆಂದ || ೮೦

ಹರುಷವತಿಖೇದಕ್ಕೆ ಬಹಳೈ |
ಶ್ವರಿಯ ದಾರಿದ್ರ್ಯಕ್ಕೆ ಯೌವನ |
ಜರೆಗೆ ಶುಭವಶುಭಕ್ಕೆ ಪರಮಸ್ನೇಹ ವೈರಕ್ಕೆ ||
ನೆರೆವುದಗಲುವುದಕ್ಕೆ ಜನನವೆ |
ಮರಣಫಲವದು ತಪ್ಪದಮರಾ |
ಸುರರಿಗಿದಕೆಲೆ ರಮಣಿ ಚಿಂತಿಸಲೇಕೆ ನೀನೆಂದ || ೮೧

ಪ್ರಮಸುಖದುಃಖಂಗಳಿವು ತ |
ನ್ನ್ಮರಡುವೊಂದೇರೂಪು ಗರ್ಭಾಂ |
ತರದೊಳಾಯುಃಕರ್ಮಧನವಿದ್ಯಾನಿಧನವಿನಿತ ||
ಸರಸಿಜಾಸನ ಭಾಳದಲಿ ವಿ |
ಸ್ತರದಿ ಬರೆದುದನಱಿಯಲಾರಳ |
ವರಸಿ ನೀನಿದಕಳಲಿದರೆ ಫಲಸಿದ್ಧಿಯಿಲ್ಲೆಂದ || ೮೨

ಖೇದ ಮದ ರತಿ ಮುಳಿಸು ನಿದ್ರೆ ವಿ |
ಷಾದ ವಿಸ್ಮಯ ಚಿಂತೆ ಜನನ |
ಸ್ವೇದ ಕ್ಷುಧೆ ತೃಷೆ ಹರುಷ ಭಯ ರುಜೆ ಮಚ್ಚೆ ಜರೆ ಮೃತ್ಯು ||
ಆದಿಯಾದಷ್ಟಾದಶದ ದೋ |
ಷಾದಿಯೊಳಗೋಲಾಡಿ ಸರೆ ಬಂ |
ಡಾದವರಿಗಿಹಪರಗಳಿಲ್ಲಬುಜಾಕ್ಷಿ ಕೇಳೆಂದ || ೮೩

ಶರದದಂತೆ ಸುರೇಂದ್ರಚಾಪದ |
ಪರಿಯೊಳುದಕದ ಬುದ್ಬುದಗಳಂ |
ತಿರುಳು ಹಗಲಂದದಲಿ ಮಂಜಿನ ವಿಧದಿ ಕನಸಂತೆ ||
ದರಿಯ ಮರದಂದದಲಿ ನೀರ |
ಕ್ಷರದವೊಲು ತೆರೆಯಂತೆ ತಾನ |
ಸ್ಥಿರವು ಕಾಮಿನಿ ಮಾನವರ ಸಂಸಾರವವನಿಯಲಿ || ೮೪

ಧರಣಿ ಪುಷ್ಕರ ತೇಜ ಪವನಾಂ |
ಬರಗಳೆಂಬುರುಪಂಚಭೂತೋ |
ತ್ಕರವು ಪಂಚೇಂದ್ರಿಯಗಳಾಕರ್ಮೇಂದ್ರಿಯಾದಿಗಳು ||
ಮಹುತಪಂಚಕವಿಂತಿವೆಲ್ಲವು |
ನೆರೆಯೆ ತನುವಾಗಿಪ್ಪುವಂತವು |
ಹರೆಯಲಟಿವೀದೇಹಕೀಕಾರಣವು ಹೇಟಿಂದ || ೮೫

ಪುದಿದ ಮಲಮೂತ್ರಾದಿಗಳಿಗಾ |
ಸ್ಪದವಖಿಳರೋಮಾಸ್ಥಿಚರ್ಮದ |
ಸದನ ಮೇಧಶ್ಲೇಷ್ಮ ಪಿತ್ತ ಪಲಾಲ ಘನಘಾಯ ||
ರುಧಿರದೆಡೆ ಕ್ರಿಮಿಕೀಟಕಂಗಳ |
ಕುಧರ ತಾನೆಂದೆನಿಪ ಶಾರೀ |
ರದ ಸುಖಕ್ಕಿನಿತಟಿಲಲೇಕೆ ಲತಾಂಗಿ ನೀನೆಂದ || ೮೬

ಆವ ಕಾಲದೊಳಾವ ಠಾಪನೊ |
ಳಾವ ವಯಸಿನೊಳಾವ ತಾ ಮು |
ನ್ನೇವಿ ಮಾಡಿದ ತಚ್ಛುಭಾಶುಭಕರ್ಮವೆನಿತಸಿತು ||
ಆವಯಸ್ಸಿನೊಳಾವ ಧರೆಯೊಳ |
ಗಾವ ಠಾವಿನೊಳಾವ ಕಾಲದಿ |
ಭಾವಿಸುವುದಾನರಗೆ ತನ್ನಾಧೀನವಲ್ಲೆಂದ || ೮೭

ಅರಸನಬಲೆಯನಿಂತು ಬೋಧಿಸು |
ತಿರಲು ಜಲಲಿಪಿಯಂತೆ ಬೀಜವ |
ಹುರಿದು ನೆಲದಲಿ ಬಿತ್ತಿದಂತಂಗನೆಯ ಭೂವರನ ||
ವರವಿಯೋಗಾವಸ್ಥೆಯಲಿ ಮೆ |
ಯ್ವರಸದಿರೆ ತದ್ವಂಶರಕ್ಷಣೆ |
ಗರಸ ಕೇಕೀಯಂತ್ರವನು ತರಿಸಿದನು ವಹಿಲದಲಿ || ೮೮

ತರುಣಿಯನು ತತ್ಕೇಕಿಯಂತ್ರದೊ |
ಳಿರಿಸಿ ಕೀಲ್ಗಳನೊತ್ತಿ ನೃಪ ತಾ |
ತಿರುಹಿ ಗಗನಾಂತರಕೆ ಬಿಟ್ಟಾಹವಕೆ ಶಸ್ತ್ರಾಸ್ತ್ರ ||
ಪರಿವೃತನು ತಾನಾಗಿ ನರಿಗಳ |
ನೆರವಿಯನು ಮೃಗರಾಜ ಹೊಕ್ಕೊಡ |
ವೆರಸುವಂತೊಳಹೊಕ್ಕನಾಶೆಮೋಹರವನವನೀಶ || ೮೯

ವರಮಹಾರ್ಣವದೊಳಗೆ ಮಂದರ |
ತಿರುಗುವಂತೆ ವನಾಂತದೊಳಗಾ |
ವರಿಸಿದತಿಭೀಕರದವಾನಲನಂತೆ ತಾವರೆಯ ||
ಸರಸಿಯೊಳು ಕರಿರಾಜ ಹೊಕ್ಕೊಡ |
ವೆರಸಿ ಸವಱುವ ತೆಱದೆ ರಿಪುವೋ |
ಹರವ ತೊತ್ತಳದುಳಿದನಾನೃಪನರಸ ಕೇಳೆಂದ || ೯೦

ಸುರಪ ವಜ್ರದೊಳದ್ರಿಗಳ ಕ |
ತ್ತರಿಸುವಂತಸಿಯಿಂದ ಕರಿಗಳ |
ನರಿದು ಮತ್ತವನಂಬುಧಿಯ ತೆರೆಗಳನು ತಿವಿವಂತೆ ||
ಚರಣಹತಿಯಿಂದಶ್ವಗಳ ಸಂ |
ಹರಿಸಿ ಮಸಗಿದ ಕಾಲರುದ್ರನ |
ಪರಿಯೊಳರಿಸುಭಟಾವಳಿಯನರಿದನು ಮಹೀಪಾಲ || ೯೧

ಕೆಲವರನು ಧನುವಿನಲಿ ಕೆಲಬರ |
ನಲಗಿನಲಿ ಕೆಲಬರನು ಗದೆಯಲಿ |
ಕೆಲಬರನು ಸುರಗಿಯಲಿ ಕೆಲಬರನತುಳಪರಿಘದಲಿ ||
ಕೆಲಬರನು ಚಕ್ರದಲಿ ಕೊಂತದಿ |
ಕೆಲಬರನು ಕೊಂದವನಿಪತಿ ಮಾ |
ರ್ಬಲದೊಳಗೆ ನೆರೆ ಚಾರಿವರಿದನು ಭೂಪ ಕೇಳೆಂದ || ೯೨

ನರನ ಚಾಪಪ್ರೌಢಿ ಲಕ್ಷ್ಮೀ |
ಧರನ ಶರಸಂಧಾನವಮರೇ |
ಶ್ವರನದಟು ರಾವಣನ ಹಮ್ಮಿಕೆ ರಾಮನಾಟೋಪ ||
ಹರಿಯುಪಾಯ ನದೀಸುತನ ಧಿ |
ಕ್ಕರಣೆ ಕರ್ಣನ ಧೈರ್ಯ ಗಿರಿಜಾ |
ವರನ ಬಲವಳವಟ್ಟುದಾನೃಪಗಾಹವಾಗ್ರದಲಿ || ೯೩

ಅರಸ ಹೊಕ್ಕೆಡೆಯರುಣ[ಜಲ]ಸಾ |
ಗರದ ಮಯ ಕೈಮಾಡಿದತ್ತಲು |
ಕರುಳಮಯ ಮೊಗವಿಕ್ಕಿದತ್ತಲು ಮೊರೆವ ಹೆಣನ ಮಯ ||
ಕರಿ ಮಸಗಿ ಕದಳಿಯನು ಹೊಕ್ಕಂ |
ತರಿಬಲವ ನಿಮಿಷದಲಿ ಸಕ್ಕಂ |
ಧರನು ದೋರ್ಬಲದಿಂದ ಸವಱಿದನರಸ ಕೇಳೆಂದ || ೯೪

ಬಲವನೀಪರಿ ಕೊಂದು ನೃಪ ಮನ |
ದೊಳಗೆ ಬಱಿಕಿಂತೆಂದನೆನಗಿಂ |
ದಱಿವು ತಪ್ಪದು ಸರಸಿಜಾಂಬಕಿ ಕಂಡ ಕನಸಿನಲಿ ||
ಮುಳಿದು ಕೆಡುವೈಶ್ವರ್ಯಕೋಸುಗ |
ಕೊಲೆಗೆಲಸಕಂಗೈಸಿ ನರಕದೊ |
ಳಿಱಿವುದನುಚಿತ ನಿಷ್ಫಲವು ತಾನೆಂದು ಚಿಂತಿಸಿದ || ೧೫

ಧರೆಯಿದೆನ್ನುಚ್ಛಿಷ್ಟವಿವರಿ |
ನ್ನರಿಗಳೆನೆ ಪರಮಾತ್ಮವೊಂದದು |
ನಿರುತ ತನುವಿಗೆ ಭೂತ ಭೂತಕೆ ವೈರವಿಲ್ಲದಕೆ ||
ನರಕಕರ್ಮವ ಮಾಡಿ ಬಱಿಕಿಹ |
ಪರಕೆ ಬಾಹಿರನಾಗಿ ನಾನಾ |
ಪರಿಯ ಯೋನಿಯೊಳುದಯಿಸುವ ಬಾಱಿಕ್ಕಿಯನು ಸುಡಲೆಂದ || ೧೬

ತಿಳಿಯೆ ತನುವನು ಕರ್ಮವೇ ತಾ |
ನೊಲವಿನಿಂದೂಡುವುದು ತಾನೇ |
ಸಲಹುವುದು ತತ್ಕರ್ಮವೇ ಕಳಚುವುದು ವಿಭ್ರಮವೆ ||
ಸುಲಲಿತಾತ್ಮಂಗಿಲ್ಲ ಪಾಪಾ |
ವಳಿಗಳವಯಕಲ್ಲವದಱಿಂ |
ದಿಱುಹಬೇಕೀತನುವನೆಂದಾತ್ಮದಲಿ ಚಿಂತಿಸಿದ || ೧೭

ಅವನಿಪತಿ ಕೇಳಿಂತು ಸಂಸಾ |
ರವನು ಛೀಛೀ ಎಂದು ಜಱಿದಾ |
ಹವವನುಱಿದಿಳೆಯನು ಜರತ್ತೃಣವೆಂದು ವೈರಾಗ್ಯ ||
ಯುವತಿಗತಿಮನಸೋತು ಬಱಿಕು |
ತ್ಸವದೊಳಾಕ್ಷಣ ಶಸ್ತ್ರಸನ್ನ್ಯಾ |
ಸವನು ಮಾಡಿದನರಸನಾರಣರಂಗಮಧ್ಯದಲಿ || ೧೮

ಉರುತರದಿ ಪದ್ಮಾಸವನನು |
ಕರಿಸಿ ಬಹಿರಿಂದ್ರಿಯದಳವನಪ |
ಹರಿಸಿ ರವಿಮಂಡಲಕೆ ದೃಷ್ಟಿಯ ಹರಿಸಿ ಹೃದಯದಲಿ ||
ನಿರುಪಮಾತ್ಮನನಿರಿಸಿ ಕರ್ಮವ |
ನೊರಸಿ ಸಂಸಾರಾಂಬುಧಿಯನು |
ತ್ತರಿಸಿ ಸತ್ಯಂಧರನು ಪಡೆದನು ದಿವ್ಯಸಂಪದವ || ೧೯

ಲುಳಿತ ಕರ್ಮವ ತಾಳ್ದವರು ಜೋ |
ಲ್ದಿಳಿಗಿೞಿವರಾಕರ್ಮಭಾರವ |
ಸುೞಿದುವರು ಲಘುವಾದಕಾರಣ ನಭಕೆ ಪುಟನೆಗೆದು ||
ನಿಲುಕುವರು ಸತ್ಪಥವನೆಂದೆನ |
ಲಿಳೆಯುಪತಿ ತತ್ಕರ್ಮಗಳನುೞಿ |
ದಳವಿನಿಂದಱಿದವನು ದೇವನು ಭೂಪ ಕೇಳೆಂದ || ೧೦೦

ಹರಣ ತೊಲಗಿಯೆ ನೃಪನ ಬಱಿಯೊಡ |
ಲಿರಲು ಕಂಡರಿಭಟರು ಬೊಬ್ಬಿರಿ |
ದರರೆ ಮಡಿದನೆನುತ್ತ ಬರಲಾನೃಪನ ಸರ್ವಾಂಗ ||
ಮರುತವಶದಿಂದಲುಗೆ ಮಗುೞಾ |
ವರಿಸಿತಸುವೆಂದಳುಕಿ ದೂರದಿ |
ಸರಳೊಳೆಚ್ಚಾಶಬವ ಕೆಡಹಿದರರಸ ಕೇಳೆಂದ || ೧೦೧

ಇದು ವಿನಮದಮರೇಂದ್ರ ಶ್ರೀಜನ |
ಪದಕಮಲಷಟ್ಚರಣವಾಣೀ |
ವದನದರ್ಪಣ ಭೂಸುರೋತ್ತಮ ಬಸವಣಾಂಕಸುತ ||
ಚದುರ ಭಾಸ್ಕರರಚಿತ ಧರ್ಮ |
ಪ್ರದನ ಜೀವಂಧರನ ಚರಿತೆಯೊ |
ಳಿದುವೆ ಸತ್ಯಂಧರವಧಸ್ಥಿತಿಯರಸ ಕೇಳೆಂದ || ೧೦೨

ನಾಲ್ಕನೆಯ ಸಂಧಿ ಮುಗಿದುದು.

---

## ಐದನೆಯ ಸಂಧಿ.

---

ಸೂಚನೆ|| ವನದೊಳುದಿಸಿ ವಣಿಗ್ವರೇಂದ್ರನ |
ಮನೆಯೊಳೊಲವಿಂ ಬಳೆದು ವಿದ್ಯದಿ |
ಘನವಿಶಾರದನಾಗಿ ಜೀವಂಧರನು ರಂಜಿಸಿದ ||

ಧರಣಿಪತಿ ಕೇಳಿಂತು ಸತ್ಯಂ |
ಧರನು ನಾಕಸ್ತ್ರೀಯರಲಿ ತಾ |
ನೆರೆಯೆ ಪುರಜನಪರಿಜನವು ಶೋಕಾಬ್ಧಿಯಲಿ ಮುೞುಗಿ ||
ಅರೆಗಳಿಗೆಗವನೀಶ ಸಹಿತೈ |
ಶ್ವರಿಯಸಂಪದವೞಿದುದಕಟಾ |
ನರರ ಸಂಸಾರವಸ್ಥಿರವು. . . . ಸುಡಲೆಂದ || ೧

ಪುರದ ಪುಣ್ಯದ ಪುರುಷರೂಪಿಂ |
ದುರಿದು ಹೋದುದು ಸಕಲಪುರಜನ |
ಪರಿಜನದ ಸೌಭಾಗ್ಯವಿಂದಗಲಿತ್ತು ಕಲ್ಪಕುಜ ||
ಧರೆಗೊಱಗಿತಿಂದಖಿಳಧರಣೀ |
ಶ್ವರರ ಚೂಡಾರತ್ನವಿಂದೊಡೆ |
ದುರುೞಿದುದು ಹಾಯೆಂದು ಗೋೞಿಟ್ಟೞಲಿತಖಿಳಜನ || ೨

ಹರನ ಸಮನಮರೇಂದ್ರನೆಣೆ ಮುರ |
ಹರನ ಪಾಟಿ ಜಯಂತನೊರೆ ಭಾ |
ಸ್ಕರನ ಜೋಡು ಮೃಗಾಂಕನಿಭ ದಶರಥತನೂಭವನ ||
ಸರಿ ಪಿತಾಮಹನೀಡು ತಾನೆನಿ |
ಪರಸ ನಿಮಿಷಕೆ ಕೆಟ್ಟನೆನೆ ಹುಲು |
ನರರ ಸಂಸಾರವನು ಸುಡಲೆಂದೞಲಿತಖಿಳಜನ || ೩

ಹೊಳೆವ ಮಣಿಮಯಹರ್ಮ್ಯದೊಳು ಕೋ |
ಮಳೆಯರೊಡನೆ ವಿಲೋಲಹಂಸಾ |
ವಳಿಯ ತಲ್ಪದ ಮೇಲೆ ಪವಡಿಸಿದಾಸೃಪೋತ್ತಮನು ||
ಕಳನೊಳಗೆ ಭೂತಾಳಿ ಸುತ್ತಲು ||
ಬಳಸಿ ಬರೆ ಹರಳೊತ್ತೆ ಸುಡುಗಾ |
ಡೊಳಗೆ ಮಲಗಿದನಕಟ ಹಾಯೆಂದೞಲಿತಖಿಲಜನ || ೪

ವಿವಿಧನೃತ್ಯವ ನೋಡುವಕ್ಷ್ಣಿಗೆ |
ಸವನಿಸಿತೆ ಮರುಳಾಟ ಮೃದುಗಾ |
ನವನು ಕೇಳುವ ಕರ್ಣ ವಿಹಗಧ್ವನಿಗೆ ಸೊಗಯಿಸಿತೆ ||
ಯುವತಿಜನಸಂಸ್ಪರ್ಶತನುವೀ |
ಬುವಿಗೆ ಬಯಸಿತೆ ಹಾಯೆನುತ ಜನ |
ನಿವಹ ನೆರೆ ಮಱುಗಿತ್ತು ತದ್ರಾಜಾವಸಾನದಲಿ || ೫

ಸುದತಿಗೂಡಿಂದರಸ ಪೂರ್ವಾ |
ಹ್ಣದಲಿ ಸೌಖ್ಯದೊಳಿರ್ದುಮಪರಾ |
ಹ್ಣದಲಿ ತಾನಿಂತಾದ ನೋಡುತ್ತಿರಲು ಲೋಕದಲಿ ||
ವಿಧಿಯ ಮೀಱುವರಾರು ಕೆಡುವೀ |
ಬದುಕಿಗೋಸುಗ ಲೋಭಮಾಯಾ |
ಮದದೊಳೊಂದಿಹುದೇಕೆ ಜಗವೆಂದೞಲಿತಖಿಳಜನ || ೬

ಕೆಲರು ಖಳನಿವನೆಂದಮಾತ್ಯರು |
ತಿಳುಹೆ ಕಾಷ್ಠಾಂಗಾರಗಱ್ದಱ್ |
ದಿಳೆಯೆಸಗಿ ತನ್ನಿಂದ ತಾನೇ ಕೆಟ್ಟನಕಟೆಂದು ||
ಕೆಲರು ಹಾವಿಗೆ ಹಾಲೆಱೆದು ನೆಱೆ |
ಸಲಹೆ ವಿಷ ಮೇಲಪ್ಪುದಂತಾ |
ಖಳರ ಸಾಕಿದ ನೃಪರಿಗಿನಿತೆಂದೞಲಿತಖಿಳಜನ || ೭
ಧರಣಿಪತಿ ಕೇಳಿತ್ತ ಸತ್ಯಂ |
ಧರನು ಬಿಟ್ಟ ಮಯೂರಯಂತ್ರವು |
ಭರದಿ ಕೊಂಡುಯ್ದಾ ಪುರದ ಸುಡುಗಾಡಿನೊಳಗಿೞುಹೆ ||
ತರುಣಿ ಮೆಲ್ಲನೆ ಕಣ್ದೆಱೆದು ಚೇ |
ತರಿಸಿ ದಶದಿಕ್ಕುಗಳನಾರೈ |
ದರಸನನು ತಾ ನೋಡಿ ಕಾಣದೆ ಮಱುಗಿದಳು ಕಾಂತೆ || ೮
ಹಾ ರಮಣ ! ಹಾ ವಿಬುಧಜನಮಂ |
ದಾರ ! ಹಾಹಾ ಶತ್ರುಕುಲಸಂ |
ಹಾರ ! ಹಾ ಗಂಭೀರಪಾರಾವಾರ ! ಹಾ ಕಾಂತ ! ||
ಹಾ ರಸಿಕ ! ಹಾ ಸುಭಗ ! ಧೀರೋ |
ದಾರ ! ಹಾಹಾ ನವ್ಯಮದನಾ |
ಕಾರ ! ಹಾಹಾಯೆಂದು ಹಂಬಲಿಸಿದಳು ಹರಿಣಾಕ್ಷಿ || ೯
ರಾಜಚೂಡಾರತ್ನ ಹಾ ! ಸುರ |
ರಾಜಸಮಸಂಪನ್ನ ಹಾ ! ರವಿ |
ರಾಜನಿಭ ! ರಾಜೀವನಯನವಿರಾಜಿತನೆ ಹಾಹಾ ! ||
ರಾಜರಾಜೈಶ್ವರ್ಯ ಹಾಹಾ ! |
ರಾಜಸದೃಶೋಪಾಯ ಹಾಹಾ ! |
ರಾಜಹಂಸನೆ ಹಾ ! ಯೆನುತ ಹಲುಬಿದಳು ಹರಿಣಾಕ್ಷಿ || ೧೦
ಹರಿಸಮಾನಸುಧರ್ಮಯುತ ಹಾ ! |
ಹರಿಸಮಾನೋಪಾಯ ಹಾಹಾ ! |
ಹರಿಸಮಾನೈಶ್ವರ್ಯ ಹಾಹಾ ! ಹರಿಸಮಾನಬಲ ||
ಹರಿಸಮಾನಸುತೇಜ ಹಾಹಾ ! |
ಹರಿಸಮಾನಗುಣಾನ್ವಿತನೆ ಹಾ ! |
ಹರಿಸಮಾನಾಳಾಪ ಹಾಯೆಂದೞಲಿದಳು ತರುಣಿ || ೧೧

ಎಲ್ಲಿ ಮುಗ್ಗಿದೆ ನೃಪಶಿರೋಮಣಿ |
ಯೆಲ್ಲಿ ಹೋದುದು ನಿನ್ನ ಸಿರಿ ಒೞಿ |
ಕೆಲ್ಲಿಯಗಲಿತು ನಿನ್ನ ಘನಸಪ್ತಾಂಗಸಂದೋಹ ||
ಎಲ್ಲಿಯಡಗಿತು ನಿನ್ನ ವಿಭವವ |
ದೆಲ್ಲಿ ತೊಲಗಿತು ರೂಪು ಸದ್ಗುಣ |
ವೆಲ್ಲಿ ಕರಗಿತು ಹೇೞಿನುತ ಹಲುಬಿದಳು ಹರಿಣಾಕ್ಷಿ || ೧೨
ಅರಸ ಕೇಳಾತರುಣಿಯಕ್ಕೆಯು |
ಸರದ ಬೞಿವಿಡಿದಲ್ಲಿಗತಿಭೀ |
ಕರಮೃಗಂಗಳ ನಿವಹ ತಾ ಬಂದೊಲಿದು ಕಿವಿಗೊಟ್ಟು ||
ದುರುಳತನಗಳನುೞಿದು ಮೋಹವ |
ತೊಱಿದು ಕೇಳುತ್ತಿರಲು ಸತಿ ಭೂ |
ವರನ ಕೇಳಿದಳವನಿಪತಿಯು ವಿಯೋಗವಿಕಳದಲಿ || ೧೩
ಅರಸ ಕೇಳ್ ಬಲಧೈರ್ಯಯುತಸ |
ತ್ಪುರುಷನೆನಿಪ ರಘೂದ್ವಹನು ತ |
ನ್ನರಸಿಯ ವಿಯೋಗದಲಿ ನೆರೆ ಕಳವಳಿಸಿ ಕಂಡವನು ||
ತರುಣಿಯನು ಬೆಸಗೊಂಡನೆನಲತಿ |
ತರಳೆ ಮುಗ್ಧೆಯು ಪತಿವಿಯೋಗದಿ |
ಮರುಳಹುದಿದೇನಚ್ಚರಿಯೊ ಭೂಪಾಲ ಕೇಳೆಂದ || ೧೪
ಬೞಿಕ ಕೇಕೀಯಂತ್ರದಿಂದಿೞಿ |
ದಲಘುಕುಚೆ ಕಂಗೆಟ್ಟು ಪುರವಿದು |
ಹೞವವಾದುದು ನಿಳಯ ಸುಡುಗಾಡಾಯ್ತಿದೇಕೆನುತ ||
ಕಳವಳಿಸಿ ನಾನಾರೊ ಪತಿಯೇ |
ಕುೞಿದನೋ ನೋಡುವೆನೆನುತಲಾ |
ಬೞಿಯೊಳಂತರಿಸಿದಳು ವನದಲಿ ಮುಗ್ಧೆ ವಿಕಳದಲಿ || ೧೫
ಲಲನೆಯೊಬ್ಬಳನಡವಿಯಲಿ ನೀ |
ನುೞಿವರೇ ಹೇೞಿಕಟ ಮರದಿಂ |
ದಿಳೆಗೆ ಬಿದ್ದವರುೞಿವರೇ ಲೋಕದಲಿ ದೇಹಗಳ ||
ನೆೞಲು ತಾ ಬೇಱುಂಟೆ ಬಱಿದೇ |
ಕಿಳೆಯಪತಿ ನೀನಿಂತು ಬಿಡಲಸು |
ತೊಲಗದಿಹುದೇ ತನಗೆ ಹೇೞಿಂದೞಲಿದಳು ರಮಣಿ || ೧೬

ಹಱುವದೊಳಗಾನಱಸೆ ನೀನೀ |
ಮೆಳೆಯೊಳಡಗಿರ್ದೆನ್ನ ನಿನ್ನಯ |
ಬೞಿಗೆ ಕರೆದೊಡೆ ಕುಂದೆ ನಾನಿನಗಹಿತವೆಸಗಿದೊಡೆ ||
ಉೞಿವುದುಚಿತವೆ ಬೞಿದೆಯೆನ್ನೊಳು |
ಸೆಳಸಿದೇಕೆಂದೆನುತ ಸತಿ ಹಂ |
ಬಲಿಸುತಿರ್ದಳು ಕಳವಳಿಸಿ ಕರೆಕರೆದು ಭೂಭುಜನ || ೧೭
ಧವನೆ ನೀ ಮುನ್ನೇನರಿಯು ಕ |
ಣ್ಣೆವೆಗಳುರಿಮುರಿಯಾದೊಡೆನ್ನವ |
ಯವವು ಕರಿಗುಂದಿದುವೆನಲು ನಟ್ಟಡವಿಯಲಿ ಬಿಟ್ಟು ||
ಅವನಿಪತಿ ನೀನಗಲೆ ಜೀವ ನಿ |
ಲುವುದೆ ನೀ ಹೇೞಕಟ ಭೂ |
ಭುವನಪಾಲಕ ಎಂದು ಹಂಬಲಿಸಿದಳು ಹರಿಣಾಕ್ಷಿ || ೧೮
ಪುರುಷ ಹಾಯೆಂದೆನುತ ಮಾರುತ |
ಗಿರಿಕೆನಲು ನೃಪನೆನುತ ಕೈಗಳ |
ನುರುತರದಿ ಮುಗಿಯುತ್ತ ಮೃದುಪಾದಂಗಳಲಿ ಮುಳ್ಳು ||
ಮುರಿಯುಲೇನೆಂದೞಿಯಳಕಟಾ |
ಒಱಲುತಾಹಾಯೆನುತ ಪಿಪಿನಾಂ |
ತರದೊಳಱಸುತ್ತಿರ್ದಳಾಸತಿ ಪತಿಯ ವಿಕಳದಲಿ || ೧೯
ನಟ್ಟಡವಿಯಲಿ ನೀನು ವೈರಿಘ |
ರಟ್ಟ ಕೇಳ್ ನಿಷ್ಕರುಣದಿಂ ನೆರೆ |
ಬಿಟ್ಟು ಹೋಗಲು ನಿನ್ನ ಪದವೆಂತಿರ್ದುವಕಟೆನ್ನ ||
ನಿಟ್ಟೆಗೊಂಡಗಲಿಸಿತು ರಾಜ |
ಶ್ರೇಷ್ಠ ನೀ ಮೈದೋಱಿ ಕರುಣಾ |
ದೃಷ್ಟಿಯಲಿ ನೋಡೆನ್ನನೆಂದೞಲಿದಳು ಕಮಲಾಕ್ಷಿ || ೨೦
ಕರಿಯೆ ಕರಿಪತಿಯಾನನನು ಹಯ |
ಹರಿಸಹಸ್ರಬಲಾನ್ವಿತನ ಪಿಕ |
ವರಪಿಕಾಳಾಪನನು ಚಕ್ರವೆ ಚಕ್ರಧರನಿಭನ ||
ಹರಿಣ ಹರಿಣಾಂಕಾಸ್ಯನನು ಭಾ |
ಸುರಶುಕವೆ ಶುಕವಾಣಿಯನು ವಿ |
ಸ್ತರದಿ ತೋಱಿನಗೆಂದು ಸತಿ ಕೇಳಿದಳು ಪಕ್ಷಿಗಳ || ೨೧

ಚಾರುಚೂತವೆ ಚೂತಬಾಣಾ |
ಕಾರನನು ಮಂದಾರ ಬುಧವುಂ |
ಧಾರನನು ಚಂದನವೆ ಚಂದನಲೇಪಿತಾಂಗನನು ||
ನಾರಿಕೇಳವೆ ಲಲಿತಕೀರ್ತಿಯು |
ನಾರಿಯಧಿಪನ ಕಾಣಿರೇ ಎಂ |
ದಾರಮಣಿ ಬೆಸಗೊಂಡಳವನೀಶ್ವರನ ವಿಕಳದಲಿ || ೨೨
ತಿಲಕ ನೀ ತೋಱಖಿಲಭೂಮಿಪ |
ತಿಲಕನನು ವಿಮಲಾರ್ಜುನವೆ ದೋ |
ರ್ಬಲಜಿತಾರ್ಜುನನನು ಸುಕೇತಕಿ ವಿಜಯಕೇತನನ ||
ಲಲಿತಕಂಕೆಲಿದ್ರುಮವೆ ನೀ ತೋ |
ಱೆಒಲಿದು ಕಂಕಲಿಪ್ರಿಯನನೆಂದಾ |
ಅಳಿಕುಳಾಳಕೆ ತರುಗಳನು ಬೆಸಗೊಂಡಳವನಿಪನ || ೨೩
ಕಮಲವೇ ಕಮಲಾನುರಕ್ತನ |
ಕುಮುದ ಕುಮುದೋದ್ಭಾಸಿಯನು ವಿ |
ದ್ರುಮವೆ ವಿಲಸದ್ವಿದ್ರುಮೋಷ್ಠನ ರಾಜಹಂಸಗಳೇ ||
ವಿಮಲಗುಣಯುತರಾಜಹಂಸನ |
ಸುಮನವೇ ಸುಮನೋಸಿಭನ ಸು |
ಭ್ರಮರವೇ ಭ್ರಮರಾಳಕನ ತೋಱೆಂದಳಿಂದಮುಖಿ || ೨೪
ಜಾಣನನು ಸಂತತಲಸತ್ಕ |
ಲ್ಯಾಣನನು ಸುಜನನನು ಭುವನ |
ತ್ರಾಣನನು ವೀಣಾಪ್ರವೀಣನ ಗುಣವಿಭೂಷಣನ ||
ಕ್ಷೋಣಿಪಾಲಶ್ರೇಣಿನುತಗೀ |
ರ್ವಾಣನಾದನವಾನನನು ನೀವ್ |
ಕಾಣಿರೇ ಎಂದಬಲೆ ಬೆಸಗೊಂಡಳು ತರುಪ್ರಜವ || ೨೫
ತರುಣಿಯಿಂತಿನಿಯನ ವಿಯೋಗಾಂ |
ತರದಿ ನೆರೆ ಕಳವಳಿಸಿ ತಾ ಕಂ |
ಡರನಿರದೆ ಕೇಳುತ್ತ ಧೈರ್ಯವ ತಳೆದು ತತ್ಕಾಂತೆ ||
ದುರುಳಕಾಷ್ಠಾಂಗಾರನಿಂ ಸುರ |
ಪುರಕೆ ಸರಿದನೊ ತಿಳಿಯದೆಂದಾ |
ತರುಣಿ ತತ್ಪ್ರೇತಾವನಿಗೆ ತಿರುಗಿದಳು ಶೋಕದಲಿ || ೨೬

ವರವಿಚಿತ್ರವಿತಾನಮಯಮಂ |
ದಿರದೊಳಬಲೆಯುರಂಘ್ರಿಗಳ ವಿ |
ಸ್ತರದೊಳೊತ್ತಲು ಅಂಚೆವಾಸಿನ ಮೇಲೆ ಪವಡಿಸುವ ||
ಪುರುಷನೀನೆಣನೆತ್ತರೊಳು ಭೂ |
ತರುಣಿಯನು ನೆರೆ ಮೆಚ್ಚಿ ಬಿಡದಾ |
ಧರೆಯನಪ್ಪಿದೆಯೆಂದು ಮನದೊಳು ಮಱುಗಿದಳು ರಮಣಿ || ೧೭

ಅಂಬುಜಾನನೆ ಭೂಮಿಪನ ಚಿಂ |
ತಾಂಬುಧಿಯೊಳೋಲಾಡುತಿರೆ ನೆಱೆ |
ತುಂಬಿದುದು ನವಮಾಸ ವರಶುಭಲಗ್ನಸಮಯದಲಿ ||
ಕಂಬುಕಂಧರೆ ಸೂರ್ಯಗೆಣೆಯೆಂ |
ದೆಂಬ ಸುಕುಮಾರಕನ ಪಡೆದುಱೆ |
ಹಂಬಲಿಸುತಿರ್ದಳು ಮಹೀಶನ ನೆನೆದು ಶೋಕದಲಿ || ೧೮

ಸಾರಚಂದ್ರೋಪಲದ ರಮ್ಯಾ |
ಗಾರದಲಿ ಸುಕುಮಾರ ನೀನವ |
ತಾರಿಸದೆ ಸುಡುಗಾಡಿನಲಿ ಬಂದುದಿಸುವರೆ ಕಂದ ||
ಚಾರುಪುಣ್ಯಾತ್ಮಕರ ಬಸಿಱಲಿ |
ಬಾರದತಿಪಾಪಾನ್ವಿತೆಗೆ ಸುಕು |
ಮಾರ ನೀನುದಿಸುವರೆ ಹೇೞೆಂದೞಲಿದಳು ರಮಣಿ || ೧೯

ಬಾಲಕನೆ ನಾ ನಿನ್ನ ಜಠರಕೆ |
ಹಾಲುಬೆಣ್ಣೆಯನೆಲ್ಲಿ ತರುವೆನು |
ಗೋೞಿನೀಕ್ಷಿಸಲಾಱೆನಾವಂದದಲಿ ನಾ ನಿನ್ನ ||
ಪಾಲಿಸುವೆನೆಲ್ಲಿರಿಸುವೆನು ಬಿಱು |
ಗಾಳಿಗಳಿಗಾನೆಲ್ಲಿಗುಯ್ವೆನು |
ಪೇೞು ಕಂದಯೆನುತ್ತ ಮುಂಡಾಡಿದಳು ನಂದನನಾ || ೨೦

ಸರಸಿಜಾಂಬಕಿಯಿಂತು ಮಱುಗು |
ತ್ತಿರೆ ಕುಮಾರನ ಪುಣ್ಯದೇವತೆ |
ಯುರುತರದಿ ತದ್ಧಾತ್ರಿವೇಷದಿ ಬರಲು ಕಂಡಬಲೆ ||
ಹರಣ ಬಂದಂತಿಲ್ಲಿಗೆಂತೆಲೆ |
ತರುಣಿ ಬಂದೆಯೆನುತ್ತ ಶೋಕಿಸು |
ತಿರಲು ದೇವತೆ ನುಡಿದಳಾಕೆಗೆ ದಾದಿಯಂದದಲಿ || ೨೧

ಬಾಲೆ ನೀನಿನ್ನೞಲಬೇಡೀ |
ಬಾಲಕಗೆ ಶುಭಲಕ್ಷಣದ ರೇ |
ಖಾಳಿಯಿವೆ ನೀ ನೋಡು ತಾನಿವನಖಿಳಶತ್ರುಗಳ ||
ಸೀೞಿ ತನ್ನ ಸಮಸ್ತರಾಜ್ಯವ |
ಪಾಲಿಸುವನಿದು ತಪ್ಪದೆಂದಾ |
ನೀಲಕುಂತಲೆಗಱುಹಿ ನುಡಿದಳು ಮತ್ತೆ ವಿನಯದಲಿ || ೩೨
ತರುಣಿಯೇೞಿಂತಿಲ್ಲಿ ನಾವಿ |
ನ್ನಿರಲದೋರ್ವ ಮಹಾತ್ಮ ಬಂದೀ |
ತರುಣನನು ಕೊಂಡುಯ್ದು ಸಲಹುವನಾತನಿಂದಿಳೆಗೆ ||
ಅರಸಹನು ನೀನಾತನೆಯ್ದು |
ತ್ತಿರಲು ಬೇಡೆನಬೇಡವೆಂದೀ |
ಪರಿಯಲಾಕೆಯು ತಿಳುಹೆ ಹಾಯೆಂದೞಲಿದಳು ರಮಣಿ || ೩೩
ತರುಣ ನಿನ್ನನು ಸಾಕಲಾಱದೆ |
ಪರರಿಗೀವಂತಾಯ್ತೆ ಹಾಯೆಂ |
ದರಸಿ ಗೋೞಿಟ್ಟೞಲಿ ತದ್ಬಾಲಕನ ಹಣೆ ಹಣೆಯ ||
ಹೊಱಿಸಿ ನೆಱೆ ಮುಂಡಾಡಿ ತನ್ನಯ |
ಬೆರಲ ಮಣಿಮುದ್ರಿಕೆಯ ತೆಗೆದಂ |
ಬುರುಹಮುಖಿ ಸುತಗಿಟ್ಟು ತೊಲಗಿದಳೊಂದು ಬಾಹೆಯಲಿ || ೩೪
ಅರಸ ಕೇಳಾಪುರದ ವೈಶ್ಯರಿ |
ಗರಸೆನಿಪ ಗಂಧೋತ್ಕಟಂಗವ |
ತರಿಸಿದಾತ್ಮಜನೞಿಯಲಾನೃಪಸುವ್ರತಾಖ್ಯಮುನಿ ||
ಬರಲೆಱಗಿ ತನಗುದಯಿಸಿದ ಪು |
ತ್ರರು ನಿರಾಯುಷರೇಕೆ ತನಗೀ |
ತೆಱನ ಹೇೞಿನೆ ಕರ್ಮವಶ ತಾನೆಂದನಾಮುನಿಪ || ೩೫
ಅೞಲಬೇಡೆಲೆ ವೈಶ್ಯ ನೀನಿದ |
ತಳೆದು ಕಾಡೊಳು ಬಿಸುಟ ಬೞಿಕಾ |
ಸ್ಥಳದೊಳಱಸೆ ಕುಮಾರ ಕೈವಶವಪ್ಪನೆಂದು ಮುನಿ ||
ತಿಳುಹೆ ತತ್ಪ್ರೇತಾವನಿಗೆ ದೋ |
ರ್ವಲನು ಮೃತಶಿಶು ಸಹಿತ ಬರೆ ಕಂ |
ಡೊಲಿದು ವಿಜಯಾವತಿಗೆ ಸತಿ ತೋಱಿದಳು ಬೆರಳಿನಲಿ || ೩೬

ಆವಣಿಗ್ವರನದನು ತತ್ಪ್ರೀ |
ತಾವನಿಯೊಳಿಟ್ಟಲ್ಲಿ ಮುನಿ ಪೇ |
ಳ್ದಾವಿಧದಿ ನೋಡಲ್ಕೆ ನಿರ್ಧನ ಮಣಿಯ ಪಡೆದಂತೆ ||
ಕಾವು ಕಾವಿಂದಱುತಲಖಿಳದಿ |
ಶಾವಳಿಯ ನೋಡುತ್ತ ಶಿಶುಗಳ |
ದೇವನಂತಿಹ ರಾಜಶಿಶುವನು ಕಂಡು ಮಱುಗಿದನು || ೩೭

ಪರುಷವೋ ಕೌಸ್ತುಭವೊ ನವ ಕಡ |
ವರವೊ ಬಿಂಬದ ಮಱಿಯೊ ನವ ಕಂ |
ಡರಣೆಯೋ ಶಿಶುಗಳ ಲಲಾಮವೊ ಸಕಲಲಕ್ಷಣದ ||
ತರುಣಮನಸಿಜ ಬಾಲಕಾಕೃತಿ |
ಧರಿಸಿ ಬಂದವನಲ್ಲದಿರೆ ಮ |
ರ್ತ್ಯರಿಗಿನಿತು ಸೊಬಗಿಲ್ಲೆನುತ ತಲೆದೂಗಿದನು ವೈಶ್ಯ || ೩೮

ಮನ ದಣಿಯಲಾಶಿಶುವನಾಲೋ |
ಕನವೆಸಗಿ ಬಿಗಿಯಪ್ಪಿಕೊಂಡಿ |
ನ್ನೆನಗೆ ತೃಣ ತ್ರೈಲೋಕ್ಯ ರಾಜ್ಯವದೇಕೆ ಸಿರಿಯೇಕೆ ||
ತನಯುಗೆನ್ನೊಳು ಋಣವಿಶೇಷವಿ |
ದೆನುತ ಮುನಿ ರೂಪಿಸಿದ ಮಾತುಗ |
ಳೆನಗೆ ಸಾಮ್ಯವದಾಯ್ತೆನುತಲುಬ್ಬಿದನು ಹರುಷದಲಿ || ೩೯

ತರುಣನನು ಕಂಡಿಂತು ಹರುಷದೊ |
ಳಿರಲು ವಿಜಯಾವತಿ ನಿರೀಕ್ಷಿಸಿ |
ಕರಗಿ ಶಿಶು ಸೀನಲು ಮಹಾಸ್ಥಿರಜೀವಿಯಾಗೆಂದು ||
ಹರಸಲಾರೆಂದೀಕ್ಷಿಸಿ ವಣಿ |
ಗ್ವರನು ಕಾಣದೆ ಬಱಿಕ ಜೀವಂ |
ಧರನು ಹೆಸರೆಂದಿಟ್ಟು ಮನೆಗೈತಂದ ಹರುಷದಲಿ || ೪೦

ಸರಸಿಜಾಂಬಕಿ ನಿನಗೆ ಹಿಂದವ |
ತರಿಸಿದಖಿಳಾತ್ಮಜರು ಜೀವದೊ |
ಳಿರಲು ಕಾಡೊಳು ಬಿಸುಟೆ ನಾ ನಿನಗೀಮೃತಾರ್ಭಕನ ||
ಭರದಿ ಮಸಣದೊಳಿಱುಹಲಿದಕಸು |
ನೆರಸೆ ಮಗುಱ್ದಿದ ತಂದೆ ನೋಡೆಂ |
ದರಸ ಕೈವಿಡಿದಂತೆ ಕಪಟದಿ ನುಡಿದನಾವೈಶ್ಯ || ೪೧

ಪುರುಷನೀಪರಿ ನುಡಿಯೆ ತೊಲಗಿದ |
ಹರಣ ಬಂದಂದಲಿ ಹರುಷದ |
ಶರಧಿಯೊಳಗೋಲಾಡಿ ಕಂಗಳೊಳಶ್ರುಜಲವೊರೆಯೆ ||
ತರುಣನನು ಬಿಗಿಯಪ್ಪಿ ತೂಪಿರಿ |
ದರುಹನನು ನೆನೆದಬಲೆ ಸಾನಾ |
ಪರಿಯ ಶಾಂತಿಯನಾಕ್ಷಣದೆ ಮಾಡಿಸಿದಳೊಲವಿನಲಿ || ೪೨
ಅರಸ ಕೇಳ್ ವಿಜಯಾವತಿಯನುರು |
ತರದೊಳಿತ್ತಲು ಪುಣ್ಯದೇವತೆ |
ಯುರುತರದಿ ತಪಾಧ್ಯತ್ರಿನೇಷದಿ ಬರಲು ಕಂಡಬಲೆ ||
ಭರವಶದಿ ಕೊಂಡುಯ್ದು ತಪವಾ |
ಚರಿಪ ಮುನಿಗಳ ಸನ್ನಿಧಿಯೊಳೊಲಿ |
ದಿರಿಸಿ ತಾನೆಯದೃಶ್ಯವಾದಳು ಭೂಪ ಕೇಳೆಂದ || ೪೩
ಬಳಿಕಲಂಭೋಜಾಕ್ಷಿ ದಾದಿಯ |
ಸುಳಿಹ ಕಾಣದೆ ತನ್ನ ನಡವಿಯೊ |
ಳುಳಿದು ಹೋದಳು ಹಾಯೆನುತ ಶೋಕಾಂಬುನಿಧಿಯೊಳಗೆ ||
ಮುಳುಗಿ ಮೂರ್ಛಿತೆಯಾಗಿ ತನ್ನಿಂ |
ತಿಳಿದು ಶೋಕವನಪಹರಿಸಿ ಕೋ |
ಮಳೆ ವಿವೇಕಸ್ತ್ರೀಯು ಚಿತ್ತಕೆ ಮಾಳ್ದಳು ಮನವ || ೪೪
ತನಯನನು ತಾ ಹೃದಯದೊಳಗಿ |
ಟ್ಟನವರತ ಸರ್ವಜ್ಞಹೃದ್ಧಾ |
ವನೆಯ ಮಾಡುತ ದೇವತಾನ್ನವನುಂಬ ಸುಕುಮಾರಿ ||
ವಿನುತ ತೃಣಧಾನ್ಯದಲಿ ಸಾಕವ |
ನನುಕರಿಸಿ ಜೀವಿಸುತಲಾಕಾ |
ನನದಿ ತಾಪಸಿಯಾಗಿ ಸತಿಯಿಂತಿರ್ದಳೊಲವಿನಲಿ || ೪೫
ನಿಳಯದೊಳು ಸುಳಿದಾಡಲಾರದ |
ಲಲನೆ ವನಕೈದಿದಳು ಮುಂದಾ |
ನಿಲಗೆ ಹೆದರುವಳೊಂದಿದಳು ಬಿರುಗಾಳಿಯೊಳು ಮಣಿಯ ||
ಬೆಳಗಿಗಂಜುವ ರಮಣಿ ರವಿರುಚಿ |
ಯೊಳಗೆ ಮಗ್ಗಿದಳಕಟ ವಿಧಿಯನು |
ಕಳಿವರಾರೆಂದಬಲಿತಬಲೆಯ ನೋಡಿ ಸುರನಿಕರ || ೪೬

ಧರಣಿಪತಿ ಕೇಳಿತ್ತಲಾಪುರ |
ವರದೊಳಗೆ ಗಂಧೋತ್ಕಟನು ಕಡು |
ಹರುಷದಲಿ ಪುತ್ರೋತ್ಸವವ ಮಾಡಿಸಿದನಾದಿವಸ ||
ದುರುಳ ಕಾಷ್ಟಾಂಗಾರನತಿ ವಿ |
ಸ್ತರದಿ ರಾಜ್ಯದ ಪಟ್ಟವನು ತಾ |
ಧರಿಸಿ ಬಳಿಕಾಕ್ಷಣವೆ ದೂತರ ಕರೆದು ನೇಮಿಸಿದ || ೪೭

ಪೌರಜನರಿಷ್ಟವನು ನಿಜಪರಿ |
ವಾರ ಸನ್ನುತಸಚಿವರಂತ |
ಸ್ಸಾರವನು ಪರಿಜನದ ಗುಜಿಗುಜಿನ ಪ್ರವರ್ತನೆಯ ||
ಆರಯಿದು ಬಂದಱುಹಿ ನೀವೆನ |
ಲೂರೊಳದನಾರೈದು ಕಾಷ್ಟಾಂ |
ಗಾರಗಂತಾಹದನ ಚರರಱುಹಿದರು ವಿನಯದಲಿ || ೪೮

ಸುರುಚಿರದಿ ಗಂಧೋತ್ಕಟನ ಮಂ |
ದಿರದೊಳಾದುತ್ಸವವದಲ್ಲದೆ |
ಪುರದೊಳಗೆ ಸತ್ಯಂಧರನು ಮಡಿದುದಕೆ ಶೋಕಿಸದ ||
ನರನದೋರ್ವನ ಕಾಣೆವೆನಲ |
ಚ್ಚರಿಯದೆಂದಾಖಳನು ಬೇಗದಿ |
ಕರೆಸಿ ಗಂಧೋತ್ಕಟಗೆ ಕಾಷ್ಟಾಂಗಾರನಿಂತೆಂದ || ೪೯

ಹೊಟಿಲೊಳಿಲ್ಲದ ವಿಭವ ನಿನ್ನಯ |
ನಿಳಯದೊಳಗಿಂದೇನೆನಲು ನೀ |
ವಿಳೆಯ ಪಟ್ಟವನಾಂತ ಸಂತಸದಲಿ ಮಹೋತ್ಸವವ ||
ಒಲವಿನಲಿ ಮಾಡಿಸಿದೆನೆನೆ ಖಳ |
ತಿಲಕ ರಾಗಿಸಿ ಮೆಚ್ಚಿ ಧನವಿ |
ತ್ತೊಲಿದುದನು ಬೇಡೆನೆ ವಣಿಗ್ವರನಾತಗಿಂತೆಂದ || ೫೦

ಎನಗೆ ಸುತನಿಂದುದಯಿಸಿದನೀ |
ದಿನದಿ ಜನಿಸಿದ ಪುರದ ವೈಶ್ಯರ |
ತನಯರೆನ್ನಾತ್ಮಜನ ಸಂಗಡ ಬಳೆಯಬೇಕೆನಲು ||
ಜನಪನಾಜ್ಞೆಯೊಳಂದು ಪುರದಲಿ |
ಜನಿಸಿದೈನೂರ್ವರು ಕುಮಾರಕ |
ರನಿಬರಾತನ ಮನೆಯೊಳೆಸೆದರು ಭೂಪ ಕೇಳೆಂದ || ೫೧

ಅರಸ ಕೇಳೈನೂರ್ವರಿಗೆ ಭೂ |
ಸುರರ ಮತದಿಂ ಜಾತಕರ್ಮವ |
ವಿರಚಿಸುತೆ ಮೇಣ್ ನಾಮಕರಣಾದಿಗಳನನುಕರಿಸಿ ||
ಪರಿಪರಿಯ ಹಿರಿಯಂದೊಡಿಗೆ ಚೀನಾಂ |
ಬರಗಳಿಂದಾವೈಶ್ಯ ಮುದದಿಂ |
ಹೊರೆಯುತಿರ್ದನು ತನ್ನ ಸತಿಸಹಿತಾಕುಮಾರಕರ || ೫೨

ಹರಿಣಪಕ್ಷದ ಚಂದ್ರನಂತುರು |
ತರದ ಚಂದನ ಕಲ್ಪಕುಜ ಕ |
ಪ್ಪುರದ ಶಶಿಕಾಂತಾಯತಂಗಳ ವಿಧದಿ ಚಂದ್ರಿಕೆಯ ||
ಕರುವಿನಂತೆಳದಳಿರಿನಂತೈ |
ಶ್ವರಿಯ ಧರ್ಮಸುಕೇತು ಬಳೆದಾ |
ಪರಿಯ ಜೀವಂಧರನು ಬಳೆಯುತ್ತಿರ್ದನೊಲವಿನಲಿ || ೫೩

ನಡೆಗಲಿತ ಸ್ಯಾದ್ವಾದಮಾರ್ಗದಿ |
ನುಡಿಗಲಿತ ಜಿನಧರ್ಮಶಾಸ್ತ್ರದಿ |
ಯುಡಲು ತೊಡಲುಣಕಲಿತ ಸರ್ವೇಶ್ವರನ ಬೇಳುಡೆಯ ||
ಇಡಿದ ಭಿತ್ತಿಯ ಚಿತ್ರಗಳ ಮಿಗೆ |
ಹಿಡಿದುಕೊಡು ತನಗೆಂದು ದಾದಿಯ |
ಬಿಡದೆ ಕಾಡುತಲಾಕುಮಾರಕ ಬಳೆದನೊಲವಿನಲಿ || ೫೪

ಎನುತ ಜೀವಂಧರನು ಮೊದಲಾ |
ದನಿಬರಿಗೆಯುಪನಯನವನು ತಾ |
ನನುಕರಿಸೆ ನಂದಿಯೆನಿಸುವ ಮುನಿ ಬಂದನೊಲವಿನಲಿ ||
ಸನುನಯದೊಳೈನೂರ್ವರಿಗೆ ಸಾ |
ಧನವೆನಿಪ ಚೌಷಷ್ಟಿ ವಿದ್ಯೆಯ |
ನನಿತುವನು ಕಲಿಸಿದನು ಭೂಮಿಪಾಲ ಕೇಳೆಂದ || ೫೫

ಬಳಿಕ ಜೀವಂಧರನು ತನಗು |
ಜ್ಜ್ವಳಿಪ ವಿದ್ಯಾಳಿಯುನನಿತುವನು |
ಕಲಿಸಿದಾರ್ಯಾನಂದಿಮುನಿಪನ ನಿಜಕುಲೋನ್ನತಿಯ ||
ತಿಳಿಯಬೇಕೆಂದಿರೆ ಕುಮಾರನ |
ಸುಲಲಿತಾಭ್ಯಂತರವನಱಿದವ |
ಗೊಲಿದು ತಿಳುಹುವೆನೊಂದುಪಾಯದೊಳೆಂದು ಮುನಿ ನುಡಿದ || ೫೬

ಸದಮಳನೆ ಕಥೆಯೊಂದ ಕೇಳ್ ಪೂ |
ರ್ವದಲಿ ವರವಿದ್ಯಾಧರಕ್ಷೇ |
ತ್ರದಲಿ ಭೂಮಿಪಲೋಕಪಾಲಕನಖಿಳರಾಜ್ಯವನು ||
ಮುದದಿ ಪಾಲಿಸುತೊಂದು ದಿನ ಗಗ |
ನದಲಿ ಮೇಘವನೇಕರೂಪದೊ |
ಳುದಿಸೆ ನೋಡುತ್ತಿರಲು ಹರೆದುದಕರಸ ಬೆಱಗಾದ || ೫೭

ನರವರರ ಸಂಸಾರವೀಜಲ |
ಧರಗಳಂತಸ್ಥಿರವೆನುತ ಭೂ |
ವರನು ವೈರಾಗ್ಯದಲಿ ಪಟ್ಟವನಾತ್ಮಜಗೆ ಕಟ್ಟಿ ||
ಭರದಿ ದೀಕ್ಷೆಯ ಕೊಂಡು ತಪವಾ |
ಚರಿಸೆ ಭಸ್ಮಕರೋಗ ಮುನಿಗಾ |
ವರಿಸೆ ಕಪಟದ ತಪವ ಸುಡು ಸುಡಲೆಂದು ಬಿಸುಸುಯ್ದು || ೫೮

ಕ್ರೂರನಿಗೆ ಕುಟಿಲಾತ್ಮನಿಗೆ ಸಂ |
ಸಾರಲೋಪನಿಗಂತ್ಯಜನಿಗವಿ |
ಶಾರದಗೆ ದೋಷಾನುರಕ್ತಗೆ ನಿರ್ಮಳಗೆ ಭೂತ ||
ವೈರಿಗಷ್ಟಮದಾನ್ವಿತಂಗೆ ವಿ |
ಕಾರಿಗದಯಗೆ ರೋಗಿಗಳಿಗೆ ವಿ |
ಚಾರಿಸಲು ತಪ ಸಲ್ಲದದು ತಾ ವಿಫಲವವನಿಯಲಿ || ೫೯

ಅದಱಿಂನಾರುಜುಯುತಗೆ ತಪ ಸ |
ಲ್ಲದು ಸುನಿಶ್ಚಯಂವೆಂದು ಸುದತಃ |
ಸುದತಿಯುಮರಾಜ್ಯಾಂಗನೆಯು ಬಿಟ್ಟಂತೆ ಬಿಟ್ಟು ರುಜಾ (?) ||
ಕ್ಷುಧೆ ವಿಘಾತಿಸೆ ಮುನಿಯಖಿಳದೋ |
ಷದೆ ಯಥೇಷ್ಟಾಚಾರದಲಿ ಬಹು |
ಸದನದೊಳು ಭುಂಜಿಸಲು ಹರೆಯದು ರೋಗವಾಮುನಿಯ || ೬೦

ಬಱಿಕ ಮುನಿ ಗಂಧೋತ್ಕಟನ ನಿಜ |
ನಿಳಯಕ್ಕೈತರಲಾತ್ಮಜರು ತಾ |
ವೊಲಿದು ತಮ್ಮೈನೂರ್ವರೂಟಕ್ಕೆಡೆಗಳೊಂದಿಸಿರೆ ||
ಒಳಗೆ ಪುಗೆ ಕಂಡಾಮುನೀಶ್ವರ |
ನಳಬಳವ ಕಂಡಾಕುಮಾರಕ |
ತಿಲಕ ಮೊದಲಾತಂಗೆ ತಾ ಭೋಜನವನೊಂದಿಸಿದ || ೬೧

ಬಡಿಸಲದಱಿಂ ಮುನ್ನಲುಂಡವ |
ಗಡಿಸುತಿರೆ ಕಂಡಾಕುಮಾರಕ |
ರೊಡಲನೊಲಿದೊಲಿದುಬ್ಬಿ ಮನೆಗಟ್ಟಶನವನು ತರಿಸಿ ||
ಒಡನೆ ತಮ್ಮೈನೂರ್ವರಗಲನು |
ಬಡಿಸೆ ತೃಪ್ತಿಯನೈದದಿರೆ ತಾ |
ಹಿಡಿದ ಕಬಳವನಿತ್ತನಾಮುನಿವರನ ಹಸ್ತದಲಿ || ೬೨

ತರುಣ ಕೇಳಾಪುಣ್ಯಪುರುಷನು |
ಕರದ ಕಬಳವ ಕೊಡಲು ತನ್ಮುನಿ |
ವರನ ಕ್ಷುತ್ತೃಷೆ ಹಿಂಗೆಯಾಕ್ಷಣ ಭಸ್ಮಕವ್ಯಾಧಿ ||
ಕರಗೆ ಸಂತಸಬಟ್ಟು ಪ್ರತ್ಯುಪ |
ಕರಿಸಬೇಕೆನುತಿರ್ದದಾವುದು |
ಪರಿಯೆನುತ್ತಾಮುನಿಪ ಪರಿಕಿಸುತಿರ್ದನಾತ್ಮದಲಿ || ೬೩

ವಿದ್ಯವೇ ಧನಧಾನ್ಯರತ್ನ ಸು |
ವಿದ್ಯವೇ ವಿಖ್ಯಾತಿ ಸತ್ಕುಲ |
ವಿದ್ಯವೇ ವಿಜ್ಞಾನ ಸತ್ಯಾಚಾರ ಧರ್ಮದಯೆ ||
ವಿದ್ಯವೇ ಸಾಮ್ರಾಜ್ಯಸಂಪದ |
ವಿದ್ಯವೇ ಪಿತೃಮಾತೃಬಂಧು ಸು |
ವಿದ್ಯದಿಂದತ್ಯಧಿಕವಿಲ್ಲದ ತಿಳಿಯಬೇಕೆಂದ || ೬೪

ಅರಸ ತನ್ನಯ ದೇಶದೊಳು ವಿ |
ಸ್ತರದೊಳಧಿಕನು ಮೂರ್ಖ ತನ್ಮಂ |
ದಿರದೊಳಗ್ಗಳನಾಪ್ರಭುವು ತನೂರೊಳತ್ಯಧಿಕ ||
ಪರಿಕಿಸಲು ವಿದ್ವಾಂಸ ವಿಶ್ವದೊ |
ಳುರುತರದೊಳತಿಪೂಜ್ಯನದಱಿಂ |
ದೊರೆವೆಸೀತಂಗಮಳವಿದ್ಯೆಯನೆಂದು ಚಿಂತಿಸಿದ || ೬೫

ಎಂದಖಿಳವಿದ್ಯೆಯ ವಣಿಗ್ವರ |
ನಂದನಗೆ ಮುನಿ ಕಲಿಸಿದನು ಕೇ |
ಳೆಂದು ತನ್ನಯ ತೆಱನ ಕಥೆಯು ಬೆಡಂಗಿನಿಂದಾರ್ಯ ||
ನಂದಿ ತಿಳುಹಿದೊಡೀತನೇ ತಾ |
ನೆಂದಱಿದು ಗುರುಶುದ್ಧವೆತ್ತಾ |
ನಂದದಲಿ ಮುನಿಗೆಱಗಿ ಬಱಿಕ ಕುವರಾರನಿಂತೆಂದ || ೬೬

ವರಮುನಿಯೆ ಗುರುಶಿಷ್ಯರುಗಳಾ |
ಚರಣೆಯೆಂತು ಸುಶಾಂತಿ ಜಪತಪ |
ಪರಮಧರ್ಮಾಧರ್ಮ ಮೋಕ್ಷ ಜ್ಞಾನ ದಯವೆಂತು ||
ನರಕಕರ್ಮ ಶುಭಾಶುಭಂಗಳ |
ತೆಱನ ಮೋಕ್ಷದಲಾಪ್ರಪಂಚವ |
ನೊರೆಯಬೇಕೆನಗೆನಲು ಮುನಿಪ ಕುಮಾರಗಿಂತೆಂದ || ೬೭
ಧರ್ಮದಯೆವಡೆದಷ್ಟಮದ ದು |
ಷ್ಕರ್ಮಗಳನಿಟ್ಟೊಱಸಿ ಮನದೊಳು |
ಹಮ್ಮನುೞಿದಿಂದ್ರಿಯವನೊದೆದೇಡಿಲ್ಲದಘವೞಿದು ||
ದುರ್ಮತವನಪಹರಿಸಿ ಮಾಯದೊ |
ಳಮ್ಮವರಿಷಡ್ವರ್ಗವುೞಿವ ಸು |
ನಿರ್ಮಳಾತ್ಮಕನಾದೊಡವ ಗುರು ಮಗನೆ ಕೇಳೆಂದ || ೬೮
ತನುಮನವನೊಪೆದಿತ್ತು ವಸ್ತುಗ |
ಗಳನಿತಱಲಿ ವಂಚಿಸದೆ ಪಸರಿಸಿ |
ವಿನಯಮಾಡುತ ಗುರುವಿನಡಿವಿಡಿದಿತ್ತ ನೇಮವನು ||
ಅನುಕರಿಸಿ ಭಯಭಕ್ತಿಯಲಿ ಕನ |
ಸಿನಲಿ ಮಾಱುತ್ತರವನೀಯದೆ |
ಸನುನಯದೊಳೆಸಗುವನು ಶಿಷ್ಯನು ಮಗನೆ ಕೇಳೆಂದ || ೬೯
ಇಳೆಯೊಳಖಿಳಕಳಾವಿದತೆ ನಾ |
ಣಳವು ಗುಣವಾಭರಣ ಸುಚರಿತೆ |
ಚೆಲುವು ಧರ್ಮವೆ ಮೋಕ್ಷ ಸಂಚಲಚಿತ್ತವಂಧತ್ವ ||
ಮುಳಿಸು ಹೊಲೆ ವ್ಯಸನ ರೌದ್ರವವು ದು |
ರ್ಬಲವೆ ಜೀವನ್ಮೃತವು ಪಿಸುಣತೆ |
ಕೊಲೆಯದೆಲೆ ಸುಕುಮಾರ ಕೇಳೆಂದಱುಹಿದನು ಮುನಿಪ || ೭೦
ಮತ್ತತನವಜ್ಞಾನ ಮಿತ್ರವಿ |
ಹತ್ಯವೇ ವಿಷ ಋಣವೆ ರೋಗ ಸು |
ವೃತ್ತದಲಿ ಸತ್ಕೀರ್ತಿ ಸಕಲವಿರಕ್ತಿಯಪವರ್ಗ ||
ಸತ್ಯವೇ ಜಪಶಾಂತಿತಪ ಸಾ |
ಹಿತ್ಯವೇ ಸುಜ್ಞಾನ ನಿರ್ಮಲ |
ಚಿತ್ತವೇ ಯಮವನಘವದು ಸುಕುಮಾರ ಕೇಳೆಂದ || ೭೧

ಧರ್ಮವೇ ಸ್ವಾಧ್ಯಾಯಜಪತಪ |
ಧರ್ಮವೇ ಕೈವಲ್ಯಸಂಪದ |
ಧರ್ಮವೇ ಸುಜ್ಞಾನಮೌನಧ್ಯಾನದಾನದಯ ||
ಧರ್ಮವೇ ನುತಹೋಮನೇಮ ಸು |
ಧರ್ಮವೇ ಸಗ್ಗಕ್ಕೆ ಕಾರಣ |
ಧರ್ಮವೇ ತಾನಾದಿವಸ್ತು ಕುಮಾರ ಕೇಳೆಂದ || ೭೨
ಧರೆಗೆ ವಿಜಿತೇಂದ್ರಿಯನೆ ಸುಖಿ ಸ |
ಚ್ಚರಿತನೇ ದುರ್ಲಭನು ಪರಧನ |
ಕೆಱಗದವನೇ ಶುಚಿಯಹಿಂಸನಜಾತನಭಿಮಾನಿ ||
ಗರುವನದಯನೆ ಪಾಪಿ ಕಾಮಾ |
ತುರನತುಳವಯಯುತನು ಯೋಗೀ |
ಶ್ವರನು ತಿಳಿಯೆ ಕೃತಘ್ನ ನಾರಕಿಯೆಂದನಾಮುನಿಪ || ೭೩
ಸರಸಸುಖವಿಪದುನ್ನತಿಗೆ ಹೇ |
ವರಿಸುವವನತಿಕಷ್ಟ ಕೋಮಲೆ |
ಯರ ಕಟಾಕ್ಷದ ಹೊಯ್ಲಿಗಳುಕದನೇ ಮಹಾಧೀರ ||
ಪರಹಿತನೆ ಪುಣ್ಯಾತ್ಮ ಲೋಭಿಯೆ |
ಧರೆಗೆ ಬಾಹಿರ ಜ್ಞಾನಿಯೇ ನೆರೆ |
ಮರುಳನವ ಪರನಿಂದಿತನೆ ನಿಂದಾತ್ಮನವನಿಯಲಿ || ೭೪
ಧುರದೊಳೊಡೆಯನನೊಪ್ಪುಗೊಟ್ಟೊಳ |
ಸರಿವ ಭಂಡನು ಪಿಸುಣನೇ ರಿಪು |
ವರರ ದಂಡಿಸುವವನೆ ಬಳನಾತ್ಮರತನೇ ಮುಕ್ತ ||
ಪರಿಣತನೆ ಸರ್ವಜ್ಞನತಿನಿ |
ಷ್ಠುರನೆ ರಾಕ್ಷಸನನ್ಯಧರ್ಮದಿ |
ಚರಿಸುತಿಹನವ ಕುಲವಿಹೀನನು ಮಗನೆ ಕೇಳೆಂದ || ೭೫
ಚೋರ ಸರ್ವದ್ರೋಹಿ ಶಾಸ್ತ್ರವಿ |
ದೂರನೇ ಪಶು ಪರಧನವನಪ |
ಹಾರಿಸುವನೇ ಅಧಮ ಜೀವದಯಾಪರನೆ ಮುಕ್ತ ||
ಧಾರಿಣಿಯೊಳುಪಕಾರಿ ವಿನುತ ವಿ |
ಚಾರಪರನುತ್ತಮನು ಸಾರೋ |
ದಾರದಯೆಯಿಂ ಯುಕ್ತನೇ ಶುದ್ಧಾತ್ಮನವನೆಂದ || ೭೬

ಕ್ರೂರನಾಗದೆ ಬಂಧುಜನಕುಪ |
ಕಾರಿಯಾಗಿ ಸುವಿದ್ಯೆಗಳಲಿ ವಿ |
ಶಾರದನು ತಾನಾಗಿ ಜನನೀಜನಕರಾಜ್ಞೆಯನು ||
ಮೀಱದೆ ಕುಲಾಚಾರದಲಿ ನಡೆ |
ದಾಱು ವರ್ಗವನೊಂದಿ ದುರ್ವ್ಯಾ |
ಪಾರಿಸದೆ ನಡೆದವನು ತಾ ಸತ್ಪುರುಷನವನಿಯಲಿ || ೭೭

ಮನವಚನಕಾಯದಲಿ ವರಕಾಂ |
ಚನಲಸದ್ದ್ರವ್ಯಂಗಳಲಿ ವಂ |
ಚನೆಯ ಮಾಡದೆ ಕೊಟ್ಟುಕೊಂಡ ಮಹೋಗ್ರಸಂಕಟವ ||
ಅನಿತುವನು ಪರಿಹರಿಸಿ ಭೇದದ |
ನೆನೆಹದಿಲ್ಲದೆ ಹಿತವ ಸಂತತ |
ವನುಕರಿಸುತಿರ್ಪವನು ಮಿತ್ರನು ಮಗನೆ ಕೇಳೆಂದ || ೭೮

ಬೇಡಿದರಿಗೊಲಿದಿತ್ತು ಮದಗಳ |
ನೀಡಿರಿದು ರಿಪುನೃಪರ ತಲೆ ಸೆಂ |
ಡಾಡಿ ಮಱುವುಗೆ ಕಾಯ್ದು ಸಪ್ತವ್ಯಸನದೊಳು ಮುಳುಗಿ ||
ಕೇಡನಾಗದೆ ಸರ್ವರನು ವಶ |
ಮಾಡಿಕೊಂಡು ಸುನೀತಿಮಾರ್ಗದಿ |
ನಾಡ ಪಾಲಿಸುವಾತನರಸ ಕುಮಾರ ಕೇಳೆಂದ || ೭೯

ಚೋರಗತ್ಯಾಸಾದಿಕಜ್ಞಗೆ |
ಜಾರಗತಿಕುಟಿಲಂಗೆ ಖಳಗೆ ವಿ |
ಕಾರಿಗನ್ಯಾಚಾರಯುತಗಹಿತಂಗೆ ನಿರ್ದಯಗೆ ||
ಕ್ರೂರಕರ್ಮಿಗೆ ಶಠಗೆ ಪಾರ |
ದ್ವಾರಿಗಾತ್ಮಸ್ತುತಗೆ ಕೊಂಡೆಯ |
ಗಾರಯಲು ತಾನವರಿಗಿಹಪರವಿಲ್ಲ ಕೇಳೆಂದ || ೮೦

ಗುರುವಿಬುಧಪಿತೃಮಾತೃಹತಗ |
ಸ್ಥಿರಗೆ ಗರ್ವೋದ್ಧತಗೆ ಹಿಂಸಾ |
ಪರಗೆ ವರ್ಣಾಶ್ರಮವಿದೂರಗೆ ಜಾತಿಸಂಕರಗೆ ||
ದುರುಳಗತಿಕಾಮಾತುರಗೆ ನಿ |
ಷ್ಠುರಗೆ ಭೂತವಿರೋಧಕಗೆ ಬಾ |
ಹಿರರಿಗಿಹಪರವಿಲ್ಲವೆಲೆ ಸುಕುಮಾರ ಕೇಳೆಂದ || ೮೧

ಕೂಟಸಾಕ್ಷಿಗೆ ಗುರುವಿನಾಜ್ಞೆಯ |
ದಾಟಿದಗೆ ಪಾಷಂಡಿಗಧಮಗೆ |
ತೋಟಿಗೆಳಸುವಗತಿಜಡಗೆ ಪತಿಕಾರ್ಯಘಾತುಕಗೆ ||
ಕೌಟಿಲಂಗೆ ಬಕವ್ರತಗೆ ಬೂ |
ತಾಟವೆಸಗುವಗನ್ಯಮರ್ಮೋ |
ದ್ಘಾಟಕಗೆ ಪರನಿಂದಿತಂಗಿಹಪರಗಳಿಲ್ಲೆಂದ || ೮೨
ಕಾಮುಕಗೆ ದುರ್ವಾದಿಗಾತ್ಮ ವಿ |
ರಾಮಕಾರಿಗೆ ವಿಬುಧವೈರಿಗೆ |
ನಾಮಧಾರಿಗೆ ಖಳಗೆ ಮಿಥ್ಯಾದೃಷ್ಟಿಗದಯಂಗೆ ||
ಹೇಮಚೋರಗೆ ಕುಜನಗತುಳ |
ಗ್ರಾಮಿಣಿಗೆ ಕುಲನಾಶಕಂಗೆ ಮ |
ಹಾಮಹದ್ರೋಹತರಿಂಗೆ ತಾನಿಹಪರಗಳಿಲ್ಲೆಂದ || ೮೩
ಮೃಷೆ ಮುಳಿಸು ಕುಲಧರ್ಮವನು ಬಿ |
ಟ್ಟೆಸಗುವಜ್ಞತೆಯಾಪರಸ್ತ್ರೀ |
ವ್ಯಸನವಾತ್ಮಸ್ತುತ್ಯವತ್ಯಾಚಾರ ಬಕವೃತ್ತಿ ||
ಪಿಸುಣತನ ಪರನಿಂದೆ ಗರ್ವತೆ |
ನುಸುಳು ಹಿಂಸೆ ವಿಷಾದ ಮದ ಕ |
ರ್ಕಶವಚನವಿವು ಮಗನೆ ದೋಷಾಕರಗಳವನಿಯಲಿ || ೮೪
ಎಂದು ಧರ್ಮಾಧರ್ಮವರುಹಿ ಮು |
ನೀಂದ್ರನೇಕಾಂತದಲಿ ನೀ ಸ |
ತ್ಯಂಧರನ ಸುಕುಮಾರ ಗಂಧೋತ್ಕಟನ ಮಗನಲ್ಲ ||
ಹಿಂದೆ ಕಾಷ್ಠಾಂಗಾರ ನಿಮ್ಮಯ |
ತಂದೆಯನು ಕೊಂದಿಳೆಯ ಪಟ್ಟವ |
ನೊಂದಿದನು ಕೇಳೆಂದು ಕುವರಂಗರುಹಿದನು ಮುನಿಪ|| ೮೫
ಮುನಿಪನಿಂತರುಹಲ್ಕೆ ಹರುಷದ |
ವನಧಿಯೊಳಗೋಲಾಡಿ ತಜ್ಜನ |
ಕನನು ಕಾಷ್ಠಾಂಗಾರ ಕೊಂದನೆನಲ್ಕೆ ಘುಡುಘುಡಿಸಿ ||
ಕನಲಿ ಗರ್ಜಿಸಿ ಕಣ್ಣಿನಲಿ ಕೆಂ |
ಪನುಕರಿಸೆ ಪುರವುರುಹಿದೀಶ್ವರ |
ನೆನಲು ಕಿಡಿಕಿಡಿವೋಗಿ ಮುಳಿದು ಕುಮಾರನಿಂತೆಂದ || ೮೬

ಇಂದು ಕಾಷ್ಠಾಂಗಾರನೆಂಬನ |
ಕೊಂದು ಭೂಕಾಮಿನಿಗೆ ಪತಿಯಹೆ |
ನೆಂದಖಿಳಶಸ್ತ್ರಾಸ್ತ್ರಪರಿವೃತನಾಗಿ ಮುನಿಗೆಱಗಿ ||
ನಿಂದಿರಲು ಕುವರನ ಸುಧೈರ್ಯಕೆ |
ನಂದಿ ಮೆಚ್ಚಿಯೆ ಸೆಱಗ ಹಿಡಿದಾ |
ನಂದದಲಿ ಮೆಯ್ದಡವಿ ಬೞಿಕಿಂತೆಂದನಾಮುನಿಪ || ೮೭

ತರಳ ನೀನಸಹಾಯಿಕನು ಹೊ |
ಕ್ಕಱಿಯೆ ಮುನ್ನಾಹವವಸಿಂತೀ |
ಪರಿಯೊಳುದ್ರೇಕಿಸುವುದನುಚಿತ ದೇಶಕಾಲಗಳ ||
ಸ್ಥಿರದೊಳಾರಯ್ದರಸನಭ್ಯಂ |
ತರವನೀಕ್ಷಿಸಿ ತನ್ನಳವನಱಿ |
ದುರವಣಿಸಬೇಕೆಲೆ ಕುಮಾರಕ ಎಂದನಾಮುನಿಪ || ೮೮

ಕೋಪವೇ ಚಾಂಡಾಲವಶುಭತೆ |
ಕೋಪವೇ ದುಷ್ಕರ್ಮವಜ್ಞತೆ |
ಕೋಪವೇ ಜಪತಪದಯಾನುಷ್ಠಾನದಾನಹತ ||
ಕೋಪವೇ ತ್ರೈವರ್ಗಭಂಜನ |
ಕೋಪವೇ ಪ್ರಾಣಾಪಹಾರಣ |
ಕೋಪದಿಂದತ್ಯಧಿಕದುರ್ಗತಿಯಿಲ್ಲವವನಿಯಲಿ || ೮೯

ಅರಿಯನೊಂದಿಹನಱಿಯದುದ ತಾ |
ನಱಿವೆನೆಂಬವನೊಲ್ಲದಂಗನೆ |
ಗೆಱಗುವವ ಧರ್ಮಜ್ಞರನು ಹಗೆಗೊಂಬನಿಹಪರವ ||
ಮಱೆವ ಕೇಳದೆ ಹೇೞ್ವನನ್ಯರ |
ಹೊರೆವ ಮೇಲ ವಿಚಾರಿಸದೆ ಸಂ |
ಗರವ ಹೊಗುವವನವನು ಮೂಢನು ಮಗನೆ ಕೇಳೆಂದ || ೯೦

ಆದಱಿನೀನವನಳಬಳವನಱಿ |
ಯದೆ ರಣಕ್ಕತಿಮುಳಿದು ನೀ ಹೋ |
ಹುದು ಮತವದಲ್ಲೊಂದು ವತ್ಸರ ಸೈರಿಸಿದೊಡೆಮಗೆ ||
ವಿದಿತಗುರುದಕ್ಷಿಣೆಯದೆಂದತಿ |
ಮುದದಿ ಜೀವಂಧರನ ನಾನಾ |
ವಿಧದಿ ತಿಳುಹಿದನಾರ್ಯನಂದಿಮುನೀಂದ್ರನೊಲವಿನಲಿ || ೯೧

ಇಳೆಯಪತಿ ಕೇಳಿಂತು ಶಿಷ್ಯನ |
ಕಲುಷವನು ಕಳೆದಖಿಳವಿಧದಲಿ |
ತಿಳುಹಿ ಬಱಿಕಾಕುವರನನು ಬೀೞುಕೊಂಡು ದೀಕ್ಷೆಯನು ||
ತಳೆದು ತಪದ ಮಹತ್ವದಿಂದು |
ಜ್ಜ್ವಲಿಸಿ ಕರ್ಮಕ್ಷಯವ ಮಾಡಿಯೆ|
ನಿಲಿಸಿದನು ಮುಕ್ತಿಯನು ತನ್ಮ ನಿಯರಸ ಕೇಳೆಂದ || ೯೨

ಇದು ವಿನಮದಮರೇಂದ್ರ ಶ್ರೀಜಿನ |
ಪದಕಮಲಷಟ್ಚರಣವಾಣೀ |
ವದನದರ್ಪಣ ಭೂಸುರೋತ್ತಮ ಬಸವಣಾಂಕಸುತ ||
ಚದುರ ಭಾಸ್ಕರರಚಿತ ಧರ್ಮ |
ಪ್ರದನ ಜೀವಂಧರನ ಚರಿತೆಯೊ |
ಳಿದು ಕುಮಾರೋದಯವಿವರ್ಣನೆಯರಸ ಕೇಳೆಂದ || ೯೩

ಐದನೆಯ ಸಂಧಿ ಮುಗಿದುದು.

---

## ಆಱನೆಯ ಸಂಧಿ.

---

ಸೂಚನೆ|| ದುರುಳಕಾಷ್ಠಾಂಗಾರ ತುೞುಗಳ |
ಮರಳಿಸದೆ ಮುೞಿಯಲ್ಕೆ ಜೀವಂ |
ಧರನು ಶಬರರನೊೞಿಸಿ ತಿರುಹಿದನಖಿಲಗೋಕುಲವ ||

ಅರಸ ಕೇಳ್ ತಾಯಱಿದ ಶಿಶುವಿನ |
ಪರಿಯಲಾಜೀವಂಧರನು ತ |
ದ್ಗುರುವಿಯೋಗದಿ ಬಹಳಚಿಂತಾಂಬೋಧಿಯೊಳು ಮುೞುಗಿ ||
ನಿರುಪಮಾತ್ಮ ನ ನೆನೆವ ಯೋಗೀ |
ಶ್ವರನವೊಲು ತಾನಾರ್ಯನಂದಿಯ |
ನಿರದೆ ಹೃತ್ಕಮಲದಲಿ ನೆನೆಯುತ್ತಿರ್ದನನವರತ || ೧

ಪರಮಪುರುಷರು ರೂಪುದೋಱಿಸಿ |
ಸರಿವರಲ್ಲದೆಯೊಂದು ತಾವಿನೊ |
ಳಿರರು ತಾವದಱಿಂದ ಚಿಂತೆಯನುೞಿಯಬೇಕೆನುತ ||
ಪರಿಣತೆಯೊಳಾಶೋಕವನು ಪರಿ |
ಹರಿಸಿಕೊಂಡುತ್ಸವದಿ ಜೀವಂ |
ಧರನು ತಾನೈನೂರ್ವರೊಂದಾಗಿರ್ದನೊಲವಿನಲಿ || ೨

ಸ್ಮರನನಾಕಾರದಲಿ ವಾಣೀ |
ಶ್ವರನ ವಿದ್ಯದಿ ಸುರಪತಿಯನೈ |
ಶ್ವರಿಯದಲಿ ಗೀಷ್ಪತಿಯ ನಯನೀತಿಯಲಿ ಧನಪತಿಯ ||
ಸಿರಿಯೊಳಾಚಕ್ರಿಯನುಪಾಯೋ |
ತ್ಕರದೊಳೂರ್ಜಿತತೇಜದಲಿ ಭಾ |
ಸ್ಕರನವೊಲು ಎಸೆದಿರ್ದನಾಸುಕುಮಾರನೊಲವಿನಲಿ || ೩
ವಿನುತಕುಮುದಾಂಬಕ ಗಭೀರ |
ಧ್ವನಿ ಲಸದ್ಬಿಂಬೋಷ್ಠ ಚಂದ್ರಾ |
ನನ ವಿಶಾಲಿತವಕ್ಷ ಸೂಕ್ಷ್ಮಶ್ಮಶ್ರು ತನುಮಧ್ಯ ||
ವನರುಹಾಂಘ್ರಿ ಸುದೀರ್ಘಭುಜ ರ |
ಕ್ತನಖ ತುಂಗಘ್ರಾಣ ಮೃದುತನು |
ಘನತರೋತ್ಕಚ ಪೂರ್ಣಭಾಳದೊಳೆಸೆದನೊಲವಿನಲಿ || ೪
ಕೇಳು ಮಗಧನೃಪಾಲ ಮೂರ್ಖರ |
ಮೌಳಿ ಕಾಷ್ಠಾಂಗಾರನಿತ್ತಲು |
ಲೀಳೆಯಿಂದೊಡ್ಡೋಲಗಂಗೊಟ್ಟಿರಲು ನಿರ್ದ್ರವದ ||
ಶಾಳಿಯಲಿ ಕೈಮೊಱೆಯ ಕಂಬನಿ |
ಗೋಳ ಕಲ್ಲಿಯ ಜೋಳಿಗಳ ಗೋ |
ಪಾಳಕರು ಬಂದೆಱಗಿ ಬಿನ್ನೈಸಿದರು ಭೀತಿಯಲಿ || ೫
ಧರಣಿಪತಿ ಚಿತ್ತೈಸು ಶತಸಾ |
ಸಿರದ ಸಂಖ್ಯೆಯ ತುಱುಸಮೂಹದ |
ಭರದೊಳಿಂತು ಕಿರಾತರುಗಳೆಯ್ತಂದು ಹಟ್ಟಿಗಳ ||
ಇಱಿದು ಕೊಂಡುಯ್ದುಳ್ಳುದೆಲ್ಲವ |
ಸೆಱೆಯ ಹಿಡಿದರು ದೇವ ನೀನದ |
ಪರಿಹರಿಸಿಕೊಡು ಸಲಹು ಸಲಹೆಂದೆಱಗಿತಖಿಳಜನ || ೬
ಕೇಳಿ ಸಿಡಿಮಿಡಿಗೆಯ್ದುತೆದ್ದು ನೃ |
ಪಾಲನೋಲಗವನು ವಿಸರ್ಜಿಸಿ |
ಕಾಲಭೈರವನಂತೆ ಗರ್ಜಿಸಿ ಶಬರಸಂಕುಲವ ||
ಸೀಳಿ ಹೆಡದಲೆಯಿಂದಲುಗಿವೆನು |
ನಾಲಗೆಯನೆಂದಾಹವಕೆ ಭೂ |
ಪಾಲನನುವಾಗಲ್ಕೆ ಮಗಧನೃಪಾಲನಿಂತೆಂದ || ೭

ನೊರಜ ಕೊಲುವೊಡೆ ಕೈದುವೇತಕೆ |
ಧರಣಿಪತಿ ಹುಲುಬೇಡರನು ಸಂ |
ಹರಿಸಿ ಬಹುದಕೆ ನೀವು ಪರಿಯಂತೇಕೆ ಸೇನೆಯನು ||
ನೆರಹು ತಾನೊಡನೆಯ್ದಿ ಶಬರರ |
ನೊಱಸಿ ನಿಮಿಷಕೆ ತುಱುಸಮೂಹವ |
ಮರಳಿಸುವೆನೆಂದಾಮದನ ಬಿನ್ನೈಸಿದನು ನೃಪಗೆ || ೮
ಎನಲು ಮತವಹುದೆನುತ ಸೇನೆಯ |
ನನುನಯದಿ ನೆರೆ ಕೂಡಿಕೊಟ್ಟಾ |
ಜನಪನಟ್ಟಲು ಬಂದು ಮದನ ಪುಳಿಂದರನು ಮುತ್ತಿ ||
ಕನಲಿ ಕಾದುತ್ತಿರೆ ಕಿರಾತರು |
ದನುಸರಂಗಳ ಕೊಂಡು ಘಡ ಹೋ |
ಗೆನುತ ರೋಷದಿ ತಾಗಿದರು ಭೂಪಾಲ ಕೇಳೆಂದ || ೯
ಭರದೊಳಾರಿಪುಸೇನೆಯನು ನಿ |
ಷ್ಠುರದಿ ಶಬರರು ಬೆರಸಿ ಬೊಬ್ಬಿರಿ |
ದರರೆ ಹಿಮ್ಮೆಟ್ಟೆನುತ ಬಾಣದ ಮೞೆಯ ಕಱೆಯುತಿರೆ ||
ತರಹರಿಸಲಳವಡದೆ ಮುಱಿದಾ |
ಪುರಕೆ ಮದನ ಮಗುಳ್ದು ಬರೆ ಕಾ |
ತರಿಸಿ ಕಾಷ್ಠಾಂಗಾರ ತಾಹೊಱವಟ್ಟನಾಹವಕೆ || ೧೦
ತಳಿತ ಪಲ್ಲವಸತ್ತಿಗೆಯ ಹೊಂ |
ಬೞಿಯಿಗೆಯ ಸೀಗುರಿಯ ಚಮರಾ |
ವಳಿಯ ಲಗ್ಗೆಯೊಳಳ್ಳಿಱಿವ ಘನವಾದ್ಯರಭಸಗಳ ||
ಒಲವಿನಿಂದಾನೃಪತಿ ಚಾತು |
ರ್ಬಲಸಹಿತ ಬಂದಾಕಿರಾತರ |
ನಳವಿಯಲಿ ತಾಗಿದನು ಭೂಮೀಪಾಲ ಕೇಳೆಂದ || ೧೧
ಶರಧಿ ಶರಧಿಯು ತಾಗುವಂದದೊ |
ಳೆರಡು ಬಲ ತಲೆಯೆತ್ತಿ ಕಾದು |
ತ್ತಿರಲು ಮೆಲ್ಲನೆ ರಾಯದೞವೊಳಸರಿಯುತಿರೆ ಕಂಡು ||
ಕೆರಳಿ ಕಾಷ್ಠಾಂಗಾರ ತಾ ಮೇ |
ಲುಱವಣಿಸಿ ಕೈಮಾಡಲಾವನ |
ಚರರು ಮುಱಿದೋಡಿದರು ಭೂಮೀಪಾಲ ಕೇಳೆಂದ || ೧೨

ಭೀಳದಾವಾಗ್ನಿಯು ಮಹಾಧೂ |
ಮಾಳಿಯೋ ಘೋರಾಂಧಕಾರವೊ |
ಕಾಳರಾತ್ರಿಯೊ ಕಾರ್ಮುಗಿಲೊ ಕಾಳಾಹಿಸಂಕುಲವೋ ||
ನೀಳಗಿರಿಗಳೊ ಮಧುಪಕುಲವೊ ತ |
ಮಾಳವನವೆನೆ ಮತ್ತೆ ಖಳರು ಛ |
ಡಾಳಿಸುತ ಮೇಲೇಱಿದರು ಘನತರದ ಕೋಪದಲಿ || ೧೩

ಪೊಡವಿಪತಿ ಕೇಳಿಂತು ಲುಬ್ಧಕ |
ರೊಡನೆ ತಾಂ ಸಂಗಡಿಸಿಕೊಂಡವ |
ಗಡಿಸಿ ಬಂದೊಗ್ಗಿನಲಿ ಶರಗಳ ಮೞೆಯು ಕಱೆಯುತಿರೆ ||
ನಡುಗಿ ಕಾಷ್ಠಾಂಗಾರ ಹಿಂದಕೆ |
ಮಡಮುಱಿಯಲಾ ಸರ್ವದಳವೊ |
ಗ್ಗೊಡೆದು ನೆರೆ ಮುಱಿದೋಡಿಹೋದುದು ಬಸಿವ ರಕ್ತದಲಿ || ೧೪

ದುರುಳಕಾಷ್ಠಾಂಗಾರನಿಂತೀ |
ಪರಿಭವದೊಳಾಪುರವ ಹುಗೆ ಘನ |
ಗಿರಿಯು ನೊರಜಾನುವುದೆ ಸತ್ಯಂಧರನು ತಾಳ್ದಿಳೆಯು ||
ಧರಿಸಲಾಪನೆ ಪಾಪಿಯಿವನೆಂ |
ದಿರದೆ ತಮತಮಗೆಲ್ಲ ಬಯ್ಯುತ |
ನೆರೆದ ಜನ ಬೆಂಬೀೞುತಿರ್ದುದು ಭೂಪ ಕೇಳೆಂದ || ೧೫

ಅರಸ ಕೇಳಾಗೋಕುಲಾಧೀ |
ಶ್ವರನೆನಿಪಪರನಂದಗೋಪನು |
ತುಱುವ ಮರಳಿಸಿದವಗೆ ಹೇಮದ ಪುತ್ತಳಿಗಳೇೞ |
ಬೆರಸಿಯೆನ್ನಾತ್ಮಜೆಯನೀವೆನು |
ಪುರದೊಳತಿಬಲರ್ಕೈದಿ ತುಱುಗಳ |
ಮರಳಿಸುವುದೆಂದೊಲಿದು ಸಾರಿಸಿದನು ಪುರಾಂತದಲಿ || ೧೬

ಪುರದೊಳಾವೈಶ್ಯೇಂದ್ರ ತನ್ನಯ |
ವರತನುಜೆ ಗೋವಿಂದೆಯನು ವಿ |
ಸ್ತರದೊಳೀವೆನೆನುತ್ತಲಂದಾಪುರದೆ ಸಾರಿಸಲು ||
ಅರಸು ಕಾಷ್ಠಾಂಗಾರ ಸಹಿತವೆ |
ಮುಱಿದು ಬಂದನು ನಮ್ಮ ಬಾಹಾ |
ಸ್ಫುರಣದಳವೆನಿತೆಂದು ಮನಗುಂದಿತು ಪುರಸ್ತೋಮ || ೧೭

ಕರಿತುರಗರತ್ನಾಭರಣವೈ |
ಶ್ವರಿಯಸತಿಸುತಮಿತ್ರರುಗಳಂ |
ತರಿಸೆ ಮಗುೞ್ದ ಗಳಿಸಬಹುದು ಶರೀರ ತೊಲಗಿದರೆ ||
ಮರಳಿ ರೂಢಿಸಬಾರದದಱಿಂ |
ತರುಣಿಗೋಸುಗ ಸತ್ತು ಮೇಲಹ |
ಸಿರಿಯ ನಂಬುವರಾರೆನುತ ಮನಗುಂದಿತಖಿಲಜನ || ೧೮

ಇಂತು ಬೆಂಬೞ್ದೋರ್ವರಾನಗ |
ರಾಂತದಲಿ ಪೊಱಪೊಣ್ಮದಿರಲು ಜ |
ಯಂತನಿಭ ಜೀವಂಧರನು ತಾ ಕೇಳಿ ಗೋವುಗಳ ||
ಸಂತತಿಯ ನೆರೆ ತಿರುಹಿತಂದಾ |
ಕಾಂತೆಯನು ಪದ್ಮಾಸ್ಯಗರಸಿಯ |
ಹಂತೆ ಮಾಡುವೆನೆಂದು ತನ್ನೊಳು ನೆನೆದನೊಲವಿನಲಿ || ೧೯

ಗುರುಯತೀಂದ್ರರ ಬಾಧೆಯನು ವಿಬು |
ಧರ ಮಹೋಪದ್ರವನು ಗೋಬ್ರಾ |
ಹ್ಮರಿಗೆ ಬಂದಾಪದವನಬಲಾಜನದ ಸಂಕಟವ ||
ಪುರುಷನಾದವ ಕಂಡದನು ಪರಿ |
ಹರಿಸದಿಹುದದು ಹೀನವೀಕ್ಷಣ |
ತುಱುವ ಮರಳಿಸ ಬೇಕೆನುತ ಚಿಂತಿಸಿದನಾತ್ಮದಲಿ || ೨೦

ಎಂದು ನೆನೆದು ಕುಮಾರ ಬೞ್ಕಾ |
ನಂದಗೋಪನ ಕರೆಸಿ ಹೆದಱದಿ |
ರೆಂದು ಮರಳಿಚಿ ತರ್ಪೆ ತುಱುಗಳನೆಂದಭಯವಿತ್ತು ||
ನಿಂದು ಕೈದುವ ಕೊಂಡು ರಥವ ಸು |
ರೇಂದ್ರಸನ್ನಿಭನೇಱ ಬಂದನು |
ಹಿಂದೆ ಸುಕುಮಾರಕರು ತಾವೈನೂರ್ವರೊಗ್ಗಿನಲಿ || ೨೧

ಲಗ್ಗೆವರೆಗಳಲಾಕುಮಾರಕ |
ರೊಗ್ಗು ಕವಿದು ಕಿರಾತಚಯವನು |
ನುಗ್ಗು ನುಸಿಯಾಗರೆದು ಕಾಷ್ಠಾಂಗಾರಕನ ಗೆಲಿದು ||
ಮೊಗ್ಗು ನಮ್ಮೊಳು ಬೇಡ ಬೇಡೆಂ |
ದುಗ್ಗಡದಿ ಕೂರಂಬುಗಳ ಸುರಿ |
ದಗ್ಗಳೆಯರಿಟ್ಟಣಿಸಿ ಕಾದಿದರರಸ ಕೇಳೆಂದ || ೨೨

ಸರಲ ವೃಷ್ಟಿಯನಾಕಿರಾತರು |
ಸುರಿಯೆ ತದ್ಬಾಣಗಳನೆಡೆಯುಲಿ |
ಮುಱಿದು ಜೀವಂಧರನು ನಿಶಿತಾಸ್ತ್ರಗಳಲಾಖಳ ||
ಶಿರಗಳನು ಕತ್ತರಿಸಿ ಹೊಕ್ಕೊಡ |
ವೆರಸಿ ಗೋಸಂಕುಲವ ನಿಮಿಷಾಂ |
ತರಕೆ ತಿರುಹಿದನೊಂದುಟಿಯುದಂತಾಜಿರಂಗದಲಿ || ೨೩

ಧರಣಿಪತಿ ಕೇಳಿಂತು ಜೀವಂ |
ಧರನು ತುಱುಗಳ ಮರಳಿಸಲು ಗೋ |
ವರರು ಮುದದಲಿ ಗೋವುಗಳನವಱವಱ ನಾಮದಲಿ ||
ಕರೆದು ಹಟ್ಟಿಯು ಹುಗಿಸಿ ಜೀವಂ |
ಧರನು ತನ್ನಯ ಮಿತ್ರರ್ರೈನೂ |
ರ್ವರು ಸಹಿತ ಗೋಕುಲವ ನೋಡುತ್ತಿರ್ದನೊಲವಿನಲಿ || ೨೪

ಕಾಲೊಳವನಿಯನಣೆದು ಕೋಡಲಿ |
ಶೈಲಗಳನೊಡೆಮುಗುಚಿ ದೆಸೆಗಳ |
ಮೂಲೆ ಬಿಡೆ ಗರ್ಜಿಸುತ ಮಾರ್ದನಿಗಗಿದು ನಂದಿನಿಯು ||
ಮೇಲಡರಿ ಬಾಲವನು ನೆಗಹಿ ಛ |
ಡಾಳಿಸುತಲವ್ವಳಿಸಿ ಮಲೆಯುತ |
ಲೀಲೆಯುಲಿ ಬಹ ಗೂಳಿಯನು ಸುಕುಮಾರನೀಕ್ಷಿಸಿದ || ೨೫

ಲೋಲಕರ್ಣವನೆತ್ತಿ ತಿತ್ತಿರಿ |
ಗಾಳೆಗಳ ನಿಂದಾಲಿಸುತ ಕೊನೆ |
ವಾಲದಿಂ ತೊಡೆದಂಗವನು ಕುಸಿದಳುಕಿ ಕೊರಲೆತ್ತಿ ||
ಮೇಲನೀಕ್ಷಿಸಿ ವತ್ಸಗಳನುಱೆ |
ಪಾಲಿಸುತ ಕಱುಗೂಡಿ ಗೋವನ |
ಗಾಳಿಗೈತಹ ಗೋವುಗಳ ಸುಕುಮಾರನೀಕ್ಷಿಸಿದ || ೨೬.

ಕಱುವ ಕಾಣದೆ ಮುಗುಟಿದ್ದು ಹೂಂಕೆಂ |
ದಱಚಿ ಬಿಡದೀಕ್ಷಿಸುತ ಕೆಚ್ಚಲ |
ಭರದಿ ಬಳುಕುತ ಹೊಱೆಯನಿಱುಹಿದ ತೆಱದಿ ನೊಲೆವಾಲು ||
ಬಿರಿವಿಡುತ ಪರವತ್ಸಗಳಿಗ |
ಬ್ಬರಿಸಿ ನೋಂಕುವ ಗೂಳಿಗಳಿಗೊಳ |
ಸರಿಯುತಿರ್ದಾಸುರಭಿಗಳ ಸುಕುಮಾರನೀಕ್ಷಿಸಿದ || ೨೭.

ಅಡಿಯುನವನಿಯೊಳೂಱಿ ಕಱುಗಳ |
ಮಡದೊಳೊಲವಿಂದಾತು ಕಂದಲ |
ತೊಡೆಯೊಳಿರುಕಿ ಕಟಾಕ್ಷದೀಧಿತಿ ದುಗ್ಧಧಾರೆಯಲಿ ||
ತೊಡರೆ ಸೆಳೆನಡು ಬಳುಕೆ ಸಡಿಲಿದ |
ಮುಡಿಯು ಗೋಣಿನೊಳೌಂಕಿ ತನು ಬೆಮ |
ರಿಡುತ ಸುರಭಿಯ ಕಱೆವಬಲೆಯುರ ಕುವರನೀಕ್ಷಿಸಿದ || ೨೮

ಸಃಗಿಯೆ ಕರಿಕುಂಭಕ್ಕೆ ನೇಣಂ |
ತೆಗೆವಗಿಯೆ ಬೆಮರಮರೆ ಮೇಖಳೆ |
ಜಗುೞೆ ತೂಗೆ ಕುಚಂಗಳುರುಕಂಕಣಝಣತ್ಕಾರ ||
ನೆಗೞೆ ಸೀತ್ಕೃತ ಲೋಳೆವಾಯೊಳ |
ಗೊಗೆಯೆ ಬೞಲಿ ಬೆಮರ್ತು ಮಲೆದೊಲೆ |
ದಗಿದು ಪಾಡುವ ಮೊಸಱ ಕಡೆವಂಗನೆಯನೀಕ್ಷಿಸಿದ || ೨೯

ನಂದಗೋಪನು ಬೞಿಕಲಾಜೀ |
ವಂಧರನ ಪುರಿಗುಯ್ದು ತನ್ನಯ |
ಮಂದಿರದೊಳಂದೇೞು ಹೇಮದ ಪುತ್ಥಳಿಕೆಗಳನು ||
ತಂದು ನಿಲಿಸಿ ಮದೀಯಸುತೆ ಗೋ |
ವಿಂದೆಯನು ನೀ ಮದುವೆಯಾಗೆನ |
ಲಂದು ವೈಶ್ಯಾಗ್ರಣಿಗೆ ನಗುತ ಕುಮಾರನಿಂತೆಂದ || ೩೦

ಎಲೆ ವಣಿಗ್ವರ ಕಾಮಿನಿಯ ನೀ |
ನೊಲಿದು ಮತ್ಸಹಜಾತನಾಪ |
ಲ್ಲಲಿತಗುಣ ಪದ್ಮಾಸ್ಯಗೆಂದವನನುನಯೋಕ್ತಿಯಲಿ ||
ತಿಳುಹಿ ಸುಮುಹೂರ್ತದಲಿ ತತ್ಕೋ |
ಮಲೆಯನೊಲವಿಂದಗ್ನಿಸಾಕ್ಷಿಕ |
ದಲಿ ವಿವಾಹವ ಮಾಡಿದನು ಸುಕುಮಾರನೊಲವಿನಲಿ || ೩೧

ಇದು ವಿನಮುದಮರೇಂದ್ರ ಶ್ರೀಜಿನ |
ಪದಕಮಲಷಟ್ಚರಣವಾಣೀ |
ವದನ ದರ್ಪಣ ಭೂಸುರೋತ್ತಮ ಬಸವಣಾಂಕಸುತ ||
ಚದುರ ಭಾಸ್ಕರ ರಚಿತ ಧರ್ಮ |
ಪ್ರದನ ಜೀವಂಧರನ ಚರಿತೆಯೊ |
ಳಿದುವೆ ಗೋಗ್ರಹಣಪ್ರಶಸ್ತಿ ಮಹೀಶ ಕೇಳೆಂದ || ೩೨

ಆಱನೆಯ ಸಂಧಿ ಮುಗಿದುದು.

## ಏೞನೆಯ ಸಂಧಿ.

ಸೂಚನೆ|| ವರತನುಜೆಯ ಸೊಯಂಬರಕೆ ಸಕ |
ಲರಸುಗಳು ಬಹುದೆಂದು ವಾಣಿಜ |
ವರನು ಸಾರಿಸಿ ರಚಿಸಿ ನೆರಹಿದನಖಿಳನೃಪವರರ ||

ಅರಸ ಕೇಳಾಪುರದಿ ವಾಣಿಜ |
ವರನೆನಿಪ ಶ್ರೀದತ್ತ ವಿಭವದಿ |
ಹರನ ಸಖಿಗೆಣೆಯೆನಿಪ ತಜ್ಜಾತಿಪ್ರವರ್ತನೆಯ ||
ಮಱೆದು ತಾ ಬೞಕೊಂದು ದಿನ ವಿ |
ಸ್ತರದೊಳಾಯುವಿಹೀನದ ವ್ಯಯ |
ನರರಿಗನುಚಿತವೆಂದು ತನ್ನಯ ಮನದಿ ಚಿಂತಿಸಿದ || ೧

ಅವನಿಯಲಿ ತಾ ಗಳಿಸಿದುದನುಂ |
ಬವ ಮಹೋತ್ತಮ ಪಿತೃಧನದಿ ಬಾ |
ೞುವನು ಮಧ್ಯಮ ತಾಯೊಡವೆಯುಂಡಿಹನು ತಾನಧಮ ||
ಯುವತಿಯರ್ಥದೊಳೊಂದಿ ಬದುಕುವ |
ನವನಿಯೊಳಗತ್ಯಧಮನದಱಿಂ |
ದವೆ ಧನವ ಗಳಿಸದವಗಿಹಪರವೊಂದುಮಿಲ್ಲೆಂದ || ೨

ತನಯರುಗಳತಿ ದಟ್ಟಿಸುವರಂ |
ಗನೆಯರುಲ್ಲಂಘಿಸುವರಿಷ್ಟರು |
ಮುನಿವರೊಡಹುಟ್ಟಿದರು ತಸ್ಕರನೆಂಬರೀಲೋಕ ||
ಜನ ಹಗೆಯ ಕಂಡಂತೆ ತೊಲಗುವ |
ರನುಪಮಾಸ್ಥಾನದೊಳಶೋಭಿತ |
ನೆನಲು ತಿಳಿಯೆ ದರಿದ್ರನಿಂದತಿಕಷ್ಟರಿಲ್ಲೆಂದ || ೩

ಸ್ವರವಿಹೀನನ ಗಾನ ಸದ್ಗುರು |
ವೊರೆಯದನುಪಮಮಂತ್ರ ಪುರುಷನೊ |
ಳೆಱಕವಿಲ್ಲದ ರಮಣಿ ನಂದನರಿಲ್ಲದನ ಬಾೞು ||
ಸರಸವಿಲ್ಲದ ಕವಿ ಮರಾಳೋ |
ತ್ಕರಗಳಿಲ್ಲದ ಸರಸಿ ವಿಮಲೈ |
ಶ್ವರಿಯವಿಲ್ಲದ ನರರ ಸಂಸಾರವನು ಸುಡಲೆಂದ || ೪

ಶೂರನಲ್ಲದ ಸುಭಟ ರಿಪುವ ವಿ |
ದಾರಿಸದ ನೃಪ ಶಾಸ್ತ್ರಗಳನು ವಿ |
ಚಾರಿಸದ ಬುಧ ಸುಗತಿಯನು ಚಿಂತಿಸದ ಯೋಗೀಂದ್ರ ||
ಕ್ರೂರಕರ್ಮವ ಸುಡದ ಗುರುವಾ |
ಚಾರವುೞಿದಾಚಾರ್ಯ ಸತ್ಯ ವ್ಯವ |
ಹಾರಿಸದ ವಾಣಿಜನಿರವು ನಿರರ್ಥವವನಿಯಲಿ || ೫

ಪುರುಷ ಸಕಲೈಶ್ವರ್ಯ ಸಂಪದ |
ದೊರೆಕೊಳಲು ಸರ್ವಜ್ಞನವ ಸು |
ಸ್ಥಿರ ಸುಭಗ ಕುಲಶೀಲಸತ್ಯಾಚಾರಗುಣಯುತನು ||
ಸಿರಿ ತೊಲಗಲಪ್ರೌಢನವನ |
ಸ್ಥಿರನಶುಚಿ ಕಡುಮೂರ್ಖ ಜನಬಾ |
ಹಿರನವನು ದಾರಿದ್ರ್ಯದಿಂದತಿಕಷ್ಟವಿಲ್ಲೆಂದ || ೬

ಎಂದು ಧನವನುಪಾರ್ಜಿಸಲು ಬೇ |
ಕೆಂದಪೂರ್ವದ ವಸ್ತುವನು ವೈ |
ಶ್ಯೇಂದ್ರ ಹಡಗಲಿ ತುಂಬಿಕೊಂಡಬ್ಧಿಯೊಳಗೈತಂದು ||
ಒಂದು ವಿಮಳದ್ವೀಪದಲಿ ತಾ |
ತಂದ ವಸ್ತುವ ಮಾಱಿ ಲಾಭದೊ |
ಳೊಂದಿ ಮಗುೞಿ ಪುರಕ್ಕೆ ಬರುತಿರ್ದನು ಸರಾಗದಲಿ || ೭

ಜಡಧಿಮಧ್ಯದಿ ಬರುತಿರಲು ಹಡ |
ಗೊಡೆದ ತೆಱದಿಂ ನೀರೊಳಗೆ ಬಂ |
ದಿಡಿಯುತಿರೆ ಕಂಡಾಜನವು ಕಂಗೆಡೆ ವಣಿಗ್ವರನು ||
ನಡುಗುವರೆ ನೀವಕಟ ಹಡಗೋ |
ರ್ಗುಡಿಸದದಱಿಂ ಮುನ್ನ ನೀವೆಂ |
ದೊಡಬಡಿಸಿ ನಯದಿಂದ ತಿಳುಹುತ್ತಿರ್ದನೊಲವಿನಲಿ || ೮

ವರವಣಿಗ್ವರನಿಂತು ಬೋಧಿಸು |
ತಿರಲು ಹಡಗೊಡೆದಬ್ಧಿಮಧ್ಯದೊ |
ೞಿರದೆ ಮುಱುಗಲು ಮುರಿದ ಕೂಪಸ್ತಂಭವನು ಸಾರಿ ||
ಭರದೊಳಾಶ್ರೀದತ್ತ ದ್ವೀಪಾಂ |
ತರವನೈದಿರಲಾಪ್ರದೇಶದಿ |
ನರನದೊರ್ವನು ಬಂದಿರಲು ಕಂಗೆಟ್ಟು ತಾ ನುಡಿದ || ೯

ಅರಸ ಕೇಳ್ ಶ್ರೀದತ್ತ ತನ್ನಯ |
ತೆಱನನಾತಂಗಱುಹಿ ಶೋಕಿಸು |
ತಿರಲವನು ಮಾತಾಡಿಸುತಲಾಬೞಿಕ ವಿಜಯಾರ್ಧ ||
ಗಿರಿಗೆ ಕೊಂಡುಯ್ದೊಂದು ಠಾವಿನೊ |
ಳುರುತರದಿ ಕುಳ್ಳಿರಿಸಿ ಸುಪ್ರಿಯು |
ತರದೊಳಾತಗೆ ಕಥೆಯ ಪೇೞುತ್ತಿರ್ದನೊಲವಿನಲಿ || ೧೦

ಪ್ರಣುತವಿಜಯಾಚಳದಿ ವರದ |
ಕ್ಷಿಣದೊಳುರುಗಾಂಧಾರವಿಷಯಾಂ |
ಗಣದಿ ನಿತ್ಯಾಲೋಕ ಪುರವುಂಟಲ್ಲಿ ಭೂಪಾಲ ||
ಮಣಿ ಗರುಡವೇಗಾಖ್ಯನೃಪ ಧಾ |
ರಿಣೀಯೆನಿಪ ಸತಿಸಹಿತಲಿಹನಾ |
ರೆಣೆ ಧರಿತ್ರಿಯೊಳಾನೃಪಗೆ ವೈಶ್ಯೇಂದ್ರ ಕೇಳೆಂದ || ೧೧

ಉರ್ವರೆಯೊಳನುನಯದೊಳಿರಲವ |
ರಿರ್ವರಿಗೆ ಜನಿಸಿದ ಲಸದ್ಗಂ |
ಧರ್ವದತ್ತೆಯೆನಿಪ್ಪ ಸುತೆಗೆ ವಿಲೋಲಯೌವನವು ||
ಪಾರ್ವರೀಕ್ಷಿಸಿ ಕೋಮಲೆಯ ನೀ |
ನೋರ್ವಗೀಯದೊಡಕ್ಕು ಪೞಿವೆನ |
ಲುರ್ವಿಪತಿ ತನ್ನರಸಿ ಧಾರಿಣಿಗೆಂದನೊಲವಿನಲಿ || ೧೨

ವರಕುಮಾರಿಗೆ ರಾಜಪುರಿಯೊಳು |
ಮೆಱೆವ ವೀಣೆಯೊಳೊಲಿಸಿದಾತನು |
ಪುರುಷನೆನೆ ಮೌಹೂರ್ತಿಕರು ಬೆಸಸಿರಲು ತಾನಾವ ||
ಪರಿಯೊಳದು ಘಟಿಸುವುದು ನಾವಾ |
ಪುರಿಗೆ ಹೋಹುದದಲ್ಲವೆಂದೆದೆ |
ಜಱಿದು ನೃಪ ಬೞಿಕೊಂದುಪಾಯವ ಕಂಡು ಸತಿಗೆಂದ || ೧೩

ರಾಜಪುರಿಯೊಳು ರಾಜರಾಜನ |
ಭಾಜನಾ ಶ್ರೀದತ್ತ ನೆರೆ ವಿ |
ಭ್ರಾಜಿಸುತ್ತಿಹನಾತನೆಮ್ಮ ಸುಮಿತ್ರನಾತನನು ||
ತೇಜವುನ್ನತೆಯಿಂ ವಣಿಗ್ವರ |
ರಾಜನನು ನಾಂ ಕರೆಸಿ ಮುದದಿ ತ |
ನೂಜೆಯನು ಕೈಗೊಟ್ಟೊಡಭಿಮತಸಿದ್ಧಿಯಹುದೆಂದ || ೧೪

ಅರಸಿ ಸಹಿತಾಸ್ಥಿತಿಯ ನೃಪ ನಿ |
ರ್ಧರಿಸಿ ಬಳಿಕೊಲವಿಂದಲೆನ್ನನು |
ಕರೆಸಿ ನಮ್ಮ ಸ್ನೇಹಿತನನೊಡಗೊಂಡು ಬಾಯೆನಲು ||
ಅರಸಿನಾಜ್ಞೆಯೊಳಬ್ಧಿಯೊಳು ನೀ |
ಬರಲು ಹಡಗೊಡೆದಂತೆ ವಿದ್ಯೋ |
ತ್ಕರದಿ ಮಾಡಿದೆ ನಿನ್ನನಿಲ್ಲಿಗೆ ತಂದೆ ನಾನೆಂದ || ೧೫

ಹಡಗೊಡೆದುದಿಲ್ಲೊಡವೆ ಸಹಿತೀ |
ತಡಿಯೊಳಿದೆ ನೋಡೆಂದು ಚರ ತಾ |
ನುಡಿಯೆ ಸಂತಸಬಟ್ಟು ನಿತ್ಯಾಲೋಕಪುರಿಗಾಗಿ ||
ನಡೆಯೆನುತಲಾವೈಶ್ಯಪತಿಯುವ |
ನೊಡನೆ ಬಂದಾಭೂಮಿಪಾಲಕ |
ನಡಿಗೆಱಗಲಾಸಖನ ಬಿಗಿಯಪ್ಪಿದನು ಲೀಲೆಯಲಿ || ೧೬

ಅರಸನಾಶ್ರೀದತ್ತನನು ಸ |
ತ್ಕರಿಸಿ ತನುಜೆಯ ಕೈಯೊಳಿತ್ತೆಲೆ |
ಪರಮಸಖ ನಿನಗೆನಗೆ ಭೇದಗಳುಂಟೆ ಮತ್ಸುತೆಗೆ ||
ಪುರುಷರತ್ನವನಾಪುರದೊಳನು |
ಕರಸೆನುತಲಾಸುತೆಯ ವೃತ್ತಾಂ |
ತರವನೊರೆದತಿತರದಿ ಬಿಗಿಯಪ್ಪಿದನು ಕೋಮಲೆಯು || ೧೭

ವರಕುಮಾರಿಗೆ ವಿವಿಧರತ್ನಾ |
ಭರಣವಸ್ತ್ರಾದಿಗಳ ಮೇಳದ |
ತರುಣಿಯರ ಸಾಸಿರವನಿತ್ತೆಲೆ ಮಗಳೆ ನಿನ್ನ ಪಿತ ||
ವರವಣಿಗ್ವರನೀತನೆಂದಾ |
ದರದೊಳೊಪ್ಪಿಸಿ ಕೊಟ್ಟು ಮಂಗಳ |
ತರದಪೂರ್ವದ ವಸ್ತುಗಳನೊಲಿದಿತ್ತು ಕಳುಹಿದನು || ೧೮

ಗರುಡವೇಗನ ಬೀೞುಕೊಂಡಾ |
ಪರದನಾಸುಕುಮಾರಿಸಹಿತಾ |
ಪುರಕೆ ಬಂದಂಗನೆಗೆ ತದ್ವೃತ್ತಾಂತವೆಲ್ಲವನು ||
ಅಱುಹಿ ಕಾಷ್ಠಾಂಗಾರನಾಜ್ಞೆಯೊ |
ಳುರುಸೊಯಂಬರಕೆಸೆವ ಲಗ್ನವ |
ಧರಣಿಯಮರರ ಕರೆಸಿ ನಿಶ್ಚೈಸಿದನು ಲೀಲೆಯಲಿ || ೧೯

ಬೞಿಕ ವಾಣಿಜವರನು ನೃಪಸಂ |
ಕುಳಕೆ ಲೇಖವ ಬರೆಸಿ ಪಾವುಡೆ |
ಗಳನೆಸಗಿ ಗಂಧರ್ವದತ್ತೆಯ ವರಸ್ವಯಂವರಕೆ ||
ಹೊೞಲಿಗೈತಹುದೆಂದು ಸಾರಿಸ |
ಲೊಲಿದು ಮಣಿಹಾಱರನು ಬೇಗದಿ |
ಕಳುಹಿ ತದನುಜ್ಞೆಯಲಿ ಶೃಂಗಾರಿಸಿದನಾಪುರವ || ೨೦

ಚಾರುರವಿಶಶಿವೀಥಿಗಳ ವಿ |
ಸ್ತಾರಗಳ ತರತರದ ಮಣಿದವ |
ಳಾರಗಳಲೆಸೆಯಿತ್ತು ತತ್ಪುರವಧಿಕವಿಭವದಲಿ ||
ತೋರಣದ ಸುಪತಾಕೆಗಳ ಶೃಂ |
ಗಾರಿಸಿದ ರಥತತಿಯ ರಮ್ಯಾ |
ಗಾರಗಳಲೆಸೆಯಿತ್ತು ತತ್ಪುರವಧಿಕವಿಭವದಲಿ || ೨೧

ಸಾರಕಸ್ತೂರಿಯ ಸುಗಂಧದ |
ಸಾರಣೆಯ ಕುಂಕುಮಜವಾಜಿಯ |
ಕಾರಣೆಯ ಮಣಿಮಯದ ನೆಲೆಗಟ್ಟುಗಳ ರಚನೆಗಳ ||
ಕೇರಿಕೇರಿಯ ಬೀದಿಗಳ ಘನ |
ಸಾರಧೂಳಿಯ ಹರವುಗಳ ಪ|
ನ್ನೀರ ಚಳೆಯದೊಳೆಸೆದುದಾಪುರವರಸ ಕೇಳೆಂದ || ೨೨

ನಿಳಯನಿಳಯದೊಳೆಸೆವ ಹೊಸಹೊಂ |
ಗಳಸಗಳ ಚೈತನ್ಯಚಿತ್ರಾ |
ವಳಿಯ ಬೆಸುಗೆಯ ಭಿತ್ತಿಗಳ ಮಣಿಖಚಿತಲೋವೆಗಳ ||
ಹೊಳೆವ ಮೇಲ್ಕಟ್ಟುಗಳ ನಭವು |
ಜ್ಜ್ವಳಿಪ ಹರ್ಮ್ಯಾಳಿಗಳ ಹೊಸಹೊಂ |
ಬೞಿಯಿಗೆಯ ರಚನೆಯಲಿ ಮಿಗೆ ರಂಜಿಸಿತು ರಾಜಪುರಿ || ೨೩

ವರಕನಕನವರತ್ನಮಯುವಿ |
ಸ್ಫುರಿತವಜ್ರಸ್ತಂಭಗಳ ಕಂ |
ಡರಣೆಗಳಲೊಪ್ಪಿರ್ದ ರಸುಮಿಪ ವಜ್ರಧಾರೆಗಳ ||
ಮೆಱೆವ ಭೃಂಗಾವಳಿಯ ಮುಕುರೋ |
ತ್ಕರದ ಘಂಟೆ ವಿಚಿತ್ರಭಿತ್ತಿಯ |
ಸುರುಚಿಂದ ವೈವಾಹಮಂಟಪವೆಸೆದುದೊಗ್ಗಿನಲಿ || ೨೪

ಹೊಳೆವ ಚಿತ್ರವಿತಾನಗಳೊಳು |
ಜ್ವಳಿಪ ಮಣಿಮಯಮಕರಮುಕುರಾ |
ವಳಿಯ ತೋರಣ ಪಂಚರತ್ನದಳಪ್ರಯುಕ್ತದಲಿ ||
ಬಳಸಿದಡೆ ಮಂಟಪಗಳಲಿ ಪು |
ತ್ತಳಿಗಳಲಿ ಮಣಿಖಚಿತಬಾಸಿಗ |
ಗಳಲಿ ತದ್ವೈವಾಹಮಂಟಪವೆಸೆದುದೊಗ್ಗಿನಲಿ || ೨೫

ಬಿಗಿದ ರತ್ನದ ಸೂಸಕದ ಲೋ |
ವೆಗಳ ಲೋಳಿಯೊಳೆಸೆವ ಹೊಂಗೆ |
ಜ್ಜೆಗಳಲಿಱುಹಿದ ಕುಸುಮಶರಸಂಕುಳದ ರಚನೆಯಲಿ ||
ನೆಗಹಿದಮಳಧ್ವಜತತಿಯ ಸಾ |
ಲುಗಳಲಾನೇಪಾಳಚವರಾ |
ದಿಗಳಲಾವೈವಾಹಮಂಟಪವೆಸೆದುದೊಗ್ಗಿನಲಿ || ೨೬

ಹೊಳೆವ ರೋಹಣಗಿರಿಯೊ ಭೂತಲ |
ಕಿೞಿದ ಪುಷ್ಪಕವೋ ರತೀಂದ್ರನ |
ನಿಳಯವೋ ದಿನಕರನ ರಥವೋ ಮೇಘದೊಡ್ಡುಗಳೋ ||
ತಳಿರ ಸುರಚಾಪವೊ ಸುವರ್ಣಾ |
ಚಲವೊ ತಾರಾಮಂಡಲವೊ ತಾ |
ನಿಳೆಗಿದೆನೆ ವೈವಾಹಮಂಟಪವೆಸೆದುದೊಗ್ಗಿನಲಿ || ೨೭

ಸೌರಭಾನ್ವಿತದಾಮ್ರನವಮಂ |
ದಾರಕದಳೀಸ್ತಂಭಗಳ ಕ |
ರ್ಪೂರಪೂಗದ ತೊಲೆಯಶೋಕಾದಿಗಳ ಪಟ್ಟಿಗಳ ||
ವಾರಿಜೋತ್ಪಲದರಲ ಹೊದಕೆಯ |
ಸೇರಿಸಿದ ಬಲ್ಲಾಳದದ್ದಿಗ |
ತೋರಣದಿ ಮೆಱೆದಿರಲು ಚಪ್ಪರವೆಸೆದುದೊಗ್ಗಿನಲಿ || ೨೮

ಬಲಿದ ಸೊದೆಗಳ ಕೂಪದಲಿ ಪರಿ |
ಮಳದ ಪನ್ನೀರುಗಳು ಮೆಱೆಕಿದುವು |
ಹೊಳೆವ ಹೊಂಗೊಪ್ಪರಿಗೆಯಲಿ ಶ್ರೀಗಂಧವಿಡಿದಿರಲು ||
ಲುಳಿತಮಣಿರಂಜಣಿಗೆಯೊಳಗು |
ಜ್ವಳಿಪ ಸಾದುಜವಾದಿಕರ್ದಮ |
ಬಳಸಿತೆನಲಿನ್ನುೞಿದುವನು ವರ್ಣಿಸುವನಾರೆಂದ || ೨೯

ಸೌರಭಾನ್ವಿತಭರಣಿಗಳ ಮದ |
ವಾರಣಂಗಳು ಹೇಱಿದುವು ಮಂ |
ದಾರವಾದಿ ಸುಪುಷ್ಪಗಳನಡಕಿದುವು ಭಂಡಿಗಳು ||
ಚಾರುವಸ್ತ್ರಾಭರಣಗಳನಾ |
ನಾರಿರತ್ನಾಭರಣಧಾನ್ಯವ |
ನಾರು ಹೊಗೞಲು ಬಲ್ಲರವನೀಪಾಲ ಕೇಳೆಂದ || ೩೦

ವರಸುಗಂಧಾದ್ಯಖಿಳವಸ್ತು |
ತ್ಕರದ ಸೀಮಾವಳಯದಲಿ ವಿ |
ಸ್ತರದಿ ನಿಲಿಸಿದ ಯಂತ್ರದಲಿ ಮಾಡಿಸಿದ ಪುತ್ತಳಿಕೆ ||
ಭರದಿ ಬೇಡುವ ಜನಕೆ ಬೇಡಿದ |
ಪರಮವಸ್ತುವನವರವರ ಸ |
ತ್ಕರದಿ ನೀಡುತ್ತಿಹವೆನಲು ವರ್ಣಿಸುವನಾರೆಂದ || ೩೧

ಪುರದ ಬಹಿರುದ್ಯಾನವನದಲಿ |
ಪರಿಪರಿಯ ಮಣಿಮಂದಿರದ ಉ |
ಪ್ಪರಿಗೆಗಳನೊಲವಿನಲಿ ಸಕಲನೃಪಾಲಸಂಕುಲಕೆ ||
ತರತರದಿ ವಿರಚಿಸುವ ಮಂಗಳ |
ಕರದ ವಿವಿಧದ್ರವ್ಯಗಳ ವಿ |
ಸ್ತರದೊಳಾಶ್ರೀದತ್ತನೆಸಗುತ್ತಿರ್ದನೊಲವಿನಲಿ || ೩೨

ಧರಣಿಪತಿ ಕೇಳಿತ್ತ ನಗರಾಂ |
ತರಗಳಲಿ ಗಂಧರ್ವದತ್ತೆಯ |
ವರಸ್ವಯಂವರಕವನಿಪಾಲರು ರಾಜಪುರವರಕೆ ||
ಭರವಸದಿ ಬಹುದೆಂದು ಚರರು |
ಬ್ಬರಿಸಿ ಸಾಱುತ್ತಿರಲು ಕೇಳ್ದತಿ |
ಹರುಷದಲಿ ಭೂಮಿಪರು ಕೆರಳುತ್ತಿರ್ದರೊಲವಿನಲಿ || ೩೩

ಧರೆಯೊಳಬ್ಧಿಯ ಘೋಷವಖಿಳಾಂ |
ಬರದಿ ಮೇಘನಿನಾದ ವಿಪಿನಾಂ |
ತರದಿ ಸಿಂಹಾರಾವ ದಿಗ್ವಲಯದಲಿ ದಿಗಿಭರವ ||
ಗಿರಿಗಳಲಿ ನಿರ್ಝರನಿನದ ವಿ |
ಸ್ತರದೊಳುದಿಸಿತೆನಲ್ಕೆ ಭೂಮಿಾ |
ಶ್ವರರ ಪಯಣದ ಭೇರಿಭಾಂಕೃತಿ ತುಂಬಿದುದು ಜಗವ || ೩೪
ಧರಣಿಯೆಲ್ಲ ರಥಾಶ್ವಭಟಕುಂ |
ಜರದ ಮಯವಂಬರ ಚಳಚ್ಚಾ |
ಮರಪತಾಕಾಥತ್ರ ಸೀಗುರಿ ಸಿಂಧ ವಸ್ತ್ರಮಯ ||
ವರದಿಶಾವಳಿಯಶ್ವಹೇಷಾ |
ಸ್ವರದ ಬೃಂಹಿತಪಂಚವಾದ್ಯೋ |
ತ್ಕರದ ಮಯ ತಾನಾಗೆ ನಡೆದುದು ಸಕಲಭೂಮಿಪರು || ೩೫
ತ್ವರಿತದಲಿ ಬರ್ಪಖಿಳಭೂಮಿಾ |
ಶ್ವರರ ಚಾತುರ್ಬಲದ ಭಾರಕೆ |
ಧರೆ ರಸಾತಲಕದ್ದುದಾಶಾಕರಿಗಳೊಱಗಿದುವು ||
ಉರಗಪತಿ ತಲೆವಾಗಿದನು ತ |
ದ್ಭರದೊಳಾಕಮಠೇಂದ್ರನೆದೆ ನೆರೆ |
ಬಿಱಿದುದೆನಲುಗ್ಗಡದಿ ನಡೆದುದು ಸಕಲನೃಪಕಟಕ || ೩೬
ವರಮಹೀಪಾಲಕರು ಘನ ಸೀ |
ಗುರಿ ಚಮರ ವಿವಿಧಾತಪತ್ರೋ |
ತ್ಕರದಿ ನೆಗಪಿದ ಶಸ್ತ್ರಸಮಿತಿಯ ಸಂದಣಿಗಳಿಂದ ||
ತರಣಿ ಚಂದ್ರ ಸಮಿಾರ ವಿದ್ಯಾ |
ಧರ ಸುರಾವಳಿ ಪಕ್ಷಿಜಾತಿಗೆ |
ಚರಿಸಲೆಡೆಯಿಲ್ಲಂಬರದೊಳವನೀಶ ಕೇಳೆಂದ || ೩೭
ಧರಣಿ ಹೇಷಾರವವು ಗಜವಿ |
ಸ್ತರದ ಬೃಂಹಿತನಾದ ಭಟರ |
ಬ್ಬರಣೆ ರಥಚೀತ್ಕಾರ ಪರವಾದ್ಯಗಳ ಭಾಂಕೃತಿಯು ||
ವರಸುವಸ್ತ್ರಾಭರಣರವವಾ |
ವರಿಸೆ ವಾರಿಧಿ ಮೇರೆದಪ್ಪಿದ |
ಪರಿಯೊಳಖಿಳನೃಪಾಲಕರು ಬರುತ್ತಿರ್ದರೊಗ್ಗಿನಲಿ || ೩೮

ತೆಱಹ ಬಿಡು ಸಮ್ಮುಖಮುಖಾ ಎಂ |
ದುಱುಬಿ ಹೊಯ್ಯುತ ಕನಕದಂಡೋ |
ದ್ಧರರುಲಿಯೆ ಕವಿಗಮಕಿವಾಗ್ಮಿಗಳ್ಳೈದೆ ಕೊಂಡಾಡೆ ||
ಆರರೆ ಭಲರೇ ಧಿರುಧಿರೆಂದ |
ಬ್ಬರಿಸೆ ಭಟ್ಟರು ಭೂಸುರಾವಳಿ |
ನೆರೆಯೆ ಮಂತ್ರಾಕ್ಷತೆಗಳಿಂದೈತಂದರವನಿಪರು || ೩೯
ಭರವಶದಿ ಗಂಧರ್ವದತ್ತೆಯು |
ವರಸ್ವಯಂವರಕೂರ್ಧ್ವಲೋಕೇ |
ಶ್ವರರು ದಿಕ್ಪಾಲಕರು ಬಹುದೆಂದಾಯಿಳಾಕಾಂತೆ ||
ಕರೆಯೆ ಹೋದಳೆನಲ್ಕೆ ಧರಣೀ |
ಶ್ವರರ ಘನ ಚತುರಂಗಪದಹತ |
ದುರುತರದ ರಜ ಮುಸುಕಿತಬ್ಜಭವಾಂಡಮಂಡಲವ || ೪೦
ಲಲಿತ ಭೇರಿ ಮೃದಂಗ ಹರೆ ಮ |
ದ್ದಳೆ ಗವಾಮುಖ ಡಕ್ಕೆ ಘನ ದಾಂ |
ಬುಳಿ ಮುರಜ ನಿಸ್ಸಾಣ ಡಿಂಡಿಮ ಡೌಡೆ ನಾಗಸರ ||
ಕೊಳಲು ತಂಬಟೆ ಶಂಖ ಕಹಳಾ |
ವಳಿ ಚಮರವಾದ್ಯಖಿಳವಾದ್ಯಂ |
ಗಳಲಿ ನೃಪರೈತಂದರಾಪುರಿಗಧಿಕವಿಭವದಲಿ || ೪೧
ಧರಣಿಪಾಲರು ಕೆಲರೊಳೊಬ್ಬೊ |
ಬ್ಬರ ಸುತೇಜೈಶ್ವರ್ಯಬಲಸೌಂ |
ದರಿಯವೀಕ್ಷಿಸಿ ನಾಚಿ ನೆರೆ ಮನಗುಂದಿ ನಾವಿಂದು ||
ಮರಳಬೇಕೀಭೂಮಿಪಾಲಕ |
ರಿರಲು ನಮ್ಮನದಾರಱಿವರೆಂ |
ದಿರದೆ ಜರಿದೊಳಸರಿಯು ಒಗೆದರು ಭೂಪ ಕೇಳೆಂದ || ೪೨
ಮರಳಲನುಗೆಯ್ದಾನೃಪರು ಶಂ |
ಬರವಿರೋಧಿಯು ಶರದಿ ನೊಂದೆದೆ |
ಜರಿದು ಮುನ್ನ ಸರೋಜಭವ ಭಾಳದಲಿ ಬರೆದುದನು ||
ಒರಸಲಾರಳೀಕೆ ತಮುಗನು |
ಕರಿಸಿದಪಳೋ ತಮ್ಮ ಭಾಗ್ಯವ |
ನಱಿವರಾರೆಂದೊಸೆದು ಮಗುೞದೆ ಬಂದರೊಗ್ಗಿನಲಿ || ೪೩

ಧರಣಿಪಾಲಕರಿಂತು ವಿಭವದಿ |
ಬರಲು ಕಾಷ್ಠಾಂಗಾರ ಸಹಿತಾ |
ಪರದ ವಿಭವದೊಳಿದಿರುಗೊಂಡುಪಚರಿಸಿ ಮಣಿಮಯದ ||
ಅರಮನೆಯೊಳವರವರ ಹವಣರಿ |
ದರಸುಗಳ ನೆರೆ ಬಿಡಿಸಿ ವಾಣಿಜ |
ವರನು ನಾಂದೀಮುಖವ ಬಳಿಕೊಂದಿಸಿದನೊಲವಿನಲಿ || ೪೪

ಪರಮಶಾಸ್ತ್ರಕ್ರಮದಿ ಭೂಮೀ |
ಸುರರು ಮುದದಿಂ ಪೂರ್ವವೇದಿಯು |
ವಿರಚಿಸಲು ಶ್ರೀದತ್ತನಾಮಯುಗವಸ ದೂತರನು ||
ಕರೆದು ಭೂಪರ ಪಾಳೆಯದೊಳಂ |
ಬುರುಹಮುಖಿಯ ಸುಭಾಗ್ಯದಬ್ಧಿಯ |
ಸಿರಿಯ ಪರಿಣಯವೆನುತ ಸಾರುವುದೆಂದು ನಿಯಮಿಸಿದ || ೪೫

ವರವಣಿಗ್ವರನಾಜ್ಞೆಯಿಂದಾ |
ಚರರು ಡಂಗುರವೆಸಗಿ ಕಾಂತೆಯ |
ಪರಮಸೌಭಾಗ್ಯದ ಲಸತ್ಪ್ರೀಯಯೂಷವಾರ್ಧಿಯಲಿ ||
ಭರದಿ ಮುಳುಗಿ ಕೃತಾರ್ಥರಹುದೆಂ |
ದರಸುಗಳ ಪಾಳೆಯದೊಳತಿವಿ |
ಸ್ತರದಿ ಸಾರುತ್ತಿರ್ದರಬಲಾಮಣಿಯ ಸಡಗರವ || ೪೬

ಲುಳಿತವಾಯೆಯು ಗಾಹುಗತಕದ |
ಬಳೆಯನಳವಡಿಸುವುದು ವಶ್ಯದ |
ತಿಳಕವಿಟ್ಟು ವಶೀಕರಣವೆಸಗುವುದು ಸೊಬಗುಗಳ ||
ಸುಳಿಸಿ ಮೋಹನಮದ್ದುಗಳ ತಾ |
ಳ್ದೊಲಿಸುವುದು ಮನಸಿಜನ ಕಾಳೆಗ |
ಕಳುಕದಿದಿರಹುದೆಂದು ಸಾರಿದರಬ್ಧಿಘೋಷದಲಿ || ೪೭

ಈತೆರದಿ ಸಾರಲ್ಕೆ ಕೇಳಿ ಮ |
ಹೀತಳೇಶರು ಮೇಘರವವನು |
ಚಾತಕಂಗಳು ಕೇಳಿದಂತಾನಂದಲೀಲೆಯಲಿ ||
ನೂತನಂಗೋದ್ಭವನಪೋಲು ನಾ |
ನಾತೆರದಿ ಕೈಗೆಯ್ದು ವಿಭವದೊ |
ಳಾತತುಕ್ಷಣ ಮಂಟಪಕೆ ಬರುತಿರ್ದರೊಲವಿನಲಿ || ೪೮

ಶರಧಿ ರತ್ನಸ್ತೋಮದಿಂದಂ |
ಬರವು ಭಗಣಾನೀಕದಿಂ ವಿ |
ಸ್ಫುರಿತಮೇರು ಸುರದ್ರುಮಾವಳಿಯಿಂದೆ ಕಾಸಾರ ||
ವರಮರಾಳದೊಳುರ್ವಿ ರೋಹಣ |
ಗಿರಿಯೊಳೆಸೆವಂದದಲಿ ಮಂಟಪ |
ಮೆಱೆದುದಖಿಳನೃಪಾಲರಿಂದವನೀಶ ಕೇಳೆಂದ || ೪೯

ಧರಣಿಪತಿ ಕೇಳೀಚೆಯಲಿ ಪರಿ |
ಪರಿಯ ಶೃಂಗಾರಾನ್ವಿತದಿ ತ |
ನ್ನೆರಡು ಪಾರ್ಶ್ವದಿ ಮುದದೊಳೈನೂರ್ವರು ಕುಮಾರಕರು ||
ಬರೆ ಗಜೇಂದ್ರನನಡರಿ ಜಿತಶಂ |
ಬರನವೊಲು ಜೀವಂಧರನು ತ |
ನ್ನರಮನೆಯ ಭರದಿಂದ ಹೊಱವಟ್ಟನು ಸುಲೀಲೆಯಲಿ || ೫೦

ವರಮುಖೇಂದುವಿಗಳುಕಿ ಗಗನಕೆ |
ಸರಿಯೆ ಕೀರ್ತಿಯನಟ್ಟಿ ಮಗುೞ್ದೊಡ |
ವೆರಸುವನು ಹಗೆಸಲ್ಲದೀತನ ಕಾಂಬುದನುವೆಂದು ||
ಭರದೊಳುಡುಪರಿವಾರಸಹಿತುರು |
ತರದಿ ಶಶಿ ನಡೆತಂದನೆನಲಂ |
ದರಸಗೊಪ್ಪಿತು ಮೌಕ್ತಿಕದ ಪೊಸ ಛತ್ರವೊಗ್ಗಿನಲಿ || ೫೧

ವಿಭವದಿಂದೀಪರಿಯೊಳಂಗಜ |
ನಿಭನು ಗಜದಿಂದಿೞಿದು ಭೂಪರ |
ಸಭೆಯ ಮಧ್ಯದ ಸಿಂಹಪೀಠವನಡರೆ ದೇವರೊಳು ||
ಅಭವ ಜಿನಪತಿ ಮೆಱೆವ ವಿಧದಿಂ |
ದಭಿನವಕ್ಷಿತಿಪಾಲನಿಚಯದೆ |
ಸುಭಗ ಜೀವಂಧರನು ರಂಜಿಸಿದನು ಸುತೇಜದಲಿ || ೫೨

ಸರಸಿಜಕ್ಕೆಱಗುವಳಿ ಚಂಪಕ |
ಕೆಱಗುವುದೆ ನವಚೂತಫಲವುೞಿ |
ದೆರೆದ ಪಣ್ಗೊಂದುವುದೆ ಶುಕವೀಸಕಲಭೂಮಿಪರು ||
ಬಱಿದೆ ನೆರೆದರದೇಕೆ ಜೀವಂ |
ಧರನನೀಕ್ಷಿಸಿದಬಲೆ ತಮಗನು |
ಕರಿಸುವಳೆಎಂದಾಕುಮಾರನ ಹೊಗೞಿತಮರಗಣ || ೫೩

ಅರಸ ಕೇಳಾಪರಿಯಿನಂದು |
ರ್ವರೆಯ ಭೂಮಿಪರಿಪ್ಪ ಮಣಿವಿ |
ಸ್ಫುರಿತಶುಭಮಂಟಪದ ಮಧ್ಯದಿ ಘೋಷವತಿಯೆಂಬ ||
ಮೆಱೆವ ಮಣಿಮಯವೀಣೆಯನು ತಂ |
ದಿರಿಸಿ ಸುತ್ತ ವಿಪಂಚಿನಿಚಯವ |
ನೆರಹಿ ಗಂಧಾಕ್ಷತೆಗಳಿಂದರ್ಚಿಸಿದರೊಲವಿನಲಿ || ೫೪
ಭಾಸುರದೊಳಾವೀಣೆಯನು ಧರ |
ಣೀಸುರರು ನೆರೆದರ್ಚಿಸಲು ಪರಿ |
ತೋಷದಿಂದಲ್ಲಿಗೆ ಸಮಸ್ತಕಲಾವಿಶಾರದರು ||
ದೇಶದೇಶದ ಮಾಗಧರು ಪರಿ |
ಹಾಸಕಾಱರು ವಾದಿಗಳು ಸುವಿ |
ಳಾಸದಿಂದೈತಂದು ಮುಸುಕಿತು ಚಾರುಚಪ್ಪರವ || ೫೫
ಪರಮಮುನಿಗಳು ಪಂಡಿತರು ಷ |
ಡ್ದರುಶನೋತ್ತಮಕೋವಿದರು ಮ |
ಲ್ಲರು ಸುಚಿತ್ರಿಕರಕ್ಷರಜ್ಞರು ಲಕ್ಷಣಾನ್ವಿತರು ||
ಸರಸವೈದಿಕಶ್ರೋತ್ರಿಯರು ದೀ |
ನರು ಬಧಿರಮೂಕಾಂಧವಾಮನ |
ರಿರದೆ ತಾವೈತಂದು ಮುಸುಕಿತು ಚಾರುಚಪ್ಪರವ || ೫೬
ಭಟರುಗಳು ವಿದ್ವಾನುಗಳು ವಾ |
ಕ್ಪಟುಯುತರು ಪಾಠಕರು ವಿಬುಧೋ |
ತ್ಕಟವಿಶಾರದರಮಳಗುಣಯುತರೆಸೆವ ನಾಗರಿಕ ||
ವಿಟವಿದೂಷಕಪೀಠಮರ್ದನ |
ನಟಗಮಕಿಗಾಯಕರು ಮಿಗೆ ಸಂ |
ಕಟಿಸಿ ಮೆಱೆದುದು ಚಪ್ಪರದೊಳವನೀಶ ಕೇಳೆಂದ || ೫೭
ಧರಣಿಪತಿ ಕೇಳ್ ಮೇಲೆ ಸುರಕಿ |
ನ್ನರ ಗರುಡ ಗಂಧರ್ವ ವಿದ್ಯಾ |
ಧರಖಚರಕಿಂಪುರುಷಯಕ್ಷರು ಸಿದ್ಧಸಾಧ್ಯಾಳಿ ||
ವರಮನುಗಣಾಧಿಪರು ಮೇಣ್ ಗಣ |
ಧರರು ತಾರಾಗ್ರಹಸುರಾಂಗನೆ |
ಯರು ವಿಲಾಸದಿ ನೆರೆದರೆಸೆವ ವಿಮಾನಪಙ್ಕ್ತಿಯಲಿ || ೫೮

ಕುಂಭಿಣೀಶರ ಸಭೆಯೊಳಗೆ ವಿ |
ಜೃಂಭಿಸುವ ತೂರ್ಯತ್ರಯವನೇ |
ನೆಂಬೆ ವೃಷನುಗ್ಗಡಣೆ ಭರತನ ಪಟುಮಹಾರವಕೆ ||
ತುಂಬುರರ ಸಂಗೀತವೂರ್ವಶಿ |
ರಂಭೆಯಾಡುವ ನೃತ್ಯಕಿದು ಪ್ರತಿ |
ಬಿಂಬವಾಯ್ತೆನಲಿಂತಿದನು ವರ್ಣಿಸುವನಾರೆಂದ || ೫೯

ವರರ ಸಂಸ್ಥಾಪನೆಯ ಹಸ್ತಾ |
ದ್ಯುರುತರಾಕ್ಷಿಪ್ರಸರದಾಪರಿ |
ಪರಿಯ ಚಿತ್ರದ ಸಾತ್ವಿಕಾಂಗದ ಸುಗತಿವಿಭ್ರಮದ ||
ಸ್ಥಿರ ವಿಷಮ ಸಮಕರಣ ಲಯ ಗತಿ |
ತಿರುಪು ಕುಸುರಿ ಕಳಾಪಗಳಲಾ |
ತರುಣಿಯರು ಕೀರ್ತಿಸಿಯೆ ಮೆಚ್ಚಿಸಿದರು ಮಹಾಸಭೆಯ || ೬೦

ಲಲಿತವೀಣಾವಾದ್ಯರವ ಕೋ |
ಮಲಮೃದಂಗಧ್ವನಿ ನಟವ್ರಜ |
ದುಲುಹು ತಾಳದ ಘೋಷ ಕಹಳಾರಾವ ಗೀತರವ ||
ಸುಲಲಿತದಿ ನರ್ತಿಸುವ ಕಾಂತಾ |
ವಳಿಯ ಕಂಕಣನೂಪುರಧ್ವನಿ |
ಯೊಲವಿನಿಂದುಱೆ ಮುತ್ತಿ ಮುಸುಕಿತು ಚಾರುಚಪ್ಪರವ || ೬೧

ಚಾರುಸ್ವರ್ಗದ ಸೌಖ್ಯವೋ ಸಂ |
ಸಾರಫಲವೋ ವಿತತಕಾವ್ಯದ |
ಸಾರವೋ ನೂತನಲಸತ್ಸುಧೆಯೋ ರಸಾವಳಿಯೋ ||
ವಾರಿಧಿಯೊ ತ್ರೈಲೋಕ್ಯಸಾರಾ |
ಸಾರವೋ ತೂರ್ಯತ್ರಯದ ವಿ |
ಸ್ತಾರಮೇಳಾಪಪ್ರಸೌಖ್ಯವ ಹೊಗಳ್ವನಾರೆಂದ || ೬೨

ಇದು ವಿನಮದಮರೇಂದ್ರ ಶ್ರೀಜಿನ |
ಪದಕಮಲಷಟ್ಚರಣ ವಾಣೀ |
ವದನದರ್ಪಣ ಭೂಸುರೋತ್ತಮ ಬಸವಣಾಂಕಸುತ ||
ಚದುರ ಭಾಸ್ಕರರಚಿತ ಧರ್ಮ |
ಪ್ರದನ ಜೀವಂಧರನ ಚರಿತೆಯೊ |
ಳಿದು ಸೊಯಂವರ ಮಂಟಪಸ್ತುತಿಯರಸ ಕೇಳೆಂದ || ೬೩

ಏಳನೆಯ ಸಂಧಿ ಮುಗಿದುದು.

---

## ಎಂಟನೆಯ ಸಂಧಿ.

---

ಸೂಚನೆ|| ಪೊಡವಿಪಾಲರ ಸಭೆಗೆ ಕೋಮಲೆ |
ನಡೆಗೆವಂದಿನಿಯನ ನಿರೀಕ್ಷಿಸಿ |
ಕುಡಿತೆಗಣ್ಣಲಿ ಮೊಗೆದು ಸೂಸಿದಳಖಿಳಭೂಮಿಪರ ||

ಕೇಳು ಮುದದಿಂ ಮಗಧಭೂಮಿಪಾ |
ಪಾಳ ವೈಶ್ಯಾಧೀಶನಿತ್ತಲು |
ಮೇಳದವನೀಪಾಲಕರನುಪಚರಿಸಿ ತಾ ಬಳಿಕ ||
ಆಳಯುಕೆ ಬಂದಬಳೆಯರ ಕರೆ |
ದೇಳಿ ಲಗ್ನ ಸಮೀಪವಾಗಿದೆ |
ಬಾಳಕಿಯ ಶೃಂಗಾರಿಸುವುದೀಗೆಂದು ನಿಯಮಿಸಿದ || ೧

ವರವಣಿಗ್ವರನಾಜ್ಞೆಯಲಿ ಪಂ |
ಕರುಹದಳನೇತ್ರೆಯರು ಕಾಂತೆಯ |
ಹೊರೆಗೆ ನಡೆತಂದೆಸೆವ ಕುಂಕುಮರಜದೊಳವಯುವವ ||
ಉರುತರದೆ ತಾಂ ತಿಗುರುತತಿವಿ |
ಸ್ತರದಿ ಮಜ್ಜನವೆಸಗಿ ತದನಂ |
ತರದೊಳಾಕೋಮಳೆಯ ಶೃಂಗಾರಿಸಿದರಬಲೆಯರು || ೨

ಲಲಿತಚಂಪಕದಳಕೆ ಬೆಳುದಿಂ |
ಗಳ ತಗಡ ಪುದಿದಂತೆ ಧವಳಾ[ಂ] |
ಚಲವೆಸಗಿ ಚಕ್ರದ್ವಯಕೆ ಗವಸಣಿಗೆಬಿಗಿದಂತೆ ||
ಸಲಿಸಿ ಕಂಚುಳಿಕೆಯ ಮುಖಾಂಬುಜ |
ಕೆಳಸಿದಳಿಯೆನೆ ಹಣೆಗೆ ಮೃಗಮದ |
ತಿಲಕವನು ವಿಸ್ತರಿಸಿ ಶೃಂಗಾರಿಸಿದರಬಲೆಯರು || ೩

ವರವಿಧುಂತುದನಿಂದುಕಲೆಗಳ |
ನಿರದೆ ನುಂಗಿಯೆ ಮಗುಳ್ದುಗುಳ್ದಾ |
ತೆಱದೆ ವೇಣಿಯೊಳೆಸೆವ ಕುಸುಮವನಿರಿಸಿ ಮನಸಿಜನ ||
ಶರಕೆ ಚಾಪವನೂಡುವಂತುರು |
ತರದ ನೇತ್ರದೊಳಂಜನವನನು |
ಕರಿಸಿ ಶೃಂಗಾರಿಸಿದರಬಲೆಯುರಾವಧೂಮಣಿಯ || ೪

ಕುಸುಮಶರನಿಭಕುಂಭಗಳಲೊಂ |
ದಿಸಿದ ಜಯಕೀರಿತಿಯುಮೊಗಮೆನ |
ಲೆಸೆವ ಕುಚದಲಿ ಪತ್ರಭಂಗಂಗಳನು ಮೇಳೈಸಿ ||
ಸಸಿಗೆ ಶುಕ್ರನ ಸೇರಿಸಿದರೆನ |
ಲೆಸೆವ ಮುಖಮಂಡಲಕೆ ಮೂಗುತಿ |
ಯೆಸಗಿ ಕೈಗೈದರು ಮೃಗಾಕ್ಷಿಯರರಸ ಕೇಳೆಂದ || ೫

ಅರಲ ಬಾಣಕೆ ಗಱಿಯ ಕಟ್ಟುವ |
ತೆಱದೊಳಂಗುಳಿಗಳಲಿ ಮುದ್ರೆಯ |
ತುಱುಗಿ ಶಶಿ ದೋಷಾಕರನು ನಿಂದೆಡೆಯೊಳಿಹೆನೆಂದು ||
ಚರಣಕೆಱಗಿದ ಭಗಣವೆನೆ ನೇ |
ವುರವೆಸಗಿ ಪುಳಿನವನು ಹೊಂದಾ |
ವರೆಯ ಲತೆ ಬಳಸಿರ್ದುದೆನಲಿಕ್ಕಿದರು ಮೇಖಲೆಯ || ೬

ಗುರು ಪಯೋಧರಮಂಡಲದ ಬಂ |
ಧುರದ ಪರಿವೇಷವಿದೆನಲು ಕಂ |
ಧರಕೆ ಹಾರವನೆಸಗಿ ಮನಸಿಜವಶ್ಯಯಂತ್ರವನು ||
ಬರೆವವೊಲು ಗಂಧದಲಿ ಚಿತ್ರೋ |
ತ್ಕರಮಕರಿಕಾಪತ್ರವನು ವಿ |
ಸ್ತರಿಸಿ ಶೃಂಗಾರಿಸಿದರಬಲೆಯುರಾವಧೂಮಣಿಯ || ೭

ಚರಣಶೋಭೆಗಳಿಂದ ನೇವುರ |
ಮೆಱೆಯೆ ಕದಪುಗಳಿಂದ ಕರ್ಣಾ |
ಭರಣವೆಸೆಯಲು ಕಾಂಚಿ ಜಘನೋನ್ನತದಿ ರಂಜಿಸಲು ||
ಕರದ ಚೆಲುವಿಕೆಯಿಂದ ಮಣಿವಿ |
ಸ್ಫುರಿತಕಂಕಣವೆಸೆಯೆ ಸತಿಯಾ |
ಭರಣಗಳಿಗಾಭರಣವಾದಳು ಚಿತ್ರವಾಯ್ತೆಂದ || ೮

ತೋರವೊಲೆಗಳ ಡಾಳದಲಿ ಮಣಿ |
ಹಾರ ಮೆಱೆಯಲು ಬೆರಲಿನಿಂ ವಿ |
ಸ್ತಾರಿಸಲು ಮಣಿಮುದ್ರೆ ಭುಜದಿಂ ತೋಳ ಬಂದಿಗಳು ||
ಚಾರುಬಿಂಬಾಧರದ ಮಣಿ ಹೊಳ |
ಹೇಱೆ ದೇಹಾಂಶುಗಳೊಳತಿ ಶೃಂ |
ಗಾರಿಸಿದರಾಭರಣವೆನೆ ವರ್ಣಿಸುವನಾರೆಂದ || ೯
ತರುಣಿಯರಿಗಾಸತಿಯ ರೂಪನು |
ಧರಿಸಿ ಬಱಲದು ಚಿತ್ತ ದೇಹದಿ |
ಚರಿಸಿ ನೊಗ್ಗದು ನೋಟ ಸುಯ್ಗಂಪಲ್ಲದುಱಿದಾದ ||
ಪರಿಮಳಕೆ ಮೂಗೇಱದಾಕೆಯ |
ಸರಸವಾಕ್ಪೀಯೂಷ ಕಿವಿಗಳಿ |
ಗರುಚಿಯಿಲ್ಲೆನೆ ಸತಿಯ ರೂಪನು ಪೊಗೞ್ವನಾರೆಂದ || ೧೦
ಲಲಿತವದನವ ನೋಡಿ ನೋಟಕೆ |
ಬಱಿಕ ಸಮಯವದುಂಟೆ ಕೇಶದಿ |
ಸಿಲುಕೆ ಬಿಡಿಸುವರಾರು ನಾಭ್ಯಾವರ್ತದೊಳಗಿೞಿಯೆ ||
ತಳೆವರಾರು ಕಟೀಸ್ತನಂಗಳಿ |
ಗೆಳಸಿ ಜನರಾಲೋಕನವ ಭ್ರಮೆ|
ಗೊಳಿಸಿ ತಾನಿಲ್ಲೆನಲು ಕಾಂತೆಯ ಪೊಗೞ್ವನಾರೆಂದ || ೧೧
ಚರಣ ತುಂಬಿದ ಮೃದುಗತಿಯ ಪೇ |
ರುರವು ತುಂಬಿದ ಕುಚದ ಮೊಗ ವಿ |
ಸ್ತರದಿ ತುಂಬಿದ ನಯನಪರಭಾಗಪ್ರಪೂರಿತದ ||
ಗುರುಕಟಿಯ ತನು ತೀವಿದತಿಸೌಂ |
ದರಿಯ ಜವ್ವನದಿಂದ ಜಿತಶಂ |
ಬರನು ಮುದ್ರಿಸಿದರಳ ಸರದಂತೆಸೆದಳಿಂದುಮುಖಿ || ೧೨
ಮೆಱೆವ ರತ್ನಾಭರಣರುಚಿಗಳ |
ಜಱೆದುದಂಗನಿಜಾಂಶುವದನಾ |
ವರಿಸಿ ನುಂಗಿತು ದಂತಕಾಂತಿಗಳಾಪ್ರಭೆಯನೊದೆದು ||
ತುಱುಗಿತಾಸ್ಯನಿಜಾಂಶು ವದನಾಂ |
ತರದೊಳೊಡೆಹಾಯ್ದ್ದಮಳನೇತ್ರದ |
ಕಿರಣವೆಸೆದುದದೇನನೆಂಬೆನು ರೂಪನಾಸತಿಯ || ೧೩

ತರುಣಿಯನು ಶೃಂಗಾರದನುಪಮ |
ಸರಣಿಯನು ಸೌವರ್ಣಮಯಕಂ |
ಧರಣಿಯನು ನವದಿವ್ಯಸೌಗಂಧಪ್ರಪೂರಿತದ ||
ಭರಣಿಯನು ರತಿಪತಿಯ ವಿಲಸ |
ತ್ಕರಿಣಿಯನು ಮುಗ್ಧೆಯನು ದೃಗ್ಜಿತ |
ಹರಿಣಿಯನು ವರ್ಣಿಸುವನಾರವನೀಶ ಕೇಳೆಂದ || ೧೪

ಗಾಣಿಯನು ಮೃದುಪಾಣಿಯನು ಶುಕ |
ವಾಣಿಯನು ಕಾಳಾಹಿಸನ್ನಿಭ |
ವೇಣಿಯನು ಕಲ್ಯಾಣಿಯನು ಕಂದರ್ಪನೊಲಿದಡರ್ವ ||
ಏಣಿಯನು ಸೌಂದರ್ಯಜಿತಶ |
ರ್ವಾಣಿಯನು ಘನವೃತ್ತಪುಳಿನ |
ಶ್ರೋಣಿಯನು ಸೌಜಾಣೆಯನು ವರ್ಣಿಸುವನಾರೆಂದ || ೧೫

ಸ್ಥಿರದ ವಿದ್ಯುಲ್ಲತೆಯೊ ಮುಗಿಯದ |
ಸರಸಿಜವೊ ಅಗಲದ ರಥಾಂಗವೊ |
ಮೊರೆಯದಳಿಗಳೊ ಕಱನವಿಲ್ಲದ ಮಣಿಯೊ ಸೌಗಂಧ ||
ಬೆರಸಿದನುಪಮಚಂಪಕವೊ ನೆರೆ |
ಕರಗದಿಂದುವನಾಯುತಂಗಜ |
ವಿರಚಿಸಿದನೆನಲೆಸೆದಳಾಸತಿಯರಸ ಕೇಳೆಂದ || ೧೬

ಗಿಳಿಯೆಱಗದೆಳಗೊಂಬೊ ಪಿಕವೆಂ |
ಜಲಿಸದೊಪ್ಪುವ ತಳಿರೊ ಷಟ್ಪದ |
ನಿಲುಕದುತ್ಫುಲ್ಲಪ್ರಸೂನವೊ ಕಂತುಮುದ್ರಿಸದ ||
ಅಲಗೊ ಬಳಸದ ಸುಧೆಯೊ ಬೇಗಡೆ |
ಗಳೆಯದನುಪಮರತ್ನವೋ ಎನ |
ಲಳಿಕುಳಾಳಕಿಯೆಸೆದಳವನೀಪಾಳ ಕೇಳೆಂದ || ೧೭

ಸುದತಿಯಾಸ್ಯ ಶರೀರ ದೃಕ್ಕುಚ |
ವಿಧು ತಟಿಲ್ಲತೆ ಕುಮುದ ಚಕ್ರಗ |
ಳೊದವಿ ಬೆರಸಲು ತಿಳಿಯಲರಿದೆಂದವಕೆ ಕುಱುಹುಗಳ ||
ಪದುಮಭವನು ಕಳಂಕನಚಿರಾ |
ಸ್ಪದವ ಕೇಸರಪಕ್ಷಗಳ ಮಾ |
ಡಿದನೊ ತಾನೆನಲಬಲೆಯನು ವರ್ಣಿಸುವನಾರೆಂದ || ೧೮

ತರುಣಿಯಕ್ಷಿಪ್ರಭೆ ಮುಸುಕೆ ತರ |
ಹರಿಸಲರಿಯದೆ ತೃಣವ ಕರ್ಚಿದು |
ವೆರಲೆಗಳು ಮುಖದಂದವನು ಕಂಡಂಬರಕೆ ನಾಚಿ ||
ಸರಿದನಿಂದು ಕುಚದ್ವಯುವ ಕಂ |
ಡಿರದೆ ಚಕ್ರದ್ವಂದ್ವ ಹೊಕ್ಕುವು |
ಸರವನೆನಲಾಸತಿಯನಭಿವರ್ಣಿಸುವನಾರೆಂದ || ೧೯

ಅಳಿಗಳಾಕೆಯ ಕುಂತಲವ ಕಂ |
ಡಳುಕಿ ಭ್ರಮಿಸಿದುವಾಸತಿಯ ಸ |
ಲ್ಲಲಿತಯಾನವ ಕಂಡಡವಿಹೊಕ್ಕುವು ಮದೇಭಚಯ ||
ನಳಿನನೇತ್ರೆಯ ನಡುವನೀಕ್ಷಿಸಿ |
ಕಳವಳಿಸಿ ಸಿಂಹಾಳಿ ಗುಹೆಯೊಳ |
ಗಿಟಿದುವೆನಲಾಸತಿಯನಭಿವರ್ಣಿಸುವನಾರೆಂದ || ೨೦

ಹೊಳೆವ ವಿದ್ಯುಲ್ಲತೆಯ ಚಂದ್ರಿಕೆ |
ಯೊಳಗೆ ಪುದಿದು ಸುವರ್ಣರಜವನು |
ತಳಿದು ಪೊಸಮಣಿಮುತ್ತುಗಳನಳವಡಿಸಿ ಸುಧೆಯೂಡಿ ||
ಲಲಿತಪರಿಮಳವೆಸಸಿ ಮನಸಿಜ |
ನಿಲಿಸಿದಾಪುತ್ತಳಿಗೆ ಜೀವವ |
ನಲಿನಸಂಭವ ಪಡೆದನೆನಲೊಪ್ಪಿದಳು ಹರಿಣಾಕ್ಷಿ || ೨೧

ನಿರುಪಮಭ್ರೂ ಧನು ಕಟಾಕ್ಷವೆ |
ಶರ ಪಯೋಧರ ಚಕ್ರ ನಖ ವಿ |
ಸ್ತರದ ಸುರಗಿ ಸುಬಾಸೆಯಾಯುಧದಿಂದ ಶಂಕರನ ||
ಹರಿಬವನು ಮರಳಿಪೆನೆನುತ ಮು |
ನ್ನಿರುವ ಕೈದುವ ಕಂತು ಬಿಸುಟ |
ಬ್ಬರಿಸುತಿರ್ದನೆನಲ್ಕೆ ಕಾಂತೆಯ ಹೊಗಳ್ವನಾರೆಂದ || ೨೨

ನುಡಿವ ಹೇಮದ ಮುಕುರವನು ಕೆಂ |
ಪಡಸಿದಮೃತದ ಸಾರವನು ಸು |
ಯ್ಯಿಡುವ ಪೊಸಸಂಪಗೆಯನುಸಿರದ ಚಕ್ರವಾಕಗಳ ||
ನಡೆವ ಕೆಂದಾವರೆಗಳನು ಕ |
ರ್ಪಡರ್ದ ಕಾಳೋರಗನ ತಂದಜ |
ಪಡಗಿನಲಿ ನಿರ್ಮಿಸಿದನೆನಲೊಪ್ಪಿದಳು ಕಮಲಾಕ್ಷಿ || ೨೩

ನಾರಿಯರು ಬೞಿಕೆಸೆವ ಮಣಿಮಯ |
ದಾರತಿಯ ನಲಿದೆತ್ತಿ ಬೞಿಕ |
ಪ್ಪಾರತಿಯ ಸೂಸಿದರು ಹರಸಿಯೆ ಕನಕದರ್ಪಣವ ||
ತೋಱಲಾಲೋಕಿಸಿ ಕರಾಗ್ರದಿ |
ಧಾರಿಣೀಸುರಮಂತ್ರಿತದ ಜಂ |
ಬೀರವನು ಧರಿಸಿರಲು ಸತಿಯನು ಹೊಗೞ್ವನಾರೆಂದ || ೨೪
ಲಲಿತಸುರಚಾಪದಲಿ ಮಿಂಚುಱಿ |
ಹೊಳೆವವೊಲು ನವರತ್ನದಂದಣ |
ದೊಳು ಲತಾಂಗಿ ವಿರಾಜಿಸಲು ಪುತ್ತಳಿಗಳಂದದೊಳು ||
ಜಲಜಮುಖಿಯರು ಹಿಂದೆ ಮುಂದಿ |
ಕ್ಕೆಲದಿ ಪಾಯುವಧಾರು ತೊಲಗೆಂ |
ದುಲಿಯುತಿರಲರಮನೆಯ ಪೊಱವಟ್ಟಳು ಸರೋಜಾಕ್ಷಿ || ೨೫
ತನತನಗೆ ಕೃಷ್ಣೇಕ್ಷುದಂಡವ |
ನನುಕರಿಸಿ ಮಣಿಮಯದ ಚಮರವ |
ವನಜನೇತ್ರೆಯರಿಕ್ಕೆಲದಿ ಡಾಳಿಸೆ ಮಣಿಚ್ಛತ್ರ ||
ಮನಸಿಜಧ್ವಜ ಸಿಂಧ ಸೀಗುರಿ |
ಘನಪಥವನಳ್ಳಿರಿಯೆ ವಾದ್ಯ |
ಧ್ವನಿ ಜಗಂಗಳ ಪುದಿಯೆ ಸಲೆ ಹೊಱವಟ್ಟಳರಮನೆಯ || ೨೬
ಮಾರನೃಪನ ಮದೇಭ ಬರುತಿದೆ |
ಸಾರಿ ಸನ್ನುತ ಮುನಿತಪಃಫಲ |
ಸಾರ ಬರುತಿದೆ ಸಾರಿ ವಿಟಹೃಚ್ಛೂಲ ಬರುತಲಿದೆ ||
ಸಾರಿ ವಿಮಳಸ್ವರ್ಗಸುಖಸಾ |
ಕಾರಿ ಬರುತಿದೆ ಸಾರಿ ಸೀವೆಂ |
ದೋಲಣಿಸಿ ಕೈವಾರಿಸುತ ನಡೆದುದು ಸತೀನಿವಹ || ೨೭
ಗಿರಿಶನರ್ಧಾಂಗದಲಿ ಮುರಹರ |
ನುರದೊಳಜನಾಸ್ಯದಲಿ ದಿವಿಜೇ |
ಶ್ವರನು ಸರ್ವಾಂಗದಲಿ ಮುದದಿಂ ಮದನಮುದ್ರೆಗಳ ||
ಉರುತರದಿ ಧರಿಸಿದರು ತಾವೆನೆ |
ಧರಣಿಯೊಳು ಹುಲುಸರರ ಪಾಡೇ |
ನಿರದೆ ತೊಲಗೆಂದೊದಱಿದುವು ಮುಂಗುಡಿಯ ಕಹಳೆಗಳು || ೨೮

ಸ್ಮರಸಮುದ್ರವ ದಾಂಟಲುೞಿದಾ |
ದರಿಗೆ ಗೋಚರವಲ್ಲ ಲಕ್ಷ್ಮೀ |
ವರಗೆ ತಾನೆದೆಯುದ್ಧವಾಯ್ತುಜನಾಸ್ಯಪರಿಯಂತ ||
ಹರಗೆ ಶಿರ ಮುೞುಗಿದುದೆನಲು ಹುಲು |
ನರರ ಪಾಡೇನೆಂದೆನುತಲಿ |
ತ್ತರದೊಳೊದಱಿದುವ್ವೈದೆ ಬಿರುದಿನ ಕಹಳೆಯೊಗ್ಗಿನಲಿ || ೨೯
ಲಲಿತ ಚಮರದ ಸೀಗುರಿಯ ಕೋ |
ಮಲೆಯರೊಪ್ಪುವ ಕೇಳವೋಳದ |
ಲಲನೆಯರು ಹಾವುಗೆಯ ಹಡಪದ ಗಿಂಡಿಯಬಲೆಯರು ||
ಹೊಳೆವ ಮುಕುರದ ಗೀತರವ ಪರಿ |
ಮಳದ ಕಾಂತೆಯರಾಮೃಗಾಕ್ಷಿಯ |
ಬಳಸಿ ಬಂದುದು ಲಕ್ಷಸಂಖ್ಯೆಯ ಬಹುವಿಲಾಸದಲಿ || ೩೦
ಕರದ ಕಂಕಣಸೂಡಗಂಗಳ |
ಕೊರಲ ತಿಸರದ ತೋಳ ಬಂದಿಯ |
ಬೆರಲ ಮಣಿಮುದ್ರಿಕೆಯ ಕರ್ಣದ ಮುತ್ತಿನೋಲೆಗಳ ||
ಚರಣದಂದುಗೆಗಳ ಲಸದ್ಭಾ |
ಸುರದ ಜಘನದ ಕಾಂಚಿಗಳ ಸಡ |
ಗರದಿ ಮಹಿಳಾನಿಕರ ಬಂದುದು ಸತಿಯ ಬಳಸಿನಲಿ || ೩೧
ಮೆಱೆವ ಕಂಕಣ ತೋಳ ಬಂದಿಯ |
ತಿರುಹುತಮಲಾಪಾಂಗರುಚಿಗಳ |
ನಿರದೆ ಬೀಱುತ ಬಿಡುಮುಡಿಯನೆಡಗಯ್ಯೊಳೊಂದಿಸುತ ||
ಜರಿದ ಸಿಱಿಗಳನೊಡರಿಸುತ ನೂ |
ಪುರದ ದನಿಗೆಯ್ಯುತ್ತಲತಿ ಸಡ |
ಗರದೊಳೈತರುತಿರ್ದರಬಲೆಯರರಸ ಕೇಳೆಂದ || ೩೨
ವಿಲಸದೇಕಾವಳಿಯನೊಲವಿಂ |
ದಳವಡಿಸುತಳಕಗಳ ಸೆಳ್ಳುಗು |
ರ್ಗಳಲಿ ತಿದ್ದುತ ಕಲಶಕುಚಕೊಂದಿಸುತ ಮೇಲುದನು ||
ಲಲಿತತನುಸೌರಭವ ದೆಸೆದೆಸೆ |
ಗಳಲಿ ಬೀಱುತ ನೆರೆದ ವಿಟಸಂ |
ಕುಳಕೆ ಸೋಲವನೀಯುತೈತರುತಿರ್ದರಬಲೆಯರು || ೩೩

ಗುರುಕುಚಂಗಳ ಭರಕೆ ಸೆಳೆನಡು |
ಮುಱಿಯೆ ಸೋರ್ಮುಡಿಯುನ್ನತಿಗೆ ನು |
ಗ್ಗೊರಲು ಕುಸಿಯಲು ಘನಕಟಿಯ ಬಿಣ್ಪಿಂಗೆ ತೊಡೆಯಳುಕೆ ||
ಭರದಿ ಬಳುಕುತ ಮಂದಗತಿಯಲಿ |
ಬರಲು ಕಿಱುಬೆಮರಾಸ್ಯದಲಿ ಪೋ |
ಹರಿಸೆ ನೀಱೆಯರ್ಮೈದೆ ಬರುತಿರ್ದರು ಸುಲೀಲೆಯಲಿ || ೩೪

ಚಾರುಮಣಿಕಂಕಣಝುಣಝುಣ |
ತ್ಕಾರ ಮಣಿನೂಪುರಕರಕ್ರೇಂ |
ಕಾರ ಸುಲಲಿತಪಾದಮುದ್ರಿಕೆಗಳ ಠಣತ್ಕಾರ ||
ಆಱಡಿಯ ಝುಂಕಾರ ವಾದ್ಯದ |
ಭೂರಿಭಾಂಕೃತ ಮದನಬಲುಟಂ |
ಕಾರ ದೆಸೆಗಳ ಪುದಿಯೆ ವಿಭವದಿ ನಡೆದರಬಲೆಯರು || ೩೫

ಚಾರುನಾಸಿಕದ ಚಂಪಕದ ಮೃ |
ದೂರುಗಳ ಕದಳಿಗಳ ಕುಚಜಂ |
ಬೀರಫಲದ ನವೋಷ್ಠಪಲ್ಲವತತಿಯ ಮೆಲ್ನುಡಿಯ ||
ಕೀರಗಳ ವದನಾಂಬುಜದ ದೃ |
ಕ್ಕೈರವದ ಬೆಡಗಿಂದ ನಡೆದರು |
ನಾರಿಯರು ಮನಸಿಜನ ನಡೆವಾರಾಮದಂದದಲಿ || ೩೬

ಅಳಕತತಿ ಕೃಷ್ಣಾಭ್ರ ನೂಪುರ |
ದುಲುಹು ಮೊಱಗು ಕಟಾಕ್ಷರುಚಿ ಮಿಂ |
ಚೊಲೆವ ಕಚ ನವಿಲಾಟ ಮಣಿಮಯಹಾರ ಸುರಚಾಪ ||
ಲಲಿತದಶನಗಳಾಲಿಕಲು ತನು |
ಪುಲಕಜಲ ಮಱಿಯಾಗಲಾಕೋ |
ಮಲೆಯರೊಲಿದೈದಿದರು ಪೊಸಕಾರ್ಗಾಲದಂದದಲಿ || ೩೭

ವಿಲಸದೇಕಾವಳಿಯೊಳೊಪ್ಪುವ |
ಲಲನೆಯರ ಕರ್ಣಾಭರಣ ಹೊಂ |
ಬಳೆ ಲಸತ್ಕಟಿಸೂತ್ರದಿಂದೆಸೆವಂಬುಜಾಕ್ಷಿಯರ ||
ಹೊಳೆವ ನೇವುರ ಪಾಯವಟ್ಟಂ |
ಗಳಲಿ ಮೆಱೆವತಿನೀಱೆಯರ ಕೋ |
ಮಲಲತಾಂಗಿಯರುಗಳನಲ್ಲದೆ ಕಾಣೆ ನಾನೆಂದ || ೩೮

ನಡೆಗೆ ಹಂಸೆಗಳೊಂದಿದುವು ಮೆ |
ಲ್ನುಡಿಗೆ ಕೀರಗಳಲುಕಿದುವು ಸರ |
ಗುಡಲು ಪಿಕ ಮೋಹಿಸಿತು ಮುಖಚಂದ್ರಗೆ ಚಕೋರಗಳು ||
ಅಡಸಿದುವು ತಾ ಸೌರಭಕೆ ಬಂ |
ದಿಡಿದ ಮಧುಪವ್ರಜದ ಘನರಾ |
ಯಡಿಗೆ ಕಾಂತೆಯರಳವಟಿರ್ದು ನಡೆದರು ನವಾಯಿಯಲಿ || ೪೯

ಎಸೆವ ಭ್ರೂಚಾಪದ ಕಟಾಕ್ಷದ |
ವಿಶಿಖೆಗಳ ಬಾಸೆಗಳಡಾಯುಧ |
ನೊಸಲ ತಿಲಕದ ಹರಿಗೆಹಲಗೆಯ ತೋಳ ಲೌಡಿಗಳ ||
ನಿಶಿತನಖದಲಗುಗಳ ದಂತ |
ಪ್ರಸರ ಮಧುರ ವಚೋಸ್ತ್ರ ನಿಚಯದಿ |
ಕುಸುಮಬಾಣನ ಸೇನೆ ನಡೆದುದು ಸತಿಯ ಬಳಸಿನಲಿ || ೫೦

ಗುರುಕುಚದ ಮದದಂತಿಗಳ ಘನ |
ತರನಿತಂಬದ ತೇರುಗಳ ದೃ |
ಗ್ವರಚಪಲಗತಿಯಶ್ವಗಳ ನಿಱುರ್ಗುರುಳ ಜಲ್ಲರಿಯ ||
ಭರದ ವೇಣೀಧ್ವಜದ ತುಂಬಿಯ |
ಸರದ ಕಹಳೆಯ ನೂಪುರಝಣ |
ತ್ಕರದ ವಾದ್ಯದಿ ನಡೆದುದಂಗಜಸೈನ್ಯವೊಗ್ಗಿನಲಿ || ೫೧

ಭರದಿ ಯೋಗೀಶ್ವರರ ಮೇಲು |
ಬ್ಬರಿಸಿ ದೃಗ್ಬಾಣಗಳಲೆಸೆದಪ |
ಹರಿಸಿ ತಪಸಿವ್ರಾತಕಳಕದ ಬಲೆಯನಳವಡಿಸಿ ||
ನೆರೆದ ವಿಟಸಂತತಿಯ ನಖಭೀ |
ಕರದ ಸುರಗಿಯಲಣರುತತಿವಿ |
ಸ್ತರದಿ ಕಾಮನ ಸೇನೆ ನಡೆದುದು ಸತಿಯ ಬಳಸಿನಲಿ || ೫೨

ಪ್ರಿಯನ ಮುನಿಸತಿಗಿತ್ತ ಶಚಿ ಗೋ |
ಪಿಯರ್ಗೀಶನನಿತ್ತ ಸಿರಿ ಗಂ |
ಗೆಯನು ಪತಿಯ ಶಿರಕ್ಕೆ ತಂದುಮೆ ಧವನು ಗುರುಸತಿಗೆ ||
ಬಯಸಲಿಕೆ ರೋಹಿಣಿಯು ಪಾಟಿಯೆ |
ದಯಿತೆಯರಿಗೆಂದಂಗಭವನಾ |
ಕೆಯ ಮಹಾರೂಪಾತಿಶಯವನು ಹೊಗಟುತ್ತೈತಂದ || ೫೩

ಧರಣಿಯೊಳು ಮುನ್ನಿವಳು ತಾನವ |
ತರಿಸಿದೊಡೆ ತಪಕ್ಕೈದುವನೆ ಶಂ |
ಕರನು ಶಶಿ ಸಿಂದ್ಯಾತ್ಮನಹನೆ ಮನೋಜನಂಗವದು ||
ಕರಗುವುದೆ ಬೇಱುಂಟೆ ಸ್ವರ್ಗದ |
ಪರಸುಖಕ್ಕೆ ಜಿತೇಂದ್ರಿಯತ್ವವು |
ಮೆಱೆವುದೇ ಹೇೞೆಂದು ಕಾಂತೆಯ ಹೊಗೞ್ದತಮರಗಣ || ೪೪

ಸ್ಮರನ ಮದಕರಿಯೋ ಸುಖಾಮೃತ |
ದುರುಳಿಯೋ ಕಾಮುಕರ ಭಾಗ್ಯದ |
ಸಿರಿಯೊ ವಶ್ಯದ ತಿಲಕವೋ ಸೌಂದರ್ಯದಾಗರವೋ ||
ಪರಿಮಳದ ಪುತ್ಥಳಿಯೊ ರೂಪಿನ |
ಕರುವಿಗೆಱಕವಿದೆಂದೆನುತಲ |
ಚ್ಚರಿಯೊಳಗೆ ಕೊಂಡಾಡಿತಮರಪ್ರಾತವಾಸತಿಯ || ೪೫

ಲಲನೆಯರ ವದನಾಂಶುಗಳ ಹೊ |
ಕ್ಕೆಸಿದುವು ಪಲ್ಲವದ ಮನ ಸ |
ಲ್ಲಲಿತಕೇಶಧ್ವಾಂತದಲಿ ಕಾಮಾಂಧವುಱೆ ಕವಿಯೆ ||
ಲಲಿತವಿಭ್ರಮಹಾವಭಾವಂ |
ಗಳಲಹಂಕೃತ ಶಿರಗಳೊಡೆದುಱೆ |
ಕಲಕಿದುವು ಧೈರ್ಯಾಂಬುಧಿಯು ನೋಡಿದರ ಕಣ್ಮನಕೆ || ೪೬

ಆನನಾಬ್ಜದ ಗುಣಮಣಿಯ ದೃ |
ಗ್ಮೀನ ನಾಭ್ಯಾವರ್ತಕದ ನಾ |
ನಾನುರಾಗಾಮೃತದ ತಿವಳಿ ತರಂಗರಶ್ಮಿಕದ ||
ಪೀನಗಳ ಕುಚಚಕ್ರಗಳ ಭಾ |
ಷಾನಿನಾದದ ಘನವಿರಹವಡ |
ಬಾನಳದ ವನಿತಾಜನಾಂಬುಧಿ ಮೋಹಿಸಿತು ನೃಪರ || ೪೭

ಸ್ಮರನ ಮೋಹರವಿಂತು ವಿಭವದಿ |
ಧರಣಿಪರ ಸಭೆಗೈದಿ ಬರೆ ಭೂ |
ವರರು ಕಮಲಾನನೆಯನೀಕ್ಷಿಸಿ ನಟ್ಟದಿಟ್ಟಿಗಳ ||
ಭರದಿ ಕೀೞಲು ಬಾರದಿರೆ ಕಂ |
ಧರವನಲುಗಾಡಿಸುವವೊಲು ತಾಂ |
ಶಿರವ ತೂಗುತ ನೃಪರು ಕೊಂಡಾಡಿದರು ಕೋಮಲೆಯ || ೪೮

ಬೆರಲ ಕೊನೆಯಲಿ ಮೀಸೆಗಳನೊಡೆ |
ಮುಱಿಯುತನುರಾಗದಲಿ ತತ್ಸಾಂ |
ದರಿಯುವನು ತೋಱಿಸುತ ದೆಸೆಗಳ ನೋಡಿಯುವ್ವಳಿಸಿ ||
ಬೆಱೆಯುತೊಲೆಯುತ ನಗುತಲಿಂತೀ |
ಪರಿಯೊಳಣಕಿಸಿ ಸತಿಯನೊಲಿಸುವೆ |
ನುರುತರದೊಳೆಂದೋರ್ವ ನೃಪನಿರ್ದನು ಕುಚೇಷ್ಟೆಯಲಿ || ೪೯
ಲಲನೆ ಕಾದಂಬದಲಿ ತೊಡಿಗೆಯ |
ನಳವಡಿಸಿಕೊಂಡೆಸೆವ ಕತ್ತುರಿ |
ತಿಲಕವೆಸಗುತ ತನ್ನ ರೂಪಿಗೆ ತಾನೆ ಹಾರೈಸಿ ||
ಕೆಲೆಯುತಾಕಾಂತೆಯನು ಕಡೆಗಂ |
ಗಳಲಿ ನೋಡುತ್ತೋರ್ವ ನೃಪ ಕೋ |
ಮಲೆಯನೊಲಿಸುವೆನೆಂದು ಬಹುರೂಪುಗಳ ಕಲ್ಪಿಸಿದ || ೫೦
ಎಸೆವ ಮುತ್ತಿನ ಹಾರಗಳನೊಂ |
ದಿಸುತ ಪದಕವನೊಱಗದಂದದಿ |
ಸಸಿನೆಮಾಡುತ ವಶ್ಯತಿಲಕಾದಿಗಳನೊಂದಿಸುತ ||
ಮಿಸುಪ ಮೋಹನಮಂತ್ರಗಳ ಬಿಡ |
ದುಸಿರುತಂಗಜನಿಸುವ ಬಾಣ |
ಪ್ರಸರಕತಿಕಳವಳಿಸಿ ಪೀಠದೊಳೋರ್ವನಳವೞಿದ || ೫೧
ಲಲನೆಯತುಳಕಟಾಕ್ಷಪಾತದೊ |
ಳಳುಕಿ ನಾಭ್ಯಾವರ್ತದಲಿ ಸುೞಿ |
ದಳಕಪಾಶದಿ ತೊಡರಿ ಬಾಸೆಯಡಾಯುಧದ ಹತಿಗೆ ||
ಬೞಿಕ ನಖದಂಕುಶದ ಹೊಯ್ಲಿಂ |
ಗಳುಕಿ ಕೇಶಧ್ವಾಂತದಲಿ ಕೆಲ |
ಬಲನ ಕಾಣದೆ ವಿರಹದಿಂದೋರ್ವರಸ ಮೈಮಱೆದ || ೫೨
ಕರೆಯೆ ಕೇಳನು ಸಮ್ಮುಖದಿ ನಿಂ |
ದಿರಲದಾರೆಂದಱಿಯ ಬಾಯೊಳು |
ತುಱುಗಿದೆಲೆ ಬಾಯೊಳಗೆ ಮಡಿದೆಲೆ ಕೈಯೊಳಂಗನೆಯ ||
ಸ್ಥಿರದೊಳೆವೆಯಿಕ್ಕದೆ ನಿರೀಕ್ಷಿಸು |
ತರಸನೊರ್ವನು ವಿರಹದಲಿ ಮೈ |
ಯ್ಯಱಿಯದಿರ್ದನು ಲಲಿತಭಿತ್ತಿಯ ಚಿತ್ರದಂದದಲಿ || ೫೩

ವಿಧುಮುಖಿಯು ಸೋರ್ವುಡಿಯ ಕಂಡಿಂ |
ತಿದುವೆ ಕಾಳೋರಗನೆನುತ ಭಯು |
ವೊದವಿ ನಡುಸಿಂಹವೆಂದಳವಳಿದು ಸುದತಿಯುನು ||
ಮದಗಜವಿದೆಂದಳುಕಿ ಸೆಳ್ಳಗು |
ರುದಳ ಹುಲಿಯುುಗುರೆಂದು ಕಳವಳಿ |
ಸಿದನದೊರ್ವ ಮಹೀಶನಾಕಾಮಿನಿಯು ವಿರಹದಲಿ || ೫೪

ಹರಿಣನೇತ್ರೆಯು ರೂಪುಗಂಡಂ |
ದುರುತರದ ನಯುನವನು ಮಧುರ |
ಸ್ವರವನಾಲಿಸಿ ಕಿವಿಯು ತತ್ಸೌರಭದೆ ನಾಸಿಕವ ||
ಸುರುಚಿರದಿ ಪಡೆದುದಕೆ ಫಲವಾ |
ಯ್ತರಸಿ ಮೇಲೆಮಗಾದೊಡೆಮ್ಮಯ |
ಸರಿಯದಾರೆಂದುಬ್ಬಿ ರಾಗಿಸಿದುದು ನೃಪಸ್ತೋಮ || ೫೫

ಧರಣಿಪಾಲಕರಿಂತು ನವಸೌಂ |
ದರಿಯುಗಳ ತೋಱುತ್ತಲಿರೆ ತ |
ತ್ತರುಣಿ ಮಣಿಮಯುದಂದಳವನಿಳಿದಾವಣಿಗ್ವರನ ||
ಚರಣಕೆಱಗಿದೊಡಪ್ಪಿ ತೊಡೆಗಳೊ |
ಳುರುತರದಿ ಕುಳ್ಳಿರಿಸಿಕೊಂಡಳಿ |
ಗುರುಳುಗಳ ನೇವರಿಸಿ ಕಮಲದಳಾಕ್ಷಿಗಿಂತೆಂದ || ೫೬

ಎಲೆ ಕುಮಾರಿ ಸಮಸ್ತಭೂಮಿಾ |
ವಲಯುಪತಿಗಳ ಕರೆಸಿದೆನು ಮನ |
ವೆಳಸಿದಾತನ ವರಿಸು ಮೇಣ್ ವೀಕ್ಷೆಯಲಿ ನಿನ್ನವನು ||
ಒಲಿಸಿದಾತಂಗೆಱಗು ಹೋಗೆಂ |
ದೊಲಿದು ಪೊಸಮಂದಾರಮಾಲೆಯು |
ನಳಿಕುಲಾಳಕೆಗಿತ್ತನಾವೈಶ್ಯೇಂದ್ರನೊಲವಿನಲಿ || ೫೭

ಮೃಗವಿಲೋಚನೆ ಮಣಿಮಯುದ ಹಾ |
ವುಗೆಯುನೊಲವಿಂ ಮೆಟ್ಟಿ ಪಿತನಂ |
ಘ್ರಿಗೆ ನಮಿಸಿ ಬಂದಬಲೆಯುರು ಕೈಗುಡಲು ಚಾಮರವ ||
ಮುಗುದೆಯುರು ಡಾಳಿಸುತ ಬರೆ ಸ|
ತ್ತಿಗೆಯು ನೆೞಲೊಳು ಲೋಚನದ ಕಾಂ |
ತಿಗಳು ದೆಸೆದೆಸೆಗಡರೆ ನಡೆತರುತಿರ್ದಳೊಲವಿನಲಿ || ೫೮

ಸ್ಮರನ ಮದಕರಿಯಾನವೋ ಭಾ |
ಸುರದಿ ಗಹನವನಡರ್ಪ ಲಕ್ಶ್ಮಿಯಾ |
ಬರವೊ ಚತುರಾನನನ ಹಂಸನಗತಿಯೊ ತಾನೆನಲು ||
ಗರುವಗತಿಯಲಿ ರಮಣಿ ತಾ ಸೌಂ |
ದರಿಯುಮೇ ರೂಪಾಗಿ ಚರಿಸುವ |
ಪರಿಯೊಳವನಿಪರೆಡೆಗೆ ಬರುತಿರ್ದಳು ಸರಾಗದಲಿ || ೫೯

ಕರದ ಕಂಕಣಸೂಡಗಂಗಳ |
ತಿರುಹುತುನ್ನತಕುಚಕೆ ಮೇಲುದ |
ಸರಿಯುತೇಕಾವಳಿಯನಳವಡಿಸುತ್ತ ಬೆರಳಿನಲಿ ||
ಕುರುಳುಗಳ ತಿದ್ದುತ್ತ ಪದನೂ |
ಪುರವ ದನಿಗೆಯ್ಯುತ್ತಲತಿ ಸಡ |
ಗರದಿ ಭೂಪರ ಹೊರೆಗೆ ನಡೆತರುತಿರ್ದಳಿಂದುಮುಖಿ || ೬೦

ಗುರುಕಟಿ ಸ್ತನ ಸೋರ್ಮುಡಿಯ ಘನ |
ತರದ ಭರಕೆ ಮೃದೂರು ಸೆಳೆನಡು |
ಕೊರಲು ಮುಱಿಯದೆ ಮಾಣದಿರದೆಂದಳುಕಿ ಮಂಗಿಸುತ ||
ವರವದನ ಕಿಱುಬೆಮರಿದುದು ತನು |
ಪರಿಮಳಕೆ ಕವಿವಳಿಗೆ ಹುಬ್ಬಲಿ |
ಕೆರಳುತತಿನಟಣೆಯಲಿ ನಡೆತರುತಿರ್ದಳೊಲವಿನಲಿ || ೬೧

ವರಕಟಾಕ್ಷಪ್ರಭೆಗಳನು ವಿ |
ಸ್ತರದಿ ಪಸರಿಸುತಂಗವಟ್ಟದಿ |
ಪರಿಮಳವ ಬೀಱುತ್ತ ಸೋಲವ ವಿಟರಿಗೊಂದಿಸುತ ||
ಸ್ವರದೆ ಪಿಕವಣಕಿಸುತ ಸಡಿಲಿದ |
ಭರದ ವೇಣಿಯು ವಾಮಹಸ್ತದೊ |
ಳುರುತರದೊಳೊಂದಿಸುತ ಪದ್ಮಿನಿ ಬಂದಳೊಲವಿನಲಿ || ೬೨

ಅರಸ ಕೇಳಿಂತವನಿಪಾಲರ |
ಹೊರೆಗೆ ಸತಿ ಬಂದಬಲೆಯುರ ಮೇ |
ಲ್ಲೊಱಗಿರಲು ಕೇಳಬಲೆ ಭೂಪರ ಹೆಸರುಗೊಂಡೊಲಿದು ||
ಅಱುಹುವೆವು ನಿನ್ನಿಷ್ಟದಾತನ |
ವರಿಸೆನುತ ಕರವೆತ್ತಿ ಕಕ್ಷಾಂ |
ತರದ ಹೊಗರದುಗಲ್ಕೆ ಸತಿಯುರು ತೋಱಿದರು ಸಖಿಗೆ || ೬೩

ನೂತನೋತ್ಪಲನೇತ್ರೆ ನೋಡಿ |
ಸ್ನೀತ ಕೇರಳನೀತ ಪಾಂಡಿಯ |
ನೀತ ಸಿಂಗಳನೀತ ಬರ್ಬರನೀತ ಹಮ್ಮಿರ ||
ಈತ ಕೊಂಕಣನೀತಮಾಗಧ |
ನೀತ ಕೋಶಲನೀತ ನೈಷಧ |
ನೀತನೆಂದಬ್ಜಾಕ್ಷಿಯರು ತೋಱಿದರು ಬೆರಳಿನಲಿ || ೬೪

ಪಾಟಲಾಧರೆ ನೋಡಿವನು ಕ |
ರ್ಣಾಟನಿವ ಸೌರಾಷ್ಟ್ರನಿವ ಕರ |
ಹಾಟನಿವ ಗುರ್ಜರಕುಲೇಂದ್ರ ಕಳಿಂಗನಿವನೆಂದು ||
ಲಾಟತಾನಿವನಂಧ್ರನಿವನು ಮ |
ರಾಟನಿವ ಸೈಂಧವನು ತಾನಿವ |
ಭೋಟನಿವನೆಂದಂಗನೆಗೆ ತೋಱಿದರು ನಾರಿಯರು || ೬೫

ನೀಲಕುಂತಳೆ ನೋಡಿವನು ಪಾಂ |
ಚಾಲನಿವ ವೈದರ್ಭನಿವ ನೇ |
ಪಾಳನಿವ ಗಾಂಧಾರನಿವ ಪೌಂಡ್ರಕಮಹೀಪಾಲ ||
ಚೋಳನಿವನು ತುರುಷ್ಕನಿವ ಮಲೆ |
ಯಾಳನಿವ ಶಾತ್ವಲದ ಭೂಮಿಾ |
ಪಾಲನಿವನೆಂದಂಗನೆಗೆ ತೋಱಿದರು ನಾರಿಯರು || ೬೬

ಮಡದಿಯರು ಸತಿಗಖಿಳದೇಶದ |
ಪೊಡವಿಪಾಲರ ತೋಱೆ ಜಲವೃಟೆ |
ದಡಸಿ ಹಂಸ ಕ್ಷೀರವೊಂದುವ ತೆಱದಿ ನೃಪಕುಲವ ||
ಕೊಡಹಿ ಜೀವಂಧರೆಗೆ ಚಿತ್ತವು |
ತೊಡರೆ ವೀಣೆಯೊಳೊಲಿವೆನೆಂದಾ |
ಕುಡಿತೆಗಣ್ಣಲಿ ಮೊಗೆದು ಸೂಸಿದಳಖಿಳಭೂಮಿಪರ || ೬೭

ಕೆಲರು ಸೊಬಗಲಿ ನೋಡಿದಳು ಕೋ |
ಮಲೆಯೆನುತ ಕೆಲರೆಮ್ಮ ಸಖಿಯರ |
ನೊಲಿದು ಕೇಳಿದಳೆಂದು ಕೆಲರೆಮ್ಮೊಳು ಮಹಾಪ್ರಿಯವ ||
ತಳೆದಳೆಮ್ಮನು ನೋಡಿ ನಸುನಗು |
ತೆಳಸಿದಳು ಸತಿಯೆಂದು ಭೂಪರು |
ನಲಿಯುತಿರ್ದರು ಬಱಿಯ ಮಧುವಿನ ಬಾಯ ಸವಿಗಳಲಿ || ೬೮

ಕಲಶಕುಚದಿಟ್ಟೆಡೆಯೊಳಳವಟ್ |
ದಳಕಪಾಶದಿ ಸಿಲುಕಿ ನಾಭಿಯೊ |
ಳಿಟ್ದು ದೃಕ್ಶರದಿಂದ ನೊಂದು ನಖಾಂಕುಶಕ್ಕಗಿದು ||
ಹೊಳೆವ ಬಾಸೆಯಡಾಯುಧದ ಹೊಯಿ |
ಲ್ಗಳುಕಿ ಕೇಶಧ್ವಾಂತದಲಿ ಕಳ |
ವಳಿಸಿ ಕಂಗಾಣದೆ ವಿಭೇದದೊಳಿರ್ದರಾನೃಪರು || ೬೯
ಬಟ್ಕ ಸತಿ ಮಂಟಪವ ಪುಗಲೊಡ |
ನೆಳಸಿ ಬಂದುದು ಸಕಲನೃಪಸಂ |
ಕುಳವ ಕಳುಹುತ ನಯನ ಹೃತ್ಕರಣೇಂದ್ರಿಯಂಗಳಲಿ ||
ನಿಲಿಸಿದನುಪಮ ಪುತ್ಥಳಿಗಳಂ |
ತೆವೆಮಿಡುಕದವನಿಪರು ಪೀಠಾ |
ವಳಿಯೊಳಿರ್ದರು ಬಱ್ಯ ಡಿಂಬದೊಳರಸ ಕೇಳೆಂದ || ೭೦
ಇದು ವಿನಮದಮರೇಂದ್ರಶ್ರೀಜಿನ |
ಪದಕಮಲಷಟ್ಚರಣ ವಾಣೀ |
ವದನದರ್ಪಣ ಭೂಸುರೋತ್ತಮ ಬಸವಣಾಂಕಸುತ ||
ಚದುರ ಭಾಸ್ಕರರಚಿತಧರ್ಮ |
ಪ್ರದನ ಜೀವಂಧರನ ಚರಿತೆಯೊ |
ಳಿದು ಸಕಲಭೂಪಾವಲೋಕನವರಸ ಕೇಳೆಂದ || ೭೧
ಎಂಟನೆಯ ಸಂಧಿ ಮುಗಿದುದು.

---

# ಒಂಬತ್ತನೆಯ ಸಂಧಿ.

---

ಸೂಚನೆ|| ಸರ್ವಭೂಪರ ಜಱ್ದುಟ್ದ ಗಂ |
ಧರ್ವದತ್ತೆಯ ವೀಣೆಯಲಿ ಪಡೆ |
ದುರ್ವಿಪತಿ ಜೀವಂಧರನು ಗೆಲಿದನು ನೃಪಾಲಕರ ||
ಅರಸ ಕೇಳ್ ಸತಿ ಸಕಲಭೂಮಿ |
ಶ್ವರರ ಮೆಚ್ಚದೆ ಮರಳೆ ವಾಣಿಜ |
ವರನು ದೂತರ ಕರೆದು ನಿಜರೂಪದಲಿ ಕಾಮಿನಿಯ ||
ನೆರೆಯಲಾಱ್ರಿ ವೀಣೆಯಲಿ ವಿ |
ಸ್ತರದೊಳೊಲಿಸುವೊಡೇಟ್ ಕಲೆಯಲಿ |
ಪರಿಣತಾನ್ವಿತರೆಂದು ಸಾಱ್ಸಿದನು ಸುಲೀಲೆಯಲಿ || ೧

ಸುರುಚಿರದೊಳೀತೆಱದೆ ಸಾಱಲು |
ಧರಣಿಪಾಲರು ಕೇಳಿ ಹರುಷದಿ |
ಭರದಿ ವೀಣಾಮಂಟಪಕೆ ಬಂದಬ್ಜಕಳಿನಿಕರ ||
ತುಱುಗಿದಂತೆ ವಿಪಂಚಿಗಳ ಮು |
ಕ್ಕುಱುಕಿ ತಾವವಸರದಿ ಬಾಜಿಸೆ |
ತರುಣಿಯರು ನಗುತಿರಲು ನಾಚಿಯೆ ಮಗುಳ್ದಿರಾನೃಪರು || ೨

ಭರದಿ ಬಂದು ವಿದಗ್ಧನೃಪಶೇ |
ಖರನದೊರ್ವನು ವೀಣೆಯನು ವಿ |
ಸ್ತರದಿ ತಲೆಕೆಳಗಾಗಿ ಧರಿಸಿಯೆ ಕಳೆಯ ಖಡ್ಡಿಗಳ ||
ಮುಱಿಯೆಸಕವೆಂದುರ್ಚಿ ಬಿಸುಟಪ |
ಸರದಿವೊದಱುತ್ತಿರಲು ಕೈಹೊ |
ಯ್ದರಸಿಯರು ನಗುತಿರಲು ನಾಚಿಯೆ ಮಗುಳ್ದನಾನೃಪನು || ೩

ಧಾರಿಣೀಪತಿ ಕೇಳು ಕಾಷ್ಠಾಂ |
ಗಾರಮುಖ್ಯನೃಪಾಲಕರು ಕಪಿ |
ನಾರಿವಾಣಫಲಕ್ಕೆ ಮುತ್ತಿದ ತೆಱದೆ ವೀಣೆಗಳ ||
ಸಾರಿ ದುಸ್ಸ್ವರದಿಂದಲಂತ |
ಸ್ಸಾರವಱಿಯದೆ ನುಡಿಸುತಿರೆ ಸತಿ |
ಹಾರುತಿರ್ದಳು ಜಾಣಮಣಿ ಜೀವಂಧರನ ಬರವ || ೪

ಲಲನೆಯನು ವೀಣೆಯಲಿ ಭೂಮಿಪ |
ರೊಲಿಸದಿರೆ ಜೀವಂಧರನು ನಿ |
ರ್ಮಲತನುಚ್ಛವಿ ಮೆಱೆಯೆ ಸಿಂಹಾಸನವ ತಾನಿೞಿದು ||
ಹೊಳೆವ ಮಣಿಮಯ ತೊಡರು ಘಲಿಕೆಂ |
ದುಲಿಯೆ ವಾಣಿಜವರರು ಕಂಡಂ |
ದೆಲೆ ಕುಮಾರಕ ನಮಗಿದನುಚಿತವೆಂದು ಸಾಱಿದರು || ೫

ವರಕನಕನವರತ್ನವಸ್ತ್ರೋ |
ತ್ಕರ ಸುಗಂಧಪರೀಕ್ಷೆಯಲಿ ಕರಿ |
ತುರಗಸ್ವರ್ಣಾದಿಗಳ ಮೌಲ್ಯವನಱಿವಭಿಜ್ಞೆಯಲಿ ||
ಸುರುಚಿರಕ್ರಯವಿಕ್ರಯವ್ಯವ |
ಹರಣೆಯಲಿ ನಾವ್ ಕುಶಲರೆಮಗಿದು |
ಯೆರವು ವೀಣೆಯ ಗೊಡವೆ ಬೇಡೆಂದುದು ವಣಿಗ್ವ್ರಾತ || ೬

ಇಳೆಯ ಪತಿ ಕೇಳಿಂತು ಕುವರನ |
ಮುಳಿದು ಬೇಡೆಂದೊದಱುತಿರೆ ಕೆಲ |
ಕೆಲರು ತಪ್ಪೇನೆಂದು ಕೆಲರಪಹಾಸ್ಯಕರವೆಂದು ||
ಕೆಲರಿದೇಕೆಮಗೆಂದು ಕೆಲರು |
ಜ್ಜ್ವಲಸುಭದ್ರಾಕಾರನಾಕೋ |
ಮಲೆಯನೊಲಿಸುವನೀತ ವೀಣೆಯೊಳೆಂದುದಖಿಳಜನ || ೭
ಗರುವ ಗತಿಗಳೊಳಿಂತು ಜೀವಂ |
ಧರನು ಬರೆ ಕೆಳದಿಯರು ಕಂಡೀ |
ಪುರುಷ ರೂಪಾನ್ವಿತನು ವೀಣಾಭಿಜ್ಞನಿವನಾಗೆ ||
ವರಸುವರ್ಣಕೆ ದಿವ್ಯಪರಿಮಳ |
ಬೆರಸಿದವೊಲಂಗನೆಯ ಭಾಗ್ಯವ |
ನಱಿವರಾರೆಂದೀಕ್ಷಿಸುತ್ತಿರ್ದರು ಸುಲೀಲೆಯಲಿ|| ೮
ನುತಸುವೀಣಾದ್ಯಖಿಲಕಲೆಯಲಿ |
ಚತುರರಹ ಭೂಮೀಶ್ವರರು ತ |
ತ್ಸತಿಯ ವೀಣೆಯೊಳೊಲಿಸಲಾಱದೆ ನಾಣ್ಚಿ ಮಗುೞ್ದಿರೆನೆ ||
ಮತಿವಿಕಳನೀಪರದಗಿದುವೇ |
ವಿತತಿ ಚೆನ್ನತಿಕೋಲು ತನಗೆಂ |
ದತಿಶಯದಿ ನಗುತಿರ್ದುದಾಜನವರಸ ಕೇಳೆಂದ || ೯
ತಿರುಗಿ ಕಂಡವನಿಪರು ನಗುತೀ |
ಪರದ ವಿಭ್ರಾಂತನೊ ಜಡನೊ ಬಾ |
ಹಿರನೊ ಮೂರ್ಖನೊ ಮೇಣು ನರವೇಷದ ಸುರೇಶ್ವರನೋ ||
ವರಸುಲಕ್ಷಣನಿವನ ಭಾಗ್ಯವ |
ನಱಿವರಾರಂಗಜನ ವಿರಹದಿ |
ಮರುಳಿದೇನಾಶ್ಚರ್ಯವೆಂದುಸಿರ್ದುದು ನೃಪಸ್ತೋಮ || ೧೦
ನೆರೆದ ಜನವಪಹಾಸ್ಯವಾಡು |
ತ್ತಿರಲು ಸೈರಿಸಿ ನಿಮ್ಮ ಕೃಪೆಯಿಂ |
ದಿರದೆ ವೀಣೆಯ ಜಯಿಸಿ ಕಾಂತೆಯ ಸೆಳೆದು ತಹೆನೆಂದು ||
ವರಕುಮಾರಲಲಾಮ ನಸುನಗೆ |
ವೆರಸಿ ವೀಣಾಮಂಟಪಕೆ ಬಂ |
ದರುಹಗೆಱಗಿ ಕರಾಬ್ಜದಿಂ ತುಡುಕಿದನು ವೀಣೆಗಳ || ೧೧

ಇದಕೆ ತಂತ್ರಿಯ ದೋಷವುಂಟೆಂ |
ದಿದಕೆ ಖಡ್ಡಿಯದೋಷ ಹೊಂದಿಹು |
ದಿದಕೆ ಕಳೆಗಳ ಕೊರತೆ ಹೊಂದಿಹುದಿದಕೆ ತಾನದಲಿ ||
ಪುದಿದಿಹುದಿನಿತು ದೋಷವೆಂದಿರಿ |
ಸಿದ ವಿಪಂಚೀವ್ರಜವನುೞಿದಾ |
ಚದುರ ಘೋಷವತಿಪ್ರವೀಣೆಯು ಕಂಡು ರಾಗಿಸಿದ || ೧೨

ಸಂಭ್ರಮದೊಳಾಘೋಷವತಿಯೆಂ |
ದೆಂಬ ವೀಣೆಯ ಧರಿಸಿ ತಂತ್ರಿಯ |
ನಿಂಬಿನಿಂದಳವಡಿಸಿ ಪರಿಕಿಸಿ ತಾನಮಾನಗಳ ||
ಬೆಂಬೞಿಯೊಳಂದೆಸೆವ ಕಲೆಗಳ |
ತುಂಬಿ ನಾನಾ ರಾಗದಲಿ ಜಿತ |
ಶಂಬರಸಮಾಕಾರ ಬಾಜಿಸಿದನು ಸುಜಾಣ್ಮೆಯಲಿ || ೧೩

ವಕ್ತ್ರ ಹೃದ್ಗಳ ನಾಭಿ ಶಿರ ದೃಕ್ |
ಶ್ರೋತ್ರ ದತಿ ಪಂಚಮ ವೃಷಭತತಿ |
ವಿಸ್ತರದ ಗಾಂಧಾರ ಷಡ್ಜನಿನಾದ ಧೈವತದ ||
ರಕ್ತಿಯಿಂದೆಸೆವಖಿಳಕಳೆಗಳ |
ಯುಕ್ತಿಪಂಚಕಗಳನು ಕ್ರೌಂಚವೃ |
ಷೋಕ್ತಿಯ ಸ್ವರವೆಸೆಯೆ ಬಾಜಿಸಿದನು ಸುಗಾನದಲಿ (?) || ೧೪

ಕುಶಲತೆಯೊಳಾವೀಣೆಯನು ನವ |
ರಸಿಕ ಬಾಜಿಸಿ ಪಾಡಲಲ್ಲಿಗೆ |
ಪಶು ಮೃಗಾವಳಿ ಬಂದು ಕಿವಿಗೊಟ್ಟಾಲಿಸುತ್ತಿರಲು ||
ಒಸೆದು ಮೇಲಣ ಸುರರು ನೆರೆ ಕೀ |
ರ್ತಿಸಲು ನೆರೆದ ಸಭಾಜನವು ಪರ |
ವಶದೊಳಿರ್ದುದು ಗಾನಸೌಖ್ಯದೊಳಾಕುಮಾರಕನ || ೧೫

ಪರಮಹರ್ಷೋತ್ಕರದೆ ವೈಶ್ಯರು |
ನೆರೆದು ಕುಣಿಕುಣಿದಾಡೆ ವಿದ್ಯಾ |
ಧರರು ಪೂಮೞೆಗಱೆಯೆ ಸುರದುಂದುಭಿಗಳಳ್ಳಿರಿಯೆ ||
ಅರರೆ ಭಾಪುರೆ ಸಕಳವಿದ್ಯಾ |
ಭರತ ಗಾನಾಭಿಜ್ಞ ಜಿತಶಂ |
ಬರನೆ ಮಱುಭಾಪೆಂದು ಹೊಗೞ್ದುದು ವಂದಿಸಂದೋಹ || ೧೬

ವರಕುಮಾರಾಗ್ರಣಿಯನ್ನೈನೂ |
ರ್ವರು ಕುಮಾರರು ಕಿತ್ತಡಾಯುಧ |
ದುರುತರದೆ ನೆರೆಯಂಗರಕ್ಷಕರಾಗಿ ಬಳಸಿರಲು ||
ಪರಮಹರ್ಷದೊಳಿತ್ತ ಮಹಿಳಾ |
ವರವಿಭೂಷಣವಂಗಜನ ಮದ |
ಕರಿಯೆನಿಪ ಸತಿ ಯಲ್ಲಿಗೈತರುತಿರ್ದಳೊಲವಿನಲಿ || ೧೭

ತಳಿತ ಚಿಂತೆಯ ಬಾಡಿದಾಸ್ಯದ |
ಕಳಕಳದ ಕರಣದಕಪೋಲದ |
ಲಲೆವ ಕೈಗಳ ನೆಗ್ಗಿದಂಗದ ಸಟ್ಟ ದೃಷ್ಟಿಗಳ ||
ಬಲಿದ ಭೀತಿಯ ಕುತ್ತುದಲೆಗಳ |
ಲಿಳೆಯ ಪತಿಗಳು ಸತಿಯ ಬಯ್ಯುತ |
ಮುಳಿಯುತಿರ್ದರು ತತ್ಕುಮಾರನಿಗಧಿಕರೋಷದಲಿ || ೧೮

ಗುರುಕುಚಂಗಳ ಭರಕೆ ಸೆಳೆನಡು |
ಮುಱಿವುದೆಂದಳುಕುತ್ತ ಲಜ್ಜಾ |
ಭರದಿ ಕುಸಿಯುತಪಾಂಗದಲಿ ಕುವರನ ನಿರೀಕ್ಷಿಸುತ ||
ಹರುಷವೊಂದುತ ಪುಳಕಜಲಸಾ |
ಗರದೊಳಾಟಿಉತ ಮುಱದಿ ಕಿಱುನಗೆ |
ನೆರಸಿ ಗರುವಾಯಿಯಲಿ ನಡೆತರುತಿರ್ದಳೊಲವಿನಲಿ || ೧೯

ಹೊಳೆವ ಮೇಲುದೆ ಕೇತು ನವನೀ |
ಖಳೆಯೆ ಕೋಟೆ ಸಿಜಾಸ್ತರಣಮಂ |
ಡಲವತುಳನೈತಂಬವಟ್ಟಳೆ ನಾಭಿ ನಡುವೀಧಿ ||
ಕಲಶಕುಚ ಕೊತ್ತಳ ತನುಚ್ಛ |
ಜಲಕರಾಂಬುಜಯಂತ್ರಮೆನೆ ಕೋ |
ಮಲೆ ನಡೆದಳಂಗಜನ ಜಂಗಮದುರ್ಗದಂದದಲಿ || ೨೦

ಮೃಗನಯನೆ ಒಂದೆಸೆವ ಕಕ್ಷದ |
ಹೊಗರೊಗೆಯೆ ಮಂದಾರಮಾಲೆಯ |
ನೆಗಪಿ ಭೂಸುರಕೋಟಿ ಜಯವೆನೆ ವಾದ್ಯನಿರ್ಘೋಷ ||
ಒಗೆಯೆ ತೂರ್ಯತ್ರಯ ವಿಜೃಂಭಿಸೆ |
ಸುಗುಣ ಜೀವಂಧರನ ಕೊರಲಿನೊ |
ಳೊಗುಮಿಗೆಯ ಹರುಷದಲಿ ತಂದಿಕ್ಕಿದಳು ಕಮಲಾಕ್ಷಿ || ೨೧

ಕರದ ಮಣಿಮಯವೀಣೆಯಲಿ ಕಂ |
ಧರದ ಕುಸುಮದ ಮಾಲೆಯಲಿ ಪರಿ |
ಪರಿಯ ರತ್ನಾಭರಣದಲಿ ಕಾಂತಾಸಮೇತದಲಿ ||
ಅರಳುಗಂಗಳೊಳರುಣನಖ ಹೇ |
ರುರದಿನಿಳೆಯ ಭುಜಂಗರುಚಿವೊಲು |
ಮೆಱೆದನಾಸುಕುಮಾರನಭಿನವಕಾಮನಂದದಲಿ || ೨೨

ಬೞಿಕಲಾವೈಶ್ಯೇಂದ್ರನಾಕೋ |
ಮಳೆ ಸಹಿತ ಜೀವಂಧರನ ನಿಜ |
ನಿಳಯಕುಯ್ಯಲು ನೃಪರ ಕಾಷ್ಠಾಂಗಾರನತಿಮುಳಿದು ||
ಹುೞಿತ ವೀಣೆಯ ಹರದ ಬಾಜೆಸ |
ಲೊಲಿದು ಮಾಲೆಯ ಸೂಡಿದಳು ಗಡ! |
ಲಲನೆ ಮಾಡಿ ವಿವಾಹವನು ನೀವೆಂದು ಖತಿಗೊಂಡ || ೨೩

ಕರಿತುರಗಮಹಿಳಾದಿರತ್ನಗ |
ಳರಸುಗಳಿಗುಪಯೋಗ ವಾಣಿಜ |
ವರರಿಗಾಕ್ರಯವಿಕ್ರಯವ್ಯವಹರಣೆಯುಚಿತವದು ||
ತರುಣಿರತ್ನವು ಸಲ್ಲದಾಬೇ |
ಹರಿಯನೀಕ್ಷಣ ಹಿಡಿದುಬಿಟ್ಟಂ |
ಬರುಹಮುಖಿಯನು ಸೆಳೆಯದಿರೆ ಹೞಿವೆಮಗೆ ಬಹುದೆಂದ || ೨೪

ಕೆಲರಕೃತ್ಯದ ಭೀತಿಯಲಿ ಮೇಣ್ |
ಕೆಲಕೆಲವರಂದಾಕುಮಾರಕ |
ಗಳುಕಿ ಕೆಲರಾನಂದದಲಿ ಸತಿಯಲ್ಲ ತಮಗೆಂದು ||
ಕೆಲರಿದೇಕೆಮಗೆಂದು ನೃಪಸಂ |
ಕುಲವು ತೊಲಗಿರಲವರನೆಲ್ಲರ |
ಹೞಿದು ಕಾಷ್ಠಾಂಗಾರನೊಡಬಡಿಸಿದನು ಭೇದದಲಿ || ೨೫

ಆದೊಡೇೞಿಂದಾನೃಪಾಲಾಂ |
ಬೋದಿ ಬರಲಾವೈಶ್ಯನಳಿಯಂ |
ಗಾದರದೊಳದನಱುಹಿ ಮನ್ನೆಯ ಗಂಡ ನೀನೇೞು ||
ಮೇದಿನೀಪತಿ ದಾೞಿ ಬಿದ್ದಿನ |
ವಾದುದಾಬೀಯಗರ ಸಂತೈ |
ಸೂದೆನಲು ಸುಕುಮಾರಮಣಿ ನಸುನಗುತ ಹೊಱವಟ್ಟ || ೨೬

ಭರದೊಳೈನೂರ್ವರು ಸುಮಿತ್ರರು |
ಬೆರಸಿ ಮಣಿರಥವೇಱಿ ಜೀವಂ |
ಧರನು ಬಿಲುಜೇವೊಡೆದು ದಿವ್ಯಾಸ್ತ್ರದಲಿ ಕವಿದಿಸುತ ||
ಶರಧಿಯೊಳು ಮಂದರಮಹಾಚಲ|
ತಿರುಗುವಂದದಿ ನೃಪರ ಬಲಸಾ |
ಗರವ ಕಲಕಿಯೆ ಚಾರಿವರಿದನು ಭೂಪ ಕೇಳೆಂದ || ೨೭

ಸರಲನೇ ಸೃಜಿಸಿದನೊ ಮೇಣ್ ಸರ |
ಸಿರುಹಭವನಾಕಾಶ ವಿಶಿಖೋ |
ತ್ಕರವ ಕಾಱಿತೊ ಬಾಣವಾರಿಧಿ ಮೇರೆದಪ್ಪಿದುದೋ ||
ವರದಿಶಾದೇವಿಯರು ಪೆತ್ತರೊ |
ಸರಲನೆನೆ ನೃಪರಸ್ತ್ರಸಿಚಯವ |
ಸುರಿದರಾಸುಕುಮಾರಕನ ಮೇಲಧಿಕರೋಷದಲಿ || ೨೮

ತಳಿತ ಕಾರ್ಮುಗಿಲೊಳು ದಿವಾಕರ |
ಹೊಳಹುದೋಱುವ ತೆಱದಿ ಕಗ್ಗ |
ತ್ತಲೆಯೊಳಮೃತಮರೀಚಿ ಸುೞಿವಂತಾನೃಪಾಲಕರು ||
ಮುಳಿದು ಕೈಕೊಂಡೆಚ್ಚ ಬಾಣಾ |
ವಳಿಯನನಿತುಮನೊಂದು ಬಾಣದೊ |
ಳಲಘುಭುಜಬಲ ಕಡಿದು ಕೈಯೊಡನೆಚ್ಚು ಬೊಬ್ಬಿರಿದ || ೨೯

ಮರಳಿ ಭೂಮಿಪರಗ್ನಿಬಾಣವ |
ಕಱೆಯೆ ವರುಣಾಸ್ತ್ರದಲಿ ಗಿರಿಗಳ |
ಸರಲ ವಜ್ರಾಸ್ತ್ರದಲಿ ತಿಮಿರವ ಭಾಸ್ಕರಾಸ್ತ್ರದಲಿ ||
ಉರಗಬಾಣವ ಗರುಡಬಾಣೋ |
ತ್ಕರದಿ ಮೇಘಾಸ್ತ್ರವನು ಮರುತನ |
ಸರಲಿನಿಂದರಿದನು ಕುಮಾರಲಲಾಮನಾಜೆಯಲಿ || ೩೦

ಅರಸ ಕೇಳ್ ಮೊದಲೆಚ್ಚ ಬಾಣೋ |
ತ್ಕರಗಳಿಂ ಬೞಿಕೆಚ್ಚ ಸರಲಾ |
ಸರಲಿಸಿಂ ಮುನ್ನರಿನೃಪರ ಕೀಲಿಸುವುವೆಂದೆನಲು ||
ವರಕುಮಾರನ ಚಾಪಕೌಶಲ |
ಕರದ ಶರಸಂಧಾನವನು ಸಾ |
ಸಿರ ಮುಖಂಗಳ ಶೇಷಗಭಿವರ್ಣಿಸುವುದರಿದೆಂದ || ೩೧

ಹರಿಯುಪಾಯ ನದೀಸುತನ ಆ |
ಬ್ಬರಣೆ ದ್ರೋಣನ ಚಾಪವಿದ್ಯಾ |
ಪರಿಣತತ್ವವು ನರನ ಶರಸಂಧಾನವರ್ಜನ ||
ಸಿರುಪಮದ ದೃಢಮುಷ್ಟಿ ರಾಮನ |
ಶರಹರಣೆ ಮಾರುತನ ದೋರ್ವಲ |
ವೆರಸಿತಾಸುಕುಮಾರಕಗೆ ತಾನಾಹವಾಗ್ರದಲಿ || ೩೨

ಸುರಗಿಯಲಿ ಕೆಲಬರನು ಮತ್ತಾ |
ಪರಿಘದಲಿ ಕೆಲಬರನು ಘನತೋ |
ಮರದಿ ಕೆಲಬರ ನಿಟ್ಟೆಯಲಿ ಚಕ್ರದಲಿ ಕೆಲಬರನು ||
ವರಕೃಪಾಣದಿ ಕೆಲಬರನು ಕ |
ಕ್ಕರದಿ ಕೆಲಬರ ಭಿಂಡಿವಾಳದಿ |
ತರಿದನಾಸುಕುಮಾರನಾಪೋಹರವನಾಜಿಯಲಿ || ೩೩

ಕೆಲರು ದೆಸೆಗೆಟ್ಟೋಡಿದರು ಕೆಲ |
ಕೆಲರು ಜೀವವ ಕಾಯೆನುತ ಕೆಲ |
ಕೆಲರು ಕಾಷ್ಠಾಂಗಾರನಿಂ ನಾವ್ ಕೆಟ್ಟೆವೆಂದೆನುತ ||
ಕೆಲರು ಮೂರ್ಛಿತರಾಗಿ ಕೆಲರಳ |
ವಳಿದು ಕೆಲರಳಿದಿಂತು ನೃಪಸಂ |
ಕುಲವು ನುಗ್ಗಾಯಿತ್ತು ಹೇಳುವೆನೇನನದ್ಭುತವ || ೩೪

ನರಿಗಳೊಳು ಮೃಗರಾಜ ವಿಪಿನಾಂ |
ತರದೊಳಾದಾವಾಗ್ನಿ ಫಣಿಗಳ |
ನೆರವಿಯಲಿ ಸೌಪರ್ಣ ಕುಳಿಹಿಂಡಿನಲಿ ಬಲುತೋಳ ||
ಸರಸಿಯಲಿ ಗಜ ಹೊಕ್ಕವೊಲು ಮೋ |
ಹರವ ಸವರಲು ನೆರೆದ ಕಾಗೆಯ |
ಹರಳನಿಟ್ಟಂತೆಂಟು ದೆಸೆಗೋಡಿತು ನೃಪಸ್ತೋಮ || ೩೫

ಅರಸ ಕೇಳಿಂತವನಿಪಾಲರ |
ವರಕುಮಾರಕ ಜಯಿಸಿ ನೃಪಮಂ |
ದಿರಕೆ ಬರಲಳಿಯನನು ವಾಣಿಜವರನು ಬಿಗಿಯಪ್ಪಿ ||
ಕರೆದು ವಿಪ್ರರ ಲಗ್ನವಿದೆ ಹ |
ತ್ತಿರಕೆ ಒಂದುದು ಬೇಗ ವಿಧಿಸೆಂ |
ದಿರದೆ ಮಧುಪರ್ಕಾದಿಗಳ ಮಾಡಿಸಿದನೊಲವಿನಲಿ || ೩೬

ತರುಣಿಸಹಿತ ಕುಮಾರ ಮಣಿವಿ |
ಸ್ಫುರಿತ ಮೆಟ್ಟಕ್ಕಿಯನು ಮೆಟ್ಟಿಸೆ |
ಕರದಿ ಜೀರಿಗೆಬೆಲ್ಲವನು ತಾಳ್ದಿಸೆವ ಶುಭಲಗ್ನ ||
ನೆರೆ ತಳೆಯಲಾಬಱಿಕ ವಾಣಿಜ |
ವರನು ಜೀವಂಧರಗೆ ಧಾರೆಯ |
ನೆಱಿದನಾವೈಶ್ಯೇಂದ್ರ ವೈವಾಹಿಕವಿಧಾನದಲಿ || ೩೭

ಸ್ಮರನು ರತಿ ದಿವಿಜೇಂದ್ರ ಶಚಿ ಹಿಮ |
ಕರನು ರೋಹಿಣಿ ವಿಷ್ಣು ಸಿರಿ ಶಂ |
ಕರ ಭವಾನಿ ವಿರಿಂಚಿ ವಾಕ್ಸತಿಗೂಡಿ ಬಾಳ್ವಂತೆ ||
ಸ್ಥಿರದೊಳಿರಿ ನೀವೆಂದು ಸತಿಯರು |
ಹರಸಿ ಮಣಿಮಯ ಸೇಸೆಯಿಕ್ಕಲು |
ವಿರಚಿಸೆ ಧರಾಮರರು ಪಾಣಿಗ್ರಹಣಕೃತ್ಯಗಳ || ೩೮

ಲಲಿತಶಾಸ್ತ್ರಕ್ರಮದಿ ಹೋಮಂ |
ಗಳನು ಬೇಳಿದ ಬಱಿಕ ವಿಪ್ರಾ |
ವಳಿಯ ಭೂಕನ್ಯಾದಿದಾನಂಗಳಲಿ ಸತ್ಕರಿಸಿ ||
ಕೂಟಿಲನರ್ಚಿಸಿ ನಾಕಬಲಿ ದಿ |
ಗ್ಬಲಿ ಸುಶಾಂತಿಗಳಾದಿ ಕೃತ್ಯಂ |
ಗಳನು ನಾನಾವಿಭವದಲಿ ವೈಶ್ಯೇಂದ್ರ ಮಾಡಿಸಿದ || ೩೯

ಬಱಿಕ ಗಂಧೋತ್ಕಟನು ದಂಪತಿ |
ಗಳನು ಮುದದಿ ಗೃಹಪ್ರವೇಶವ |
ನೊಲಿದು ಶುಭದಿವಸದಲಿ ಮಾಡಿಸಲಾವಧೂವರರು ||
ಲಲಿತಸುಕಲಾವಿಧದಿ ಭೂಮಿಪ |
ತಿಲಕಜೀವಂಧರನು ಸಂತಸ |
ಗೊಳುತ ರಮಿಸುತ್ತಿರ್ದನಭಿನವಕಾಮನಂದದಲಿ || ೪೦

ಇದು ಏಸಮುದಮರೇಂದ್ರ ಶ್ರೀಜಿನ |
ಪದಕಮಲಷಟ್ಚರಣ ವಾಣೀ |
ವದನದರ್ಪಣ ಭೂಸುರೋತ್ತಮ ಬಸವಣಾಂಕಸುತ ||
ಚದುರ ಭಾಸ್ಕರರಚಿತ ಧರ್ಮ |
ಪ್ರದನ ಜೀವಂಧರನ ಚರಿತೆಯೊ |
ಳಿದುವೆ ವೈವಾಹಪ್ರವರ್ಣನೆಯುರಸ ಕೇಳೆಂದ || ೪೧

ಒಂಬತ್ತನೆಯ ಸಂಧಿ ಮುಗಿದುದು.

## ಹತ್ತನೆಯ ಸಂಧಿ.

ಸೂಚನೆ|| ವರಶುನಕಗೊಲವಿಂದೆ ಸದ್ಗತಿ |
ವಿರಚಿಸಿಯೆ ನೃಪತಿಲಕ ಜೀವಂ |
ಧರನು ಗುಣಮಾಲೆಯನು ಪರಿಣಯವಾದನೊಲವಿನಲಿ ||

ಧಾರಣೀಪತಿ ಕೇಳು ಕಾಷ್ಠಾಂ |
ಗಾರ ಚೈತ್ರದೊಳೊಂದು ದಿನ ಪರಿ |
ವಾರ ನಾರೀಜನ ಸಹಿತ ಜಲಕೇಳಿಗೊಲವಿನಲಿ ||
ವಾರಿಜಾಕರಕೈದೆ ಒಟ್ಟಿಕ ಕು |
ಮಾರಮಣಿ ಜೀವಂಧರನು ಏ |
ಸ್ತಾರದಿಂ ತಾ ಒಂದನಾಮಿತ್ರರು ಸಮೇತದಲಿ || ೧

ರಾಜಹಂಸಾನ್ವಿತದಿ ನಭವನು |
ರಾಜಸಭೆಯುನನಂತಪದ್ಮವಿ |
ರಾಜಿತದಲಹಿಪಾಚ್ಯುತರ ಕುಮುದೋತ್ತದಲಿ ಶಶಿಯ ||
ರಾಜಸನು ವರಪುಂಡರೀಕ |
ಭ್ರಾಜಿತದೊಳಡವಿಯನು ದಿಗ್ಗಜ |
ರಾಜನನು ನೆರೆ ಪೋಲ್ತುದಾನದಿಯುರಸ ಕೇಳೆಂದ || ೨

ಹರಿಸಮೇತದೊಳಿಂದಿರೆಯು ಕೇ |
ಸರದಿ ಸಿಂಹವನಬ್ಜದಿಂದಂ |
ಬರವ ಭುವನೌಘದೊಳಜಾಂಡವನನಿಮಿಷಾನ್ವಿತದಿ ||
ಸುರಪುರವ ಚಕ್ರದಿಂ ವರೂಥವ |
ಸುರುಶಿಲೀಮುಖದಿಂ ಧನುರ್ಧರ |
ವರರವೊಲು ನೆಱೆ ಮೆಱೆದುದಾನದಿಯುರಸ ಕೇಳೆಂದ || ೩

ಆನದಿಯ ತೀರದಲಿ ವಿವಿಧವಿ |
ಧಾನದಲಿ ಯಜ್ಞವನು ವಿಪ್ರರು |
ಸಾನುರಾಗದೊಳೆಸಗುತಿರಲು ಹವಿಸ್ಸನುರವಣಿಸಿ ||
ಶ್ವಾನನೊಂದೆಂಜಲಿಸೆ ಕೋಪಕ್ಕೆ |
ಶಾನು ಪುಟನೆಗೆಯಲ್ಕೆ ಡಾಣೆಯೊ |
ಳಾನೆರೆದ ವಟುನಿಕರ ಹೇಸದೆ ಹೊಯ್ದುರಾಶುನಸ || ೪
ದುರುಳರಿಂದಡೆಗೆಡಹೆ ಭಷಕನು |
ಧರಣಿಯೊಳು ಬಸವೞಿದು ತನು ಜ |
ರ್ಜರಿತವಾಗಿಯೆ ತನಿಗರುಳ ನೆರೆ ಕಾಱಿ ಕಣ್ ಮರಳೆ ||
ಹರಣವನು ಬಿಡುತಿರಲು ಜೀವಂ |
ಧರನು ಕಂಡತಿದಯೆಯೊಳಕಟಾ |
ಬಱಿದೆ ಕೊಂದರು ಪಾಪಿಗಳು ಹಾಯೆನುತ ಹರಿತಂದ || ೫
ಭರದಿ ಬಂದು ಕುಮಾರ ನಾನಾ |
ಪರಿಪರಿಯ ಶೈತ್ಯೋಪಚಾರವ |
ನಿರದೆ ಮಾಡಲ್ಕದಕೆ ಕಾಲಪ್ರಾಪ್ತಿಯಾಗಿರಲು ||
ಉರುತರದಿ ತಾ ತೊಡೆಗಳಲಿ ಕು |
ಳ್ಳಿರಿಸಿಕೊಂಡು ಸುಪಂಚಮಂತ್ರವ |
ನಱುಹುತಿರ್ದನು ಶುನಕ ಸುಗತಿಯನೈದುವಂದದಲಿ || ೬
ಅರಸ ಕೇಳಾಪಂಚಮಂತ್ರೋ |
ತ್ತರದ ತತ್ಫಲದಿಂದಲಾಕ್ಷಣ |
ವರಶುನಕ ಚಂದ್ರಾಭಪುರದಲಿ ಮೂರ್ತಿವೆತ್ತಾಗಿ ||
ಸುರುಚಿರದಿ ತಾ ಯಕ್ಷನಾಗವ |
ತರಿಸಿ ಮುನ್ನಿನ ಭವವನೆಲ್ಲವ |
ನಱಿತು ಜೀವಂಧರನೆಡೆಗೆ ಬಗುತಿರ್ದನೊಲವಿನಲಿ || ೭
ಸುಲಲಿತದಿ ಬಂದಾತನಿದಿರಲಿ |
ನಿಲಲು ಜೀವಂಧರನು ಶುನಕಂ |
ಗೊಲಿದು ಮತ್ತೆಯು ಪಂಚಮಂತ್ರವನುಸಿರುತಿರೆ ಕಂಡು ||
ಎಲೆ ಪುರುಷ ನಿನ್ನಿಂದ ದುರ್ಭವ |
ವೞಿದೆನಗೆ ಯಕ್ಷತ್ವವಾಯ್ತೆಂ |
ದಳವಿಯಲಿ ತೆಗೆದಪ್ಪಿ ಹೊಗೞಿದನಾಕುಮಾರಕನ || ೮

ನಿರುಪಮಾತ್ಮನ ಪಂಚಮಂತ್ರದ |
ಪರಮಫಲದಿಂ ಮುಕ್ತಿಕಾಮಿನಿ |
ನೆರೆವಳೆನಲಿಂದ್ರಾದಿಸಂಪತ್ಕರಗಳೆನಿತೆಂದು ||
ಧರಣಿಯೊಳಗಾಶಬವ ಬಿಸುಟೊಂ |
ದಿರೆ ಕುಮಾರನ ಮೇಲೆ ಹೂಮಳೆ |
ಗಱೆದನಾಯಕ್ಷೇಂದ್ರನಮರಾನಕದ ಘೋಷದಲಿ || ೯

ಈತೆಱದಿ ಜೀವಂಧರನ ಸು |
ಪ್ರೀತಿಯಿಂದುಪಚರಿಸಿ ಕೇಳೆಲೆ |
ಭೂತಲೇಶ್ವರ ನಿನಗೆ ಸಂಕಟ ಬಂದ ಸಮಯದಲಿ ||
ಆತತುಕ್ಷಣವೆನ್ನ ನೆನೆಯೆಂ |
ದೋತು ಮಗುೞ್ದಲಿದಪ್ಪಿ ಮುದದಿಂ |
ದಾತನನು ಬೀೞ್ಕೊಂಡು ಮಗುೞ್ದಿದ್ದನು ಯಕ್ಷೇಂದ್ರ || ೧೦

ಅರಸ ಕೇಳ್ ಜಲಕೇಳಿಯಿತ್ತಲು |
ಪುರದೊಳಗೆ ಗುಣಮಾಲೆ ಸುರಮಂ |
ಜರಿಯರಿಬ್ಬರು ತಮ್ಮತಮ್ಮಯ ವಾಸಚೂರ್ಣಕ್ಕೆ ||
ಸರಿಯದಾವುದು ತನ್ನದುತ್ತಮ |
ತರುಣಿ ನಿನ್ನದು ತೆಳ್ಳಿತೆಂದಿ |
ಬ್ಬರು ಬಿಡದೆ ಸಂವಾದಿಸಿದರಾನದಿಯ ತೀರದಲಿ || ೧೧

ಎರಡು ಚೂರ್ಣವನಱಿವ ಸುವಿದ |
ಗ್ಧರಿಗೆ ತೋಱಿದೊಡವರು ಹೇೞ್ದಿಂ(?) |
ದಱುಹಿ ತತ್ಕಾಮಿನಿ ಜಲಕ್ರೀಡೆಯನು ಸರಸಿಯಲಿ ||
ವಿರಚಿಸಲು ಬೇಡೆಂದು ತಾವಿ |
ಬ್ಬರು ಬಿಡದೆ ಶಪಥಗಳ ಮಾಡಿ ಸಖಿಯರ |
ಕರದೊಳಾಚೂರ್ಣವನು ಕೊಟ್ಟಟ್ಟಿದರು ತವಕದಲಿ || ೧೨

ತರುಣಿಯರು ತಚ್ಚೂರ್ಣಗಳ ಜಾ |
ಣರಿಗೆ ತೋಱಿದೊಡವರು ಸುರಮಂ |
ಜರಿಯ ಚೂರ್ಣವ ಹೞಿಯೆ ಜೀವಂಧರಗೆ ತೋಱಿಸಲು ||
ಎರಡು ಚೂರ್ಣವು ಸಮನಕಾಲದೆ |
ವಿರಚಿಸಿದುದಿದು ಕಾಲದಲಿ ವಿ |
ಸ್ತರಿಸಿತದು ಕಾರಣವಧಿಕವಿದು ಎಂದು ನೇಮಿಸಿದ || ೧೩

ಚದುರ ಗುಣಮಾಲೆಯ ಸುಚೂರ್ಣವ |
ನಧಿಕವೆನೆ ಮೊದಲೆಮ್ಮೊಡನೆ ಹೇ |
ಳಿದರೊಳೊಬ್ಬರೆ ನೀವೆನುತ ಕಾಂತೆಯರು ನಗುತಿರಲು ||
ಇದಱ ಘನತೆಯ ನೋಡೆನುತ ಗಗ |
ನದಲಿ ಚೂರ್ಣವ ಸೂಸಲಳಿ ಮು |
ಧ್ಯದಲಿ ತತ್ಸೌರಭಕೆ ಕವಿದುಱಿ ಬಿರ್ದುವೊಗ್ಗಿನಲಿ || ೧೪
ಬಳಿಕ ಸುರಮಂಜರಿಯ ಚೂರ್ಣವ |
ಕೆಲಕೆ ಸೂಸಿದೊಡಲ್ಲಿಗೊಂದಳಿ |
ನಿಲುಕದಿರೆ ಕಂಡಬಲೆಯರು ಕುವರನ ಸುಜಾಣುಮೆಗೆ ||
ತಲೆಯ ತೂಗಿಯೆ ಮಗುಟ್ದ್ದಬಂದಾ |
ಲಲನೆಯರಿಗಾತೆಱನನೆಲ್ಲವ |
ತಿಳುಹೆ ಸುರಮಂಜರಿ ವಿಭೇದದೊಳಿರ್ದಳಾತ್ಮದಲಿ || ೧೫
ವರಕಲಾವಿದನಪ್ಪ ಜೀವಂ |
ಧರನೆನಗೆ ಪತಿಯಲ್ಲದವನಿಯ |
ಪುರುಷರೊಡಹುಟ್ಟಿದರೆನುತ ಮಗುೞ್ದಾಲಯಕೆ ಗಮಿಸೆ ||
ಭರದೊಳಾಗುಣಮಾಲೆ ಸುರಮಂ |
ಜರಿಯು ನದಿಯಲಿ ಮಿಂದು ..ಹಿಂ |
ದಿರುಗಿ ನಡೆದಾನೊಲ್ಲೆನೆಂದೆಯ್ದಿದಳು ದುಗುಡದಲಿ || ೧೬
ಲಲನೆ ತಾ ನುಡಿದುತ್ತರಕೆ ನದಿ |
ಯೊಳು ಜಲವ ಕ್ರೀಡಿಸದೆ ಪೋಗಲು |
ಕೆಳದಿ ಮಾಯದೆ ಹೋದಳೆನಗೇಕೆಂದು ಗುಣಮಾಲೆ ||
ಅೞಲುತೞುತಾಮಗುೞ್ದು ಬರಲಾ |
ಹೊೞಲೊಳಗೆ ಮದಸೊಕ್ಕುವಟ್ಟಿಹ |
ಲುಳಿತಗಜ ಪುರಜನವ ಸೀೞುತ ಬಂದುದೊಗ್ಗಿನಲಿ || ೧೭
ಅರಸ ಕೇಳಾಮತ್ತಗಜವತಿ |
ಭರದಿ ಬರೆ ಗುಣಮಾಲೆಯನು ಬಿಸು |
ಟಿರದೆ ಪರಿಚಾರಕರು ದೆಸೆಗೆಟ್ಟೋಡೆ ತದ್ಧಾತ್ರಿ ||
ಭರದಿ ನಾ ಮಡಿದಂತ್ಯದಲಿ ಸರ |
ಸಿರುಹಲೋಚನೆ ನಾಯಲೆಂದಾ |
ತರುಣಿಯನು ಹಿಂದಿಕ್ಕಿ ಕರಿಗಿದಿರಾದಳಾಕಾಂತೆ || ೧೮

ಕರಿ ಮಸಗಿ ಗುಣಮಾಲೆಯನು ಕಂ |
ಡುರವಣಿಸೆ ದೂರದೊಳು ಜೀವಂ |
ಧರ ನಿರೀಕ್ಷಿಸಿ ಹೆಂಗೊಲೆಯು ಕಂಡುಟಿವುದಲ್ಲೆಂದು ||
ಭರದೊಳಗೆ ಸುಂಡಿಲನು ಸೆಳೆದೊಡ |
ವೆರಸಿ ಕುಂಡಲದಿಂ ಕಪೋಲಾಂ |
ತರವನಿಡೆ ಮದವುಡುಗಿ ತದ್ಗಜ ಮುಗುಚ್ಚಿದರಮನೆಗೆ || ೧೯

ಅರಮನೆಗೆ ಗಜ ಮುಗುಟಿತಿ ತನ್ನಯ |
ಹರಣವನು ರಕ್ಷಿಸಿದ ಜೀವಂ |
ಧರನ ಕಂಡಾತನ ಲಸದ್ರೂಪಾನುಭಾವನೆಗೆ ||
ಮರುಳುಗೊಂಡೀಪುರುಷರತ್ನವ |
ವರಿಸಬೇಕಿವನಾರೆನುತ ಸು|
ಸ್ಥಿರದೊಳೆವೆಯಿಕ್ಕದೆ ನಿರೀಕ್ಷಿಸಿದಳು ಕುಮಾರಕನ || ೨೦

ಸುರಪನೋ ದಿವಿಜೇಂದ್ರನಿವನಾ |
ದರೆ ಶರೀರದಿ ಕಣ್ಗಳಿಲ್ಲವ |
ವರಸುಧಾಕರನಾದೊಡಿಲ್ಲ ಕಳಂಕವಂಗಜನು ||
ನಿರುತವಾದರೆ ಹಸ್ತಪದ್ಮದೊ |
ಳರಳ ಸರಳಿಲ್ಲೀತ ಜೀವಂ |
ಧರನೆನುತ ತದ್ವಿರಹದಲಿ ಬಂದಳು ನಿಜಾಲಯಕೆ || ೨೧

ವರಕುಮಾರಗೆ ಬಟಿಕ ಸುಪ್ರಿಯು |
ಕರದಿ ತಚ್ಚಿತ್ತಪ್ರಪಂಚವ |
ಬರೆಸಿ ಲೇಖೆಯನರಗಿಳಿಯ ಕಂಧರದೊಳಳವಡಿಸಿ ||
ಪುರುಷನಪ್ಪಂದದಲಿ ಜೀವಂ |
ಧರನ ಕೂಡೆಂದಾಶುಕೇಂದ್ರನ |
ತರುಣಿಯೊಲವಿಂದಟ್ಟಿ ನೆರೆ ಕಂದಿದಳು ವಿರಹದಲಿ || ೨೨

ಧರಣಿಪತಿ ಕೇಳಿತ್ತ ಜೀವಂ |
ಧರಗೆ ಗುಣಮಾಲೆಯ ಕಟಾಕ್ಷದ |
ಸರಳು ನಟ್ಟುವು ಕೇಳಲರಿವಾಯ್ತಾಲಿಗಳನಲುಗಿ ||
ತರಹರಿಸಲಳವಡದೆ ಕಾಂತೆಯ |
ವರಿಸಬೇಕೆಂದೆನುತ ನಿಜಮಂ |
ದಿರಕೆ ಬಂದಾರಾಮದಲಿ ಹೊರಳಿದನು ವಿರಹದಲಿ || ೨೩

ಪರಮಹಂಸನ ಯೋಗಿ ನೆನೆವಾ |
ಪರಿಯೊಳಾಗುಣಮಾಲೆಯನು ಹೃ |
ತ್ಸರಸಿಜಾತದಿ ನೆನೆದು ತನಗರಗಳಿಗೆ ಯುಗವಾಗೆ ||
ಮೆಱೆವ ಕುಸುಮಾವಳಿಯ ತಳ್ಪದೊ |
ಳಿರುತ ತದ್ವಿರಹಾಗ್ನಿಯಲಿ ನೆರೆ |
ಕರಗಿ ಕಂದಿದನಾಕುಮಾರಕನಾವನಾಂತದಲಿ || ೨೪

ಗರುವತನ ಹಿಂಗಿದುದು ಧೈರ್ಯದ |
ಗಿರಿ ಬಿಱಿದುದಱಿವಗಲಿದುದು ನಿಜ |
ಪರಿಣತತ್ವವದೋಡಿದುದು ಗಂಭೀರ ಲಯುವಾಯ್ತು ||
ಮಱವೆ ಬಲಿದುದು ವಿಮಲಲಜ್ಜಾ |
ಶರಧಿ ಕಾಲ್ವೊಱೆಯಾಯ್ತು ಬಣ್ಣಿಸ |
ಲರಿಯೆ ಕುವರನ ದೇಹದಂತಸ್ತಾಪನೇದನೆಯ || ೨೫

ತಳಿರುಗಳ ಕಂಡುರಿವ ಕಿಚ್ಚೆಂ |
ದಳುಕಿ ಕುಸುಮವ ಚಿತ್ತಜನ ಸ |
ಲ್ಲಲಿತ ಬಾಹುಗಳೆಂದು ಕೆಲಸಾರ್ದಳಿಯನಂಗಜನ ||
ಬಲವೆನುತ ಸೆಡೆದಿಕ್ಷುದಂಡಾ |
ವಳಿಯನಾತನ ಚಾಪವೆಂದತಿ |
ಕಳವಳಿಸುತಿರ್ದನು ಕುಮಾರಕನಧಿಕವಿರಹದಲಿ || ೨೬

ಬಱಿದೆ ನುಡಿವನು ನುಡಿಸೆ ಮೌನವ |
ಧರಿಸುವನು ತವಕದಲಿ ನಡೆವನು |
ಪರಿಕಿಸಲು ಕಾರ್ಯಾರ್ಥವಿಲ್ಲ ಲತಾಂಗಿ ಬಾರೆಂದು ||
ಬಱಿದೆ ಕರೆವನು ತನ್ನೊಳೇತಕೆ |
ತರುಣಿ ಮುಳಿಸೆಂದೆನುತ ವಿರಹದಿ |
ಮರುಳುಗೊಂಡನು ತತ್ಕುಮಾರಕನರಸ ಕೇಳೆಂದ || ೨೭

ಚಂದ್ರ ಚಂಡಮರೀಚಿಯಾದನು |
ಗಂಧವಹನಲಗಾದ ಮಲಯಜ |
ಗಂಧವುರಿಯಾದುದು ಸುಮಾಲ್ಯಗಳಸ್ತ್ರಮಯವಾಯ್ತು ||
ಕೆಂದಳಿರು ದಾವಾಗ್ನಿಯಾಗಿದೆ |
ಯೊಂದು ದಿನವೆನಗೊಂದು ಯುಗವಾ |
ಯ್ತೆಂದು ಮಮ್ಮಲ ಮಱುಗಿದನು ಸುಕುಮಾರ ವಿರಹದಲಿ || ೨೮

ವರಕುಮಾರಕನಿಂತು ವಿರಹದೊ |
ಳುರಿಯುತಿರೆ ಶೈತ್ಯೋಪಚಾರೋ |
ತ್ಕರವ ಮಾಡುವೆವೆಂದು ನಾನಾಗಂಧಗಳ ತರಿಸಿ ||
ತರುಣಿಯರು ಪನ್ನೀರೊಳರೆದದ |
ನರಸನಂಗದೊಳೆಯ್ದೆ ಲೇಪಿಸಿ |
ಭರದಿ ಬೀಸಿದರಾಲವಟ್ಟದೊಳರಸ ಕೇಳೆಂದ || ೨೯
ತರುಣಿಯಟ್ಟಿದ ಕೀರನಿತ್ತಲು |
ಭರದಿ ಗುಣಮಾಲೆಯನು ನೆನೆದೆದೆ |
ಜರಿಯುತಿಹ ಜೀವಂಧರನ ಹೊರೆಗೈದಿ ಪೊಡೆಮಟ್ಟು ||
ತರುಣಿ ನಿನ್ನಯ ತೇಜಗುಣಸೌಂ |
ದರಿಯಗಳ ನೀ ನೋಡಿ ಬಾಯೆಂ |
ದಿರದೆ ಕಳುಹಿದಳೆನ್ನನೆನಲುಬ್ಬಿದನು ಸುಕುಮಾರ || ೩೦
ಧರಣಿಯೊಳು ಸತಿರತ್ನವಾಕೆಯು |
ಪುರುಷರತ್ನವು ನೀವು ನಿಮ್ಮ |
ಬ್ಬರಿಗೆ ಯೋಗವದಾಯ್ತು ಮೂಲೋಕಂಗಳಲಿ ನಿಮಗೆ ||
ಸರಿಸವಿಲ್ಲಾದಿಯಲಿ ನೀ ವಿ |
ಸ್ತರದಿ ಮಾಡಿದ ಪುಣ್ಯವೆಂದುಪ |
ಕರಿಸಿತೆಂದು ಶುಕೇಂದ್ರ ಲಿಖಿತವ ಕೊಟ್ಟನಾನೃಪಗೆ || ೩೧
ವರಕುಮರನಾಲಿಖಿತವನು ವಿ |
ಸ್ತರದಿ ವಾಚಿಸಿ ನೋಡಿ ಕಾಂತೆಯ |
ಪರಮಮೋಹಕೆ ಮೆಚ್ಚಿ ನೆನೆದಂತಾಯಿತೆಂದೆನುತ ||
ಹರುಷದಲಿ ಕೀರೇಂದ್ರ ನುಡಿದುರು |
ತರದ ವಚನಾಮೃತವ ಸವಿದಾ |
ದರದಿ ಮಗುಟಟ್ಟಿದನು ಸುಕುಮಾರಕನು ಶುಕಪತಿಯ || ೩೨
ಅರಸ ಕೇಳ್ ಶುಕಪತಿಯು ಜೀವಂ |
ಧರನು ಪ್ರಿಯದಿಂದಟ್ಟಿ ವಿರಹದೊ |
ಳುರಿಯುತಿರೆ ಬಟಿಕಿತ್ತು ಗುಣಮಾಲೆಯ ಸಮೀಪಕ್ಕೆ ||
ಭರದಿ ಬಂದು ಕುಮಾರನಭ್ಯಂ |
ತರವನುಡುಕೀರೇಂದ್ರ ನೆರೆ ಪ |
ಸ್ತರಿಸಲಿಮ್ಮಡಿಯಾಯ್ತು ವಿರಹ ಮೃಗಾಕ್ಷಿಗೊಗ್ಗಿನಲಿ || ೩೩

ಸ್ವರವು ಕೋಗಿಲೆಯೆಂದು ಮೌನವ |
ಧರಿಸಿ ಮುಖ ಶಶಿಯೆಂದು ಮುಕುರವ |
ಪರಿಕಿಸಳು ಗತಿ ಹಂಸೆಯೆಂದಡಿಯಿಡಳು ವಾಕ್ಕು ಶುಕ ||
ನಿರುತವೆಂದುಸಿರಳು ಕುರುಳು ಮಧು |
ಕರಗಳೆಂದಳವಡಿದು ಪೆದಱುವ |
ಳರಸಿಗಾದುದು ತನ್ನ ತನು ನಂಜಾಗಿ ವಿರಹದಲಿ || ೩೪
ಸ್ಮರನು ತಾ ವೈದೋಱು ಕೋಕಿಲ |
ಪರಭೃತನು ಹಿಮಕರನು ದೋಷಾ |
ಕರನು ಶುಕ ವಾಚಾಳ ಚೂತ ಕುಜಾತ ಮಧು ಹೊಸಬ ||
ಮರುತ ಚಂಚಲ ಮಧುಪನುದ್ಭ್ರಮ |
ಕರ ಮರಾಳನು ಮಂದಮಾರ್ಗಿ |
ನ್ನಱುಹುವೆನು ತನ್ನಯ ತೆಱನನೆಂದಱಲಿದಳು ರಮಣಿ || ೩೫
ತರುಣಿ ಚಂದನದಿಂದ ಚಂದ್ರನ |
ಬರೆದು ಕಾಮನ ಮಿತ್ರನೆಂದದ |
ನೋಱುಸುವಳು ಶುಕವವನ ವಾಹನವೆಂದು ಹೆಱುಸಾರಿ ||
ಪರಮರಾಳಪಿಕಾಳಿಗಳನಾ |
ಸ್ಮರನ ವೀರಭಟಾಳಿಯೆಂದೆದೆ |
ಜರಿಯುತಿರ್ದಳು ಕಾಂತೆ ವಿರಹದೊಳಿಂತು ಭ್ರಮಿತದಲಿ || ೩೬
ನಾರಿ ವಿರಹಾಗ್ನಿಯನು ಸೈರಿಸ |
ಲಾಱದಬ್ಜಾಕರವ ಹುಗೆ ತ |
ನ್ಮಾರಶಿಖಿಯಿಂದಾಕೊಳನ ನೀರುಕ್ಕಿ ಬರುತಿರಲು ||
ನಾರಿಯರು ಬೆಱಗಾಗಿ ಬಹುವಿ |
ಸ್ತಾರದಲಿ ಶೈತ್ಯೋಪಚಾರವ |
ನಾರಮಣಿಗೆಸಗಿದರು ಭೂಮಿಪಾಲ ಕೇಳೆಂದ || ೩೭
ಹರಳು ಕಣ್ಣೊಳು ಸಿಲುಕೆ ಸೈರಿಸ |
ಲರಿದು ನಳಿತೋಳುಗಳೊಳಾಪೇ |
ರುರ ವಿಶಾಲಾಕ್ಷಿಗಳ ನಿಡುಹುಬ್ಬುಗಳ ನಗೆಮೊಗದ ||
ಹೆಱಕಿನೊಸಲ ಸುಲಿಪಲ್ಲುಗಳಲೆಸೆ |
ವರಸ ಕಣ್ಣೊಳು ತೊಡಳುತಿರಲೇ |
ತೆಱದಿ ನಾ ಜೀವಿಸುವೆನೆಂದಱಲಿದಳು ಹರಿಣಾಕ್ಷಿ || ೩೮

ಉರಿಯು ಸೈರಿಸಲಾಱಕೆ ಬೇಗದಿ |
ಹರಣ ಹೋಹಂತೀಕ್ಷಿಸುವೆ ಹಿಮು |
ಕರನ ನೆರೆಯುಪ್ಪುವೆನು ಮರುತನನಳಿಪಿಕಾದಿಗಳ ||
ಸರವನಾಲಿಪೆನಲ್ಲದಿರೆ ಮಧು |
ರರವವನು ಸೇವಿಸುವೆನೆಂದಂ |
ಬುರುಹಲೋಚನೆ ಸಾವ ನಿಶ್ಚೈಸಿದಳು ಚಿತ್ತದಲಿ || ೩೯

ಹರಣವುೞಿಯದದೆಂತು ತನ್ನಯ |
ವರಶರೀರ ಪೃಥ್ವಿಯನು (?) ನೃಪವರ |
ಚರಿಸುವೆಡೆಯಲಿ ಜೀವವನು ತನ್ಮಕುರದಲಿ ಜಲವ ||
ಸರಸಿಯಲಿ ನಾಕವನು ಧವನೋ |
ವರಿಯೊಳನಿಲನ ತಾಳವೃಂತದೊ |
ಳಿರಿಸಿ ಸಲಹೆಂತಾದೊಡೆಂದೞಲಿದಳು ಹರಿಣಾಕ್ಷಿ || ೪೦

ಕುಂದುವಿಂದುವನೊಂದುವುದಱಿಂ |
ದಿಂದುಮುಖಿಯು ಮುಖೇಂದು ಗುಡೆ ಹೀ |
ನೇಂದು ನೇತ್ರಚಕೋರಿಗಳು ಬಂದೊಂದಿ ತದ್ವಿತಯ (?) ||
ಮುಂದಹಾಸದೊಳಿಂಟೆ ಜೀರ್ಣಿಸ |
ದಂದು ಕಾಱದಳಿಳೆಯೊಳತಿಯುದ |
ಬಿಂದುಗಳನೆನೆ ಸುರಿದಳಂಗನೆ ಬಾಷ್ಪವಾರಿಯನು || ೪೧

ಇಂದುಕಾಂತೋಪಲಜಲಂಗಳ |
ತಂದು ಸ್ಮರತೀರ್ಥಪ್ರಸಾದವಿ |
ದೆಂದು ಹೃದಯದೊಳುತ್ಕುಚಂಗಳೊಳುರುಕರಾಬ್ಜದಲಿ ||
ಕಂಧರದೊಳಾಸ್ಯದಿ ಕಪೋಲದಿ |
ಕೆಂದಳದೊಳೊಲವಿಂದಲೇಕಾ |
ಚಂದ್ರವದನೆಗೆ ಲೇಪಿಸಿದರಂಭೋಜನೇತ್ರೆಯರು || ೪೨

ಉರಿಯೊಳಾಜ್ಯವನೆಱೆದವೊಲು ತ |
ತ್ತರುಣಿಗಾಶೈತ್ಯೋಪಚಾರವ |
ವಿರಚಿಸಲು ತದ್ವಿರಹಶಿಖಿಯಿಮ್ಮಡಿಸಿ ಹಾಸಿರ್ದ ||
ಅರಳು ನೆಱಕಿ ಮಸಿಯಾಗೆ ಹಾರೋ |
ತ್ಕರಗಳತಿ ಕಂದಿದುವು ಚಂದನ |
ವಿರದೆ ಕತ್ತುರಿಯಾಯ್ತು ವಿರಹಾಗ್ನಿಯೊಳು ಕಾಮಿನಿಗೆ || ೪೩

ಬೆಂದ ವಿರಹಾನಲಗೆ ಶುಷ್ಕವ |
ನೊಂದಿಸಂದೊಲು ತನುವಿನೊಳು ಸಿರಿ |
ಗಂಧವಿಡಿಸಿ ಜಲೇಜಪತ್ರದಿ ಬೀಸಲಿಕೆ ಸತಿಯು ||
ಕೊಂದು ಕಳೆ ಕೈಯಾಱಿಕೆ ನೀ ಪವ |
ನೇಂಧನಾಗ್ನಿಯು ಸಂಗವುದೊಳುರಿ |
ಸಂದುವುದೆ ಘನವಹುದು ಮಾಣೆನ್ನೆಂದು ಹಲುಬಿದಳು || ೪೪
ರಮಣಿ ವಿರಹಾಗ್ನಿಯನು ತಾನುಪ |
ಶಮಿಸೆ ಕಾಮಂಗಾಕೃತಿಯ ಚಂ |
ದ್ರಮಗೆ ನಿತ್ಯಾರ್ಘ್ಯವನು ಮಂದಾನಿಲಗೆ ಭೋಜನವ ||
ವಿಮಲಚಂದ್ರಿಕೆಗಿಷ್ಟವನು ಸು |
ಭ್ರಮರಶುಕಕಾರಾಮುವೀವೆವು |
ಕ್ಷಮಿಸೆನುತ ಹರಕೆಯನು ತಾಳ್ದರು ಹರಿಣನೇತ್ರೆಯರು || ೪೫
ಹೃದಯದಿನಿಯನ ತಡವಿ ನೋಡುವ |
ವಿಧದಿ ಕರ ಕುಚಮಧ್ಯದಲಿ ಸಾ |
ರ್ದುದು ಪತಿಯ ಧ್ಯಾನಿಸುವವೊಲು ಕಣ್ ಮುಚ್ಚಿದುವು ಸರವ ||
ಮುದದೊಳಾಲಿಸುವಂತೆ ತಾ ಮಲ |
ಗಿದಳು ಕಾಣದೆ ಜೀವವನು ನೀ |
ಗಿದಳು ತಾನೆಂಬಂತೆ ಮೂರ್ಛಿತೆಯಾದಳಿಂದುಮುಖಿ || ೪೬
ತರುಣಿ ಸುಕುಮಾರಕನ ವಿರಹೋ |
ತ್ಕರದಿ ಮೂರ್ಛಿತೆಯಾಗಿರಲು ಪಂ |
ಕರುಹಮುಖಿಯರು ನಡುಗಿ ನಾವು ಕುಬೇರದತ್ತಂಗೆ ||
ಅಱುಪದಿರೆ ಕೇಡೆಮಗೆ ಬಹುದೆಂ |
ದಿರದೆ ಕುಮುದಾಂಬಕಿಯ ಜನಕನ |
ಹೊರೆಗೆ ಒಂದಡಿಗೆಱಗಿ ಬಿನ್ನೈಸಿದರು ವಿನಯದಲಿ || ೪೭
ವರವಣಿಗ್ವರ ನಿನ್ನ ಸುತೆಯುರು |
ತರದಿ ಜಲವನಕೇಳಿಗೆಯ್ದು |
ತ್ತಿರಲು ಜೀವಂಧರನ ಕಂಡತಿವಿರಹತಾಪದಲಿ ||
ತರುಣಿ ಬದುಕುವಳಲ್ಲ ನಾವದ |
ನಱುಹೆ ಶುದ್ಧರು ತತ್ಕುಮಾರನ |
ನೆರಹಬೇಕು ಮೃಗಾಕ್ಷಿಗೆನೆ ವೈಶ್ಯೇಂದ್ರ ಬೆಱಗಾದ || ೪೮

ಧರಣಿಯೊಳು ಸಮಕುಲ ಸಮಾನೈ |
ಶ್ವರಿಯು ಸಮಗುಣ ಸಮವಿಭವಸೌಂ |
ದರಿಯುಶೀಲಾಚಾರ ಸಮಯೌವನವು ಸಮನಿಸಲು ||
ಪರಿಣಯುವನೆಸಗುವುದು ಮತವಾ |
ಪರಿಯೊಳೆಮಗನುಕರಿಸಿತೆಂದತಿ |
ಹರುಷದಲಿ ಗಂಧೋತ್ಕಟನ ಕರೆಸಿದನು ವೈಶ್ಯೇಂದ್ರ || ೪೯

ಕರೆಸಿ ಗಂಧೋತ್ಕಟಗೆ ವಾಣಿಜ |
ವರನು ನುಡಿದನು ಮತ್ಸುತೆಯು ನಿ |
ನ್ನ ರುಕುಮಾರಕಗೀವೆನೆನೆ ಲೇಸೆಂದು ಹರುಷದಲಿ ||
ಸುರುಚಿರದ ವೈವಾಹವನು ವಿ |
ಸ್ತರಿಸೆ ಗುಣಮಾಲೆಯೊಳು ಜೀವಂ |
ಧರನು ಸುಖದಿಂದಿರ್ದನಮರೇಂದ್ರನ ಸುತೇಜದಲಿ || ೫೦

ಇದು ವಿನಮದಮರೇಂದ್ರ ಶ್ರೀಜಿನ |
ಪದಕಮಲಷಟ್ಚರಣ ವಾಣೀ |
ವದನದರ್ಪಣ ಭೂಸುರೋತ್ತಮ ಬಸವಣಾಂಕಸುತ ||
ಚದುರ ಭಾಸ್ಕರರಚಿತ ಧರ್ಮ |
ಪ್ರದನ ಜೀವಂಧರನ ಚರಿತೆಯೊ |
ಳಿದುವೆ ಗುಣಮಾಲೆಯ ವಿವಾಹ ನೃಪಾಲ ಕೇಳೆಂದ || ೫೧

ಹತ್ತನೆಯ ಸಂಧಿ ಮುಗಿದುದು.

## ಹನ್ನೊಂದನೆಯ ಸಂಧಿ.

ಸೂಚನೆ|| ಮರಣಭಯವನು ಯಕ್ಷನಿಂ ಪರಿ |
ಹರಿಸಿಕೊಂಡಾಚರಿಸಿ ಜೀವಂ |
ಧರನು ಪದ್ಮೆಯೆನಿಪ್ಪ ಕಾಂತೆಯ ಪಡೆದನೊಲವಿನಲಿ ||

ಧರಣಿಪತಿ ಕೇಳುತ್ತ ಜೀವಂ |
ಧರನ ಕೈಯೊಳು ನೊಂದ ಪಟ್ಟದ |
ಕರಿಕುಲಾಧೀಶ್ವರನು ಕಬಳವನಂದು ಮೊದಲಾಗಿ ||
ತೊಱಿಕಿದಿರಲು ಮಾವಂತರುಗಳತಿ |
ಭರದಿ ಕಾಷ್ಠಾಂಗಾರಗಂದಾ |
ಕ್ರೋಶಿಸ ಬಿನ್ನೈಸಲ್ಕೆ ಕಿಡಿಕಿಡಿಯಾಗಿ ಗರ್ಜಿಸಿದ || ೧

ಸಿರುತದಿಂದಲನಂಗಮಾಲೆಯು |
ನೆರೆದ ತಪ್ಪೊಂದಖಿಳತುಱುಗಳ |
ಮರಳಿಸಿದ ಖತಿಯೊಂದಖಿಳಭೂಪಾಲಕರ ಗೆಲಿದು ||
ಸುರುಚಿರದಿ ಗಂಧರ್ವದತ್ತೆಯು |
ವರಿಸಿದತಿರೋಷಾಗ್ನಿಯೊಳಗಿದು |
ಬೆರಸಿ ಮದನನ ಕರೆದು ಕಾಷ್ಠಾಂಗಾರನಿಂತೆಂದ || ೨

ಗರುಡನನು ನೀರೊಳ್ಳೆ ಸಿಂಹವ |
ಕರಿ ಗಜೇಂದ್ರನ ಸೊರಜು ವ್ಯಾಘ್ರನ |
ಹರಿಣ ಕೆಣಕಿದ ಪರಿಯೊಳೆನ್ನನು ಹರದನಣುಗನಿಸ ||
ಕೆರಳಿಸಿದನೀಕ್ಷಣವವನ ಮಂ |
ದಿರವ ಮುತ್ತಿಯೆ ಹಿಡಿದು ತಾಯೆಂ |
ದರಸ ನೇಮಿಸೆ ಬಂದು ಗೇಹವ ಮುತ್ತಿದನು ಮದನ || ೩

ತುಱುಗಿ ಗಂಧೋತ್ಕಟನ ನಿಜಮಂ |
ದಿರವ ದಟಿ ಮೋಹರಿಸೆ ಜೀವಂ |
ಧರನು ಕೇಳಿದುವೆಳೆಯು ಕುಪಿತಕೃತಾಂತನಂದದಲಿ ||
ಕೆರಳಿ ಕಾಷ್ಠಾಂಗಾರಸಹಿತನಿ |
ಬರನು ಸವಱುವೆನೆಂದೊಡಾತನ |
ಸೆಱಗ ಹಿಡಿದನುನಯದಿ ಗಂಧೋತ್ಕಟನು ತಾ ನುಡಿದ || ೪

ಹರದರಾವೆಲೆ ಮಗನೆ ಕೇಳಾ |
ವರಸಿಗಖಿಳಾಮಾತ್ಯರಿಗೆ ಕುವ |
ರರಿಗೆ ತಳವಾಱರಿಗೆ ಕರಣನಿಯೋಗಿಗಳಿಗಂಜಿ ||
ಚರಿಸಬೇಕಿದು ನೀತಿ ಕಾರ‍್ಯಾಂ |
ತರವೆ ಬೇಕೆಮಗೆಂದು ಜೀವಂ |
ಧರನ ನಾನಾ ತೆಱದಿ ಸಂತೈಸಿದನು ವಿನಯದಲಿ || ೫

ಎಂದು ಗಂಧೋತ್ಕಟನು ತನ್ನಯ |
ನಂದನನ ಹೆಡಗೈಯ ಬಿಗಿದೈ |
ತಂದು ಕಾಷ್ಠಾಂಗಾರನಡಿಗಳಿಗೆಱಗಿ ಜೀವಕನ ||
ತಂದು ನಿಲಿಸಿಯೆ ಕೊಟ್ಟು ಕಾಯಬೇ |
ಕೆಂದೊಂದು ತಪ್ಪಲ್ಲಿವನ ಸಲಹುವು |
ದೆಂದು ಕರುಣವ ತೋಱಿ ಬಿನ್ನೈಸಿದನು ವಿನಯದಲಿ || ೬

ಹಸಿದ ಹೆಬ್ಬುಲಿಯಿದಿರಿನಲಿ ಮೃಗ |
ನುಸುಳೆ ರಕ್ಷಿಸಿದವುದೆ ಪಾಪ |
ವ್ಯಸನಿ ಕಾಷ್ಠಾಂಗಾರನಿಗೆ ಕರುಣಾನುಭಾವದಲಿ ||
ಉಸಿರಿದೊಡೆ ದಯೆ ಹುಟ್ಟುವುದೆ ಭರ |
ವಶದೊಳೀತನನರಿದು ಬಾಯಂ |
ದಸಮಬಲನಟ್ಟಿದನು ಮದನನನಧಿಕರೋಷದಲಿ || ೭

ಅರಸ ಕೇಳಾಮದನನಾತನ |
ಶಿರವ ಚಿಚ್ಚೇದಿಸುವೆನೆಂದಾ |
ಪುರದ ಬಹಿರುದ್ಯಾನದಲಿ ಬರಲಾಗ ಸುಕುಮಾರ ||
ನಿರುತದಲಿ ಯಕ್ಷೇಶ್ವರನ ಹೃ |
ತ್ಸರಸಿಜಾತದಿ ನೆನೆಯಲಾತನ |
ತೀಱನನಱಿದಟ್ಟಿದನು ಭರವಶದಿಂದ ವಿದ್ಯೆಗಳ || ೮

ಭರದೊಳಾವಿದ್ಯೆಗಳು ಜೀವಂ |
ಧರಕುಮಾರನನುಯ್ದು ಯಕ್ಷೇ |
ಶ್ವರನ ಬಾಹೆಯೊಳಿರಿಸಲಿತ್ತ ಕುಮಾರಕನ ಶಿರವ ||
ತಱಿದನೆಂದಾಮದನ ಮರಳಿದು |
ಬರೆ ಸಖರು ಗುಣಮಾಲೆ ಸಹಿತನ |
ವರತ ಗಂಧೋತ್ಕಟನು ಚಿಂತಾಂಬುಧಿಯೊಳಳವಳಿದ || ೯

ಅರಸ ಕೇಳ್ ಬಳಿಕಿತ್ತ ಯಕ್ಷೇ |
ಶ್ವರನು ಜೀವಂಧರನನುಯ್ದಾ |
ದರದಿ ಶಶಿಕಾಂತೋದಕದೊಳುದ್ವರ್ತನಂಗೆಯ್ದು ||
ಪರಿಮಳದ್ರವ್ಯಾದಿ ವಸ್ತ್ರಾ |
ಭರಣದಲಿ ಸತ್ಕರಿಸಿ ತನ್ನಯ |
ಹೊರೆಯೊಳೊಲವಿಂದಿರಿಸಿಕೊಂಡಿರ್ದನು ಸುಲೀಲೆಯಲಿ || ೧೦

ಹರುಷದಲಿ ಕೆಲದಿವಸ ಜೀವಂ |
ಧರನು ಮುದದಿಂದಿರ್ದು ಯಕ್ಷೇ |
ಶ್ವರಗೆ ನುಡಿದನು ಸಕಲದೇಶಾಂತರವನನಿತುವನು ||
ಪರಿಕಿಸಿಯೆ ಬಹೆನೆಂದೊಡಾತಂ |
ಗುರುತರದಿ ಮೇಲಪ್ಪ ಲಾಭೋ |
ತ್ಕರದ ಫಲಸಿದ್ಧಿಗಳ ತಿಳಿದಿಂತೀಗ ಹೋಗೆಂದ || ೧೧

ಎನಲು ಯಕ್ಷಾಧೀಶ್ವರನ ಪದ |
ವನಜದಲಿ ಬಂದೆಱಗಿಯಾತಗೆ |
ವಿನುತಗಾನ ವಿಷಾಪಹಾರಣ ಕಾಮರೂಪಗಳು ||
ಎನಿಪ ವಿದ್ಯಾತ್ರಯವನೊಲಿದಿ |
ತ್ತನುನಯದಿ ತನ್ಮಂತ್ರಗಳನೊರೆ |
ದನಘನೊಲವಿಂದಪ್ಪಿ ಕಳುಹಿದನಾಕುಮಾರಕನ || ೧೨
ವಿನುತಯಕ್ಷೇಶ್ವರನ ಬೀಳ್ಕೊಂ |
ಡನಘ ಜೀವಂಧರನು ನಾನಾ |
ಜನಪದಂಗಳ ಕಱಿದು ಬಂದಾನಂದಲೀಲೆಯಲಿ ||
ಜಿನಗೃಹಂಗಳ ಹೊಕ್ಕು ದೇವಾ |
ರ್ಚನೆಯ ಮಾಡುತ ಬಱಿಕ ಘನಕಾ |
ನನವನೆಯ್ದಿದನಾಕುಮಾರಕನರಸ ಕೇಳೆಂದ || ೧೩
ಲಲಿತರಂಭಾನ್ವಿತದಿ ಸುಮನಾ |
ವಳಿಯಿನಿಂದ್ರಾಣೀಸಮೇತದಿ |
ಸುಲಲಿತಾಮೃತವಜ್ರಮಂದಾರಪ್ರಯುಕ್ತದಲಿ ||
ವಿಲಸದಮರೀವೃಂದದಿಂದು |
ಜ್ಜ್ವಲಸಹಸ್ರಾಕ್ಷಾನ್ವಿತದಿ ಕಂ |
ಗೊಳಿಸಿತಾಕಾಂತಾರ ವಿಮಲಸ್ವರ್ಗದಂದದಲಿ || ೧೪
ವಿನುತಭಲ್ಲವ್ರಾತ ಬಾಣಾ |
ಸನದಿ ನಾಗಾನೀಕ ಭೂಭೃ |
ದ್ಘನದಿ ಕಂಚುಕಿವಾಜಿಕುಲವಿಜಯಾಭಿರಾಮದಲಿ ||
ಅನಿಲಘೋಷಿ ಸುಖಡ್ಗಧೇನು |
ಪ್ರಣಿತಚಕ್ರದಿ ಭೂಮಿಪರ ವಾ |
ಹಿನಿಯವೊಲು ತದ್ಗಹನ ರಂಜಿಸಿತಧಿಕವಿಭವದಲಿ || ೧೫
ಶರದನವ್ಯಾಕುಲಮೃಗಾರವ |
ಕರುಣವುಜ್ಜ್ವಲ ಶರಭರೌದ್ರಾ |
. . . . . . . . . . ಷ್ಟವ ಗುಹಾಸ್ಯದಿ ಮಾಂಸ ಬೀಭತ್ಸ ||
ಹರಿಗಳಬ್ಬರ ವೀರ ಮುನಿಪನ |
ಶರವು ಶಾಂತ ಸಮಸ್ತಮೃಗಸಂ |
ಹರಿತವದ್ಭುತವಾಗೆ ಬೇಱಿತರಣ್ಯ ನವರಸವ || ೧೬

ಇಳೆಯ ಪತಿ ಕೇಳಖಿಳದೇಶವ |
ಕಳೆದು ಪಲ್ಲವದೇಶದೊಳು ನೃಪ |
ತಿಲಕ ಧನಪತಿಯಾಳುತಿಹ ಚಂದ್ರಾಭಪುರವೆಂಬ ||
ಹೊಱಲನೆಯ್ದಿಯೆ ಜೀವಕನು ಸ |
ಲ್ಲಲಿತಚೈತ್ಯಾಲಯದೊಳರ್ಹನ |
ನಿರದೆ ಪೂಜಿಸುತಿರ್ದ ಕತಿಪಯದಿವಸ ಭಕ್ತಿಯಲಿ || ೧೭

ಮಾರನಿಭನಾಪುರದೊಳಿಂತು ವಿ |
ಹಾರಿಸುತ್ತಿರಲಾನೃಪನ ಸುಕು |
ಮಾರಿ ನಾರೀರತ್ನವೆನಿಸುವ ಪದ್ಮೆಯೆಂಬವಳು ||
ಕ್ರೂರಫಣಿದಷ್ಟದೊಳು ಮೂರ್ಛೆಯೊ |
ಳಾರಸೆಯೊಳೊಱಗಿರಲು ಶಸ್ತ್ರ ಶ |
ರೀರದಲಿ ಮುಱಿದಂತೆ ತತ್ಪಿತನಲ್ಲಿಗೆಯ್ತಂದ || ೧೮

ಲಲನೆಯಂಗದೊಳುಷ್ಣವನು ಕರ |
ತಲನಖಂಗಳೊಳರುಣತೆಯುನಂ |
ಗುಲಿಗಳಲಿ ಚಿಟುಕನು ಮುಖದ ಸುಭಗತೆಯನಕ್ಷಿಯಲಿ ||
ಹೊಳೆಹ ಮೂಗಿನೊಳುಸಿರ ಕೇಶದಿ |
ಬಲುಹ ನಾಲಗೆಯಲ್ಲಿ ದ್ರವವನು |
ಇಳೆಯ ಪತಿ ಕಾಣದೆ ಕರಗಿ ಕಂಗೆಟ್ಟು ಬಸವಳಿದ || ೧೯

ವರಕುಮಾರಿಯ ಜೀವವನು ಪಡೆ |
ದರಿಗೆ ಸುತೆಸಹಿತರ್ಧರಾಜ್ಯವ |
ಸಿರುತದಲಿ ತಾನೀವೆನೌಷಧಯಂತ್ರತಂತ್ರದಲಿ ||
ಪರಿಣತರು ಬಂದಹಿವಿಷವ ಪರಿ |
ಹರಿಸಿ ನೀವೆಂದಖಿಳದೇಶಾಂ |
ತರಗಳಲಿ ಸಾಱಿಸಿದನಾಜನಪತಿಯು ಲೋಕದಲಿ || ೨೦

ಧರಣಿಪಾಲಕನಿಂತು ಸಾಱಿಸು |
ತಿರಲು ನಾನಾದೇಶದೊಳಗು |
ಳ್ಳುರಗಶಾಸ್ತ್ರಪ್ರೌಢರುಗಳೈತಂದು ತಾವಱಿದ ||
ಪರಿಯೊಳಾಕೆಯ ನೋಡಿ ಸತಿಗಸು |
ವೆರಸದಿರೆ ಬೇಸತ್ತು ಹೋಗು |
ತ್ತಿರಲು ಜೀವಂಧರನು ಕಂಡಿಂತೆಂದನಾತ್ಮದಲಿ || ೨೧

ಅಂದೆನಗೆ ಯಕ್ಷಾಧಿಪತಿ ಸಾ |
ನಂದದಿಂದೆ ವಿಷಾಪಹಾರದ |
ಸಂದ ಮಂತ್ರವ ತನಗನುಗ್ರಹಗೆಯ್ದನದು ತಾನು ||
ಇಂದು ಫಲಿಸಿದುದೆನಗೆನುತ ನಲ |
ವಿಂದಲಾಧನಪತಿಯ ಗೇಹವ |
ನೊಂದಿದನು ಸುಕುಮಾರನಾಕಾಮಿನಿಯ ಪುಣ್ಯದಲಿ || ೨೨

ಗರುವ ಗತಿಯಿಂದಾಕುಮಾರಕ |
ಬರಲು ಜೀವಂಧರನ ಕಂಡಾ |
ನೆರೆದ ಜನವೀಪುರುಷ ಭದ್ರಾಕಾರನಂಗನೆಯ ||
ಗರುವ ಮನದಲಿ ಜೀವವನು ಪಡೆ |
ದರೆ ಸುವರ್ಣಕೆ ದಿವ್ಯಪರಿಮಳ |
ವೆರಸಿದಂತಹುದೆನುತ ಬಿಡದೀಕ್ಷಿಸಿದರರ್ತಿಯಲಿ || ೨೩

ಬೞಿಕ ಜೀವಕನಾಕುಮಾರಿಯ |
ಬೞಿಗೆ ಬಂದಾಯಕ್ಷಪಾಲಕ |
ತಿಳಿಹಿತಭಿಮಂತ್ರಿಸಲು ಕಗ್ಗತ್ತಲೆಯೊಳಗೆ ದಿನಪ ||
ಸುೞಿವವೊಲು ದುಷ್ಟೋರಗದ ವಿಷ |
ತೊಲಗಲಾಕ್ಷಣ ನಿದ್ದೆದಿಳಿಪಂ |
ತಲಘುಕುಚೆ ತಾನೆದ್ದು ಕಣ್ದೆಱೆದಳು ಸರಾಗದಲಿ || ೨೪

ನಿರುತ ನಿನ್ನಯ ಹೆಸರು ಜೀವಂ |
ಧರಸು ಗತಜೀವವನು ಪಡೆದುದು |
ಧರೆಗಿವೇನಚ್ಚರಿಯುವನಿಪನ ರೂಪನಣಕಿಸುವ ||
ಪರಿಯಲಾತನ ರೂಪ ನಸುನಗೆ |
ವೆರಸಿ ಸತಿ ನೋಡುತ್ತ ವಿರಹದೊ |
ಳಿರಲು ತತ್ಪುರಜನರು ಗುಡಿಗಟ್ಟಿದರು ಹರ್ಷದಲಿ || ೨೫

ತೊಲಗಿದಸು ಬಂದಂತೆ ಭೂಮೀ |
ವಲಯ ಪತಿ ಹರ್ಷಾಂಬುನಿಧಿಯೊಳು |
ಮುೞುಗಿ ಜೀವಂಧರನ ಕಂಡನುನಯದಿ ಬಿಗಿಯಪ್ಪಿ ||
ಬೞಿಕ ಕುಮರನ ತೆಱನನೆಲ್ಲವ |
ತಿಳಿದು ಬೀಱುತಲಂಚೆವಾಸಿನೊ |
ಳೊಱಗಿ ಬಿದ್ದಂತಾದಳಂಗನೆಯೆಂದು ರಾಗಿಸಿದ || ೨೬

ಎಂದನೇಕಸ್ತುತಿಸಹಸ್ರಗ |
ಳಿಂದಲಾಧನಪಾಲ ನೃಪ ಜೀ |
ವಂಧರನ ಕೊಂಡಾಡಿ ಸುತೆಸಹಿತರ್ಧರಾಜ್ಯವನು ||
ಒಂದಿ ಧಾರೆಯನೆಱೆದು ಕುಡೆ ಸಂ |
ಕ್ರಂದನಿಭನಾಪದ್ಮೆಯೊಳು ಸುಖ |
ದಿಂದೆ ವಿಭವದೊಳಿರ್ದನಾಚಂದ್ರಾಭಪುರದೊಳಗೆ || ೨೭

ಇದು ವಿನಮದಮರೇಂದ್ರ ಶ್ರೀಜನ |
ಪದಕಮಲಷಟ್ಚರಣ ವಾಣೀ |
ವದನದರ್ಪಣ ಭೂಸುರೋತ್ತಮ ಬಸವಣಾಂಕಸುತ ||
ಚದುರ ಭಾಸ್ಕರರಚಿತ ಧರ್ಮ |
ಪ್ರದನ ಜೀವಂಧರನ ಚರಿತೆಯೊ |
ಳಿದುವೆ ಪದ್ಮಾಸಂಗವವನೀಪಾಲ ಕೇಳೆಂದ || ೨೮

ಹನ್ನೊಂದನೆಯ ಸಂಧಿ ಮುಗಿದುದು.

---

## ಹನ್ನೆರಡನೆಯ ಸಂಧಿ.

---

ಸೂಚನೆ|| ಕ್ಷೇಮಲಕ್ಷ್ಮಿಯ ವರಿಸಿ ದುಷ್ಟ |
ಸ್ತೋಮವನು ಬೋಧಿಸುತ ನಡೆದಾ |
ಕ್ಷೇಮಪುರದಲಿ ಕನಕವಾಲೆಯನವನಿಪತಿ ಪಡೆದ ||

ಇಳೆಯ ಪತಿ ಕೇಳಾಕುಮಾರಕ |
ತಿಲಕನಾಪದ್ಮೆಯೊಳು ಸೌಖ್ಯದೊ |
ಳೊಲವಿನಲಿ ಚಂದ್ರಾಭನಗರಿಯೊಳೊಂದು ವರುಷವನು ||
ಕಳೆದು ಒಱಿಕಲ್ಲಿಂದ ನಡೆದ |
ಗ್ಗಳದರಣ್ಯದೊಳಾಚರಿಪ ಸ |
ಲ್ಲಲಿತಮಿಥ್ಯಾತಪಸಿಗಳ ಕಂಡವರಿಗಿಂತೆಂದ || ೧

ತಂಡುಲವು ದೊರಕದೆ ಜಲಾನಲ |
ಭಾಂಡ ದೊರಕಿದೊಡೇನು ಸಫಲವ |
ಖಂಡತತ್ವಜ್ಞಾನವಿಲ್ಲದೆ ಬಱಿದೆ ದೇಹವನು ||
ದಂಡಿಸಿದೊಡೇನಹುದು ಮುತ್ತುರಿ |
ಗೊಂಡದೊಳಗಿರಲೇಕೆ ಜಡೆಗಳ |
ಮಂಡೆಯಲಿ ಧರಿಸಿರ್ದೊಡೇಸಹುದೆಂದನಾಮುನಿಯ || ೨

ಜಲದೊಳಗೆ ಮುಳುಗಲ್ಕೆ ಒಟೆಲಗ |
ಳೊಳಗೆ ಸಿಕ್ಕಿಹ ಕೆಲವು ಜಂತುಗ |
ಳಳಿವುವೀಪಂಚಾಗ್ನಿಯಿಂದವನಿಯೊಳಗಿಹ ಜೀವ ||
ಕೆಲವಳಿವುವೀಹೊದೆದ ಚರ್ಮದ |
ಲಲೆವ ಕೆಲವಂಡಜಗಳಳಿವುವು |
ತಿಳಿಯೆ ನಿಮ್ಮ ತಪಸ್ಸಿನಿಂದತಿಹಿಂಸೆ ಬಹುದೆಂದ || ೪
ಹೃದಯದಮಳಜ್ಯೋತಿಯನು ಬೆಳ |
ಗದೆ ನವಾರತಿಯೆತ್ತಲೇನಹು |
ದೊಡವಿದೊಳಗಣ ಮಲವ ತೊಳೆಯದೆ ದೇಹಕಲ್ಮಷವ ||
ಮುದದಿ ತೊಳೆದೊಡದೇನು ಕರ್ಮವ |
ಬಿದಿರಿಸದೆ ಮುಕ್ತಿಯನು ಸಾರುವ |
ವಿಧವದೆಂತೆಂದವನಿಪತಿ ಜಱೆದನು ತಪಸ್ವಿಗಳ || ೫
ಒಂದಡಿಯನಿಳೆಗೂಱದಿಹ ನಿ |
ರ್ಬಂಧವೇಕೆಲೆ ಕಾಯಿಕಸುರನು |
ತಿಂದು ಜೀವವ ಗಾಸಿಮಾಡುವುದೇಕೆ ಕರ್ಮಗಳ ||
ದಂದುಗವದೇಕಿವನುಳಿದು ಸಾ |
ನಂದದಲಿ ಸರ್ವಜ್ಞನನು ಭಜಿ |
ಸೊಂದು ಮುಕ್ತಿಶ್ರೀಯನೆಂದು ಕುಮಾರ ಬೋಧಿಸಿದ || ೬
ಗರುಡಮತದಿಂದಲ್ಲದಹಿಭಯ |
ಕರಗುವುದೆ ಸರ್ವಜ್ಞನಾಮ |
ಸ್ಮರಣೆಯಿಂದಲ್ಲದೆ ಭವಾಂಭೋರಾಶಿ ಬತ್ತುವುದೆ ||
ನೆರೆದು ಹಿಂಸೆಯ ಮಾಣ್ಪ ನಿಮ್ಮಾ |
ಚರಣೆಯೇಕಿದನುಳಿದಹಿಂಸಾ |
ಪರಮ ಧರ್ಮವೆನಿಪ್ಪ ಶ್ರುತಿವಿಡಿದೆಸಗಿ ನೀವೆಂದ || ೭
ಅವ್ಯಯನನಂತಾತ್ಮನದ್ವಯ |
ದಿವ್ಯತೇಜನಗವ್ಯತ್ರಿಜಗ |
ತ್ಸೇವ್ಯನಹ ಜಿನಪತಿಯ ಪಡೆದಾಮತದಿ ತಪವೆಸಗಿ ||
ನವ್ಯಮುಕ್ತಿಶ್ರೀಯ್ಯ ಪಡೆವುದು |
ಭವ್ಯವೆನೆಯುವರೊಳಗೆ ಕೆಲಬರು |
ಭವ್ಯರಾಗೆ ಕುಮಾರ ಹರುಷದಿ ಮತ್ತೆ ಗಮನಿಸಿದ || ೮

ಮೆಱೆವ ದಕ್ಷಿಣದಿಕ್ಕಿನಲಿ ಬಂ |
ಧುರದ ವಿಷಯದಿ ವಿಮಳಪುರವರ |
ಕರಸು ನರಪತಿಯಾಪುರದಿ ಗುಣಭದ್ರನೆಂದೆಂಬ ||
ಪರದನಿಹನಾತನ ಕುಮಾರಿತಿ |
ವರಸತಿಯು ಮಾಣಿಕ್ಯವೆಸೆ ವಿ |
ಸ್ತರದೊಳೆಸೆದಳು ಮದನಮೋಹನಮೂರ್ತಿಯಂದದಲಿ || ೮

ಆತನೂಜೆಯನಾಪುರದೊಳೆಸೆ |
ವಾತಿಶಯದ ಸಹಸ್ರಕೂಟ |
ಖ್ಯಾತಜಿನಚೈತ್ಯಾಲಯವದುಂಟಾಕವಾಟಗಳ ||
ವೀತರಾಗನ ನುತಿಯಿಸಿ [ತೆಱೆಸಿ] |
ದಾತಗೀವೆನೆನುತ್ತ ತನುಜೆಯ |
ನೋತು ರಕ್ಷಿಸುತಿರ್ದನಾಗುಣಭದ್ರನೊಲವಿನಲಿ || ೯

ಅರಸ ಕೇಳ್ ಜೀವಂಧರನು ತ |
ತ್ಪುರಕೆ ಬಂದಾಹೊಱಲ ಜಿನನಂ |
ದಿರದ ಬಾಗಿಲದೆಂತು ಮುಚ್ಚಿಯೆ ತೆಱೆಯದಾಸ್ಥಿತಿಯ ||
ಪುರಜನದಿನಱೆದಾಕವಾಟವ |
ತೆಱೆಸಿ ದೇವನ ನೋಡಬೇಕೆಂ |
ದರುಹಗಭಿಮುಖವಾಗಿ ಸಂಸ್ತುತಿಸಿದನು ಜಿನಪತಿಯ || ೧೦

ಜಯಜಯ ಮಹಾಮಹಿಮ ನಿರುಪಮ |
ಜಯಜಯ ಜಯಾನಂದ ಶುಭಕರ |
ಜಯಜಯ ಜಗನ್ನಾಥ ಜನನವಿದೂರ ವಿಜ್ಞಾನ ||
ಜಯಜಯ ತ್ರಿದಶೇಂದ್ರವಂದಿತ |
ಜಯತು ಶಾಶ್ವತ ಜಯ ಜಗತ್ಪತಿ |
ಜಯಜಯೆಂದು ಕುಮಾರ ಸಂಸ್ತುತಿಸಿದನು ಜಿನಪತಿಯ || ೧೧

ಅಕ್ಷಯ ವಿಶಾಲಾಕ್ಷ ಸುಲಲಿತ |
ವಕ್ಷ ಮೋಕ್ಷಾಧ್ಯಕ್ಷ ತ್ರಿಭುವನ |
ದಕ್ಷ ನುತಜನಪಕ್ಷ ಸಂಪೂಜಿತಸಹಸ್ರಾಕ್ಷ ||
ಅಕ್ಷರ ನಿರಾಪೇಕ್ಷ ಮನ್ಮಥ |
ಶಿಕ್ಷ ಕಾಲಕ್ಷಯ ಮಹಾತ್ಮ ಸು |
ದಕ್ಷ ಯಕ್ಷಾಧೀಶಸನ್ನುತ ಕರುಣಿಸೆನಗೆಂದ || ೧೨

ಮಿತ್ರಶತಕೋಟಿಪ್ರಕಾಶ ಪ |
ವಿತ್ರಗಾತ್ರ ಪರೇಶ ಮುಕ್ತಿಕ |
ಳತ್ರ ನವಶತಪತ್ರನೇತ್ರ ಭವಾಬ್ಧಿನಿಸ್ತರಣ ||
ಭೈತ್ರ ವಿಮಲಚರಿತ್ರ ಸುಮುನಿ |
ಸ್ತೋತ್ರಪಾತ್ರ ಸುವಕ್ತ್ರ ಘನರ |
ತ್ನತ್ರಯಾಭರಣಾಂಕ ಕದಗಳ ತೆಗೆಯಬೇಕೆಂದ || ೧೩

ಮಾರಮದಸಂಹಾರ ಕರುಣಾ |
ಕಾರ ಗುಣಮಣಿಹಾರ ಭುವನಾ |
ಧಾರ ಧವಳಶರೀರ ಧರ್ಮಾಗಾರ ಸಾಕಾರ ||
ಘೋರಭವಭಯದೂರ ಕರುಣಾ |
ಕಾರ ನುತಮಂದಾರ ವಿಗತವಿ |
ಕಾರ ಸಾರಾಸಾರ ಜಿನಪತಿ ಕರುಣಿಸೆನಗೆಂದ || ೧೪

ಸುಸ್ಥಿರಾತ್ಮ ಸಮಸ್ತ ಸುರನರ |
ಮಸ್ತಕಸ್ಥಾಪಿತಸುರತ್ನಗ |
ಭಸ್ತಿಮಾಲಾಲಾಲಿತಾಂಘ್ರಿದ್ವಯ ಭವಾಂಬುನಿಧಿ ||
ನಿಸ್ತರಣ ವಾಸ್ತೋಷ್ಪತೀಂದ್ರ ಬು |
ಧಸ್ತುತ ಪ್ರಜ್ಞಾನ ವಿಪುಲೋ |
ರಸ್ಥಲ ವಿಶಾಲಾಕ್ಷ ನಿರ್ಮಲ ಕರುಣಿಸೆನಗೆಂದ || ೧೫

ದೇವ ನಿಮ್ಮಾಲಯದ ಕದಗಳು |
ಆವ ತೆಱದಲಿ ಮುಚ್ಚಿದೊಡೆ ಲೋ |
ಕಾವಳಿಯು ಕದ ಕೆತ್ತಿಹುವು ಶಾಂತೀಶ್ವರನೆ ನಿಮ್ಮ ||
ಪಾವನಾಕೃತಿಯಿಕ್ಷಿಸದೆ ಕ |
ಣ್ಣಾವರಿಸುತಿದೆ ಕಾವಳವು ಕರು |
ಣಾವಲಂಬನದಿಂ ಕವಾಟವ ತೆಱೆದು ಸಲಹೆಂದ || ೧೬

ಜಗಭರಿತ ನೀನಭವ ಮಿಗೆ ಮೂ |
ಜಗಕೆ ಗತಿ ಮತಿ ನೀನೆ ಕೇಳ್ವೈ |
ಜಗದುದಯ ನೀನಖಿಳಜಗದಾರಾಧ್ಯ ವಿಭು ನೀನೆ ||
ಜಗಕೆ ಕಣ್ ಸುಗುಣನು ಸದಮಲ |
ನಗಣಿತನೆ ನೀನಿಂತು ಬಾಗಿಲ |
ತೆಗೆಯದಿಪುದುಚಿತವೆ ಕೃಪಾಕರ ತೆಗೆಯಬೇಕೆಂದ || ೧೭

ಭಾಸುರಾತ್ಮಕ ನೀನೆ ರಾಗ |
ದ್ವೇಷರಹಿತನು ನೀನೆ ಮಾಯಾ |
ಪಾಶಮೋಚನ ನೀನೆ ಸಕಲಜಗದ್ಗುರುವು ನೀನೆ ||
ದೋಷರಹಿತನು ನೀನೆ ಕರುಣಾ |
ವಾಸ ನೀನೆ ಮಹೇಶ ನೀನೆ ಸು |
ರೇಶನುತ ನೀನೆಂದು ಸಂಸ್ತುತಿಸಿದನು ಜಿನಪತಿಯ || ೧೮

ಪರಮಮುಕ್ತಿಯ ಗೃಹದ ಬಾಗಿಲ |
ತೆಱಿಸುವಾತಗಿದೇನು ಘನವೆಂ |
ದಱುಹುವಂತಾವಜ್ರಮಯದ ಕವಾಟ ತೆಱಿದಿರಲು ||
ಪುರಜನವು ಬೆಱಗಾಗಿ ಶಾಂತೀ |
ಶ್ವರನನರ್ಚಿಸುತಿರಲು ಜೀವಂ |
ಧರನೆಡೆಗೆ ಗುಣಭದ್ರ ಹರುಷದಿ ಬಂದು ತಾ ನುಡಿದ || ೧೯

ನೀ ಮಹಾತ್ಮಕನದಱಿನೀಸು |
ತ್ರಾಮನುತಜಿನಪತಿಯ ವಾಸದ |
ಹೇಮಮಯದೀಕದವ ತೆಗೆಸಿದೆಯಾಗಿ ನನ್ನ ಸುತೆ ||
ಕ್ಷೇಮಲಕ್ಷ್ಮಿಯ ಕುಡುವೆನಾಕೆಯ |
ಕಾಮಿಸುವುದೆನೆ ಮದುವೆಯಾಗಿ ಸ |
ನಾಮಜೀವಕನಾಸತಿಯ ಕೂಡಿರ್ದನೊಲಪಿನಲಿ || ೨೦

ಜನಪ ಕೇಳಾವಿಮಳಪುರದೊಳ |
ಗನವರತಮಾಕ್ಷೇಮಲಕ್ಷ್ಮಿಯ |
ಜನಪ ವರಿಸುತ ಕೆಲವು ದಿನವಲ್ಲಿರ್ದು ನೃಪ ತೆರಳಿ ||
ವನಕೆ ಬರುತಿರೆ ಹೊಲನ ಹರಗುತ |
ಕನಲಿ ಸಂಸಾರಕ್ಕೆ ಬಳಲುವ |
ವಿನುತಶೂದ್ರನ ಕಂಡು ಕೃಪೆಯಿಂದರಸನಿಂತೆಂದ || ೨೧

ಕಿಡುವ ಸಂಸಾರಕ್ಕೆ ನೀನಿಂ |
ತೊಡಲ ಕಟ್ಟಲದೇಕೆ ದೇಹದೊ |
ಳಿಡಿದ ದೋಷಗಳೆಂಟ ಹಿಂಗಿಸುವಷ್ಟಗುಣಗಳನು ||
ಹಿಡಿದು ಜಿನಪನ ಭಜಿಸು ಮುಕ್ತಿಯ |
ಪಡೆಯೆನಲು ತನಗದಱ ಭೇದವ |
ನೊಡವಿಪತಿ ತಿಳುಹೆನಲು ಶೂದ್ರಂಗರಸನಿಂತೆಂದ || ೨೨

ಸತ್ಯ ಹಿಂಸಾಸ್ತೇಯ ಪರಿಮಿತ |
ವಸ್ತು ಸತ್ಕುಲಕಾಮಿನೀಸಾಂ |
ಗತ್ಯ ಮಾಂಸಸುರಾಮಧುತ್ಯಾಗಂಗಳಿವು ತಾನು ||
ಯುಕ್ತ ಮೂಲಗುಣಾಷ್ಟಕವು ಸುಚ |
ರಿತ್ರಧರ್ಮಜ್ಞಾನವಿವು ರ |
ತ್ನತ್ರಯಗಳೆಂದಾಕೃಷೀವಲಗಱುಹಿದನು ಭೂಪ || ೨೩
ವಿಕಳನಹ ಶೂದ್ರಕಗೆ ಸುಕುಮಾ |
ರಕನು [ತಾನಾರ್ಹತಚ್ಛಾಸ್ತ್ರ] |
ಪ್ರಕರವನು ವಿಸ್ತರಿಸಿ ಬೋಧಿಸಿ ಧಾರ್ಮಿಕನ ಮಾಡಿ ||
ಸುಕರಕರ್ಣಾಭರಣಗಳ ಶೂ |
ದ್ರಕಗೆ ಕರುಣದೊಳಿತ್ತು ನರನಾ |
ಯಕನು ಬೀೞಿಕೊಟ್ಟೈದಿ ಬರುತಿರ್ದನು ವನಾಂತದಲಿ || ೨೪
ಭೀಳಕಾನನದೊಳಗೆ ಭೂಮೀ |
ಪಾಳ ಬರೆ ಮುಂದಿದಿರೊಳವುಳ |
ಭ್ರೂಲತೆಯ ಚಾಪಕ್ಕೆ ಹಾರದ ನಾರಿಯುಳವಡಲು ||
ಲೋಲಪಾಂಗದ ಬಾಣ ರಂಜಿಸೆ |
ಬಾಲೆಯೊರ್ವಳು ಮನ್ಮಥನ ಕ |
ಟ್ಟಾಳಿನಂತಿರೆ ಬರಲು ಕಂಡವನೀಶ ಬೆಱಗಾದ || ೨೫
ವಾಣಿಯೋ ವಾಗ್ದೇವಿಯಾದೊಡೆ |
ಏಣೆ ಹಸ್ತದೊಳಿಲ್ಲ ಮೇಣ್ ಶ |
ರ್ವಾಣಿಯಾದೊಡೆ ಲೋಚನತ್ರಯವಿಲ್ಲವಚ್ಯುತನ ||
ರಾಣಿಯೋ ಸಿರಿಯಾದೊಡಂಬುಜ |
ಪಾಣಿಯಲ್ಲೀ ತರುಣಿಯಾರೆಂ |
ದೇಣನೇತ್ರೆಯ ರೂಪಿಗವನೀಪಾಲ ಬೆಱಗಾದ || ೨೬
ಸುದತಿ ಜೀವಂಧರನ ಮಿಗೆ ದೂ |
ರದಲಿ ಕಂಡಚ್ಚರಿಯಬಡುತಾ |
ಮದನ ಮರ್ತ್ಯಾಕಾರವನು ತಾಳಿದನೊ ಮೇಣಜನು ||
ಚದುರಿನಲಿ ಪೂಜಗದ ನಾನಾ |
ವಿಧಸುವಸ್ತುವ [ತಂದಿವನ] ಮಾ |
ಡಿದನೊ ತಾನೆಂದರಸನನು ನೋಡಿದಳು ನಳಿನಾಕ್ಷಿ || ೨೭

ಆರಮಣಿ ಜೀವಂಧರನ ಸಾ |
ಕಾರವನು ಕಂಡಂಗಜಾತನ |
ಕೂರಲಗಿನಿಂದಳುಕಿ ಪರವಶೆಯಾಗಿ ಬೞಿಕೞಿದು ||
ಭೂರಮಣ ಕೇಳೆಮ್ಮ ಭಾವನು |
ಘೋರವಿಪಿನದಿ ಬಿಟ್ಟ ಪುಣ್ಯಾದಿ |
ಸಾರಿದೆನು ನಾ ನಿನ್ನನೆಂದಿಂತೆಂದಳಾರಮಣಿ || ೨೮
ಎನಗೆ ತಕ್ಕನುರೂಪಪುರುಷನ |
ವನಧಿಪರಿವೃತಭೂ...ಯುಲಿ ಮ |
ಜ್ಜನಕ ನೋಡಿಸಿ ಕಾಣದಿರಲಿಂದೆನ್ನ ಪುಣ್ಯದಲಿ ||
ಜನಪ ನಿನ್ನನು ಕಂಡೆ ನೀ ಕೂ |
ಡನಘನಾವಿದ್ಯಾಧರಸ್ತ್ರೀ |
ಏನುತ ಕನ್ಯೆಯೆನಲ್ಕೆ ಸತಿಗವನೀಶನಿಂತೆಂದ || ೨೯
ಕನ್ನೆ ನೀನಾದರೆ ವಧೂಮಣಿ |
ನಿನ್ನ ಘನರೂಪೋನ್ನತಿಯು ಕಂ |
ಡೆನ್ನ ಮನವೆಳಸದದು ಸತಿ ನಿನಗುಂಟು ಪುರುಷನೆನೆ ||
ತನ್ನೊಳಗೆ ಸತಿ ನೃಪನ ಸುಜ್ಞಾ |
ನೋನ್ನತಿಗೆ ಬೆಱಗಾಗಿ ಪತಿಯಿ |
ಲ್ಲೆನ್ನ ನಂಬಿ ನೃಪಾಲ ಕೂಡೆಂದೆಱಗಿದಳು ಪದಕೆ || ೩೦
ನಿನ್ನ ಕಂಡೆನ್ನಕ್ಷಿಗಳು ಸಂ |
ಪನ್ನ ನಿನ್ನಯ ನುಡಿಯ ಕೇಳಿದು |
ಕರ್ಣ ನಿನ್ನನು ನೆನೆದು ಮನ ನಿನ್ನಯ ಗುಣಾವಳಿಯ ||
ವರ್ಣಿಸೆನ್ನಯ ಜಿಹ್ವೆಯಾಗಳೆ |
ಧನ್ಯವಾದುವು ನೆರೆದು ನೀ ಸಲ |
ಹೆನ್ನನೆಂದತಿವಿರಹದಲಿ ಕರಗಿದಳು ಕಮಲಾಕ್ಷಿ || ೩೧
ಅರಸ ನಿನ್ನ ಮುಖೇಂದುರಶ್ಮಿಯು |
ಸುರಿದು ವಿರಹಾಗ್ನಿಯನು ನಂದಿಸು |
ಪುರುಷ ನಿನ್ನ ವಚಾಮೃತವನೆಱೆದೆನ್ನ ತೃಷ್ಣೆಯನು ||
ಪರಿಹರಿಸು ಕಾಮಾಂಧವನು ನಿ |
ನ್ನುರುತರಾಕ್ಷಿಪ್ರಭೆಯೊಳುಗಿದತಿ |
ಕರುಣದಲಿ ತನ್ನನುವನುಱುಹೆಂದಳು ಸರೋಜಾಕ್ಷಿ || ೩೨

ತೋಯಜಾನನೆಯಿಂತು ವಿರಹದೊ |
ಳಾಯಸಂಬಡೆ ನೃಪತಿ ಕಂಡೆಲೆ |
ತಾಯೆ ನಿನ್ನಯ ಪುಸುಷಸಲಿ ನೀ ಸುಖದೊಳಿರು ಒಱಿದೆ ||
ಕಾಯದಲ್ಪಸುಖಕ್ಕೆ ಘನನಿ |
ಶ್ರೇಯಸಕೆ ಬಹಿಯಾಗಬೇಡೆಂ |
ದಾಯುವತಿಗೀತೆಱದೆ ಬುದ್ಧಿಯ ಹೇಱಿದನು ಭೂಪ || ೩೩

ಲಲನೆಯುರುಗಳು ಬೆಂಕಿಯಂದದಿ |
ಪುರುಷರಾನವನೀತದಂದದಿ |
ಕಲಕೆ ಕರಗದೆ ಮಾಣರದಱಿಕೊಳು ಬಾಲೆವೃದ್ಧಸತಿ ||
ಲಲಿತಮಾತೃ ದುಹಿತೃ ಸುವ್ರತ |
ಕಲಿತೆಯೆನಿಪಬಲೆಯುರ ಬಿಡಬೇ |
ಕೆಲೆ ರಮಣಿ ನೀ ತನಗಸಂಗತವೆಂದನಾಭೂಪ || ೩೪

ಭೂತಳೇಶ್ವರನೊಡಬಡದೆ ತಾ |
ನೀತೆಱದಿ ಕಾಮಿಸಿಯು ಬೋಧಿಸ |
ಲಾತತುಕ್ಷಣ ಮದನತಾಪದೊಳೊರ್ವ ಕಂಗೆಟ್ಟು ||
ಧಾತುಗುಂದಿ-ಲತಾಂಗಿ ತನ್ನನ |
ನೀತಿಯುಲಿ ನೀ ಬಿಟ್ಟು ಬಂದೆಯು |
ದೇತೆಱದಿ ತಾನುಱಿವೆನೆನಲವಗರಸನಿಂತೆಂದ || ೩೫

ತರುಣಿಯಿವಳೇನಹಳು ನೀನಾ |
ನರಱುಹು ತನಗಿದನೆನಲು ವಿದ್ಯಾ |
ಧರನು ನಾನೆನ್ನರಸಿಯಿಾಕೆಯನಂಗಮಾಲೆಯೆನೆ ||
ಅರಸ ವಿಸ್ಮಯಬಟ್ಟು ಸತಿ ನಿ |
ಷ್ಪುರುಷೆಯೆಂದನ್ಯಾಯವಾಡಿದ |
ಪರಿಯ ತನ್ನಱಿಕೆಯನು ನೆನೆದವಗರಸನಿಂತೆಂದ || ೩೬

ತರುಣಿಯೆಸಗಿದ ತಪ್ಪದಾವುದು |
ತೊಱಿದಳೇನು ನಿಮಿತ್ತವೆನೆ ಭೂ |
ಭೂವರನೆ ಚಿತ್ತೈಸೆಂದು ಕೊರತೆಯದಿಲ್ಲ ನೀರಡಸಿ ||
ಸರಸಿಗೈದಿದೆನಿತ್ತಲುಱಿದಂ |
ಬುರುಹಲೋಚನೆ ಬಂದಳೀಕೆಯ |
ನೆರೆಯದಿರಲಾನುಱಿಯೆನೆನಲವಗರಸನಿಂತೆಂದ || ೩೭

ಸೇರದೊಡೆಯನ ಬಿಡದ ಭೃತ್ಯ ಏ |
ಚಾರವಿಲ್ಲದ ಮಂತ್ರಿ ಧೀರೋ |
ದ್ಧಾರನಲ್ಲದ ಭೂಪ ಸಮರದಿ ಭೀತಿಗೊಂಬ ಭಟ ||
ವೈರಿಗಳನೊಂದಿಹನು ವಿಮಲಾ |
ಚಾರವುಳಿದಿಹ ವಿಪ್ರನೊಲ್ಲದ |
ನಾರಿಗೆಳಸುವ ಮರ್ತ್ಯ ಪಾಮರನೆಂದನಾಭೂಪ || ೩೮

ಅದಱಿಂ ನಿನ್ನುವನೊಲ್ಲದುಳಿದೀ |
ಸುದತಿಗೆಳಸುವುದನುಚಿತವು ತಾ |
ನಿದ ವಿಚಾರಿಸಿಯಲ್ಪಸುಖಮುಕ್ತಿಯ ನಿವಾಸಕ್ಕೆ ||
ಕದವು ಮಲದುರ್ಗಂಧ ತೆಱೆದಿಹ |
ಸದನ ಕಾಮಿನಿಯೆಂದು ನಾನಾ |
ವಿಧದೊಳಾವಿದ್ಯಾಧರಗೆ ಭೂಪಾಲ ನೇಮಿಸಿದ || ೩೯

ಯುವತಿಯರ ನುಡಿಯೊಂದು ಮನದಂ |
ಘವಣೆ ಬೇಱೊಂದವರು ಮಾಡುವ |
ವ್ಯವಹರಣೆ ಬೇಱವರು ವಿಧಿಸುವ ಕೃತ್ಯ ಬೇಱೊಂದು ||
ಅವನಿಯೊಳು ಕಾಮಿನಿಯರನು ಸಂ |
ಬುವನು ಖೂಳನು ಹರವಿರಿಂಚಿ |
ಪ್ರವರರಱಿಯರು ಸತಿಯರಿಚ್ಛೆಯನೆಂದನಾಭೂಪ || ೪೦

ವದನ ಶ್ಲೇಷ್ಮಾಗಾರ ಕುಚ ಮಾಂ |
ಸದ ಗಟಿಕೆ ಕಣ್ ಮಲದ ನೆಲೆ ಯಧ |
ರದನವಸ್ಥಿ ನಿತಂಬ ರಕ್ತಾವಾಸವಿವನು ಶಶಿ ||
ರದನಿಕುಂಭ ಸರೋಜ ಮಣಿ ಪುಳಿ |
ನದವೊಲಿದೆಯೆಂದೆಂಬ ಕವಿಗಳ |
ಚದುರನುಡಿಯಬಲೆಯರಿಗೆಱಗಿದೊಡಿಲ್ಲ ಗತಿಯೆಂದ || ೪೧

ಹರನು ನಂಬದೆ ತನುವೊಳೊಬ್ಬಳ |
ಶಿರದೊಳೊಬ್ಬಳನಿಟ್ಟನಾಮುರ |
ಹರನುರಸ್ಥಳದಲ್ಲಿ ತಾಳಿದನಜನು ವದನದಲಿ ||
ಧರಿಸಿದನು ಕಾಮಿನಿಯನೆನೆ ಹುಲು |
ನರರು ಸತಿಯರ ಚಿತ್ತವೃತ್ತಿಯ |
ನಱಿವರೇ ನೀನೊಲ್ಲದಂಗನೆಗೆಳಸಲೇಕೆಂದ || ೪೨

ಪರಿಕಿಸಲು ಕಾಮಾತುರರು ಕಾ |
ಣರು ಕುಲಾಚಾರವನು ಲಜ್ಜೆಯು |
ತೊಱೆವರೆಂದೆನೆ ಭೂಪನೀಪರಿ ತಿಳುಹೆ ಖೇಚರನು ||
ಮರಳಿ ಕಾಂತೆಯನೊಂದಿಸೆನೆ ಮ |
ತ್ಸರವಶೌಚಕ ಪಾಪವಪ್ಪುದ |
ಲೆಯರಿಗೆಱಗದಿರೆಂದು ಬೋಧಿಸಿದನು ಕುಮಾರಕನು || ೪೩
ಇಂತು ವಿದ್ಯಾಧರನ ತಿಳುಪಿ ವ |
ನಾಂತರವ ಕಳೆದರಸ ನಡೆತರೆ |
ಮುಂತೆಸೆವ ಹೇಮಾಭಪುರಿಯುಂಟಾಪುರವನಾಳ್ವ ||
ಕಂತುನಿಭ ದೃಢಮಿತ್ರಭೂವಿಭಾ |
ಕಾಂತನಾತ್ಮಜರುಪವನದೊಳ |
ತ್ಯಂತಲೀಲೆಯಿನಾಡೆ ನೃಪ ಕಂಡಲ್ಲಿಗೆಯ್ತಂದ || ೪೪
ನೆರೆದ ಸುಕುಮಾರಕರು ಮಾವಿನ |
ಮರದೊಳೊಂದುತ್ತಮದ ಫಲವಂ |
ಬರವ ಚುಂಬಿಸಲದನು ಕೆಡಹುವೆವೆಂದು ಕೋಲ್ಗೊಂಡು ||
ಸರಳಲೆಸೆಯಲು ತಪ್ಪೆ ಹಣ್ಣೊಳೆ |
ಗುರುಬಿದಿರೆ ಬೇಸತ್ತು ಬೆಂಬಿಡ |
ದಿರಲು ಜೀವಂಧರನು ಕೆಡಹಿದನೆಚ್ಚು ತತ್ಫಲವ || ೪೫
ಖ್ಯಾತಜೀವಂಧರನ ಬಿಲುವಿ |
ದ್ಯಾತಿಶಯ ರೂಪಕೆ ಕುಮಾರ |
ವ್ರಾತವಚ್ಚರಿವಟ್ಟು ಪುರಿಗಾತನನು ಕೊಂಡುಯ್ದು ||
ತಾತಗಱುಹಿದೊಡಾಕುಮಾರಕ |
ಗೋತು ತತ್ಸುತೆ ಕನಕಮಾಲೆಯು |
ಭೂತಲೇಶ್ವರಗಿತ್ತು ಧಾರೆಯನೆಱೆದನೊಲವಿನಲಿ || ೪೬
ಅರಸ ಕೇಳ್ ದೃಢಮಿತ್ರಭೂವಿಶಾ |
ಶ್ವರನು ತನ್ನ ಕುಮಾರಿಯನು ತಾ |
ನುರತರದೊಳೀಯಲ್ಕೆ ತತ್ಕಾಮಿನಿಯನನುವರಿಸಿ ||
ಪುರದೊಳಿಹನೂರ್ವರು ಕುಮಾರರು |
ಬೆರಸಿ ಹರ್ಷದೊಳಿಂತು ಜೀವಂ |
ಧರನು ಸುಖದಿಂದಿರ್ದನಾಹೇಮಾಭನಗರಿಯೊಳ್ || ೪೭

ಇದು ವಿನಮದಮರೇಂದ್ರ ಶ್ರೀಜಿನ |
ಪದಕಮಲಷಟ್ಚರಣ ವಾಣೀ |
ವದನದರ್ಪಣ ಭೂಸುರೋತ್ತಮ ಬಸವಣಾಂಕಸುತ ||
ಚದುರ ಭಾಸ್ಕರರಚಿತ ಧರ್ಮ |
ಪ್ರದನ ಜೀವಂಧರನ ಚರಿತೆಯೊ |
ಳಿದು ಕನಕಮಾಲೆಯು ಸುವಿವಾಹವರಸ ಕೇಳೆಂದ || ೪೮

ಹನ್ನೆರಡನೆಯ ಸಂಧಿ ಮುಗಿದುದು.

## ಹದಿಮೂರನೆಯ ಸಂಧಿ.

ಸೂಚನೆ|| ವಿದ್ಯದಿಂ ಸಖರಾಕುಮಾರನ |
ಹೊದ್ದಿ ಜನನಿಯ ತೊಱೆ ಮುಪದೊಳ |
ಸಾಧ್ಯಜೀವಂಧರನು ಮಗುಟ್ದಿನು ರಾಜಪುರವರಕೆ ||

ಧರಣಿಪತಿ ಕೇಳಿತ್ತ ಜೀವಂ |
ಧರನ ಕೊಲಿಸಿದನಕಟ ಬಱಿದೇ |
ದುರುಳಕಾಷ್ಠಾಂಗಾರನೆಂದಾರಾಜಪುರಿಯೊಳಗೆ ||
ಇರುಳು ಹಗಲನವರತಮ್ಮೆನೂ |
ರ್ವರು ಸಖರು ಗುಣಮಾಲೆ ಸಹಿತೆದೆ |
ಜರಿದು ಗಂಧೋತ್ಕಟನು ಚಿಂತಿಸುತಿರ್ದನಳವಳಿದು || ೧

ವೀರವಿದ್ಯಾಧರನೃಪನ ಸುಕು |
ಮಾರಿ ವರಗಂಧರ್ವದತ್ತೆಗೆ |
ಚಾರುವಿದ್ಯಾವಳಿಗಳಾಜೀವಂಧರನ ತೆಱನ ||
ಆರಯಿದು ಬಂದಱುಹುತಿರೆ ನಲ |
ವೇಱಿ ವನಜಲಕೇಳಿಗಳಲಿ ವಿ |
ಹಾರಿಸುತ್ತಿರ್ದಳು ಲಸಚ್ಛೃಂಗಾರಶೋಭೆಯಲಿ || ೨

ತರುಣಿ ತಾನಾನಂದಲೀಲೆಯೊ |
ಳಿರಲು ಗಂಧೋತ್ಕಟನ ಮಗ ಸ |
ಚ್ಚರಿತನಹ ನಂದಾಢ್ಯನತಿವಿಸ್ಮಯದೊಳತ್ತಿಗೆಯ ||
ಹೊರೆಗೆ ಬಂದೆಲೆ ರಮಣಿ ನಿನ್ನಯ |
ಪುರುಷನಪಗತನಾದಬಳಿಕೀ |
ಪರಿಯ ಮೆಱೆದಿಹುದುಚಿತವೇ ಹೇಳೆಂದು ಧಟ್ಟಿಸಿದ || ೩

ವಾರಿಜಾನನೆ ಕೇಳು ಪತಿ ಬೇ |
ರೂರಿಗೆಯ್ದಲು ಮಲಿನವಂಬರ |
ಚಾರುಭೂಷಣ ದಂತಕಾಷ್ಠಾಂಜನ ಸುತಾಂಬೂಲ ||
ಸಾರತೈಲಾಮೋದ ಮಾಲ್ಯವ |
ನಾರಮಣಿ ಬಿಡಬೇಕು ಗತಭ |
ರ್ತಾರೆ ನೀನೀಪರಿಯ ಮೆಱೆದಿಹುದುಚಿತವಲ್ಲೆಂದ || ೪

ಬಾಲಿಕಾಮಣಿಯೆನಿಸುವೀಗುಣ |
ಮಾಲೆ ಸರ್ವವನುೞಿದು ಬಾಡಿದ |
ಮಾಲೆಯಂತೈದಾಳೆ ನೀನಾವಿಧದೊಳಿರ್ಪುದೆನೆ ||
ಕೇಳಿಯಾಗಂಧರ್ವದತ್ತೆ ವಿ |
ಶಾಳಮತಿ ನಂದಾಢ್ಯನೊಳು ತಾ |
ಮೇಳವಾಡುತ ನುಡಿದಳವನೊಳು ಸಾನುರಾಗದಲಿ || ೫

ಎನ್ನ ಪತಿ ಸಜ್ಜೀವದಲಿ ಧ |
ಪ್ಪನ್ನದೇಶವ ಚರಿಸಿ ಕೆಲವರು |
ಕನ್ನೆಯರ ವೈವಾಹವಾಗಿಯೆ ಬಹಳಸೌಖ್ಯದಲಿ ||
ಸ್ವರ್ಣಕಾಪುರವರದೊಳಿಹನು |
ತ್ಪನ್ನಮತಿ ಕೇಳೆನಲು ಹರುಷದೊ |
ಳುನ್ನತಸ್ತನೆ ನೀನು ತನಗಿದ ತಿಳುಹಬೇಕೆಂದ || ೬

ಶುದ್ಧತತ್ವಾಕಾರವಾಗಿಪ |
ವಿದ್ಯೆಗಳು ತಾವಱಿದು ಜೇಪಕ |
ನಿದ್ದ ತೆಱನನು ನಿಚ್ಚ ಬಂದೆನಗಱುಹುತಿಹುವೆನಲು ||
ಮುಗ್ಧೆ ತಿಳುಹಲು ಹರ್ಷವಾರ್ಧಿಯೊ |
ಳದ್ದು ನೀನೆಮ್ಮಣ್ಣದೇವನ |
ಹೊದ್ದಿಸೆನ್ನನೆನುತ್ತಲಾನಂದಾಢ್ಯ ಕೈಮುಗಿದ || ೭

ಎನಲು ನಂದಾಢ್ಯಕನ ಕಂಗಳ |
ವನಿತೆ ಕೈಯಲಿ ಮುಚ್ಚಿ ವಿದ್ಯವ |
ನೆನೆಯಲವು ಬಂದಾತನನು ಹೇಮಾಭಪುರಿಗುಯ್ದು ||
ವಿನುತ ಜೀವಂಧರನ ಕಟ್ಟಿವಿ |
ೞನಲಿ ತಂದಿರಿಸಲ್ಕೆ ಬೆಱಗಿನೊ |
ಳನಘನಾತನನಪ್ಪಿ ಮುದದಿಂದಾತನಿಂತೆಂದ || ೮

ಇತ್ತಲಾನಿಹೆನೆಂದಡೊಂದಱಿ |
ದುತ್ತಮನೆ ನೀನೆಂತು ಬಂದೆ ಸು |
ಮಿತ್ರತತಿಗಂಧೋತ್ಕಟನು ಗುಣಮಾಲೆ ಗಂಧರ್ವ ||
ದತ್ತೆಯರ ಸುಕ್ಷೇಮಕುಶಲದ |
ವಾರ್ತೆಯಱುಹೆನೆ ಬೇಱೆ ಬೇಱೆ ಪ |
ವಿತ್ರ ಜೀವಂಧರಗೆ ನಂದಾಢ್ಯನು ನಿರೂಪಿಸಿದ || ೯
ಮರಳಿ ಮರಳಿದು ಸಖರ ಕುಶಲವ |
ನಿರದೆ ಕೇಳಿದು ನಲಿದು ಯಕ್ಷೇ |
ಶ್ವರನ ದೆಸೆಯಲಿ ತಾನುೞಿದ ವಾರ್ತೆಯನು ಕನ್ನೆಯರ ||
ವರಿಸಿದುದನು ಸಮಸ್ತದೇಶಾ |
ಚರಣೆಯಱುಹಿ ಸುಮಿತ್ರಸಹಿತರುರು |
ತರದೊಳಿರ್ದನು ಜೀವಕನು ಹೇಮಾಭನಗರಿಯಲಿ || ೧೦
ಅರಸ ಕೇಳ್ ಬೞಿಕಿತ್ತಲೈನೂ |
ರ್ವರು ಸಖರು ಗಂಧರ್ವದತ್ತೆಯ |
ಹೊರೆಗೆ ಬಂದಡಿಗೆಱಗಿ ಜೀವಂಧರನ ಬೞಿಕೆಮ್ಮ ||
ಭರದಿ ಕಳುಹುವುದೆನಲು ದೇಶಾಂ |
ತರದ ಭೂಪರ ಬಾಧೆ ಘನವಿನಿ |
ಒರನು ವಿದ್ಯೆಗಳುಯ್ವುದಘಟಿತವೆಂದಳಿಂದುಮುಖಿ || ೧೧
ವರನವವ್ಯವಹಾರಿಗಳವೊಲು |
ಭರದಿ ಗಮಿಸುವುದೆಂದು ಜೀವಂ |
ಧರಕುಮಾರಕನಿಪ್ಪೆಡೆಯ ತಿಳುಹಲ್ಕೆ ಸತಿ ಪೇಳ್ದು ||
ಪರಿಯೊಳೆಯ್ದಿಯನೇಕದೇಶಾಂ |
ತರವನೆಲ್ಲವ ಕಳೆದು ಬಂದಾ |
ಪುರದ ತುಱುಗಳ ತಡೆದರಂದೈನೂರ್ವರೊಗ್ಗಿನಲಿ || ೧೨
ಆಕುಮಾರಕರಾಪುರದ ಗೋ |
ನೀಕವನು ತಱುಬಲ್ಕೆ ಬಹಳ |
ವ್ಯಾಕುಲದಿ ಗೋಪರುಗಳೆಯ್ತಂದಾನೃಪಂಗಱುಹೆ ||
ಆಕೆವಾಳರ ಕರೆಸಿ ಪುಣ್ಯ |
ಶ್ಲೋಕ ಜೀವಕಸಹಿತ ಸೇನಾ |
ನೀಕ ಸಹಿತನುವಾಗಿ ನಿಂದರು ಪುರದ ಬಾಹೆಯಲಿ || ೧೩

ಬಱಿಕ ಜೀವಂಧರನು ತಾನೀ |
ಬಲವ ನೆಱಕಿ ತಡೆಗಡಿದು ಗೋಸಂ |
ಕುಲವ ತಿರುಹುವೆನೆಂದು ಮುಳಿದೀಕ್ಷಿಸಿ ಕುಮಾರಕರ ||
ಸುಲಲಿತಾಶ್ವಧ್ವಜದ ಚಿಹ್ನಂ |
ಗಳನು ಕಂಡಿವರೆನ್ನ ಸಖರೆಂ |
ದೊಲವಿನಲಿ ನಸುನಗುತಲಾದೃಢಮಿತ್ರಗಿಂತೆಂದ || ೧೪

ಅರಸ ಕೇಳಿವರೆನ್ನ ಸಖರೀ |
ಪುರಿಗೆ ತನ್ನ ನಿರೀಕ್ಷಿಸಲು ಒಂ |
ದರು ಭಟಾವಳಿ ಮಾಡದಿರಿ ಕೈತಪ್ಪನೆಂದಱುಹೆ ||
ಭರದಿ ನೃಪಸಹಿತಿದಿರುಬಂದನಿ |
ಬರನು ತೆಗೆತೆಗೆದಪ್ಪಿ ಜೀವಂ |
ಧರನು ಕುಶಲವ ಕೇಳಿ ಪುರಿಗುಯ್ದನು ವಿಳಾಸದಲಿ || ೧೫

*    *    *    *

ಅರಸನಾಸತ್ಯಂಧರನು ಮ |
ತ್ಪುರುಷ ಕಾಷ್ಠಾಂಗಾರನಿಂ ಸುರ |
ಪುರಕೆ ಸಾರ್ದನು ಜೀವಕನ ವಿಪಿನದೊಳು ನಾ ಪಡೆಯೆ ||
ನರನದೊರ್ವನು ಕೊಂಡುಹೋದನು |
ತರುಣ ತಾನೇನಾದನೋ ಸೀವ್ |
ಬರಲು ಬಂದಂತಾಯ್ತು ಸುತನೆಂದೊರಲಿದಳು ರಮಣಿ || ೧೬

ಸ್ಮರನಿಭನೆ ಕೇಳಬಲೆ ತಾಸೀ |
ಪರಿಯು ಶೋಕಿಸುತಿರಲದಾರೆಂ |
ದಱಿಯೆವಾನೆಂದಾಕುಮಾರರು ಬೆಸಸೆ ಮಜ್ಜನನಿ ||
ನಿರುತವೆಂದುಬ್ಬೇಱಿ ಹೋದನು |
ಮರಳಿ ಬಂದಂದದಲಿ ಜೀವಂ |
ಧರನು ಮಾತೆಯ ನೋಡಬರಲನುವಾದನೊಲವಿನಲಿ || ೧೭

---

* ಇಲ್ಲಿ ಗ್ರಂಥಪಾಠವಾಗಿರುವಂತೆ ತೋರುತ್ತದೆ.

ಲಲನೆಯನು ಮಾವನ ಸಮೀಪದಿ |
ನಿಲಿಸಿ ಸಖರೊಡನಾಕುಮಾರನು |
ಹಲವು ಪಯಣದಿ ದಂಡಕಾಟವಿಗೈದಿ ಕಂಗಳಲಿ ||
ಜಲ ಹರಿಯೆ ಕರಿಗಂದಿ ತನ್ನಿದಲಿ |
ಬಱಿಲಿ ತನ್ನಯ ಬರವ ಹಾರುತ |
ಲಳವಱಿದ ತಜ್ಜನನಿಯನು ಕಂಡರಸ ಹೊರೞಿದನು || ೧೮
ಹಸಿದ ಹಸುವೆಳವುಲ್ಲ ಕವಿ ನವ |
ರಸವನಂಬುಜ ರವಿಯನುತ್ಪಲ |
ಸಸಿಯ ವಿಪ್ರ ನಿಮಂತ್ರಣವ ನಿರ್ಧನಿಕನರ್ಥವನು ||
ಅಸತಿ ರಜನಿಯ ಮುನಿಪ ಮುಕ್ತಿಯ |
ನೊಸೆದು ಪಡೆನಂದದಲಿ ಘನಸಂ |
ತಸದಿ ಜೀವಂಧರನ ಕಂಡಪ್ಪಿದಳು ಹರಿಣಾಕ್ಷಿ || ೧೯
ಧರಣಿಪಾಲಲಲಾಮ ಸತ್ಯಂ |
ಧರನ ಬಸಿಱಲಿ ಬಂದು ನೀನೀ |
ಪರಿಯಲಿಪ್ಪರೆ ಕಂದಯೆಂದಾಸುತನ ಹಣೆ ಹಣೆಯ ||
ಹೊಱಿಸಿಕೊಂಡತಿ ಮಱುಗೆ ತನ್ನಯ |
ತೆಱನನಱುಹಲು ಸುತನ ವೃತ್ತಾಂ |
ತರವನೆಲ್ಲವ ಕೇಳಿ ಬೆಬ್ಬಳಿದೞಲಿದಳು ರಮಣಿ || ೨೦
ಸರಸಿಜಾನನೆಯಿಂತು ಮಱುಗು |
ತ್ತಿರಲು ಜೀವಂಧರನು ನಾನಾ |
ಪರಿಯ ನಯದಿಂ ತಿಳುಹಿ ಜನನಿಯ ಶೋಕವನು ಬಿಡಿಸಿ ||
ದುರುಳ ಕಾಷ್ಠಾಂಗಾರಕನ ಸಂ |
ಹರಿಸಿ ಕೊಳ ಬೇಕೆಂದು ರಾಜ್ಯವ |
ಭರದೊಳೆನೆ ಸುಕುಮಾರಗಿಂತೆಂದಳು ಸರೋಜಾಕ್ಷಿ || ೨೧
ಎಲೆ ಮಗನೆ ತನ್ನಳವನಱಿದರಿ |
ಗಳನು ಜಯಿಸಲು ಬೇಕು ನೀ ದು |
ರ್ಬಲದಿ ನಡೆವುದನೀತಿಯೆನೆ ಕೋಪಾಗ್ನಿ ಪಲ್ಲವಿಸೆ ||
ಮುಳಿದು ಕಾಷ್ಠಾಂಗಾರಕನ ಕೊಂ |
ದಿಳೆಯ ಕೊಂಬುದಿದೇನರಿದು ಎಂ |
ದಲಘುಭುಜಬಲ ನುಡಿಯೆ ಮಗುೞಿಂತೆಂದಳಾರಮಣಿ || ೨೨

ಜೀವಕನೆ ಕೇಳ್ ನಿಮ್ಮ ಸೋದರ |
ಮಾವ ಗೋವಿಂದಾಖ್ಯ ತನ್ನಯ |
ಭಾವ ಸತ್ಯಂಧರನ ಕಾಷ್ಠಾಂಗಾರ ಕೊಂದುದಕೆ ||
ಆವಿರೋಧಿಯ ಕೊಲುವೆನೆಂದೇ |
ಭಾವಿಸುತಲೈದಾನೆ ನೀನಾ |
ಭೂವರನುಸಹಿತೆಸಗು ಕಾರ್ಯವನೆಂದಳಿಂದುಮುಖಿ || ೨೩

ಎನಲು ಕಾರ್ಯವಿದೇನು ನೀ ಮಾ |
ವನ ಸಮೀಪದೊಳಿರಲು ತಾ ಬಹೆ |
ನೆನುತ ಗೋವಿಂದಕ್ಷಿತೀಶನ ಪುರಕೆ ಜನನಿಯನು ||
ಅನುನಯದೆ ಮುನ್ನಟ್ಟಿ ಸಖರೊ |
ಗ್ಗಿನೊಳುಭಯಪಾರ್ಶ್ವದಲಿ ಬರೆ ಬಂ |
ದನು ಕುಮಾರಲಲಾಮನೆಸೆವಾರಾಜಪುರವರಕೆ || ೨೪

ಧಾರಿಣೀಪತಿ ಕೇಳು ಕಾಷ್ಠಾಂ |
ಗಾರನಳಿವನೆನುತ್ತಲಾಸುಕು |
ಮಾರನಾಮಿತ್ರಾಳಿ ಸಹಿತಾನಗರದುಪವನಕೆ ||
ಸೇರಿ ನಲವಿಂದಾಪುರದೊಳಿಹ |
ನಾರಿಯರನೀಕ್ಷಿಸುವೆನೆನುತವೆ |
ಹಾರುತಿರ್ದನು ಬಹಳ ಸೌಖ್ಯದೊಳರಸ ಕೇಳೆಂದ || ೨೫

ಇದು ವಿನಮದಮರೇಂದ್ರ ಶ್ರೀಜಿನ |
ಪದಕಮಲಷಟ್ಚರಣ ವಾಣೀ |
ವದನದರ್ಪಣ ಭೂಸುರೋತ್ತಮ ಬಸವಣಾಂಕಸುತ ||
ಚದುರ ಭಾಸ್ಕರರಚಿತ ಧರ್ಮ |
ಪ್ರದನ ಜೀವಂಧರನ ಚರಿತೆಯೊ |
ಳಿದು ಕುಮಾರಪುರಪ್ರವೇಶ ನೃಪಾಲ ಕೇಳೆಂಗ || ೨೬.

ಹದಿಮೂಱನೆಯ ಸಂಧಿ ಮುಗಿದುದು

# ಹದಿನಾಲ್ಕನೆಯ ಸಂಧಿ.

---

**ಸೂಚನೆ** || ರಾಜಪುರಿಯೊಳು ವಿಮಲೆಯನು ವಿ |
ಭ್ರಾಜಿಸುವ ಸುರಮಂಜರಿಯ ಪಡೆ |
ದಾಜಿರಂಗಜಯಾಂಕ ಜೀವಂಧರನು ರಂಜಿಸಿದ ||

ಅರಸ ಕೇಳ್ ಜೀವಂಧರನು ಪರ |
ರಱಿಯದಂತಾರಾಜಪುರದುರು |
ತರದ ವನದಿಂ ಹೊಱಟು ಗಂಧೋತ್ಕಟಗೆ ಬಂದೆಱಗೆ ||
ಹರಣ ಬಂದಂತಾಕುಮಾರನ |
ಭರದಿ ತೆಗೆತೆಗೆದಪ್ಪಿ ವೃತ್ತಾಂ |
ತರವ ಬೆಸಗೊಳುತಿರ್ದನತ್ಯಾನಂದಲೀಲೆಯಲಿ || ೧

ವನರುಹವನಾದಿನಪ ಸಾರ್ವಂ |
ತನಘ ಜೀವಂಧರನು ಬಂದಾ |
ವಿನುತವಾರ್ತೆಯ ಕೇಳಿ ಪರಮಾನಂದಲೀಲೆಯಲಿ ||
ಮನವೊಸೆದು ಗುಣಮಾಲೆ ಗುಣಮಂ |
ಡನೆಯೆನಿಪ ಗಂಧರ್ವದತ್ತೆಯ |
ರನಿಲವೇಗದಿ ಬಂದು ಕಂಡುಬ್ಬಿದರು ಹರ್ಷದಲಿ || ೨

ಬಳಿಕ ಗಂಧೋತ್ಕಟಗೆ ಪಿತ್ರಾ |
ವಳಿ ಪದಾಂಬುಜಕೆಱಗಲಾಕೋ |
ಮಲರನೊಲವಿಂದಪ್ಪಿ ಹರ್ಷಾಬ್ಧಿಯೊಳು ಮುಳುಗಾಡೆ ||
ನಲವಿನಲಿ ಜೀವಂಧರನು ತಾ |
ಪಲುವಕ್ಕೈದಿಗ ವಿವಿಧವಾರ್ತೆಯ |
ತಿಳುಹುತಿರ್ದನು ತನ್ನ ಸತಿಯರಿಗರಸ ಕೇಳೆಂದ || ೩

ಚಾರುಯಕ್ಷಾಧೀಶ ನಗಱಿದ್ದಪ |
ಕಾರವನು ಕೌತುಕವ ಘೂಸಂ |
ಚಾರತೆಯನಿನಿತುವನು ವಿಸ್ತರಿಸಲ್ಕೆ ಮನೆಯೆಲ್ಲಾ ||
ಹಾರಯಿಸಿ ತದ್ರಾಜಕಾರ್ಯವ |
ಭೂರಮಣ ನೆನೆಯುತ್ತ ಕಾಷ್ಠಾಂ |
ಗಾರನಱಿಯದ ತೆಱದಿ ವಿಹರಿಸುತಿರ್ದನೊಲವಿನಲಿ || ೪

ಭೂರಮಣನಾನಗರದೊಳಗೆ ವಿ |
ಹಾರಿಸುತ್ತಿರಲಲ್ಲಿ ವೈಶ್ಯಾ |
ಧಾರ ಸಾಗರದತ್ತನಾತ್ಮಜೆ ವಿಮಲೆಯೆಂಬುವಳು ||
ಮಾರನಿಷ್ಠಾದೇವಿಯಂದದಿ |
ಚಾರುಹರ್ಮ್ಯಾಗ್ರದಲಿ ಕುಚ ಮುಡಿ |
ಹಾರವಲುಗಲು ಸೆಂಡನಾಡುತ್ತಿರ್ದಳಟ್ಟಿಯಲಿ || ೫

ಕುರುಳು ಭಾಳದೊಳಾಡೆ ಕರ್ಣಾ |
ಭರಣ ಕದಪಿನೊಳಾಡೆ ಕಬರೀ |
ಭರವು ಬೆನ್ನೊಳಗಾಡೆ ಹಾರ ಕುಚಾಗ್ರದೊಳಗಾಡೆ ||
ಗುರುಜಘನವಲುಗಾಡೆ ಸೆಳೆನಡು |
ಭರದಿ ಬಳುಕಲು ಸೆಂಡನಾಡು |
ತ್ತಿರೆ ಕರಗಳಿಂ ಸೆಂಡುರುಳಿ ಬಿರ್ದುದು ಧರಿತ್ರಿಯಲಿ || ೬

ಧರೆಯೊಳುರುಳಿದ ಸೆಂಡ ಜೀವಂ |
ಧರನು ಕಂಡೆಲ್ಲಿಯದಿದೆಂದಂ |
ಬರವನೀಕ್ಷಿಸಲಾಕುಮಾರಿಯ ದೃಷ್ಟಿ ತದ್ದೃಷ್ಟಿ ||
ಎರಡುವೊಂದಾಗಲ್ಕೆ ಸತಿ ಭೂ |
ವರನ ರೂಪಿಗೆ ಮರುಳುಗೊಂಡಾ |
ವಿರಹದಲಿ ವೈಮನಸಿದಳನುಪಮಚಿತ್ರದಂದದಲಿ || ೭

ಇಂದುಮುಖಿಯಾವಿರಹದಲಿ ಕರಿ |
ಗಂದಿರಲು ವಿರಹವನು ಪಿತಗರ |
ವಿಂದನೇತ್ರೆಯರರುಹೆ ಗಂಧೋತ್ಕಟನ ಕರೆದೆಂದ ||
ನಂದನೆಯ ಜೀವಂಧರಗೆ ಸಾ |
ನಂದದಿಂದಾನೀವೆನೆನೆ ಲೇ |
ಸೆಂದು ಮದುವೆಯ ಮಾಡಿದನು ಸುತಗಧಿಕವಿಭವದಲಿ || ೮

ವಿಮಳಮತಿ ಜೀವಂಧರನು ನವ |
ವಿಮಲೆಯನು ವೈವಾಹವಾಗಿಯೆ |
ಸಮುದಿತಾನಂದದಲಿ ತದ್ಗುಣಮಾಲೆ ಮುಂತಾದ ||
ರಮಣಿಯರ ರಮಿಸುತ್ತ ಜನನಿಯ |
ಮಮತೆಯನು ನೆನೆಯುತ್ತ ರಾಜ್ಯಾ |
ಗಮನವನು ಚಿಂತಿಸಿ ಪುರಾಂತದೊಳಿರ್ದನೊಲವಿನಲಿ || ೯

ಒಂದು ದಿನ ಮಿತ್ರಾಳಿಸಹ ತಾ |
ನೊಂದಿ ಜೀವಕನಾಪುರಾಂತದ |
ನಂದನದೊಳಭಿಚರಿಸಿ ನಗುತೆನ್ನಂದವನು ಕಂಡು ||
ಹೊಂದಿದಳು ಸತಿ ವಿಮಳೆ ಮಿಕ್ಕಿನ |
ಸೌಂದರಿಯರೆನಗೆಱಗದಿಪ್ಪರೆ |
ಎಂದೊಡಾತಂಗಣಕದಲಿ ಸಖನೋರ್ವನಿಂತೆಂದ || ೧೦

ಮರುಳು ಜೀವಂಧರನೆ ಬಡಬೇ |
ಹರಿಯು ಸುತೆ ಸಿನಗೊಲಿದಳೆಂದತಿ |
ಬಱಿದೆ ಬೆಱಿತಿಹೆ ನಿನ್ನ ರೂಪನು ಕಂಡ ಕಾಂತೆಯರು ||
ವರಿಸಿದಪರೆಂದೆಂಬೆ ಸುರಮಂ |
ಜರಿ ನಿನಗೆ ನೋಪಿಸಿದೊಡಿಳೆಯೊಳು |
ಸರಿಯುದಾರೆಂದಣಕದಲಿ ನುಡಿದನು ಕುಮಾರಕಗೆ || ೧೧

ಎನಲಿದೆನಿತೆನಲಾಸರೋಜಾ |
ನನೆಯುನಲ್ಲಿಗೆ ಬರಿಸುವೆನು ನೋ |
ಡೆನುತ ಮಿತ್ರರ ಕಾಮದೇವನ ಗುಡಿಯೊಳಗೆ ನಿಲಿಸಿ ||
ಅನಿಲವೇಗದಿನೈದೆ ಬಂದೊಲ |
ವಿನಲಿ ನಗರವನೈದಿ ತನ್ನಯ |
ಮನದಿ ಜೀವಕ ನೆನೆಯುತಿರ್ದನು ಸತಿಯು ದರ್ಶನವ || ೧೨

ಪುರುಷಮಾತ್ರವಸೀಸತಿಯು ಮುಂ |
ದಿರವ ಹುಗಬಿಡರೆನ್ನನೆಂದಾ |
ಚರರಱಿದು ಹುಗಲೀಸದಿರಲಿನ್ನೆಂತು ನಾನಾವ ||
ಪರಿಯೊಳೈದುವೆನೆಂದು ಯಕ್ಷೇ |
ಶ್ವರನ ನೆನೆದತಿವೃದ್ಧರೂಪವ |
ಧರಿಸಿ ಸುರಮಂಜರಿಯು ಮನೆಗೆ ಕುಮಾರ ಬರುತಿರ್ದ || ೧೩

ನರೆದಲೆಯು ನೆರೆ ಬಾಗಿದೊಡಲಿನ |
ಜರಿವ ಕರ್ಣದ ಕಂಪಿಸುವ ನಿಜ |
ಶಿರದ ಸಡಿಲಿದ ತೊಗಲ ಬತ್ತಿದ ಗಲ್ಲದುಸಿರಿಡುವ ||
ಬಿರಿದ ಜಗುಱಿದ ಹಲ್ಲುಗಳ ಬೆಳು |
ವರಿದ ರೋಮಾವಳಿಯೊಳೈತರು |
ತಿರಲು ಪುರಜನ ನೋಡಿತಾವೃದ್ಧನನು ನಸುನಗುತ || ೧೪

ಹರೆಯ ಸುಡೆ ಬೆಳುಪಾದ ಭಸ್ಮದ |
ತೆಱದಿ ನರೆತುವು ರೋಮ ಪೂರ್ವದ |
ಪರಿಗತಿಯ ನೆನೆದದ್ಭುತದಿ ತಲೆದೂಗುವಂದದಲಿ ||
ಶಿರ ನಡುಗೆ ತಾ ವಿಷಯತತಿಯೋ |
ಸರಿಸೆ ಸುಕ್ಕಿದ ತೆಱದಿ ತನು ಮಿಗೆ |
ಜರಿದುದತಿವೃದ್ಧತ್ವವಾದಂತಾಕುಮಾರಂಗೆ || ೧೫
ಜರಿದು ಕೊಹೆಕೊಹೆಯೆಂದು ಗಂಟಲ |
ನರ ಬಿಗಿದು ಕೆಮ್ಮುತ್ತ ಜಾಱುತ |
ಕೊರಗುತೊಱಗುತೆ ಕೋಲನೂಱುತೆ ಮುಂದೆ ಸುೞಿವವರ ||
ಕರೆದು ಭೋಜನವಿಕ್ಕುವರ ಮಂ |
ದಿರವ ಕೇಳುತಲಿಂತು ಸುರಮಂ |
ಜರಿಯ ಮನೆಗಾಕಪಟಿ ಬರುತಿರ್ದನು ಸರಾಗದಲಿ || ೧೬
ಬಂದು ಸುರಮಂಜರಿಯ ಗೇಹವ |
ನೊಂದಿ ಪುಗಲಾಪಡಿಯಱರು ತಡೆ |
ದೆಂದರಾವೆಡೆಗೆನಲು ಕನ್ಯಾಭಿಕ್ಷೆಗೋಸುಗ ನಾಂ ||
ಬಂದೆನೆನೆ ನಗುತೀಜರಾನ್ವಿತ |
ಗಿಂದುಮುಖಿಯರ ತೊಡಕು ತನಗೇ |
ಕೆಂದಣಕವಾಡುತ್ತ ಪುಗಿಸಿದರಾತನನು ಮನೆಯ || ೧೭
ಕೊರಗಿ ಬೆಂಬೞಿದಳವೞಿದು ತಲೆ |
ತಿರುಗಿ ಬಿದ್ದವನಂತೆ ಧರೆಯೊಳ |
ಗುರುಳೆ ಮೆಲ್ಲನೆ ಕಣ್ದೆಱೆದು ಕರುಣಾನುಭಾವದಲಿ ||
ತರುಣಿ ಕನ್ಯಾಭಿಕ್ಷವನು ವಿ |
ಸ್ತರಿಸ ಬೇಕೆನಗೆಂದು ಹೀನ |
ಸ್ವರದಿ ನುಡಿಯೆ ದಯೋಕ್ತಿಯಿಂದಿಂತೆಂದಳಾರಮಣಿ || ೧೮
ಕರೆದು ಸತಿಯಾಕಪಟಿಯನು ಪರಿ |
ಪರಿಯ ಭಕ್ಷ್ಯರಸಾನ್ನಪಾನೋ |
ತ್ಕರಗಳಿಂದುಪಚರಿಸಿ ತಾನಿಂತಪ್ಪ ವೃದ್ಧನನು ||
ಧರಣಿಯೊಳು ಕಂಡಱಿಯೆನೆಂದ |
ಚ್ಚರಿಯದಿಂದಬಲೆಯರು ನೋಡು |
ತ್ತಿರೆ ದಿವಾಕರನಿತ್ತಲಪರಾಚಲಕೆ ನಡೆತಂದ || ೧೯

ತರು ತಮಾಲಗಳಂತೆ ವಿಹಗೋ |
ತ್ಕರವು ಪಿಕದಂತಖಿಳಮೃಗತತಿ |
ಕರಡಿಯಂತದ್ರಿಗಳು ನೀಲಾಚಲಗಳಂತೆ ನಭ ||
ಭರದಿ ಕಾರ್ಮುಗಿಲಂತೆ ನದಿಸಾ |
ಗರಗಳಾಕಾಳಿಂದಿಯೆಂಬಂ |
ತಿರಲು ಘೋರತಮಂಧ ನೆರೆ ಮುಸುಕಿತು ಜಗತ್ರಯವ || ೨೦

ಜಾರೆಯರು ಮಣಿಸೇಸೆದಳಿದರೊ |
ಕಾರಿರುಳಿಗಮರಿಯರ ಮುತ್ತಿನ |
ಹಾರ ಹರಿದೊಕ್ಕವೊ ಚಕೋರಕೆ ಧಾತ್ರಿ ಕುಟುಕುಗಳ ||
ಬೀಱಿದಳೊ ಹಱಿಮುಗಿಲು ಧರಣಿಗೆ |
ಜಾರಿದಪುದೆಂದಜನು ಬೆಳ್ಳಿಯು |
ತೋರಮೊಳೆಗಳ ಬಲಿದನೆನೆ ಮೂಡಿದುವು ತಾರಾಳಿ || ೨೧

ವಿರಹಿಯರ ಸುಡುವಗ್ನಿಯೋ ಪು |
ಷ್ಕರನದಿಯೊಳೋಲಾಡಲೆಂದೆನು |
ತುರುತರದಿ ಬಹ ರಾಜಹಂಸೆಯೊ ತಿಮಿರವೆಂದೆಂಬ ||
ಕರಿಯ ವಿದಳಿಪ ಸಿಂಹವೋ ಗಿರಿ |
ಮಱಿಸು ತಪಸಿಯನಱಿಸಿ ಪಿಡಿವಾ |
ಸ್ಮರನ ದೀವಿಗೆಯೆನಲು ಶಶಿಯುದಯಾದ್ರಿಯಲಿ ಮೆಱಿದ || ೨೨

ಭೂಮಿಪತಿ ಕೇಳಿಂತೆಸೆವ ಹಿಮ |
ಧಾಮನುದಯದೊಳಮಲಹರ್ಮ್ಯದ |
ಸೀಮೆಯಲಿ ನೃಪ ಮಲಗಿ ಸತಿಯನುಪಾಯದಿಂದೀಗ ||
ಪ್ರೇಮಬಡಿಸಲು ಬೇಕೆನುತ್ತ ಸ |
ನಾಮಯಕ್ಷ್ಮಾಧಿಪನು ತನಗಿ |
ತ್ತಾಮಹಾಗಾನೋಕ್ತಿಯಲಿ ಪಾಡಿದನು ಲೀಲೆಯಲಿ || ೨೩

ಸರಿಗಮಪಧನಿಸೆಂಬ ಸಪ್ತ |
ಸ್ವರಸಮೇಳದಿ ಪಾಡೆ ಸುರಮಂ |
ಜರಿಯ ತನು ರೋಮಾಂಚನೆಸಗಲು ಮುನ್ನ ಚಿತ್ತವನು ||
ಭರವಶದಿ ಕದ್ದುಯ್ದ ಜೀವಂ |
ಧರನ ನೆನೆದು ವಿದಗ್ಧನೀತನು |
ಪುರುಷನನು ಬೆಸಗೊಂಬೆನೆಂದಿಂತೆಂದಳಾರಮಣಿ || ೨೪

ಎಲೆ ಮಹಾತ್ಮಕ ನೀನಖಿಳಕಲೆ |
ಗಳೊಳಭಿಜ್ಞನು ನಿನ್ನ ನಾ ಬೆಸ |
ಗೊಳುವೆನೆನ್ನಯ ಮನವ ಜೀವಂಧರನು ಕದ್ದುಯ್ದು ||
ನಿಲುಕಿ ನೋಡನು ತತ್ಕುಮಾರಕ |
ತಿಲಕ ವಲ್ಲಭನಹನೆ ತನಗೆನೆ |
ಫಲಿಸುವುದು ನಿನಗೆಂದು ಕಪಟಿ ಲತಾಂಗಿಗಿಂತೆಂದ || ೨೫

ಭಾಮೆ ಕೇಳೀಪುರದ ಹೊರಗಣ |
ಕಾಮದೇವನ ತದ್ವಿಧಾನದಿ |
ನೇಮದಲಿ ನೋಡಲ್ಕೆ ಪತಿ ಪ್ರತ್ಯಕ್ಷನಹನೆನಲು ||
ಆಮಹಿಳೆ ಸಲವಿಂದಲದ ಸು |
ಪ್ರೇಮದಿಂದೀಕ್ಷಿಸುವೆನೆಂದೆನ |
ಲಾಮಿಹಿರನುದಯಾದ್ರಿಗೈತಂದನು ಸರಾಗದಲಿ || ೨೬

ಬಿಸಜಸಖನುದಯದಲಿ ಸತಿ ಮನ |
ವೊಸೆದು ತದ್ದ್ರವ್ಯಗಳ ಸಂಪಾ |
ದಿಸಿ ಮಹಾತ್ಮಕಗಱುಹೆ ತನ್ನಯ ಹಿಂದೆ ಬಾಯೆನಲು ||
ಹುಸಿ ಜರಾತ್ಮಕ ಕಾಮದೇವನ |
ವಸತಿಗೈದಲು ಬೆನ್ನೊಳಾಕ |
ರ್ಕಶಪಯೋಧರೆ ಸಾರಿದಳು ತದ್ದೇವತಾಲಯಕೆ || ೨೭

ವನಿತೆ ಭಕ್ತಿಯೊಳಷ್ಟವಿಧದ |
ರ್ಚನೆಗಳಿಂದಾಕಾಮದೇವನ |
ಸನುನಯದೊಳರ್ಚಿಸಲು ಜೀವಂಧರನು ಮುನ್ನಿರ್ಪ ||
ಮನಸಿಜಾಕೃತಿ ಧರಿಸಿ ಕಪಟದ |
ಘನಜರತ್ವವನುೞಿದು ರಂಜಿಸ |
ಲಿನಿಯನನು ಮನದಣಿಯಲೀಕ್ಷಿಸುತಿರ್ದಳಿಂದುಮುಖಿ || ೨೮

ಆಮಹಾಪುರುಷನ ಪಿನೂತನ |
ಕಾಮನನು ಸಕಲೈಶ್ವರಿಯನು |
ತ್ರಾಮನನು ಗುಣಧಾಮನನನು ಸುಭಗಾಭಿರಾಮನನು ||
ಕೋಮಲನನಚಲನ ಕುಮಾರಲ |
ಲಾಮನನು ನಿರ್ಮಲನ ಜಯಸಂ |
ಗ್ರಾಮನಾಕಾರವನು ಕಂಡುಬ್ಬಿದಳು ಕಮಲಾಕ್ಷಿ || ೨೯

ತನುವಿನಲಿ ರೋಮಾಂಚವತಿ ಕಂ |
ಪನವು ನೇತ್ರದೊಳಶ್ರು ಕೆಂಪಾ |
ನನದಿ ಸಂಸ್ಥಿತ ಸೊಂಪು ಕದಪಿನೊಳುಷ್ಣಘರ್ಮಾಂಬು ||
ಮನದೊಳಂಗಜತಾಪವುನ್ನೋ |
ಹನವು ಬಗೆಯೊಳು ಲಜ್ಜೆ ಭಯ ಸಂ |
ಜನಿಸೆ ಸುರಮಂಜರಿ ನಿರೀಕ್ಷಿಸಿದಳು ಕುಮಾರಕನ || ೩೦

ಸುದತಿ ಬಳಿಕಾವೃದ್ಧಸನು ಕಾ |
ಣದೆ ಮುಹುಚ್ಛರಿವಡಲು ಸಂಕೇ |
ತದಲಿ ಜೀವಂಧರನು ಮುನ್ನೆಣಿಕಿಸಿದ ಮಿತ್ರಂಗೆ ||
ವಿಧುವದನೆ ತನಗೊಲಿದು ಬಂದಾ |
ವಿಧವ ತೋಱಲು ನಾಚಿ ಸಲುಪುದು |
ಮದನನಿಭ ನಿನಗೆಂದು ಸಖ ಹೊಗಳಿದನು ಜೀವಕನ || ೩೧

ಇತ್ತ ಸುರಮಂಜರಿಯು ಪಿತನಾ |
ವಾರ್ತೆಯುಱಿದಿಬ್ಬರನು ಕರೆತಂ |
ದುತ್ತರೋತ್ತರವಾಯ್ತು ಸತಿಗೆಂದತಿವಿಳಾಸದಲಿ ||
ಪುತ್ರಿಯನು ಜೀವಂಧರಗೆ ಸುಮು |
ಹೂರ್ತದಿಂದಲಿ ಧಾರೆಯೆಱಿಯೆ ಪ |
ವಿತ್ರ ಸುರಮಂಜರಿಯು ರಮಿಸುತ್ತಿರ್ದನೊಲವಿನಲಿ || ೩೨

ಇದು ವಿನಮದಮರೇಂದ್ರ ಶ್ರೀಜಿನ |
ಪದಕಮಲಷಟ್ಚರಣ ವಾಣೀ |
ವದನದರ್ಪಣ ಭೂಸುರೋತ್ತಮ ಬಸವಣಾಂಕಸುತ ||
ಚದುರ ಭಾಸ್ಕರರಚಿತ ಧರ್ಮ |
ಪ್ರದನ ಜೀವಂಧರನ ಚರಿತೆಯೊ |
ಳಿದುವೆ ಸುರಮಂಜರಿಯ ಪರಿಣಾತೆಯೀಪ್ರಬಂಧದಲಿ || ೩೩

ಹದಿನಾಲ್ಕನೆಯ ಸಂಧಿ ಮುಗಿಯಿತು.

# ಹದಿನೈದನೆಯ ಸಂಧಿ.

---

**ಸೂಚನೆ||** ಧರದಿ ಚಾಪದೊಳತುಳಯಂತ್ರವ |
ಮುರಿದು ಲಕ್ಷ್ಮಿಯ ಪಡೆದು ಜೀವಂ |
ಧರನು ಕಾಷ್ಠಾಂಗಾರಕನ ಕೊಂದಿಳೆಯ ಪಾಲಿಸಿದ ||

ಭೂರಮಣ ಕೇಳಿತ್ತ ಕಾಷ್ಠಾಂ |
ಗಾರ ತನ್ನನು ಕಂಡರಖಿಳ |
ಕ್ಷ್ಮಾರಮಣರತಿಗರ್ವದಲಿ ಗೋವಿಂದರಾಜನನ ||
ಬಾರನಾತನ ಕರೆಯಬೇಕೆಂ |
ದಾರುಬಟೆಯಲಿ ಮಂತ್ರಿಗಳನವಿ |
ಚಾರನಟ್ಟಲು ಹೊಕ್ಕರವರು ವಿದೇಹಪಟ್ಟಣವ || ೧

ಬಂದು ಮಂತ್ರಿಗಳನುನಯದಿ ಗೋ |
ವಿಂದರಾಜನ ಕರೆಯಲಿಕೆ ಬಹ |
ನೆಂದವರ ಮುಂದಟ್ಟಿ ಕಾಷ್ಠಾಂಗಾರಕನನಲ್ಲಿ ||
ಕೊಂದಿಳೆಯ ಪಟ್ಟವನು ಜೀವಕ |
ಗೊಂದಿಸಿಯೆ ಮತ್ಸುತೆಯನಿತ್ತಪೆ |
ನೆಂದು ವಿಜಯಾವತಿಸಹಿತ ನಿಶ್ಚೈಸಿದನು ಭೂಪ || ೨

ಬಳಿಕ ಗೋವಿಂದಾವನೀಶ್ವರ |
ಹಲವು ಪಯಣದೊಳನುಜೆಸಹಿತಾ |
ಹೊಳಲಿಗೈತರಲೆದ್ದು ಕಾಷ್ಠಾಂಗಾರ ತಕ್ಕೈಸಿ ||
ಒಲಿದು ಮನ್ನಿಸಿ ಕಳುಹೆ ಮಾವನ |
ಬಳಿಗೆ ಜೀವಂಧರನು ಬಂದಡಿ |
ಗಳಿಗೆ ನಮಿಸಲು ನಲಿದು ಬಿಗಿಯಪ್ಪಿದನು ತವಕದಲಿ || ೩

ಅಳಿಯನಳವಾಕಾರಕಾನೃಪ |
ನೊಲಿದು ಮತ್ಸುತೆ ಲಕ್ಷ್ಮಿಯನು ಕೋ |
ಮಲಗೆ ಕೊಡುವೆನು ವಿಗಡಯಂತ್ರವ ಜಯಿಸಲಿವನುಳಿಯೆ ||
ಗೆಲುವರಿಲ್ಲ ಸ್ವಯಂಬರಕೆ ನೃಪ |
ಕುಲವ ನೆರಹಿ ಕುಮಾರನಂತವ |
ತಿಳುಹಬೇಕೆಂದಿಂತು ನಿಶ್ಚಯಿಸಿದನು ಗೋವಿಂದ || ೪

ಲೀಲೆಯಲಿ ಗೋವಿಂದ ಬಱಿಕರ |
ಸಾಳ ಕರೆದು ಸತೀಸ್ವಯಂವರ |
ಶಾಲೆಗಖಿಳನೃಪಾಲಸಂಕುಲ ರಾಜಪುರವರಕೆ ||
ಲಾಲಿತದಿ ಬಹುದೆಂದು ಬಱಿಕ ವಿ |
ಲೋಲವಿವಿಧದ್ರವ್ಯಗಳ ನೃಪ |
ಮೇಳಯಿಸಿ ರಚಿಯಿಸಿದನಾವೈವಾಹವುಂಟಪವ || ೫೫

ಅರಸ ಕೇಳ್ ಚರರಿತ್ತ ಲಕ್ಷ್ಮ್ರಿಯ |
ವರಸ್ವಯಂವರಕಖಿಳಭೂವಿೂ |
ಶ್ವರರು ಬರ್ಪುದು ರಾಜಪುರವರಕೆಂದು ಸಾಱುತಿರೆ ||
ಹರುಷದಿಂದಾನೃಪರು ಮೂಜಗ |
ಬಿಱಿಯೆ ಪಯಣದ ಭೇರಿಗಳು ವಿ |
ಸ್ತರದಿ ಹೊಯ್ಸಿ ವಿಳಾಸದಲಿ ಹೊಱವಟ್ಟರರಮನೆಯ || ೬

ನೆಲನು ಜಿಸಲಾದಂತೆ ಭೂವಿೂ |
ವಲಯಪಾಲಕರಖಿಳಚಾತು |
ರ್ಬಲಸಮೇತದಿ ಬರಲು ತದ್ದ್ವಾರಕ್ಕೆ ದಿಗಿಭತತಿ ||
ಅಳುಕಿ ಮೂಗಿಲಿ ಕೈಯನಿಟ್ಟಳ |
ವಱಿದು ವಹಿಪತಿ ಸೆಡೆದು ತನ್ನಯ |
ತಲೆಯ ಕಲ್ಲನು ಮಾಡಿಕೊಂಡಿರ್ದನು ಕುಚೇಷ್ಟೆಯಲಿ || ೭

ವಸುಧೆ ಹಯದೊಳಜಳಧಿ ವಿೂಗೆ [?] ರಾ |
ಜಿಸುವ ನದಿಯಂತಿರಲು ಖಡ್ಗ |
ಪ್ರಸರದಮಲಪ್ರಭೆಗಳಾಶಾಂತರವ ನೆಱೆ ಮುಸುಕೆ ||
ಎಸೆವ ಬಹುವಾದ್ಯಗಳ ರವವಾ |
ಗಸವ ತೀವಲು ರಾಜಪುರವರ |
ಕೆಸಗಿ ಬರುತಿರ್ದರು ಮಹೀಪಾಲಕರು ವಿಭವದಲಿ || ೮

ಮೆಱೆವ ಮಣಿಮಯಪಂಚರತ್ನದ |
ಸರವನುರ್ವಿ ನಭೋಂಗನೆಗೆ ವಿ |
ಸ್ತರದಿ ನಟ್ಟಿದಳೆನಲು ದೇಶದ ದೇಶದವನಿಪರ ||
ಉಱುವ ಚಾತುರ್ಬಲದ ಪದಹತ |
ದುರುತರದ ರಜ ವಿವಿಧವರ್ಣೋ |
ತ್ಕರಗಳಿಂ ನೆಱೆ ಮುತ್ತಿ ಮುಸುಕಿತಜಾಂಡಮಂಡಲವ || ೯

ಸಾಲಸತ್ತಿಗೆ ಮೇಘತತಿ ಕರ |
ವಾಳರುಚಿ ಮಿಂಚಖಿಳವಾದ್ಯಾ |
ಭೀಳರವ ಮೊಳಗೆತ್ತಿದಾಧ್ವಜಯಂತ್ರದನುಹಾರ ||
ಆಲಿಕಲು ಗಜಘಟೆಯು ಮದಧಾ |
ರಾಳಿ ವರ್ಷಮುದಾಗೆ ಪೊಸ ಮಱಕೆ |
ಗಾಲದಂತೆ ನೃಪಾಲಕರು ಬರುತಿರ್ದರೊಲವಿನಲಿ || ೧೦
ಚಳತುರಂಗದ ತೆರೆಯು ಗಜಸಂ |
ಕುಳದ ಪುಳಿನದ ಬೆಳುಗೊಡೆಯು ನೊರೆ |
ಗಳ ರಥಾಂಗದ ಚಕ್ರವಾಕದ ನಯನ ಮತ್ಸ್ಯಗಳ ||
ತಳಿತ ಖಡ್ಗಾಂಶುಗಳ ವಡಬನ |
ಲುಳಿತವಾದ್ಯಾರವದ ಘೋಷಣೆ |
ಗಳ ಮಹಾನೃಪಸೈನ್ಯವಾರಿಧಿ ಬಂದುದೊಗ್ಗಿನಲಿ || ೧೧
ಪೊಡವಿ ಕುಸಿದುದು ಕಮಠನೆದೆ ಸಡ |
ನಡುಗೆ ಚಮರಚ್ಛತ್ರ ಗಗನವ |
ನಡರೆ ಭಟ್ಟರು ಕವಿಗಮಕವಾಗ್ಮಿಗಳು ಕೊಂಡಾಡೆ ||
ಕಡಗಿ ಸಮ್ಮುಖ ಎಂದು ನೆರೆದು |
ಗ್ಗಡದಿ ಕಟ್ಟಿಗೆಕಾಱರೈತರೆ |
ಬೆಡಗಿನಲಿ ಬಂದರು ಮಹೀಪಾಲಕರು ವಿಭವದಲಿ || ೧೨
ಭೂಸತೀಶ್ವರ ಕೇಳು ನಾನಾ |
ದೇಶದವನೀಪಾಲಕರು ಸುವಿ |
ಲಾಸದಲಿ ಪುರಿಗೈದಿ ಬರೆ ಗೋವಿಂದ ಮಣಿಮಯದ ||
ವಾಸಗಳನುಱಕೆ ಬಿಡಿಸಿ ಘನಸಂ |
ತೋಷದಲಿ ನಾಂದೀಮುಖವ ಮೇ |
ಳೈಸಿ ಶಾಸ್ತ್ರದಿ ಪೂರ್ವವೇದಿಯನರಸ ಮಾಡಿಸಿದ || ೧೩
ಮಱುದಿವಸ ಲಕ್ಷ್ಮಿಯು ಮಹಾಭಾ |
ಸುರದ ಪರಿಣತೆಗಖಿಲಭೂಪೀ |
ಶ್ವರರು ಮಂಟಪಕೈದಿ ಬಹುದೆಂದರಸ ಸಾಱಿಸಲು ||
ಕರಿವದನನನು ಸತ್ಕರಿಸಿ ಪರಿ |
ಪರಿಯ ಶೃಂಗಾರದಲಿ ಬಂದಾ |
ಧರಣಿಪರು ಮಂಟಪದ ಪೀಠದೊಳೆಸೆದರೊಗ್ಗಿನಲಿ || ೧೪

ಕ್ಷಿತಿಪ ಕೇಳಾಪೀಠದಲಿ ನೃಪ |
ರತಿಶಯದಿ ರಂಜಿಸಲು ನಟ ಮಾ |
ಗಧ ಸುಕವಿ ಪರಿಹಾಸಕರು ತಾರ್ಕಿಕರು ಪಾಠಕರು ||
ಯತಿ ವಿಬುಧ ವಿದ್ವಾಸು ಮುನಿ ಪಂ |
ಡಿತರು ವಾಮನ ಮೂಕ ಬಧಿರ |
ಪ್ರತತಿ ನೆರೆದುದು ಚಪ್ಪರದೊಳಾನಂದಲೀಲೆಯಲಿ || ೧೫

ಬಳಿಕ ಘನತರಚಾಪವನು ಸ |
ಲ್ಲಲಿತಮಣಿಮಂಟಪದ ಮಧ್ಯ |
ಸ್ಥಲದೊಳಗೆ ತಂದಿರಿಸಿ ಶಿಖಿಯಂತ್ರವನು ಗಗನದಲಿ ||
ಅಳವಡಿಸಿ ಹೂಗರಂಬ ಸುತ್ತಲು |
ನಿಲಿಸಿ ವಿವಿಧಸುಗಂಧದಕ್ಷತೆ |
ಗಳಲಿ ಬುಧರರ್ಚಿಸಿದರಾಲೌಕಿಕವಿಧಾನದಲಿ || ೧೬

ತಾರೆಗಳ ಮಧ್ಯದಲಿ ಶಶಿ ವಿ |
ಸ್ತಾರದಲಿ ಮೆಱೆವಂತೆ ಸಖರ್ಯೆ |
ನೂಱ್ವರು ಸಹವಾಗಿ ಜೀವಂಧರನು ಬಂದೆಸೆವ ||
ಚಾರುಪೀಠವನಡರೆ ಕಾಷ್ಠಾಂ |
ಗಾರನಾತನ ರೂಪ ಧೀರೋ |
ದಾರ ಬಲವನು ಕಂಡು ತನ್ನಯ ಮನದೊಳಿಂತೆಂದ || ೧೭

ಇವನು ಜೀವಂಧರನ ನೆಱೆ ಹೋ |
ಲುವನದೇನಚ್ಚರಿಯೊ ತಾ ಭೂ |
ಭುವನವಱಿಯಲು ಮಡಿದವನು ಮತ್ತೀಗಲುದಿಸಿದನೊ ||
ವಿವರಿಸಿದೊಡೀ ಮರ್ತ್ಯದೇಹದಿ |
ದಿವಿಜಪತಿಯೋಮೇಣ್ ಜಯಂತನೊ |
ಇವನೆನುತ ಬೆಂಬಳಿದು ಕಾಷ್ಠಾಂಗಾರ ಬೆಱಗಾದ || ೧೮

ಭಾರಿ ಧನುವಿದನೆತ್ತಿ ಗಗನಮ |
ಯೂರಯಂತ್ರವನೆಚ್ಚೊಡಾತನೆ |
ನಾರಿಗಧಿಪನೆನುತ್ತ ಸಾಱಿಸಿ ಬಳಿಕ ಗೋವಿಂದ ||
ವಾರಿರುಹನೇತ್ರೆಯರ ಕರೆದು ಕು |
ಮಾರಿಯನು ಶೃಂಗರಿಸಿಯೆನೆ ವಿ |
ಸ್ತಾರದಿಂದವೆ ಕಾಂತೆಯರು ಕೈಗೈಯ್ದರಾಸತಿಯ || ೧೯

ಬೇಱಿತೆ ಬೇಱಿತೆ ಚತುರ್ವಿಧದ ಶೃಂ |
ಗಾರವೆಸೆಯಲು ರಮಣಿ ಪಿತನಾ |
ಗಾರವನು ಹೊಱಪಟ್ಟು ಮೇಳದ ಸಖಿಯರೊಡಗೂಡಿ ||
ಮಾರನಿಪ್ಪಾ ದೇವಿಯಂತೆ ಸ |
ರೋರುಹಾನನೆ ಮಂಟಪಕೆ ಏ |
ಸ್ತಾರದಲಿ ಬರುತಿರ್ದಳಾಭೂಪರ ಸಮೀಪದಲಿ || ೨೦
ಬಂದು ಪಿತನಡಿಗೆಱಗಲಾಗೋ |
ಎಂದ ಕೆಲದಲಿ ಕುಳ್ಳಿರಿಸಿಕೊಂ |
ಡೆಂದನೀಚಾಪದಲಿ ಯಂತ್ರವ ಜಯಿಸಿದಾನೃಪನ ||
ಕಂಧರದೊಳಿದ ಸೂಡೆನುತ ಸಾ |
ನಂದದಲಿ ಮಂದಾರಮಾಲೆಯು |
ನಂದನೆಯ ಹಸ್ತಾಬ್ಜದಲಿ ಕೊಟ್ಟನು ಮಹೀಪಾಲ || ೨೧
ವನಿತೆಯಾಕಾರವನು ಕಂಡಾ |
ಜನಪರಚ್ಚರಿವಟ್ಟು ನಾಮೀ |
ಧನುವ ಬೇಗದೊಳೆತ್ತಿ ಯಂತ್ರವ ಮುಱಿದು ಕಾಮಿನಿಯ ||
ಅನುಕರಿಸಬೇಕೆಂದು ನೆನೆದು |
ಬ್ಬಿನೊಳುಲಿದು ನಾ ಮುಂದೆ ತಾ ಮುಂ |
ದೆನುತಲೆದ್ದು ನೃಪಾಲಕರು ತುಡುಕಿದರು ಕಾರ್ಮುಕವ || ೨೨
ನೂರಜುಗಳು ಕುಲಗಿರಿಯು ನೆರೆ ಮು |
ಕ್ಕುಱಿಕಿದಂತಾಚಾಪವನು ಭೂ |
ವರರು ಮುಸುಕಿಯದೆಂತು ನೆಗಪಲ್ಕಾಱದುದಱಿಂದ ||
ಇಱಿಕಿ ಮೊಱಕಾಲಿಕ್ಕಿ ದಂಡೆಯೊ |
ಳೊಱಗಿ ಘಾಟದೊಳೆತ್ತಿ ಧನು ನ್ಯೈ |
ಮುಱಿಯದಿರೆ ಬೆಂಡಾಗಿ ನೃಪರಿರ್ದರು ಕುಚೇಷ್ಟೆಯಲಿ || ೨೩
ಲಾಟ ಪರವಶನಾದನಾಕ |
ರ್ಣಾಟ ಮನಗುಂದಿದನು ಕೇರಳ |
ಪಾಟಿಗೆಟ್ಟನು ಮಾಗಧನು ತೂಡೆಗೆಡೆದನವನಿಯಲಿ ||
ಭೋಟ ಡೆಂಢಣಿಸಿದನು ಪರಸೋ |
ರಾಟ ಸೆಡೆದನು ವಿಗಡ ಧನುವಿನ |
ಕೋಟಿ ಬೇಡೆಂದಬಲೆಯುರು ನಗುತಿರ್ದರೊಲಪಿನಲಿ || ೨೪

ಗೌಳ ಗರುವಿಕೆಗೆಟ್ಟನಾಪಾಂ |
ಚಾಳ ದಂತವಿಹೀನನಾದನು |
ಚೋಳ ಭಂಗಾಕುಳಿತನಾದ ಕಳಿಂಗ ಕಂದಿದನು ||
ಮಾಳವನು ಗತಮಾನನಾದನು |
ಕಾಲೊಡೆದು ದಂಡ್ರೇಶನುಳಿದ ನೃ |
ಪಾಲರದ್ದರು ಭಂಗಜಲಧಿಯೊಳರಸ ಕೇಳೆಂದ || ೨೫

ಮೇಳವದಿ ನೃಪರೊಗ್ಗಿನಿಂದಾ |
ಸ್ಥೂಳಚಾಪನ ತುಡುಕಲಾಧನು |
ಮೇಲೆ ಬಡಿಗಲ್ಲುರುಳಿದಂತಿರಲದನದಂತೇಕೆ ||
ಚಾಳಯಿಸಿಕೊಂಡುಳಿದೆವಿನ್ನಾ |
ಬಾಳೆ ಸಾಕೆಮಗೆಂದು ಭೂಪರು |
ಚಾಳಿಸಿದೊಡಲೆಯುರು ನಗುತಿರೆ ನಾಚಿ ತವಕದಲಿ || ೨೬

ಪೊಡವಿಪಾಲಕರತುಳಧನುವಿಗೆ |
ಸೆಡೆಯೆ ಕಾಷ್ಠಾಂಗಾರ ಕೋಪದ |
ಘುಡುಘುಡಿಸಿ ಚಾಪವನು ಮುಳಿದಂಗನೆಯ ಮುಂದಲೆಯ ||
ಪಿಡಿದು ತಹೆನೆಂದೆದ್ದು ತೊಡರು |
ಗ್ಗಡಿಸೆ ಬಂದು ನಿಜಾಂಬರವನಳ |
ವಡಿಸಿಕೊಂಡಬಲೆಯರ ನೋಡುತ ತುಡಿಕಿದನು ಧನುವ || ೨೭

ತುಡುಕಲಾಕೋದಂಡವಳೆಯೊಳು |
ನೆಡಿಸಿದದ್ರಿಯ ವಿಧದೊಳಿರೆ ನೈ |
ಯಡುವ ಬಲಿದೌಡೊತ್ತಿ ಮೊಣಕಾಲಿಕ್ಕಿ ನೆಗಪುತಿರೆ ||
ಮಿಡುಕದಿರೆ ಝೋಂಪಿಸಿ ಧರಿತ್ರಿಗೆ |
ಕೆಡೆದ ಕಾಷ್ಠಾಂಗಾರಕನನಾ |
ಮಡದಿಯರು ಕಂಡ್ಯೆದೆ ನಗುತಿರ್ದರು ಸುಲೀಲೆಯಲಿ || ೨೮

ಧಾರಿಣೀಪತಿ ಕೇಳು ಕಾಷ್ಠಾಂ |
ಗಾರ ಮುಖ್ಯನೃಪಾಲಕರನಾ |
ಭಾರಧನು ಭಂಗಿಸಲು ಗೋವಿಂದಕ್ಷಿತೀಶ್ವರನು ||
ಮಾರನಿಭ ಜೀವಂಧರನ ಕ |
ಣ್ಣೋರೆಯಿಂದೀಕ್ಷಿಸಲು ನಗುತ ಕು |
ಮಾರನೆದ್ದನು ತೊಡರ ಝಣಝಣರವದ ಘೋಷದಲಿ || ೨೯

ದೇಹಕಾಂತಿ ದಿಶಾವಳಿಯ ನೆರೆ |
ಮೋಹಿಸಲು ನೃಪನಿವಹ ಕಂಡಿವ |
ಸಾಹಸಿಗನೆತ್ತುವನು ಚಾಪವನೆಂದು ಕಾಂತೆಯರು ||
ಮೋಹನಾಕಾರನು ಸಲಕ್ಷಣ |
ದೇಹಿಕನು ಸತಿಗೀತನೆನಲು |
ತ್ಸಾಹದಲಿ ಜೀವಂಧರನು ಬಂದೆಯ್ದಿದನು ಧನುವ || ೩೦
ಕುಸುಮಮಾಲೆಯ ಧರಿಸುವಂದದೊ |
ಳಸಮಬಲನಾಕಾರ್ಮುಕವ ಲೆ |
ಕ್ಕಿಸದೆ ಸರ್ವಜ್ಞನನು ನೆನೆದೊಲಿದೆತ್ತಿ ಗುಣವೊಂದೆ ||
ವಸುಧೆ ನಡುಗಲು ಬಿಲ್ಲ ಟಂಕೃತಿ |
ಯೆಸಗಿ ಕೂರಂಬುಗಳ ಕೊಂಡಾ |
ಗಸದ ಯಂತ್ರದ ನೆಱಲ ನೋಡಿ ಕುಮಾರ ಹರಿಯೆಚ್ಚ || ೩೧
ವಿಮಳಮತಿ ಕೇಳ್ ವಿಗಡಯಂತ್ರವ |
ನಿಮಿಷದಲಿ ಜಯಿಸಿದ ಕುಮಾರಕ |
ನಮಿತಚಾಪಕಳಾವಿಧತ್ವವೆ ಸೂತಮಾಗಧರು ||
ಅಮಮ ಭಲರೇ ಪೂತುರೆನೆ ಸಂ |
ಭ್ರಮದೆ ವಣಿಜರು ನಲಿಯೆ ಸತಿಯರು |
ತಮತಮಗೆ ಬೆಱಗಾಗೆ ಜೀವಂಧರನು ನೆಱೆಮೆಱೆದ || ೩೨
ಕೇಕಿಯಂತ್ರವ ಗೆಲಿದ ಪುಣ್ಯಾ |
ಶ್ಲೋಕಿ ಜೀವಂಧರನ ಮೇಲೆ ದಿ |
ವೌಕಸರು ನೆಱೆಮೆಚ್ಚಿ ಪೂಮಳೆಗಱೆಯಲಾಯೆಡೆಗೆ ||
ಲೋಕಮೋಹಿನಿ ಲಕ್ಷ್ಮಿ ಹರ್ಷೋ |
ದ್ರೇಕದಲಿ ಮನ್ಮಥನ ಪಟ್ಟದ |
ನೇಕಪವು ಬಪ್ಪಂತೆ ಬರುತಿರ್ದಳು ಸರಾಗದಲಿ || ೩೩
ಮಿಸುಪ ಲಾವಣ್ಯಾಮೃತದಿ ದೆಸೆ |
ಮುಸುಕೆ ಕಚಕುಚಭರಕೆ ಗಳ ನಡು |
ಕುಸಿಯೆ ಜೀವಂಧರನನಾಲೋಕಿಸುತಲಾರಮಣಿ ||
ಕುಸುಮಶರಸಿಶಿತಾಸ್ತ್ರದಂದದಿ |
ಶಶಿವದನೆ ಮೃದುಗತಿಗಳಲಿ ಬರೆ |
ವಸುಮತೀಶರು ಕಳವಳಿಸಲೈದಿದಳು ವಲ್ಲಭನ || ೩೪

ಕೆಲಬರನು ಸತಿ ರೂಪಿನಲಿ ಕೆಲ |
ಕೆಲರ ಸೊಬಗಲಿ ನೋಟದಿಂದವೆ |
ಕೆಲಬರನು ನವಹಾವಭಾವದಿ ಕೆಲರ ನಗೆಯಿಂದೆ ||
ಕೆಲಬರನು ವಚನಾಮೃತದಿ ಕೆಲ |
ಕೆಲರ ಜಾಣಿಂದಿಂತು ನೃಪಸಂ |
ಕುಳದ ಚಿತ್ತವ ಸೂಱೆಗೊಳುತಿರ್ದಳು ಸರೋಜಾಕ್ಷಿ || ೩೫
ಮದನನಾನೆಯು ಸುಂಡಿಲೆನೆ ಶಶಿ |
ವದನೆ ಕಕ್ಷಪ್ರಭೆ ದಿಶಾವಳಿ |
ಪುದಿಯೆ ಕರದಿಂದೆತ್ತಿ ನವಮಂದಾರಮಾಲೆಯನು ||
ಚದುರ ಜೀವಂಧರನ ಕೊರಲಿನೊ |
ಳುದಿತಲಜ್ಜಾಹರ್ಷಭಯರಸ |
ಮ್ಮುದದಿ ಸೂಡಿದಳೊಲ್ದು ಲಕ್ಷ್ಮಿ ಜಯಪ್ರಘೋಷದಲಿ || ೩೬
ಭಾವೆ ಜೀವಂಧರೆಗೆ ಮಾಲೆಯ |
ನೀವಿಧದಿ ಸೂಡಲು ಸಮಸ್ತನೃ |
ಪಾವಳಿ ಮಹಾ ನಾಚಿ ತಲೆಗಳ ಕುತ್ತಿ ಕಾಮದಲಿ ||
ಬೇವುತಬಲೆಯು ಬಯ್ಯುತಿವ ತಾ |
ನಾವ ದೇಶದ ನೃಪನೊ ಎಂದುಱೆ |
ಭಾವಿಸಲು ಗೋವಿಂದನಂದು ಗಭೀರದಲಿ ನುಡಿದ || ೩೭
ಈಮಹಾತ್ಮಕ ವಾರ್ಧಿಪರಿವೃತ |
ಭೂಮಿಪತಿ ಸತ್ಯಂಧರನ ಸುತ |
ನೀಮಹಿಮನೆನ್ನಳಿಯ ಜೀವಂಧರ ಮಹಾಬಲನು ||
ಕಾಮಿನೀಕಂದರ್ಪನೀತ ಸ |
ನಾಮನೀತನು ಶತ್ರುಕುಲನಿ |
ರ್ಧೂಮನೆಂದು ಕುಮಾರಕನ ಗೋವಿಂದ ಬಣ್ಣಿಸಿದ || ೩೮
ಧರಣಿಪಾಲರ ಸಭೆಯೊಳಾತನ |
ತೆಱನನಿಂತೀಪರಿಯೆ ಬಣ್ಣಿಸೆ |
ಕೆರಳೆ ಕಾಷ್ಠಾಂಗಾರನಾಗೋವಿಂದನನು ಜಱೆದು ||
ಹರದನಂದನ ಮಡಿದ ಸತ್ಯಂ |
ಧರನ ಮಗ ಗಡ ನಿನ್ನನೀತನ |
ತಱೆದು ಕನ್ನೆಯ ಸೆಳೆವೆ ಫಡ ಹೋಗೆನುತ ಗರ್ಜಿಸಿದ || ೩೯

ಖೂಳ ಕಾಷ್ಠಾಂಗಾರನಖಿಳನೃ |
ಪಾಳಿಗೆಂದನು ಬಣಗನಿವನೀ |
ಜಾಳುಜಂತ್ರವ ಗೆಲಿದ ಗಡ ನಲಿದೊಲಿದು ಮಾಲೆಯನು ||
ಬಾಲೆ ಸೂಡಿದಳೆಂದು ಹೊಗಳುವ |
ನಾಳೆ ನಾಳಿವನಿವದಿರೆಲ್ಲರ |
ಸೀಳಿ ಕನ್ನೆಯ ಸೆಳೆಯದಿರೆ ಪಳಿಯೆಮಗೆ ಬಹುದೆಂದ || ೪೦

ಎಂದೊಡಾನೃಪನಿವಹ ಹರದನ |
ಕಂದನಲ್ಲ ಮಹಾಬಲನು ಸ |
ತ್ಯಂಧರನ ಮಗನಲ್ಲದಿರೆ ಹಿಂದೆಮ್ಮ ಜಯಿಸುವನೆ ||
ಇಂದಿವನ ನುಡಿಗೇಳಿ ಹರಿವೆವು |
ಗೆಂದು ಕಾಷ್ಠಾಂಗಾರಕನನುಳಿ |
ದಂದು ಜೀವಂಧರಗೆ ನೆರವಾದುದು ನೃಪವ್ರಾತ || ೪೧

ಕಾಲುಹೊಳೆಯನು ದಾಟುವೊಡೆ ಹರಿ |
ಗೋಲದೇಕಿಪ ನನ್ನ ಸೇವಕ |
ನಾಳಿನಾಳಿವಗೇಕೆ ಭೂಪರು ನೀವು ಪರಿಯಂತ ||
ಆಳು ಕುದುರೆಯ ಹಂಗುಬೇಡೆನು |
ತಾಲಿಯಲಿ ಕೆಂಪಡರೆ ರೋಷ |
ಜ್ವಾಲೆ ಝೊಂಪಿಸೆ ಮಂಟಪವ ಸುಕುಮಾರ ಹೊಱವಟ್ಟ || ೪೨

ಉಭಯಪಾರ್ಶ್ವದೊಳಖಿಳಧರಣೀ |
ವಿಭುಗಳೈತರೆ ಹಿಂದೆ ಮಿತ್ರರು |
ವಿಭವದಲಿ ಬರಲಿದಿರಿನಲಿ ಗೋವಿಂದ ನಡೆತರಲು ||
ವಿಭವದಲಿ ಬಿಲುರಬಸವಾಶಾ |
ತ್ರಿಭುವನವ ಗೋಳಿಡಿಸಲಂಗಜ |
ನಿಭನು ಸಮರಾಂಗಣಕೆ ನಡೆದನು ಸಕಲದಳಸಹಿತ || ೪೩

ಅರಸ ಕೇಳು ಕುಮಾರಸೀಪರಿ |
ಬರಲು ಕಾಷ್ಠಾಂಗಾರಕನ ದಳ |
ನೆರೆದು ತಮ್ಮೊಳಗೆಂದರೀಸತ್ಯಂಧರನು ನಮಗೆ ||
ಅರಸು ಪೂರ್ವದೊಳೆಂದು ಜೀವಂ |
ಧರನ ಕಂಡುದು ಕಿಱಿದು ದಳಸಹಿ |
ತಿರದೆ ಕಾಷ್ಠಾಂಗಾರ ತಾಗಿದನಾಕುಮಾರಕನ || ೪೪

ಒಂದು ಕಡೆಯಲಿ ರಿಪುಬಲವ ಗೋ |
ವಿಂದ ಸವಱಿದನೊಂದೆಸೆಯ ನೃಪ |
ವೃಂದ ಬಳಸಿದುದೊಂದು ದೆಸೆಯಲಿ ಮಿತ್ರರರಿಬಲವ ||
ಕೊಂದರಗ್ಗದ ರಥಿಕರನು ಜೀ |
ವಂಧರನು ಖಂಡಿಸಲು ಖಾತಿಯ |
ನೊಂದಿ ಕಾಷ್ಠಾಂಗಾರ ತೆಗೆದೆಚ್ಚನು ಕುಮಾರಕನ || ೪೫

ಒಳ್ಳಿತ್ತೈ ಕೈಚಳಕ ಸರಿ ನಿನ|
ಗಿಲ್ಲವಾರಲಿ ಕಲಿತೆ ದಿಟ ತ |
ಪ್ಪಲ್ಲ ಸೀನೆಚ್ಚಂಬು ಬೀೞ್ವುದು ಗುಱಿಯ ಸರಿಸದಲಿ ||
ಪುಳ್ಳಿಗಳ ತಂದದನು ಮಾಱುವ |
ಗಳ್ಳಗತಕವ ಬಲ್ಲೆಯಲ್ಲದೆ |
ಬಿಲ್ಲುವಿದ್ಯವಿದೇಕೆ ನಿನಗೆಂದೆನುತ ಮುಳಿದೆಚ್ಚ || ೪೬

ನೆಟ್ಟನೆನ್ನಯ ಪಟ್ಟದಾನೆಯ |
ದಟ್ಟಿಸಲು ನಾ ನಿನ್ನ ಹೆಡಗುಡಿ |
ಗಟ್ಟಿ ನಿನ್ನಸುಗಳೆಯುತಿರಲದನಪಹರಿಸಿಕೊಂಡು ||
ಗಟ್ಟಬೆಟ್ಟವ ಹೊಕ್ಕು ಭೀತಿಸಿ |
ಕೆಟ್ಟು ಮಗುೞ್ದೈತರಲು ನಿನ್ನನು |
ದಿಟ್ಟನೆಂಬರೆ ಹೇಱಿನುತ ಖಳನೆಚ್ಚನವನಿಪನ || ೪೭

ಜಾತಿಗಳ ಪತಿಕರಿಸಿದವ ವಿ |
ಖ್ಯಾತಿಬಡುವನು ಖುಲ್ಲರಪ್ಪ ಕು |
ಜಾತಿಗಳ ಸಲಹಿದರಿಗಪಜಯವೆಂಬ ನುಡಿಯೆಮ್ಮ ||
ತಾತಗಱಿಯಲು ಬಂದುದೆಲವೋ |
ಪಾತಕನೆ [ಚೀ] ಸ್ವಾಮಿದ್ರೋಹಿ ಕಿ |
ರಾತ ಹೋಗೆಂದೆನುತ ಖಳನ ಕುಮಾರ ಮಗುಱಿಚ್ಚ || ೪೮

ಹರದನೊಳಗುಂಡುಟ್ಟು ಬಳೆದ |
ಬ್ಬರಿಸಿ ತಱುವಲಿತನದ ನುಡಿಗಳ |
ನೊರಹಿದೊಡೆ ಫಲವೇನು ನೀ ಕ್ಷತ್ರಿಯನೊ ವೈಶ್ಯಕನೋ ||
ನಿರುತ ನೀನಾರೀಗ ನಿನ್ನನು |
ತಱಿದು ರಕ್ತವನಖಿಳಶಾಕಿನಿ |
ಯರಿಗೆ ಬಡಿಸುವೆನೆನುತ ಕಾಷ್ಠಾಂಗಾರ ಮುಳಿದೆಚ್ಚ || ೪೯

ಇವನ ನಾ ಸರಿಮಾಡಿಕೊಂಡಾ |
ಹವವ ಮಾಡಲದೇಕೆ ಎನುತಾ |
ರ್ದು ವಿರಳಾಸ್ತ್ರದೊಳವನ ರಥಸಾರಥಿಹಯಾವಳಿಯ ||
ಸವಱಿ ಕಾಷ್ಠಾಗಾರಕನ ಬಾಂ |
ಧವಸಹಿತಲೊಂದಂಬಿನಲಿ ಕಡಿ |
ದವನಿಪತಿ ಪಡೆದನು ಜಯಶ್ರೀಯನು ರಣಾಗ್ರದಲಿ || ೫೦

ದುರುಳ ಕಾಷ್ಠಾಂಗಾರಕನನೀ |
ತೆಱದಿ ಜಯಿಸಿ ಸಮಸ್ತಭೂಪರ |
ಪುರಕೆ ಮನ್ನಿಸಿ ಕಳುಹಿ ಶಾಸ್ತ್ರಕ್ರಮದಿ ಲಕ್ಷ್ಮಿಯನು ||
ಅರಸ ಪರಿಣಯವಾಗಿ ನಿಜಮಂ |
ದಿರವ ಹೊಕ್ಕು ರಾಜ್ಯಪಟ್ಟವ |
ಧರಿಸಿ ಜೀವಂಧರನು ತಾಯೊಡನಿರ್ದನೊಲವಿನಲಿ || ೫೧

ಬಳಿಕ ಜೀವಕ ಹಿಂದೆ ದೇಶಂ |
ಗಳ ಪರಿಭ್ರಮಣೆಯಲಿ ಪಡೆದಾ |
ಲಲನೆಯರು ಮೂವರನು ರಾಜಪುರಕ್ಕೆ ತಾ ಕರೆಸಿ ||
ಹೊಱಲೊಳಿಹ ಕಾಂತೆಯರು ಸಹ ಭೂ |
ವಳಯಪಾಲಕನಷ್ಟವಹು ಕೋ |
ಮಳೆಯರೊಡಗೂಡಿರ್ದನಮರೇಂದ್ರನ ಸುಲೀಲೆಯಲಿ || ೫೨

ಮಹಿಷಿಪಟ್ಟವನೊಸೆದು ವಿಮಳೋ |
ತ್ಸಹದೊಳಾಗಂಧರ್ವದತ್ತೆಗೆ |
ವಹಿಸಿ ಗಂಧೋತ್ಕಟನ ಮನ್ನಿಸಿ ಸಕಲಮಿತ್ರರಿಗೆ ||
ಬಹಳ ಪದವಿಯನಿತ್ತು ತತ್ಸ |
ನ್ನಹಿತ ನಂದಾಢ್ಯಂಗೆ ರಿಪುನಿ |
ಗ್ರಹವ ಯುವರಾಜತ್ವವಿತ್ತನು ಬಹಳ ಹರ್ಷದಲಿ || ೫೩

ಕ್ರೂರಕಾಷ್ಠಾಂಗಾರಕನ ಕೈ |
ಸಾರಿದವದಿರ ಸದೆದು ಧೀರೋ |
ದಾರರಾಗಿಹ ಪೂರ್ವಸಚಿವರಿಗವರ ಪದವಿತ್ತು ||
ಮೂಱು ಲೋಕದಿ ತನ್ನ ಕೀರ್ತಿಯ |
ಬೀಱಿ ಸದ್ಧರ್ಮದಿ ಕುಮಾರಕ |
ಧಾರಿಣಿಯ ಪಾಲಿಸುತಲಿರ್ದನು ಬಹಳ ಸೌಖ್ಯದಲಿ || ೫೪

ಇದು ವಿನಮದಮರೇಂದ್ರ ಶ್ರೀಜಿನ |
ಪದಕಮಲಷಟ್ಚರಣ ವಾಣೀ |
ವದನದರ್ಪಣ ಭೂಸುರೋತ್ತಮ ಬಸವಣಾಂಕಸುತ ||
ಚದುರ ಭಾಸ್ಕರರಚಿತ ಧರ್ಮ |
ಪ್ರದನ ಜೀವಂಧರನ ಚರಿತೆಯೊ |
ಳಿದುವೆ ಪಟ್ಟೋತ್ಸಾಹವರ್ಣನೆಯರಸ ಕೇಳೆಂದ || ೫೫

ಹದಿನೈದನೆಯ ಸಂಧಿ ಮುಗಿದುದು.

---

## ಹದಿನಾಱನೆಯ ಸಂಧಿ.

---

**ಸೂಚನೆ** || ಲಲನೆಯರು ಸಹಿತಾನ್ಯಪಾಲಕ |
ತಿಲಕ ಬನದೊಳಗೆರಡು ಮಾಸವ |
ಕಳೆದು ಮುಗುಳ್ದೈತಂದು ಹೊಕ್ಕನು ರಾಜಮಂದಿರವ ||

ಧರಣಿಪಾಲಕ ಕೇಳು ಜೀವಂ |
ಧರನು ಲಕ್ಷ್ಮಣೆ ಪದ್ಮೆ ಸುರಮಂ |
ಜರಿ ವಿಮಲೆ ಗುಣಮಾಲೆ ವಿದ್ಯಾಧರಿ ಕನಕಮಾಲೆ ||
ಸುರುಚಿರ ಶ್ರೀಗೆಸೆನಿಸುವಷ್ಟಮ |
ತರುಣಿಯರೊಳೊಬ್ಬೊಬ್ಬ ಸುಕುಮಾ |
ರರನು ಪಡೆದಾನಂದಲೀಲೆಯೊಳಿರ್ದನನವರತ || ೧

ಒಂದು ದಿನ ವನಪಾಲಕನು ಜೀ |
ವಂಧರನ ಸಮ್ಮುಖಕೆ ಬಂದೊಲ |
ವಿಂದಪೂರ್ವಫಲಾದಿಗಳ ಕಾಣಿಕೆಯನಿತ್ತೆಱಗಿ ||
ನಂದನವ ವರ್ಣಿಸಲಶಕ್ಯ ಮ |
ಹೇಂದ್ರಗೆನಲೆನ್ನಳವೆ ದೇವರು |
ಬಂದು ನೀವ್ ಚಿತ್ತೈಸಬೇಕೆಂದೆನುತ ಕೈಮುಗಿದ || ೨

ವಾರಿನಿಧಿ ಪೂರ್ಣೇಂದುವನು ನೆರೆ |
ಹಾರುವಂದದಿ ನಿಮ್ಮ ಬರವನು |
ಚಾರುನಂದನ ಬಯಸುತಿದೆ ಸುಕುಮಾರಕರು ಸಹಿತ ||
ನಾರಿಯರು ಸಹಿತೊಂದುಮಾಸ ವಿ |
ಹಾರಿಸುವುದೆನೆ ಬಹೆನೆನುತ ಮಹಿ |
ಳಾರಮಣನಾಹದನ ಸಾಱಿಸಿದನು ಪುರಾಂತದಲಿ || ೩

ಧಾರಿಣೀಪಾಲರಿಗೆ ಮಂತ್ರಿಕು |
ಮಾರರಿಗೆ ನಟವಿಟಭಟಾಳಿಗೆ |
ವಾರನಾರೀಜನಕೆ ಬಹುಧನ ರತ್ನಭೂಷಣವ ||
ವಾರಕವನಿತ್ತರಸಿಯರು ಸುಕು |
ಮಾರಕರು ಸಹಿತರಸ ಮಣಿಮಯ |
[ತೀರನೇಱಿ] ವಿಳಾಸದಲಿ ಹೊಱವಟ್ಟನರಮನೆಯ || ೪

ಸ್ಮರನ ಮಂತ್ರದ ದೇವತೆಯರೆನೆ |
ಪರಿಪರಿಯ ಶೃಂಗಾರದಲಿ ಕರಿ |
ತುರಗರಥಗಳ ಮೇಲೆ ಪರಿಮಿತಕಾಮಿನೀನಿಕರ ||
ಬರಲು ಬೆಳ್ಗೊಡೆ ಚಮರ ಸೀಗುರಿ |
ಮೆಱೆಯೆ ಸಡಗರದಿಂದೆ ಜೀವಂ |
ಧರನು ಒಂದಾನಂದನವ ಪೊಕ್ಕನು ವಿಲಾಸದಲಿ || ೫

ಚಾರುಪದ್ಮಾನನದ ಲಲಿತಚ |
ಕೋರನೇತ್ರದ ಚಕ್ರಕುಚದ ಮ |
ಯೂರಕಚದ ಮರಾಳಗಮನದ ಪಾಟಲಾಧರದ ||
ಕೀರವಚನದ ತಳಿರಡಿಯ ರಂ |
ಭೋರುಗಳ ತಳೆದೆಸೆವ ಕುಸುಮಶ |
ರೀರದಾವನಲಕ್ಷ್ಮಿ ತಾಸಿದಿರಾದಳಾನೃಪಗೆ || ೬

ಅರಸ ಕೇಳಾಜನವ ಜೀವಂ |
ಧರನು ಪುಗೆ ವನಪಾಲಕನು ಭೂ |
ವರಗೆ ತೋಱಿದ ವಿಮಳವಲ್ಲಿಯ ಹರ್ಮ್ಯಶಾಲೆಗಳ ||
ಮೆಱೆವ ಕೃತಕಾದ್ರಿಗಳ ತತ್ಫಲ |
ಭರಿತ ಕುಜಸಂಕುಳದ ಘನ ಸಡ |
ಗರವ ತೋಱುತ ಮುಂಗೆ ನಡೆತರುತಿರ್ದನೊಲವಿನಲಿ || ೭

ತಳಿರು ಕೆಂಪಡಸದೆ ಧರಿತ್ರಿಯ |
ನಲರ ಬೆಳುಪಿಲ್ಲದಿರೆ ನಭವು |
ಜ್ವಲಿಸದಿರೆ ತರುಶಾಖೆ ಪಣ್ಗಳ ಭರದಿ ಕುಸಿಯದಿರೆ ||
ಫಲರಸವು ನದಿಯಾಗದಿರೆ ಗಿಳಿ |
ಬಳಗ ಚುಂಬಿಸದೆಂದೆನುತ ನೃಪ |
ತಿಲಕಗಾವನಪಾಲ ಸಹಕಾರವನು ತೋಱಿಸಿದ || ೮

ತಳಿರಿನಗ್ನಿಯನಳಿಗಳಿದ್ದಿಲ |
ನಳವಡಿಸಿ ಮಂದಾನಿಲನ ತಿದಿ |
ಗೊಳಿಸಿ ಶುಕ ನೆರವಾಗೆ ಮಧುಕಮ್ಮಱನು ವನವೆಂಬ ||
ಕುಲುಮೆಯಿಂದರಲಸ್ತ್ರಗಳ ಮಾ |
ಡಲು ಸಿಡಿದ ಕಿಡಿಯೆನೆ ಪರಾಗೋ |
ದ್ಗಳಿತಶೋಕೆಯ ತರುವ ನೃಪ ನೋಡೆಂದು ತೋಱಿಸಿದ || ೯

ವನಸತಿಯು ಸೆಳ್ಳುಗುರೊ ವಿರಹಿಯ |
ಮನವ ಕೊಱೆಯಲು ಚಿತ್ತಭವನಾ |
ಳ್ದನುಪಮಿತ ಕರಗಸವೊ ಮಧುಪಾನವನಳಿವ್ರಾತ ||
ಅನುಭವಿಪ ದೋಣಿಗಳೊ ಹರರಿಪು |
ವೆನುತ ಹೊಱಗಿಕ್ಕಿದ ವಸಂತಕ |
ನೆನಲು ರಂಜಿಪ ಕೇತಕಿಯನವನೀಶ ನೋಡೆಂದ || ೧೦

ಧಾರಿಣಿಗೆ ಹೊಱೆಯಾಗದಿರಲು |
ನಾರನುಟ್ಟು ವನಾಂಬುವೀಂಟಿಯೆ |
ಮಾರುತಾರ್ಕಪ್ರಭೆಗಳುಕದೇಕಾಂತದಲಿ ವನವ ||
ಸಾರಿ ತಪವಾಚರಿಪೆವೆನುತವೆ |
ಚಾರು ಕಂಗಳ ಮುಚ್ಚಿ ಮೆಱೆದಿವೆ |
ನಾರಿಕೇಳಗಳರಸ ನೋಡಿವು ತಪಸಿಯಂದದಲಿ || ೧೧

ಮಲಿನ ಪುಷ್ಪಲತಾಂಗನೆಗೆ ನೀ |
ನೆಳಸುತಿಹೆ ಮಾತಂಗಜಾತಿಗ |
ಳೊಳಗೆ ದಾನವ ಕೊಂಬ ಮೇಲಾಱಡಿಗ ಮಧುಪಾನಿ ||
ಚಲಹೃದಯ ನೀನೆನ್ನ ಮುಟ್ಟದೆ |
ತೊಲಗೆನುತೆ ಕೈಸನ್ನೆಗೆಯ್ವಂ |
ತಲುಗುವೆಲೆಗಳೊಳೆಸೆವ ಸಂಪಗೆಯರಸ ನೋಡೆಂದ || ೧೨

ವಿರಹಿಯೆಂಬ ಮದೇಭವನು ಕಾ |
ತರಿಸಿ ಮನ್ಮಥನೆಂಬ ಕೇಸರಿ |
ಶಿರವ ಮೆಟ್ಟಿ ಮಹೋಗ್ರದಿಂ ಸೀಱಲು ನಖಾಗ್ರದಲಿ ||
ಸುರಿವ ರುಧಿರದ ಧಾರೆಯೆಂದೆನ |
ಲರುಣತೆಯನೊಂದಿಹ ಪಲಾಶದ |
ಮರನ ನೀ ನೋಡೆಂದು ಭೂಮೀಪತಿಗೆ ತೋಱಿಸಿದ || ೧೩

ವದನವಾರಿಜಪರಿಮಳವ ಪೀ |
ರ್ದಧರಬಿಂಬಾಮೃತವ ಸವಿದತಿ |
ಮೃದುವಪುರ್ಲತೆಗಳಲಿ ಗಾಢಾಲಿಂಗನಂಗೈದು ||
ಮುದದಿ ಕೇಶಾಳಿಗಳ ಬರಸೆಳೆ |
ದೊದವಿ ಕಟಿಪುಳಿನಸ್ಥಳೋದಕ |
ಮದನರಸವೆನೆ ನೆರೆದ ಮಂದಾನಿಲ ವನಾಂಗನೆಯ || ೧೪

ಗಿಳಿಗಳೊಪ್ಪದಿ ಪಾಡಿ ಪಲವು |
ದ್ದಳಿಯ ಬೆಡಗಿಂದನಿಲ ಲತೆಗಳ |
ನಲೆದು ಬಾಜಿಸಿ ತಾಳರವ ಕೋಗಿಲೆಯೊಳೊಂದಿರಲು ||
ಅಳಿಬಳಗ ಕಹಳೆಗಳ ಪೂರಿಸೆ |
ಲಲಿತವಿಭ್ರಮಗತಿಗಳಲಿ ವನ |
ಲಲನೆ ನೃತ್ಯವನಾಡುವಳು ಭೂಪಾಲ ಕೇಳೆಂದ || ೧೫

ಆಲಲಿತನಂದನವನವನೀ |
ಪಾಲಕಗೆ ವನಪಾಲ ತಾನತಿ |
ಲೀಲೆಯಲಿ ತೋಱಿಸಲವಂಗಭಿಮತವನೊಲಿದಿತ್ತು ||
ಬಾಲೆಯರಿಗಾರಾಮದೊಳಗೆ ವಿ |
ಶಾಲವನಮಂಟಪವನೆಡೆಗೆಡೆ |
ಗೋಳಿಯಲಿ ಮಾಡಿಸಿದನಾಭೂಪಾಲ ಕೇಳೆಂದ || ೧೬

ಕೃತಕಶೈಲದ ಮಂಟಪದೊಳಾ |
ಕ್ಷಿತಿಪನಷ್ಟಮಕಾಂತೆಯರು ಸಹಿ |
ತತಿವಿಳಾಸದೊಳಿರಲು ನವಪುಷ್ಪಾಪಚಯಕೊಸೆದು ||
ಸತಿಯರಾವನದೊಳಗೆ ನಯನ |
ದ್ಯುತಿ ದಿಶಾವಳಿ ಮುಸುಕೆ ಕುಸುಮ |
ಪ್ರತತಿಗಳ ನೆರೆ ತಿರುಹುತಿರ್ದರು ಬಹಳ ಹರುಷದಲಿ || ೧೭

ಕಚವಲುಗೆ ನಡು ಬಳುಕೆ ಸೋರ್ಮುಡಿ |
ವಿಚಲಿಸಲು ದೃಗ್ವದನದಂತ |
ಪ್ರಚಯಕಕ್ಷ ಕಪೋಲಕರ್ಣಾಭರಣ ತಳತಳಿಸೆ ||
ಕುಚ ಕುಣಿಯೆ ತನು ಬೆಮರೆ ನವಮಣಿ |
ಖಚಿತಕಂಕಣ ಝಣಝಣೆನೆ ಶುಕ |
ವಚನೆಯರು ಪೂಗೊಯ್ದರಾಬನದೊಳಗೆ ಲೀಲೆಯಲಿ || ೧೮

ಸರಸಿರುಹದಳನೇತ್ರೆ ಮಲ್ಲಿಗೆ |
ಯರಲುಗಳ ಸಲೆ ಕೊಯ್ದು ಮುಗುೞಿಕ್ಕೈ |
ತರುತಿರಲು ನೇತ್ರಾಂಶು ಲತೆಯಲಿ ಪುದಿಯೆ ಕಂಡಲರು ||
ಮರಳಿ ಮೂಡಿವೆಯೆನುತ ಹಸ್ತಾಂ |
ಬುರುಹವನು ಮುಗುಳಿದಕೆ ನೀಡಲು |
ಬೞಿಯದಾಗಿರೆ ಮುಗ್ಧೆ ಮೊಗದಿರುಹಿದಳು ಲಜ್ಜೆಯಲಿ || ೧೯
ಗಿಳಿಕೆಗಳ ಕೊಂಬುಗಳ ಪೂಗೊಂ |
ಚಲನದೊರ್ವಳು ಕೊಯ್ಯುತಿರಲರ |
ಗಿಳಿ ಲಸದ್ದಾಡಿಮದ ಫಲವೆಂದಧರವನು ತುಡುಕೆ ||
ಉಲುಕಿ ಬಿದ್ದುವು ಚೇತನವು ಕುಚ |
ಗಳುಕಿ ಹಾಯೆನುತಾನೃಪಾಲಕ |
ತಿಲಕಗೞುಹಲು ಸತಿಯು ಮುಗ್ಧತೆಗರಸ ಬೆಱಗಾದ || ೨೦
ಅಲರ ಕೊಯ್ಯುತ್ತಿರಲು ಮೃದುಕರ |
ತಲರುಚಿಯಿನೆಳದಳಿರಿನಂತಿರ |
ಲುೞಿದಶೋಕೆಯ ಪಲ್ಲವಕೆ ಕೈನೀಡೆ ಲೋಚನದ ||
ಬೆಳಗಿನಿಂದಲರಾಗಿರಲು ಕಂ |
ಡಳುಕಿ ಮಾಯದ ಮರಪಿದೆಂದು |
ತ್ಪಲನಯನೆ ಮೊಗದಿರುಹೆ ನಗುತಿರ್ದನು ಮಹೀಪಾಲ || ೨೧
ಒದೆಯೆ ದುಷ್ಟನ ತೆಱದಿ ಪಲ್ಲವಿ |
ಸಿದುದಶೋಕವು ಬಕುಳ ನನೆದೋ |
ಱಿದುದು ಶಠನಂತುಗುೞಿದೊಡೆ ಕುರವಕವು ಬಿಗಿಯಪ್ಪೆ ||
ಮುದದಿ ದಕ್ಷಿಣನಂ[ತಲರ್] ಸೋ |
ಡಿದೊಡೆ ಧವನನುಕೂಲನಂತುರು |
ಗಿದುದು ತಿಲಕಕ್ಕಭಯರುಚಿ ಬೆಱಗಾಗೆ ಬನದೊಳಗೆ || ೨೨
ಇಂದುಮುಖಿಯರು ಕುಸುಮಗಳನಾ |
ನಂದದಲಿ ಕೊಯ್ದವನಿಪಾಲನ |
ಮುಂದಿರಿಸಿ ದೇವಾರ್ಚನೆಯ ಮಾಡುತ್ತ ಸೊಬಗಿನಲಿ ||
ಸಂದ ವಿವಿಧವಿನೋದದಲಿ ಜೀ |
ವಂಧರನು ಮಾಸವನು ಕಳೆದಿರೆ |
ಬಂದುದೆಸೆವ ವಸಂತ ಜನಕಾನಂದದಂದದಲಿ || ೨೩

ವಿರಹಿಗೆತ್ತಿದ ಸಬಳ ಯೋಗಿಗ |
ಳುರದ ಶೂಲ ವಿಯೋಗಿ ಕೌಂಗಿದ |
ಸುರಗಿ ಸನ್ನೊಸೆಗೆದೆದಲ್ಲಣ ವರತಪಸ್ವಿಗಳ ||
ಶರದಲುಡಿದತಿ ಸತಿಯರಿಗೆ ದ |
ಳ್ಪುರಿ ಸುಭೋಗಿಗಳಾಶ್ರಯವು ಶಂ |
ಬರವಿರೋಧಿಯ ಸೈನ್ಯವೆನೆ ವನವೆಸೆದುದೊಗ್ಗಿನಲಿ || ೨೪
ಅಳಿ ಮೊರೆಯೆ ಪಿಕ ನಯಸರಂದೋ |
ಱಲು ಮದನನುಚ್ಚಲಿಸೆ ಮಂದಾ |
ನಿಲ ಮಹೋತ್ಸವವೆಸಗೆ ಸಕಲಕುಜಾಳಿಯಂಕುರಿಸೆ ||
ಗಿಳಿ ಮರಾಳ ಚಕೋರ ಚಕ್ರಾ |
ವಳಿಗಳಿಗೆ ನಲವೇಱತಿ ಸೊಬಗಿಂ |
ಮೊಳೆತುದೆಸೆವ ವಸಂತ ಜನಕನುರಾಗದಂದದಲಿ || ೨೫
ತಳಿರ ಸತ್ತಿಗೆಗಳ ವಿಡಾಯಿಯ |
ಲಳಿಯ ಕಹಳಾವಳಿಯ ಪೂಗೊಂ |
ಚಲಿನ ಚಮರದ ಹಂಸೆ ಕೇಕಿ ಪಿಕಾದಿಗಳ ಬಲದ ||
ಗಿಳಿಯ ಪಾಠಕರೆಸೆವ ಮಂದಾ |
ನಿಲನ ಹಯಗಳ ಚೂತದಿಭಸಂ |
ಕುಲದಿ ಚತುರ ವಸಂತನೃಪನಿದಿರಾದನವನಿಪಗೆ || ೨೬
ಜಲರುಹಾಮೋದವನು ಸವಿದು |
ತ್ಪಲಗೊಳದೊಳೋಲಾಡಿ ಪೂಗೊಂ |
ಚಲಲಿ ಸಿಲುಕಿ ವಧೂಕಪೋಲದ ಕುರುಳುಗಳ ಕಲಕಿ ||
ಕಲಶಕುಚಕರ್ದಮದ ಸೌರಭ |
ದೊಳಗೊದವಿ ಕೃತಕಾದ್ರಿಯಲಿ ಸುೞಿ |
ಸುೞಿದು ಬಹನಾದಕ್ಷಿಣಾನಿಲ ವಿಟನ ರೀತಿಯಲಿ || ೨೭
ಕುಡಿಯ ಕಟ್ಟಿಯೆ ತಾಳಿ ಮೌನವ |
ಬಿಡಿಸಿ ಘನಶೋಕದಲಿ ರಾಗಿಸು |
ತೊಡಚು ಶರವನಸಂಗ ಕೈದೋಱುವಾಮ್ರ ಜಡಕೀರ ||
ನಡೆ ಮರುತ ಸೊಂಪೇಱು ಶಶಿಯೊಂ |
ದೊಡರಿ ಮಧುನೃಪಬಂದನಿದೆಯೆಂ |
ದಡರಿ ಸಾಱುವ ವಿಧದೊಳಳಿ ದನಿಗೈದುವೊಗ್ಗಿನಲಿ || ೨೮

ನಾಳೆ ಮನ್ಮಥ ಬಂದಪನು ವನ |
ಕೇಳಿಗರಗಿಳಿ ನಿಮ್ಮ ವಶವಾ |
ಮ್ರಾಳಿ ಷಟ್ಪದ ಕುಸುಮ ನಿಮ್ಮಯ ಕಾಹು ಹಂಸಾಳಿ ||
ಮೇಳವಿಸಿ ಸರಸಿಗಳಲೆಲೆ ತಂ |
ಗಾಳಿ ನೀತೊಱಲೆಂದು ಮಧುವನ |
ಪಾಲ ಸಾಱುವ ತೆಱದಿ ಪಿಕ ದನಿಗೈದುವೊಗ್ಗಿನಲಿ || ೨೯

ಸ್ಮರನಿಭದ ಮದಲೇಖೆ ಜಿತಶಂ |
ಬರನಸಿಯು ಹೊಗರತನುಕೋಪ |
ಸ್ಫುರಮಹಾನಲಧೂಮ್ರ ಘನಕಾಮಾಂಧದುತ್ಪಟಲ ||
ಪುರಹರಾರಾತಿಪ್ರಶಸ್ತ್ರಾ |
ಕ್ಷರ ಮನೋಜನ ಕೊರಲ ನೀಲದ |
ಸರಗಳೆನಲಾಬನದಿ ಸಂಚಾರಿಸಿದುವಳಿನಿಕರ || ೩೦

ಕಾಹು ಮಿತ್ರನೊಳಾಯ್ತು ಜಾತಿಸ |
ಮೂಹಕಗಲಿತು ಸಿರಿ ಕುಜಾತಿಗೆ |
ಮೋಹಿದುದು ಮಧು ಪೆರ್ಚಿತಾಱಿಡಿ ರಾಜಕರ ಜಡಕೆ ||
ಸ್ನೇಹಿಸಿತು ಜನಕೈದೆ ಮನ್ಮಥ |
ದಾಹ ಮಿಕ್ಕುದು ಕುಸುಮಶರವು |
ದ್ಗಾಹಿಸಿತು ಕಲಿಕಾಲದಂತೆ ವಸಂತವವನಿಯಲಿ || ೩೧

ಆವಸಂತಾಗಮದೊಳಾಭೂ |
ದೇವನೊಸೆದು ವಸಂತಪೂಜೆಯ |
ನೋವಿ ಮಾಡಿಯೆ ಒಱಿಕ ನೀರಾಟಕ್ಕೆ ಮನದಂದು ||
ಹೂವಿನಖಿಳಾಭರಣಗಳ ಕಾಂ |
ತಾವಳಿಗೆ ಕೊಟ್ಟೆಸೆವ ಸರಸಿಗೆ |
ಭಾವಜಾಕಾರನು ವಿಳಾಸದಿ ಬಂದನೊಲವಿನಲಿ || ೩೨

ರಾಜಹಂಸಾನ್ವಿತದಿನಭವನ |
ರಾಜಸಭೆಯುನನಂತಪದ್ಮವಿ |
ರಾಜಿತದೊಳಹಿಪಾಚ್ಯುತರ ಕುಮುದೋತ್ತ್ರದಲಿ ಶಶಿಯು ||
ರಾಜನನು ವರಪುಂಡರೀಕ |
ಭ್ರಾಜಿತದೊಳಡವಿಯನು ದಿಗ್ಗಜ |
ರಾಜನನು ಪೋಲ್ತಂದುದಾಕೊಳನಧಿಕವಿಭವದಲಿ || ೩೩

ಹರಿಸಮೇತದೊಳಿಂದಿರೆಯ ಕೇ |
ಸರದಿ ಸಿಂಹವನಬ್ಜದಿಂದಂ |
ಬರವ ನೇತ್ರವಲಜಾಂಡವನನಿಮಿಷಾನ್ವಿತದಿ ||
ಸುರಪುರವ ಚಕ್ರದಿ ವರೂಥವ |
ನುರುಶಿಳೀಮುಖದಿಂ ಧನುರ್ಧರ |
ವರರ ಪೋಲ್ತುದು ಪೂಗೊಳನು ಭೂಪಾಲ ಕೇಳೆಂದ || ೩೪

ಹೊಳೆಹೊಳೆವ ನವರತ್ನಗಳ ಕೇ |
ವಳಿಸಿತೆರೆಯು ಪಳಿಕಿಸವನಿಯು . . . . . |
ಕೆಲದಲಿತಿಸೌರಭದ ಪಲ್ಲವತತಿಯು ಸೂಸಕದ ||
ತಳದೊಳೆಳಮುತ್ತುಗಳ ಮಱಲಿನ |
ಲಳಿವ ನಿರ್ಮಲ ಜಲದಿ ಮೇಲುರಿ |
ಬಳೆದ ಕಮಲೋತ್ಪಲಗಳಿಂ ಕೊಳನೆಸೆದುದನವರತ || ೩೫

ಬೇಱಿ ಬೇಱತಿಸೌರಭದ ಪೊಸ |
ವಾರಿಜಾಕರಕೋಟಿಸಂಖ್ಯೆಗ |
ಳೋರಣದಿನೊಪ್ಪಿದುವು ನವರತ್ನಗಳ ರಚನೆಯಲಿ ||
ಧಾರಿಣೀಶರು ಸಚಿವರಾಪ್ತರು |
ಮಾರವಿಟರು ವಿನೋದಿಗಳು ಪುರ |
ವಾರನಾರಿಯರ್ಶೈದೆ ಮೆಱಿದರು ವಾರಿಕೇಳಿಯಲಿ || ೩೬

ಲಲನೆಯರು ಪೂಗೊಳನನತಿಸ |
ಲ್ಲಲಿತದಿಂ ಪೊಕ್ಕಾಡುತಿರೆ ಕೊ |
ಮಲೆಯರೆನಗೊಳಗಾದರೆಂದುಬ್ಬೇಱ ನಲವೆಚ್ಚಿ ||
ನಲಿದು ರಾಗಿಸಿ ತನ್ನ ತೆರೆಗಳೊ |
ಳೊಲವಿನಿಂ ನೀರೆಱಿದುದಾಮನ |
ವೆಳಸಿ ಕಾಮುಕನಂತೆ ತತ್ಕೊಳನಧಿಕವಿಭವದಲಿ || ೩೭

ಸುಲಲಿತಾಂಘ್ರಿಯುಲೆಱಗಿ ಜಂಘೆಯೊ |
ಳೆಳಸಿ ನುಣ್ದೊಡೆಯುಡರಿ ಜಘನಕೆ |
ನಿಲುಕಿ ನಾಭಿಯೊಳಲಸಿ ತನುವಾಲಿಂಗಿಸಿಯೆ ವಳಿಯ ||
ಹಱಿಚಿ ಕುಚಗಳ ಸೋಂಕಿ ಕಕ್ಷದೊ |
ಳೊಲಿದು ಮುಖಕಡರುತ್ತ ವಿಟಸಂ |
ತೆಳಸಿ ತರಳತರಂಗಸಂಕುಳ ನೆರೆದುವಬಲೆಯರ || ೩೮

ಅಳಕವಳಿ ಕುಚ ಚಕ್ರವಾನನ |
ಜಲಜ ಲಾವಣ್ಯಾಂಬು ನಿರ್ಮಲ |
ಜಲ ನಿತಂಬವೆ ಪುಳಿನ ಗಮನ ಮರಾಳ ವಚನ ಶುಕ ||
ಲಲಿತಲೋಚನ ಕುಮುದ ನಾಭಿಯೆ |
ಸುಳಿಗಳಾಗಲು ಸರಸಿ ಸರಗಳೊ |
ಳೊಲಿದು ನರ್ತಿಪ ತೆಱದಿ ಕೊಳನೊಳಗೆಸೆದರಬಲೆಯರು || ೩೯

ಕರದ ತೆಪ್ಪದೊಳೊಸೆದು ಸುರಮಂ |
ಜರಿಯನೀಸುತ ಜಾಱಿಗಂತವ |
ನಿರದೆ ಲಕ್ಷ್ಮಿಯು ಪಡೆದು ಪದ್ಮಿಯನಪ್ಪಿ ವಿಮಲೆಯೊಳು ||
ಬೆರಸಿ ನೀರೊಳು ಮುೞುಗಿ ವಿದ್ಯಾ |
ಧರಿಯ ಚುಂಬಿಸಿ ಕನಕಮಾಲೆಯ |
ನರಸನೊದೆದತಿಚಾತುರದಿ ನೀರಾಟವಂಡಿಸಿದ || ೪೦

ತಿಳಿಯುದಕವೆಂದಂಗಕಾಂತಿಯ |
ತುೞುಕುವರು ಕಣು ಹೊಳೆಯೆ ಮೀನೆಂ |
ದಳುಕುತಳಿಕುಳವೆಂದು ಹೆಱಿನೂಕುವರು ಕುಂತಳವ ||
ತಳಿರೆನುತ್ತಡಿವಿಡಿವ ವದನವ |
ಜಲಜವೆಂದಾನನವ ಸೋಕುತ |
ನಲಿದು ಮುಗ್ಧೆಯರಾಡಿದರು ಜಲಕೇಳಿಯೊಲವಿನಲಿ || ೪೧

ಅರಸ ಕೇಳ್ಬೈ ಬೞಿಕ ಜೀವಂ |
ಧರನು ನಾನಾಪರಿಮಳೋದಕ |
ಭರಿತ ಖೇಡಾಕುಳಿಗೆ ಬಂದಬಲೆಯರಗೊಲವಿನಲಿ ||
ಮೆಱಿವ ಮಣಿಮಯಯಂತ್ರಗಳ ಕೊ |
ಟ್ಟರಸಿಯರು ಸಹಿತೋಕುೞಿಯ ವಿ |
ಸ್ತರದೊಳಾಡಿದನರಸನಭಿನವಕಾಮನಂದದಲಿ || ೪೨

ಲಾಲಿತದಿ ರತಿ ಮದನಗೊಲಿದು ವಿ |
ಶಾಲತರ ಮಲ್ಲಿಗೆಯ ಹೂವಿನ |
ಮಾಲೆಯಿಕ್ಕಿದಳೆನಲು ಯಂತ್ರದಿ ಗಂಧವನು ಮೊಗೆದು ||
ಲೋಲಕಕ್ಷ ಕಟಾಕ್ಷ ರುಚಿಗಳು |
ಸಾಲಿಡಲು ನೆಗೆದಬ್ಬರಿಸಿ ಗುಣ |
ಮಾಲೆ ಜೀವಂಧರನ ಮೇಲೊಂದಿದಳು ತವಕದಲಿ || ೪೩

ಮುಳಿದು ಮನ್ಮಥನಿಕ್ಷುಚಾಪವ |
ನಲಘುಶಶಿ ತಿಮಿರಾಗ್ನಿ ಶರಗಳ |
ನಳವಡಿಸಿ ಕವಿದೆಚ್ಚನೆನೆ ನೃಪನಂಗನೆಯ ಮೇಲೆ ||
ಮಲಯಜೋದಕಮೃಗಮದಾನ್ವಿತ |
ಸಲಿಲಕುಂಕುಮವಾರಿಗಳ ಜೇ |
ರ್ಕೊಳವಿಯಲಿ ಮೊಗೆದೆತ್ತಿ ಸುರಿಯುತ್ತಿರ್ದಳೊಲಪಿನಲಿ || ೪೪
ಭರದಿ ಯಂತ್ರದೆ ನೀರ ಮೊಗೆಯು |
ತ್ತಿರಲು ಸಡಿಲಿದ ಮುಡಿಯ ಗೋಣಿನೊ |
ಳಿಳುಕಿ ಜಾಱಿದ ನಿಱಿಯನೆಡಗೆಯ್ಯಿಂದ ತಾಳ್ದಲೆವ ||
ಕುರುಳ ತಡವುತ ಜಘನಕುಚಗಳ |
ಭರಕೆ ಬಳುಕುತ ಬಂದು ಸೂಸಿದ |
ಳುರವಣಿಸಿ ಗಂಧರ್ವದತ್ತೆ ನೃಪಾಲನಂಗದಲಿ || ೪೫
ಮಾರನಿಭಕುಂಭಸ್ಥಲದ ಮದ |
ಧಾರೆಯೆನೆ ಗಂಧರ್ವದತ್ತೆಯ |
ಚಾರುಕುಚಗಳ ಮೇಲೆ ನವಕತ್ತುರಿಯ ವಾರಿಯನು ||
ಧಾರಿಣೀಪತಿ ಯಂತ್ರದಲಿ ಮೊಗೆ |
ದಾಱಿ ಸೂಸಲು ಕನಕಮಾಲೆ ಪಿ |
ಶಾರದನ ಮೇಲೊಂದಿದಳು ಪನ್ನೀರ ಮುಳಿಸಿನಲಿ || ೪೬
ವದನದಿಂ ಮೆಲ್ನಗೆಯ ಚೆಲ್ಲುತ |
ಲಧರದಿಂದಮೃತವನು ಸುರಿಯುತ್ತೆ |
ರದನದಿಂ ಮಿಂಚೊಂದಿಸುತ್ತೆ ಕಣ್ಣಿಂದ ಬಾಷ್ಪಗಳ ||
ಒದವಿಸುತ್ತೆ ತನುವಿಂದೆ ಲಾವ |
ಣ್ಯದ ರಸವ ಸೂಸುತ್ತೆ ಯಂತ್ರದೊ |
ಳುದಕವನು ಸುರಿದಳು ನಿಜೇಶನ ಮೇಲೆ ಹರಿಣಾಕ್ಷಿ || ೪೭
ತರುಣಿಯರ ಮೇಲವನಿಪತಿ ಕ |
ತ್ತುರಿಯ ವಾರಿಯ ಸೂಸೆ ಸುಖಿಪಂ |
ಕರುಹವಳಿಮಾಲೆಯನು ಕರ್ಣೋತ್ಪಲವ ನಾಳವನು ||
ಕೊರಲು ನೀಲದ ಸರವ ಭ್ರೂರ್ಧ್ವನು |
ತಿರುವನುನ್ನತ[ಜಘನ] ನೀಲಾಂ |
ಬರವ ಪಡೆದುದೆನಲ್ಕೆ ಬಿಳಿದುವಸಿತಾಂಬುಧಾರೆಗಳು || ೪೮

ಧರಣಿಪಾಲನ ಮೇಲೆ ಶತಸಾ |
ಸಿರ ನಿತಂಬಿನಿಯರು ಸುಯಂತ್ರೋ |
ತ್ಕರದಿ ಮಲಯಜವಾರಿಗಳ ಸುರಿದೊಡನೆ ಕಸ್ತುರಿಯ ||
ಪರಿಮಳಾಂಬುವ ಮೊಗೆದು ಸೂಸು |
ತ್ತಿರಲೆಸೆದುದಾನೃಪನ ತನುವಂ |
ಬರನದಿಯ ಮೇಲಿಟ್ಟಿದ ನವಕಾಳಿಂದಿಯಂದದಲಿ || ೪೯

ಮೊಲೆಯಲುಗೆ ದೋರ್ಮೂಲ ನೆರೆ ತಳ |
ತಳಿಸೆ ತನುಲತೆ ಕೊಂಕೆ ತೆಗೆದು |
ಜ್ಜ್ವಲಿಪ ಯಂತ್ರವ ನೆಗಪಿ ಹೊಯ್ದಾಡುವ ಕುಮಾರಕನ ||
ಮುಳಿದು ಕರೆದೊಡ್ಡೊಡ್ಡೆಸುತ ಮಂ |
ಡಳಿಸಿ ಸತಿಯೊಡ್ಡಿಸಿದ ಭಾವಂ |
ಗಳಲಿ ಭಾವಜನಾದನಂಗಜನೆಂದು ಧರಣಿಯಲಿ || ೫೦

ಸಾದುಕಸ್ತುರಿಯುದಕದಿಂ ಕಾಲ್ |
ದಾದ ಕುಂಕುಮರಸದಿ ನೆನೆದ ಕೆಂ |
ಪಾದ ನೆರೆಸುತ್ತಿದ ತಳಿರ್ಗಳ, ಗಂಧವಾರಿಯಲಿ ||
ತೋದು ಬಿಳುಪಾದಧರಮೌಕ್ತಿಕ |
ವೈದೆ ತುಱುಬಿದ ನವಿಲಗರಿಯೋ |
ಪಾದಿಯಂತಿರೆ ಶಬರಿಯಂತಿರ್ದಳು ಸರೋಜಾಕ್ಷಿ || ೫೧

ಮುತ್ತಿದುವು ಶತಪತ್ರಗಳನಳಿ |
ಮೊತ್ತವೆನಲಾಚಂದ್ರಮುಖಿಯರ |
ನೇತ್ರದಲಿ ಕಸ್ತುರಿಯ ವಾರಿಯನಮಳಯಂತ್ರದಲಿ ||
ವಿಸ್ತರದಿ ಮೊಗೆದಂಗರುಚಿ ದಿಗು |
ಭಿತ್ತಿಗಳ ನೆಱೆ ಮುಸುಕಲಾಭೂ |
ಪೋತ್ತಮನು ನಗುತೆತ್ತಿ ಸುರಿದನು ಬಹಳ ಹರ್ಷದಲಿ || ೫೨

ಹೆಱೆಯ ರಾಹು, ಪಯೋಜವನು ಮಧು |
ಕರವು, ತಳಿರ ಪಿಕಾಳಿ, ಗಿರಿಗಳ |
ನುರುವ ಕಾರ್ಮುಗಿಲಿಳೆಯ [ಮಿಂಚನು] ರಾತ್ರಿ, ಪುಳಿನಗಳ ||
ವರಯಮುನೆ ಮುಸುಕಿರ್ದುದೆನೆ ಕ |
ಸ್ತುರಿ ಲಲಾಟದೆ ನಾಡೆ ನಯನಾ |
ಧರಕುಚಾಂಗನಿತಂಬಗಳಲೆಸೆದುವು ಲತಾಂಗಿಯರ || ೫೩

ಫುಲ್ಲಶರನರಲಂಬ ತೊಡಚಿದ |
ಬಿಲ್ಲೊಳೆಸೆ ಮುನಿದೊರ್ವ ಸತಿ ತನು |
ವಲ್ಲಿ ಕೊಂಕಲು ಹಿಗ್ಗಿ ಕರಯಂತ್ರದಲಿ ನೀರ್ವೊಗೆದು ||
ಚೆಲ್ಲೆಗಂಗಳ ಕಕ್ಷಪುಟದಲಿ |
ಪಲ್ಲುಗಳು ತಳತಳಿಸಲೆತ್ತಿ ಮ |
ಹೋಲ್ಲಸದಿ ಚೆಲ್ಲಿದಳು ಭೂಪನ ಮೇಲೆ ತವಕದಲಿ || ೫೪

ನಿಲ್ಲು ನಿಲ್ಲೋಡದಿರು ಹೊಯ್ವುವ |
ನಲ್ಲ ಬೆನ್ನೊಡ್ಡಿದನು ಕುಚಥ |
ಳ್ಮಲ್ಲಕರ್ಣಾಭರಣಹಾರಾವಳಿಗಳಲುಗಾಡೆ ||
ತಲ್ಲಣದಿ ಬಂದುದಕವನು ಮೊಗೆ |
ದುಲ್ಲಸದಿ ಭೂವರನ ಮೇಲುಱಿಕೆ |
ಚೆಲ್ಲಿದಳು ಸತಿಯೊರ್ವಳೆಯ್ತಂದಮಳಯಂತ್ರದಲಿ || ೫೫

ಅಳಿಗಳಳಿಗಳಪಟ್ಟುವಂದದ |
ಲಳಕವಳಕವು ವಿಾನ ಮಿಾಂಗಳು |
ಹಳಚುವಂದದೊಳಕ್ಷಿಯಕ್ಷಿಯು ಶಶಿಯು ಪರಶಶಿಯು ||
ನಿಲುಕುವಂದದಿ ಮುಖವ ಮುಖವಂ |
ಡಲಿಸೆ ಗಿಳಿ ಗಿಳಿ ಸಾರ್ವನ್ವೊಲ್ ನುಡಿ |
ಬಳಸಿ ಕಾಂತೆಯರೊಬ್ಬರೊಬ್ಬರು ತುಱುಕಿದರು ಜಲವ || ೫೬

ಅಲಲನೆಯರಿಗನಿತು ರೂಪನು |
ತಾಳಿದಂತೆನ್ನಡಿಯಲಿದೆನೆ ನೃ |
ಪಾಲ ಹುಸಿಯಿದು ನಡೆಯಲೀಸನೆ ಸುಜಾಣನೆಂದೆನುತ ||
ಬಾಲೆಯರು ಕಡು ಬೆಱಗ ತಾಳಿರ |
ಲಾಳವಾಡುತ ಪಕಿಲದಲಿ ಸ |
ಮ್ಮೇಳದಲಿ ಜೀವಂಧರನು ನೀರಾಟವಂಡಿಸಿದ || ೫೭

ಜಲವನಂಗನೆ ನೊಗೆದು ನಾಡಿಗೆ |
ಸಿಲುಕೆ ವಿರಹದೊಳರಸನುದಕವ |
ತುಱುಕೆ ಮುಱಿದವಳಿಡುವ ಜಲಹರಿಗಳುಕಿ ಸಿಲುವಂತೆ ||
ಮುಱುಗಿರಲು ಸತಿ ಮತ್ತೆ ತಣ್ಣೀ |
ರ್ಗಳಿಗೆ ಬಾಗಿರೆ ಹೊಯ್ದುಧರವನು |
ನಿಲುಕಿ ಚುಂಬಿಸಿ ಮುಱುಗಿ ಮೂಡಿದನೊಂದು ಠಾವಿನಲಿ || ೫೮

ಕಂಬುಕಂಠೆಯ ತುಱುಬು ಸಡಿಲೆ ಮು |
ಖಾಂಬುಜದೊಳಿರೆ ನೀರೊಳದು ಪ್ರತಿ |
ಬಿಂಬಿಸಲು ಕಂಡೀಸತಿಯನಾರಾಹು ನೆಱೆ ನುಂಗಿ ||
ಇಂಬಿನಲಿ ನೆಲಕಳೆಯುತಿದನೇ |
ನೆಂಬ ಕಾಂತೆಯ ತಳದ ಮ |
ಡಾಂಬುವನು ನಗುತರಸ ಸುರಮಂಜರಿಗೆ ತೋಱಿಸಿದ || ೫೯

ಎಳಸಿ ಸವತಿಯ ಗಾಡಿಗಿನಿಯನು |
ನಿಲುಕಿ ಸಲಿಲಕ್ರೀಡೆಯೊಂದಿಸಿ |
ಮುಳಿದು ಸತಿಯಾಡುವ ನೆವದೊಳವನಕ್ಷಿಗಳ ಜಲವ ||
ತುಱುಕಿ ಮುತ್ತಿನ ಮಂಜರಿಯನಾ |
ಲಲನೆಗಿಕ್ಕಿದನೆಂದೆನಲು ಮುಂ |
ದಲೆಯೊಳಗೆ ಭರದಿಂದ ಸುರಿದನು ಗಂಧವಾರಿಯನು || ೬೦

ಚಲ್ಲಣವನಳವಡಿಸಿ ಜಾಱಿದ |
ಚೊಲ್ಲೆಯವ ಮಿಗೆ ಸಂಪರಿಸಿಕೊಂ |
ಡೆಲ್ಲಿ ಸಲ್ಲನೆನುತ್ತ ನೀರ್ವೊಗೆದೆಸೆವ ಸೋರ್ಮುಡಿಯ ||
ಮಲ್ಲಿಗೆಯರಳು ಸೂಸೆ ತವಕದಿ |
ಹುಲ್ಲೆಗಣ್ಣವಳೊರ್ವಳುದಕವ |
ನುಲ್ಲಸದಿ ಚೆಲ್ಲಿದಳು ಭೂಪನ ಮೇಲೆ ತವಕದಲಿ || ೬೧

ಅರಸನಕ್ಷಿಯೊಳುದಕವನು ವಿ |
ಸ್ತರದಿ ಹೊಯ್ದಣಕಿಸುತ ಸುರಮಂ |
ಜರಿಯ ಸೋರ್ಮುಡಿವಿಡಿದು ಬಾಗಿಸಿ ಚಕ್ರವಾಕಗಳ ||
ತುಱುಗಿದುವು ಕನ್ನೈದಿಲೆನೆ ಕ |
ತ್ತುರಿಯ ವಾರಿಯನೆತ್ತಿ ಜೀವಂ |
ಧರನು ಸತಿಯ ಕುಚಂಗಳಲಿ ಸುರಿದನು ವಿನೋದದಲಿ || ೬೨

ನಾರಿಯರ ತನುಲಿಪ್ತ ನವ ಕಾ |
ಶ್ಮೀರ ಕುಚಕುಂಕುಮ ಸುಗಂಧದ |
ಸಾರದಲಿ ಕೆಸಱಾದುದೀಜಲಕೇಳಿ ಸಾಕೆನಲು ||
ಜಾಱಿದಳಕಚ್ಯುತಕುಸುಮ ಕೆಂ |
ಪೇಱಿದಕ್ಷಿ ಶಿತೋಷ್ಣ ನಗೆಮೊಗ |
ಮಾರಚಿಹ್ನೆಗಳೆಸೆಯೆ ಸತಿಯರು ನಿಂದರಱ್ತಿಯಲಿ || ೬೩

ಕರದ ಕುಸುಮದ ಕಂತುಕದ ಪಂ |
ಕರುಹದವತಂಸಗಳ ವೇಣಿಯೊ |
ಳಿಱುಕಿದುತ್ಪಲದಂಗರುಚಿಯ ಮೃಣಾಳಕಂಕಣದ ||
ಹೆಱೆನೊಸಲ ಸುಲಿಪಲ್ಲ ಗಂಧದಿ |
ಮೆಱೆವ ಮಕರಿಕೆಪತ್ರಗಳ ಸಡ |
ಗರದ ಸತಿಯರು ಸಹಿತ ನೃಪ ಹೊಱವಟ್ಟನಾಕೊಳವ || ೬೪
ವೃತ್ತಕುಚಗಳ ಮೇಲೆ ಬಾಹಾ |
ಸ್ವಸ್ತಿಕಾದರ್ಪಣವನಳಿಕುಳ |
ಮುತ್ತಿತೆನೆ ಕಪ್ಪಿನಲಿ ಕುಂತಳವೆಸೆಯೆ ಸೀತ್ಕಾರ ||
ವಕ್ತ್ರದೊಳಗಿರೆ ತನುವಸಂಬರ |
ಹತ್ತಿರಲು ನಗ್ನತೆಯೊಳೊಂದಿಹ |
ಚಿತ್ತಜನ ದೇವತೆಯರಂತೆಸೆದರು ಲತಾಂಗಿಯರು || ೬೫
ತರುಣಿಯರ ಮುಖಚಂದ್ರನಿಂ ಶಶಿ |
ಪರಿಭವಂಬಡೆದಾಕುಚಾದ್ರಿಯೊ |
ಳುರುೞಿ ಕಡಿಕಡಿಯಾದುದೆನಲಂಗದಲಿ ನಖವೆಸೆಯೆ ||
ಭರಕೆ ಬೀೞುವೆನೆಂದು ಮೊಲೆಗಜ |
ನಿರದೆ ನೀಲದ ಪೊಳೆಯನೊಂದಿದ |
ತೆಱದೆ ಕುಚಚೂಚುಕಗಳೆಸೆದುವು ಕೋಮಲಾಂಗಿಯರ || ೬೬
ಲಲಿತ ವದನಾಂಭೋರುಹಕೆ ಕವಿ |
ದಳಿಯೊ ಮುಖಚಂದ್ರನ ಕಲಂಕೋ |
ಜ್ವಲವಿದೆನಲಧರದಲಕ್ಷತೆಗಳೊಪ್ಪಿರಲು ||
ವಿಲಸಿತಾಸ್ಯಸುಧಾಕರಂಗ |
ವ್ವಳಿಪ ಕೃಷ್ಣಭುಜಂಗನೆನೆ ಕ |
ಣ್ಗೊಳಿಸಿದುವು ನವರೋಮರಾಜಿಗಳಾಲತಾಂಗಿಯರ || ೬೭
ಲಲನೆಯರ ಲಾವಣ್ಯರಸವು |
ಚ್ಚಳಿಸಿತೋ ನಾವಬಲೆಯರ ಸ |
ಲ್ಲಲಿತ ತನುಸೋಂಕಿನಲಿ ಸುಖದಿಂದಿರ್ದೆವಿನ್ನೆಂದು ||
ಕಳೆವರೆಂದಳವೞಿದು ಜರಿದಳ |
ವೞಿವ ಕಣ್ಣಿನ ನೀರ್ಗಳೆನೆ ಕೋ |
ಮಲೆಯರುಟ್ಟಂಬರದ ಸೀರ್ಗಳು ಸುರಿದುವೊಗ್ಗಿನಲಿ || ೬೮

ಬಳಿಕ ಹೊಸ ಮಡಿವರ್ಗಗಳ ಕೋ |
ಮಲೆಯರಿಗೆ ಕೊಟ್ಟರಸ ಕೃತಕಾ |
ಚಲಕೆ ಬಂದಿರೆ ಮಱುದಿವಸ ನವರತ್ನ ದುಯ್ಯಲೆಯ ||
ನಲಿದು ಕಾಂತೆಯರೇಱಿ ತನುಲತೆ |
ಹೊಳೆಯೆ ಭೂವರನಂಕಮಾಲೆಯ |
ನೊಲಿದು ಪಾಡುತಲಾಡಿದರು ಪರಮಾನುರಾಗದಲಿ || ೧೯

ತುದಿಗೊಳಿಸಿ ವಾಮಾಂಘ್ರಿ ಮಣೆಯೊಂ |
ದಿದ ಸುದಕ್ಷಿಣಪಾದ ರಜ್ಜುವ |
ಹುದುಗಿದೊಳದೊಡೆ ಹೊಳೆವ ಕಣ್ ಹೊಗರಿಡುವ ದೋರ್ಮೂಲ ||
ಅದಿರೆ ಪೊಲೆ ನೀಳ್ದಂಗ ರಂಜಿಸೆ |
ಮೃದುತರದಿ ಶುಕ ಪಾಡೆ ಚಾಪವ |
ಮದನನೇಱಿಸಲಾಡಿದರು ಕಾಮಿನಿಯರುಯ್ಯಲನು || ೨೦

ಲಲಿತದೃಗುಬಾಣದಲಿ ಬೆಳುದಿಂ |
ಗಳನಿಸುತ ಸೋರ್ಮುಡಿಯೊಳನಿಲನ |
ಸೆಳೆದು ಮುಖಶಶಿಯಿಂ ಶಶಾಂಕನನಟ್ಟಿ ಜಘನದಲಿ ||
ಕುಲಗಿರಿಯ ಸೋಲಿಸಿ ಘನಸ್ತನ |
ಗಳಲಿ ದಿಗ್ಗಜಕುಂಭಗಳ ಸೆಳೆ |
ದೊಲೆದು ನಲಿದುಯ್ಯಲೆಯನಾಡಿದರಾಮೃಗಾಕ್ಷಿಯರು || ೨೧

ಮಡದಿಯರು ಹೊಮ್ಮಣಿಗಳನು ಕೈ |
ದುಡುಕಿ ತೆಗೆವ ಪೆಡಂಗು ಮನ್ಮಥ |
ಕಡುಗಿ ಬಾಳುಗಿವಂದವಾಗೆ ನಿತಂಬ ತನು ನಡುಗೆ ||
ಮುಡಿ ಕುಚದ್ವಯ ಕುಣಿಯಲಾಸೆಳೆ |
ನಡು ಸೆಳೆಯೆ ಮೇಖಲೆ ಜಗುಳ್ದಿ ಮುಖ ಬೆಮ |
ರಿಡಲು ನಲಿದೊಲೆದಾಡಿದರು ಕೋಮಳೆಯರುಯ್ಯಲೆಯ || ೨೨

ಬಳಿಕ ಜೀವಂಧರನೃಪಾಲಕ |
ತಿಲಕ ನವಿಲುಯ್ಯಲೆಯನಷ್ಟಸು |
ಲಲನೆಯರು ಸಹಿತಾಡಿ ಸರ್ವಸುಖಂಗಳನು ಸವಿದು ||
ಹೊಱಲಿಗಾಬನವ್ರಱಿದು ಬಂದ |
ಗ್ಗಳನು ಸದ್ಧರ್ಮದಲಿ ಭೂಪಾ |
ತಳವ ಪಾಲಿಸುತಿರ್ದನಮರೇಂದ್ರನ ಸುತೇಜದಲಿ || ೨೩

ಇದುವಿನವುದವುರೇಂದ್ರ ಶ್ರೀ ಜಿನ |
ಪದಕಮಲಷಟ್ಚರಣ ವಾಣೀ |
ವದನದರ್ಪಣ ಭೂಸುರೋತ್ತಮ ಬಸವಣಾಂಕಸುತ |
ಚದುರ ಭಾಸ್ಕರರಚಿತ ಧರ್ಮ |
ಪ್ರದನ ಜೀವಂಧರನ ಚರಿತೆಯೊ |
ಳಿದುವೆ ನಂದನವನವಿಹಾರಣಪೀಪ್ರಬಂಧದಲಿ || ೭೪

ಹದಿನಾಱನೆಯ ಸಂಧಿ ಮುಗಿದುದು.

---

## ಹದಿನೇೞನೆಯ ಸಂಧಿ.

---

ಸೂಚನೆ|| ಧರಣಿಪಾಲಲಲಾಮ ಜೀವಂ |
ಧರನು ಮುದದಲಿ ಪುರವ ರಾತ್ರಿಯ |
ಚರಿಸಿ ಮರಳಿೞಿದು ಬಂದು ಹೊಕ್ಕನು ರಾಜಮಂದಿರವ ||

ಕ್ಷಿತಿಪ ಕೇಳೈ ಬೞಿಕ ವಿಜಯಾ |
ವತಿ ಕುಮಾರಕ ರಾಜ್ಯವೊಂದಿರ |
ಲತಿಶಯಾನಂದದಲಿ ಕತಿಪಯದಿವಸವನು ಕಳೆದು ||
ನುತತಪಸ್ವಿಗಳೂರೊಳಿಪುದನು |
ಚಿತವೆನುತ್ತದನಱಿದು ಸತಿಯಾ |
ಸುತನ ಬೀೞ್ಕೊಂಡೈದಿದಳು ಭೀಕರತಪೋವನವ || ೧

ಜನನಿಯಗಲಿದ ಬಹಳಚಿಂತಾ |
ವನಧಿಯೊಳಗೋಲಾಡಿ ಬೞಿಕಾ |
ಜನಪ ತನ್ನೊಳಗೆಂದ ತಾಪಸಿಗಳು ಪುರಂಗಳಲಿ ||
ಸನುನಯದೊಳಿಹುದುಚಿತವಲ್ಲಂ |
ದೆನುತ ದುಗುಡವನುೞಿದು ಭೂಕಾ |
ಮಿನಿಯ ರಕ್ಷಿಸುತಿರ್ದ ಸುಖದಿಂದರಸನೊಲವಿನಲಿ || ೨

ಲೀಲೆಯಲಿ ಜೀವಂ ರ ಕ್ಷಿತಿ |
ಪಾಲಕನು ತಾನೊಂದು ದಿನ ಚೈ |
ತ್ಯಾಲಯಕೆ ಬಂದರ್ಹಸಿಗೆ ಮಾಪೂಜೆಯನು ಮಾಡಿ ||
ಆಲಯಕೆ ಮಗುೞ್ದೈದಿ ಬರೆ ಭೂ |
ಲೋಲ ಪುರರಾತ್ರೀವಿಹಾರವ |
ಮೇಳವಿಸ ಬೇಕೆಂದು ರವಿಯಸ್ತಾದ್ರಿಗೈತಂದ || ೩

ಪಡುವಣಂಭೋನಿಧಿಯು ವಡಬಾ |
ನಳನ ಶಿಖಿಯೋ ಬುಧರು ಸಂಧ್ಯಾ |
ಮಡದಿಗರ್ಘ್ಯವನೆತ್ತಿದಾಹುತಿ ಚಂದನಾಂಕಿತವೊ ||
ಪೊಡವಿಪತಿ ಜೀವಕನ ತೇಜೋ |
ಗಡಣವೋ ತಾನೆನಲು ಲೋಕದೊ |
ಳಿಡಿದು ಸಂಧ್ಯಾರುಣವೆಸೆಯೆ ಭೂಪಾಲ ಕೇಳೆಂದ || ೪
ಇನಿಯುನಸ್ತಮಿಸಿದನು ಸಿರಿಯುಂ |
ಟೆನುತ ಯಾಮಿನಿ ಪೇಟ್ದಿಳದಱಿಂ |
ದೆನಗೆ ಬಪ್ಪುದು ರಾಜಬಾಧೆಯುದನು ಜಯಿಪೆನೆಂದು ||
ನೆನೆದು ವಿಷಘುಟಿಕೆಗಳ ಪದ್ಮಿನಿ |
ಕನಲಿ ನುಂಗಿದಳೆನಲು ಷಟ್ಪದ |
ವನರುಹೋದರದೊಳಗೆ ದಸಿಯುಡುಗಿದ್ದುವಿರುಳಿನಲಿ || ೫
ಭೂರಮಣನಾಸಂಜೆಯಲಿ ವಿ |
ಸ್ತಾರದಿಂ ತಾ ಬರಲು ರಾತ್ರಿ ವಿ |
ಹಾರಿಸುವೆವೀಪುರದೊಳೆಂದು ವಿದಗ್ಧನಟವಿಟರು ||
ಭೂರಿಪರಿಹಾಸಕರು ಮಂತ್ರಿಕು |
ಮಾರಕರು ಸಹಿತೊಲಪಿನಲಿ ಸಂ |
ಚಾರಿಸುತ ನಡೆತಂದರಾಪುರವರದ ಮಧ್ಯದಲಿ || ೬
ಕರದ ಗಾಜಿನ ಬಳೆಯು ಮಲಿನಾಂ |
ಬರದ ಶಂಖದ ಮುದ್ರೆಗಳ ನೆರೆ |
ತುಱುಗಿದವಲೋಹಗಳ ತೊಡಿಗೆಯ ಮಾಸಿದೊಡಲುಗಳ ||
ಬಿಱುನಗೆಯ ಜಿಡುಮುಡಿಯ ನಟಣೆಯ |
ತಿರುಹುಗಳಲಾಸಮಯದಲಿ ತ |
ತ್ಪುರದ ದಾಸೀನಿಕರ ಸಂಚಾರಿಸಿದರಟ್ಟಿಯಲಿ || ೭
ಬಟ್ಟೆತಾಗಿಯೆ ಹಣೆಗೆ ಸುಣ್ಣದ |
ಬೊಟ್ಟಿಸಗಿ ಬೈತಲೆಯೆಡೆಯ ಹದ |
ಗೊಟ್ಟು ತಿದ್ದಿಯೆ ಕಟಿದ ಹೂಗಳ ತುಱುಬಿ ಬಾಯೊಳಗೆ ||
ಕೆಟ್ಟಡಕೆಗಳನಡಸಿಕೊಂಡು ಮ |
ಹಾಟ್ಟಹಾಸದೊಳೊಲಿದು ದಾಸಿಯ |
ರಿಟ್ಟಣಿಸಿದರು ಸಂಜೆಯಲಿ ಪುರವರದ ಮಧ್ಯದಲಿ || ೮

ದಾಸಿಕಾಚಿಪಿರಾಟಬಲ್ಲಿಪ |
ರಾಸಿ ಬಾಚಿಯೆನುತ್ತ (?) ಮೇಳದ |
ದಾಸಿಯಲೆದಾಲಯವ ಮಿಗೆ ಹೊಱವಟ್ಟು ಗುಡಿಗುಂಡ ||
ವಾಸ ಮಠ ಮಂಠೆಯು ತಟಾಕೋ |
ದ್ದೇಶದಲಿ ಕಾದಿದ್ದ ವಿಟರೊಳ |
ಗಾಸಮಯದಲಿ ರಮಿಸುತಿದ್ದರು ಬಹಳಹರ್ಷದಲಿ || ೯
ವಾಸಕನಕಾಭರಣಲೇಪನ |
ಕಾಸೆಮಾಡಳು ಕೊಂಡರೊಂದರೆ |
ಕಾಸು ಕರೆದೊಡೆಯಿವಳು ಬಹಳುಬ್ಬುವಳು ಸುರತಕ್ಕೆ ||
ಬೇಸಱಳು ನಿಷ್ಕಪಟಿ ಭಯವಿ |
ಲ್ಲೋಸರಿಸಳಂತಾಗೆ ವಿಟರಿಗೆ |
ದಾಸಿಯರ ಸಂಭೋಗ ಲೇಸೆಂದೊರ್ವ ವಿಟ ನುಡಿದ || ೧೦
ಹೊಡೆಯೆ ಕಂತುಕದಂತೆ ಪುಟನೆಗೆ |
ದೊಡೆಯಲುಬ್ಬುವಳುಬ್ಬಲು ಬೈದು |
ನುಡಿದೊಡೆ ಮಹಾ ರಾಗಿಪಳು ನೂಂಕೆ [ಯುಯ್ಯಲೆಯವೊಲು] ||
ತಡೆಯದಿದ್ದಡೆಗೈದಿ ಬಹಳೀ |
ಪೊಡವಿಯೊಳು ಬೆಲೆವೆಣ್ಣಿನಿಂದಿ |
ಮ್ಮಡಿ ವಿಶೇಷವು ದಾಸಿ ದಿಟವೆಂದೊರ್ವ ವಿಟ ನುಡಿದ || ೧೧
ಜಡಿದು ಸೀರೆಯ ಕಳೆದು ಕೌಂಕುಱಿಹೊ |
ಳಡಸಿ ರಾಗಿಸಿ ಸೊಕ್ಕಿ ಪಾಡುತ |
ತೊಡೆಯ ಬಾಱಿಸಿಕೊಳುತ ನಗುತೊಲೆಯುತ್ತ ಮದ್ಯವನು ||
ಕುಡಿದು ಘಱ್ರನೆ ತೇಗಿ ಬಾಱಿ |
ನ್ನೊಡೆಯ ಜೀವಂಧರನೆಯೆಂದಂ |
ಗಡಿಯವರ ನಗಿಸಿದರು ದಾಸಿಯರತಿದುರುಕ್ತಿಯಲಿ || ೧೨
ವಿನುತಸಚರಾಚರವನಜನಂ |
ಜನದಿ ನಿರ್ಮಿಸಿಯಾಮೃಗೋದ್ಭವ |
ವನು ಧರಿತ್ರಿಕರಂಡದಲಿ ತೀವಿದನೆನಲ್ಕಖಿಳ ||
ಜನಕೆ ಕಂಗಳ ತೆರೆದಿರಲು ಲೋ |
ಚನವ ಮುಚ್ಚಿದೊಡೊಂದೆ ಪರಿಯಾ |
ಯ್ತೆನಲು ಕತ್ತಲೆ ಸುತ್ತಿ ನೆಱೆ ಮುಸುಕಿತು ಜಗತ್ರಯವ || ೧೩

ಶಶಿಯೆನಿಪ್ಪ ವಸಂತಕಾಲದೊ |
ಳೆಸೆವ ಗಗನದ್ರುಮದಿ ಜನಿಸಿದ |
ಕುಸುಮಗಳೊ ವಾರಿಧಿಯ ಮೂಷೆಯೊಳಮೃತಕರನೆಂಬ ||
ಮಿಸುಪ ಬೆಳ್ಳಿಯ ಗಟ್ಟಿಯನು ಕರ |
ಗಿಸಲು ಸಡಲಿದ ಕಿಡಿಗಳೆನಲಾ |
ಗಸದಿ ತಾರಾವಳಿಗಳತಿರಾಗಿಸಿದುವೊಗ್ಗಿನಲಿ || ೧೪
ಅಲಕಿ ಮುಂದೈದಡರೆ ರವಿಯು |
ಕ್ಕಲಿಸುವನೆ ಶಶಿ ರಾಜನೆಂದಾ |
ನುಡುಹಿದೆನು ದೀಪಾಳಿ ಮನೆಯಾವಳಿಯು ಹೊಕ್ಕಡಗಿ ||
ಉಳಿದುವೆನ್ನಯ ಮುಳಿಸಿಯ ಹೊಕ್ಕುಡು |
ಒಳಗ ಒದುಕಿದುವೆಂಬವೊಲು ಕ |
ತ್ತಲೆ ಜಗಂಗಳ ತೀವಿದುದು ಭೂಪಾಲ ಕೇಳೆಂದ || ೧೫
. . . . . . . . . . . . . . . . . . . . |
. . . . . . . . . . . . . . . . . . . . . |
. . . . . . . . . . . . . . . . . . . . . . . . . . . . . ||
ಜನವ ಕಂಡಳುಕುತ್ತೆ ಪೊಸಬರ |
ದನಿಯನಾಲಿಸಿ ನಿಲುತ ನಿಜ ಸೂ |
ಚನೆಯೆಡೆಗೆ ಗಮನಿಸುವ ಜಾರೆಯನರಸನೀಕ್ಷಿಸಿದ || ೧೬
ಕೆಲನ ನೋಡುತ ಮುಡಿಯನಡಿಗಡಿ |
ಗೊಲೆಯುತನುರಾಗಿಸುತ ನಗುತಿ |
ಕ್ಕೆಲನ ನೋಡುತ ವೊಲೆಯು ಮೇಲುದ ಸರಿಯುತವೆ ತನ್ನ ||
ನೆಳಲನಾರಯ್ಯುತ್ತ ಸಖಿದಿಂ |
ದಳಿಗುರುಳನೊಂದಿಸುತ ಮೋನವ |
ತಳೆದು ಜಾಱುವ ಜಾರೆಯೊರ್ವಳನರಸನೀಕ್ಷಿಸಿದ || ೧೭
ಚರಿಸದಿರಿ ನೀವೆಂದು ಬಾಗಿಲ |
ಹೊರೆಯೊಳೆನ್ನಯ ಪುರುಷನೂರಿಗೆ |
ಸರಿದನಂಧಕ ಮಾವನತ್ತೆ ಜರಾಂಗಿ ಭಾವ ಮೃತ ||
ಭರದ ಯೌವನೆ ನಾನು ನಾದಿನಿ |
ತರಳೆ ಮತ್ತಾರೆಱಗರೆನುತೊಳ |
ಸರಿದು [ಹದಿರನು] ನುಡಿವ ಜಾರೆಯನರಸನೀಕ್ಷಿಸಿದ || ೧೮

ದೆಸೆಯ ನೋಡದಿರಕ್ಕ ನಿನ್ನಯ |
ಮಿಸುವ ಕಂಗಳ ಕಾಂತಿ ಪಸರಿಪ್ಪು |
ದುಸಿರಬೇ[ಡಿರದವಿದು] ದಂತಪ್ರಭೆ ಮುಖೇಂದುರುಚಿ ||
ಮುಸುಕುವುದು ತಲೆಗುತ್ತಿ ನಡೆಯೆಂ |
ದುಸಿರುತವೆ ಸೂಚನೆಯ ಮನೆಗತಿ |
ಕುಶಲದೂತಿಯರೈದುತಿಹುದವನೀಶನೀಕ್ಷಿಸಿದ || ೧೯
ಮೆಱೆವ ಮಣಿಮೇಖಲೆಯ ನೂರೆಯುದ |
ತೆಱದಿ ಸಿಱಿಯೊಳಗೌಂಕಿ ಮೇಣಾ ನೂ |
ಪುರಗಳುಲಿಯುದ ತೆಱದೊಳಾಕಣಕಾಲಿಗೊತ್ತರಿಸಿ ||
ಜರಿದು ಜಘನದ ಮುಡಿಯ ಗೋಣೆನೊ |
ಳೆಱುಕಿ ಸಡಿಲಿದ ಸಿಱಿಯ ವಾಮದ |
ಕರದೊಳಾಂತ್ಯೈದುವ ಲತಾಂಗಿಯನರಸನೀಕ್ಷಿಸಿದ || ೨೦
ಹರೆದ ಕುರುಳೊಂದಿಸುತ ನುಣ್ದೊಡೆ |
ಯರೆನಖಪನೊಱಸುತ್ತಲುಸಿರೊ |
ಸರಯುತುಬ್ಬಿದ ತುಟಿಯ ಕುಡಿನಾಲಗೆಯೊಳೊಂದಿಸುತ ||
ಸಿಱಿಯನಾನುತ ಸೋರ್ಮುಡಿಯ ಪೂ |
ಡಿರುತ ನಿಡುಮುಸುಕಿಕ್ಕುತಾಗಲೆ |
ಸರಿವ ಸುರತಮನೋಭಿಚಾರೆಯನರಸನೀಕ್ಷಿಸಿದ || ೨೧
ಹರಿಗೆ ಕಣ್ಣಜಗಾಸ್ಪದವು ಸಿರಿ |
ಗಿರವು ತನಗೆ ನಿಜಾಪ್ತವಹ ಪಂ |
ಕರುಹಕೀಚಂದ್ರಮನು ಕಾರಣ ಮುಗಿದುವೆಂದು ರವಿ ||
ಕೆರಳಿ ಚಕ್ರದೊಳಿಡಲು ಗಗನಾಂ |
ತರದಿ ಕಡಿದರ್ಧಾಂಗ ಸೂಸಿದ |
ತೆಱದಿ ತಾರಾಪರಿವೃತದೊಳರ್ಧೇಂದು ರಂಜಿಸಿದ || ೨೨
ಚಿತ್ತಜಂಗೆತ್ತಿದ ತಳಿಗಗಳ |
ಸತ್ತಿಗೆಯೊ ದಿಗ್ಜೇಭಕುಂಭದಿ |
ತೆತ್ತಿಸಿದ ಸಿಂದೂರವೋ ವಿರಹಿಗಳಿಗಂಗಜನು ||
ಎತ್ತಿದಾಚಕ್ರವೊ ರಥಾಂಗಕೆ |
ಹೊತ್ತಿದತಿವಿರಹಾಗ್ನಿಯೆನಲೆಸೆ |
ಯಿತ್ತು ರಾಗದಲಿಂದುಮಂಡಲ ಪೂರ್ವಶೈಲದಲಿ || ೨೩

ಸ್ಮರನ ಚಕ್ರದ ಬಾ‥ಷ್ಟವೋ |
……ನೊಂದತನು ಚೈತ್ರಗೆ |
ಬರಸಿದೋಲೆಯ ಲಾಕ್ಷಮುದ್ರೆಯೊ ಪೂರ್ವದಿಕ್ಸತಿಯ ||
ಗುರುಕುಚದ ಚೂಚಕವೊ ರೋಹಿಣಿ |
ಯುರದೊಳನುಲೇಪಿಸಿದ ವರಕ |
ಸ್ತುರಿಯಿದೆನಲು ಕಳಂಕ ಮೆಱೆದುದು ಚಂದ್ರಮಂಡಲದ || ೨೪
ಸ್ಮರನಿಗದ್ಭುತ ವೀರ ಚಂದ್ರಂ |
ಗುರುವಿಕೃತ……….ನಕ್ತಂ |
ಚರ ರುಧಿರಪಾನಕ್ಕೆ ಜಾರಗೆ ಭಯವು ವಿಟಗುಗ್ರ ||
ವರಚಕೋರಕೆ ಶಾಂತ ಕುಮುದೋ |
ತ್ಕರಕೆ ಸಹಶೃಂಗಾರವನ್ನೆಯ |
ಮೆಱೆದಿರಲು ನವರಸವ ಬೀಱೆದನಾಸುಧಾಕಿರಣ || ೨೫
ಕ್ಷೀರವಾರಿಧಿ ಬಂದು ಸುರಭೂ |
ಗೀರಥಿಯನಪ್ಪಿದುದೊ ಪೊಸಕ |
ರ್ಪೂರವನು ತುಂಬಿದರೊ ಭುವನಕರಂಡಕದೊಳಿಳೆಯ ||
ಸಾರಚಂದನದಿಂದ ಸಮೆದರೊ |
ಮಾರನೃಪನತುಳ [ವಿಮಳ] ಹಾಸ |
[ಪೂ] ರವೆನೆ ಬೆಳದಿಂಗಳುಱೆ ತುಂಬಿತು ಜಗತ್ರಯವ || ೨೬
ಬೇಱೆ ಬೇಱೆ ಚತುರ್ವಿಧದ ಶೃಂ |
ಗಾರ[ರಚನೆಯದ]ಮರೆ ಮೇಲಳಿ |
ಹಾಱಲಱೆವುದೆನುತ್ತ ಚಂಪಕಮಾಲೆಯನು ನೆಗಹಿ ||
ಕ್ಷೀರದುಗ್ಧವ ಬೆರಸಿದಂದದೆ |
ಚಾರುಚಂದ್ರಿಕೆಗೂಡಿ ಚರಿಸುವ |
ಜಾರೆ ಮುತ್ತಿನ ಬೊಂಬೆಯಂತಿರಲರಸನೀಕ್ಷಿಸಿದ || ೨೭
ಸಿರಿಯ ಮನೆ ಜೌವನದ ನೆಲೆ ಸಿಂ |
ಗರದ ಮಡು ಲಾವಣ್ಯದೆಡೆ ಚಾ |
ತುರಿಯದಿಕ್ಕೆ ಕುಮಂತ್ರರೋಷಾಸ್ಥಾನ ಹುಸಿಯ ಮಠ ||
ಸರಸಮೋಹನವಶ್ಯಮಾಯಾ |
ಕರುಷಣಾಶ್ರಯ ರೂಪವಿಭ್ರಮು |
ದಿರವಿದೆನಿಸುವ ಸೂಳೆಗೇರಿಯೊಳರಸ ಬರುತಿರ್ದ || ೨೮

ಸ್ಮರನೃಪನ ವಿಜಯಾಂಕಮಾಲಾ |
ಸ್ಫುರಿತಕೇತನವೆನೆ ಭುಜಂಗರು |
ನೆರೆದು ತಾಟಿತಕನಕಘಂಟಾರಾವ ಶುಕಪಿಕದ ||
ವಿರಹಿಗಳ ಮದನಾಗಮವನು |
ಚ್ಚರಿಸುವಬಲಾನೀಕದಿಂದತಿ |
ಮೆಱೆವ ವೇಶ್ಯಾವಾಟವನು ಹೊಕ್ಕನು ಮಹೀಪಾಲ || ೨೯
ನೋಟ ವಶ್ಯ ಸುಜಾಣ್ಮೆ ಮೋಹನ |
ಕೂಟ ವಶ್ಯ ಸ್ತ್ರೀಯುಸುರತೋ |
ಚ್ಚಾಟವಾಕರವೇಗಸ್ತಂಭನ ನವರಸೋದ್ಭವನ ||
ತೋಟಿಯಾಕರ್ಷಣ ವಿಯೋಗ ವ |
ಘಾಟ ಮಾರಣವೆಂಬ ವೇಶ್ಯಾ |
ವಾಟದತುಳಪ್ರೌಢಿಯನು ಕಂಡನು ಮಹೀಪಾಲ || ೩೦
ಲಾಲಿತವ ಗಣಿಕಾಲಯದೊಳೊ |
ಡ್ಡೋಲಗಂಗೊಟ್ಟಂಗಜನು ಕೀ |
ರಾಳಿಯೋದಲು ಬಂದು ಹುಗುವಜನಾಸ್ಯದಲಿ ಹರಿಯ ||
ಲೋಲವಕ್ಷದಿ ಸುರಪನಂಗದಿ |
ಶೂಲಪಾಣಿಯ ಶಿರದಿ ಕಲೆಗಳ |
ಜಾಲದಲಿ ನೋಡಿಸುವ ಶಶಿದೀಪಿಕೆಯ ಬೆಳಗಿನಲಿ || ೩೧
ಕುಸುಮಕೋದಂಡನನು ಮನ್ಮಥ |
ನೆಸಗಿ ಜೇವೊಡೆದಂತೆ ಜಘನದೊ |
ಳೆಸೆವ ಮಣಿಮಯಮೇಖಲಾಂಕಿತಘಂಟೆ ಘಮ್ಮೆನಲು ||
ಬಿಸರುಹಾನನೆಯೊರ್ವಳೈತಂ |
ದಸಮಶರನಂಗನೆಯುವೊಲು ರಂ |
ಜಿಸಿ ವಿಳಾಸದಿ ನಿಂದಳೊತ್ತೆಗೆ ಮನೆಯ ಬಾಗಿಲಲಿ || ೩೨
ಇಟ್ಟ ನವಚಂದನದ ಬೊಟ್ಟಳ |
[ವಟ್ಟಿರಲು] ಪೂಣ್ದೆಣ್ಣೆಗಂಟಿನ |
ತೊಟ್ಟ ಱವಕೆಯ ಮುತ್ತಿನೊಚ್ಚರಕಂಡವೊಂದಿಸುತ ||
ಗಟ್ಟಿಕುಚ ನಸುದೋಱುವಂದದೊ |
ಳುಟ್ಟ ಸಾಲೆಯ ಮೇಲುದೊಪ್ಪಿರೆ |
ದಿಟ್ಟೆಯೊರ್ವಳು ನಿಂದಳಂಗಜನಲಗಿನಂದದಲಿ || ೩೩

ಕುಸುಮದೋಲೆಯನಿಟ್ಟು ಕೇದಗೆ |
ಯೆಸಳಿ ತುಱುಬಿ ಜವಾನಿಯನು ಲೇ |
ಪಿಸಿ ಕಪೋಲಂಗಳಲಿ ಚಿತ್ರವ ರಚಿಸಿ ಮಣಿಮುಖದ ||
ತಿಸರಪಿಕ್ಕೆಯೆ ಕತ್ತುರಿಯ ಬೊ |
ಟ್ಟೆಸಗಿ ಹಾವುಗೆಮೆಟ್ಟಿ ಸೊಬಗಿಂ |
ದೆಸೆದಳೊರ್ವಳು ಮದನಮೋಹನಮೂರ್ತಿಯಂದದಲಿ || ೩೪

ಚಿತ್ತಜನ ಮಾಸಾಳೊ ಮನ್ಮಥ |
ಕಿತ್ತಲಗೊ ಮನಸಿಜನ ಘಟ್ಟಿಸ |
ಮತ್ತಗಜವೋ ಮದನಮುಂತ್ರಾಸ್ತ್ರವೊ ಝುಷಧ್ವಜನ ||
ಪುತ್ತಳಿಯೊ ಕಂದರ್ಪ ರಚಿಸಿದ |
ಸೂತ್ರವೋ ಮಾಸುತನ ದಳಿಮೆನ |
ಲಿತ್ತೆಱದಿ ಗಣಿಕಾನಿಕರ ಮೆಱೆದುದು ವಿಳಾಸದಲಿ || ೩೫

ನಡೆ ಸುರೇಭ ಮುಖೇಂದು ಹೃದ್ದೇಶ |
ಮುಡಿಯು ನವಿಲೊಡಲಮರಹಯ ಜಾ |
ಣ್ನುಡಿ ಸರಸ್ವತಿಯಧರ ಸುಧೆ ನಳಿತೋಳು ಕಲ್ಪಕುಜ ||
ಕಡುವಿಳಾಸಶ್ರೀಯು ತನ್ನೊಳು |
ಪಡೆದು ಪಾಲ್ಗಡಲಂತೆಯೊತ್ತೆಗೆ |
ಬೆಡಗಿನಲಿ ನಿಂದಬಲೆಯೊರ್ವಳನರಸನೀಕ್ಷಿಸಿದ || ೩೬

ನೆಱಿಲವೊಲು ಬೆಂಬಿಡದೆ ಕಡಲಂ |
ತೊಳಗುದೋಱದೆ ಮಿಂಚಿನಂದದಿ |
ಹೊಳೆದು ಸಾಮುದ್ರಿಕನಂತರ್ಥಾಂಶಗಳ ನೋಡಿ ||
ತಳಿರಿನಂತಡರ್ದಳಿಸುವೊಲು ನೆ |
ಗಳಿಹಿಕನದಾ (?) ತೆಱದಿ ಭೋಗದಿ |
ಸಲೆ ಮರುಳುಮಾಡಿರ್ಪ ವೇಶ್ಯರನರಸನೀಕ್ಷಿಸಿದ || ೩೭

ಸಂಗತದಿ ತನ್ಮಧ್ಯಲಕ್ಷ್ಮಿಯು |
ನಂಗರಾಜನ ದಿಗ್ವಿಜಯಕು |
ತ್ತುಂಗ ಹೊಂಗಳಸಗಳ ಮೃದುಪಲ್ಲವವ ದರ್ಪಣವ ||
ಮಂಗಳಾರ್ಥದಿ ಪೊತ್ತಳೆನಲು ಕು |
ಚಂಗಳೋಷ್ಠವು ಸತ್ಕಪೋಲತ |
ಲಂಗಳೊಪ್ಪಿದುವೆಸುತ ನೃಪನೊರ್ವಳ ನಿರೀಕ್ಷಿಸಿದ || ೩೮

ನರೆದಲೆಯು ಮಸಿದೊಡೆದು ಮುಸುಕಿ |
ಟ್ಟೊಱಸಿ ಮಸಿಯುಱುವೆಯುಲಿ ತುಱುಬನು |
ಧರಿಸಿ ಜತರಕೆ ಜರಿದ ನೊಲೆಗಳ ಸದೆಯು ಱವಕೆಯೊಳು ||
ತುಱುಬಿ ನಸುಸೊಡರಿಟ್ಟು ಕಣ್ಣೆವೆ |
ಯುರುಳಲಂಜನವೂಡಿ ಸುೞಿವರ |
ಕರೆವ ಮುದಿವೇಸಿಯರ ನಗುತವನೀಶನೀಕ್ಷಿಸಿದ || ೩೯

ಎಳಸಿ ನೋಡಿಯೆ ನೋಡಿಸುವ ಕೆಲ |
ಕೊಲೆವ ನಗಿಸುವ ಕಾಣಿಬೇಡುವ |
ಮುಳಿವ ಬಲುವನು ಜಾಣ್ನುಡಿಯಿ ಕರಗಿಸುವ ದಟ್ಟಿಸುವ ||
ಹೞಿವ ಹುರುಡಿಪ ಕೂರ್ತವೊಲು ಮನ |
ವೆಳಸಿ ಸರ್ವವನುಗಿವ ಬುದ್ಧಿಯು |
ಕಲಿಸುತಿರ್ದಳು ಮಗಳಿಗೋರ್ವ ಪಿದಗ್ಧೆಯಿರುಳಿನಲಿ || ೪೦

ಹರಿಣನೇತ್ರದ ಶಶಿಮುಖದ ಮಧು |
ಕರದಳಕ ಹರಿಮಧ್ಯ ಬಿಂಬಾ |
ಧರದ ಹಂಸಸ್ವರದ ನವತಿಲಪುಷ್ಪನಾಸಿಕದ ||
ಗುರುಕುಚದ ತಳಿರಡಿಯ ಪಂಕಜ |
ಪರಿಮಳದ ಸಿತವಾಸ ಧರ್ಮ |
ಸ್ಫುರಿತಚಿತ್ತದೊಳೆಸೆವ ಪದ್ಮಿನಿಯರ ನಿರೀಕ್ಷಿಸಿದ || ೪೧

ಹೊಳೆವ ಕಂಗಳ ದೀರ್ಘಕೇಶದ |
ತೆಳುವಸಿಱ ಕಠಿನಾಂಕಪದ ಕರ |
ತಳದ ಲಘುಜಘನದ ಲತಾಂಗದ ನೀಳ್ದ ಘನಕುಚದ ||
ಕುಲಿಶದಶನ ಕಸ್ತೂರಪರಿಮಳ |
ದಲಘುನಾಸಿಕ ರಕ್ತವಸನದ |
ಮಲಿನಚಿತ್ತದ ಶಂಖಿನಿಯರ ನೃಪಾಲನೀಕ್ಷಿಸಿದ || ೪೨

ಅಲಘುವದನದ ಚಪಲಹೃದಯದ |
ಹೊಳೆವ ಕದಪು ಕೃಶಾಂಗ ಸೆಳೆನಡು |
ಕಲಶಕುಚಗಳ ಕಂಬುಕಂಠದ ಕಾಕಜಂಘೆಗಳ ||
ಗಿರಿವದನ ಬಾಣುನೆಯು ಮದಪರಿ |
ಮಳದ ಜಘನ ಘನಾಧರದ ಕೆಂ |
ದಳದ ಪೀತಾಂಬರದ ಚಿತ್ತಿಸಿಯರ ನಿರೀಕ್ಷಿಸಿದ || ೪೩

ಘನ ಮುಖಾಂಗುಳಿ ಕಪಿಲಕಚವಾ |
ಮನ ಚರಣಹಸ್ತಗಳ ನಸುಲೋ |
ಚನದ ದೀರ್ಘಾಧರದ ಬದ್ಧಭ್ರೂ ನತಶ್ರುತಿಯ ||
ವಿನುತಗಜಮದಗಂಧ ಕರ್ಕಶ |
ಮನದತೃಪ್ತಿಯ ಚಿತ್ರಪಟವುಂ |
ಡನದೊಳೊಪ್ಪುವ ಹಸ್ತಿನಿಯರ ನೃಪಾಲನೀಕ್ಷಿಸಿದ || ೪೪
ಧೃತಗುಣಾನ್ವಿತನೇಕಪತ್ನೀ |
ವ್ರತಸದನನನುಕೂಲನಾಯಕ |
ನತಿಚತುರನತಿಗೀತವಾದ್ಯಪ್ರಿಯನು ದಕ್ಷಿಣನು ||
ಪತಿತ ಖಳ ಲಜ್ಜಾಭಿಮಾನ |
ಚ್ಯುತನು ದುಷ್ಟನು [ಧೂರ್ತ] ವಂಚಕ |
ಕೃತಕನಪಯಶ ಕುಟಿಲನಾಯಕನೆಂದು ವಿಟ ನುಡಿದ || ೪೫
ಮಱಲ ಸರವಿಯ ಹೊಸೆವ ಕೊರಡಿನೊ |
ಳೆಳೆಯ ಕೋವ ಮರೀಚಿಕಂಗಳ |
ತಳೆವ ಧರೆಗಗನವನು ತಾಳವ ಮಾಡಿ ಬಾಜಿಸುವ ||
ಶಿಲೆಯೊಳಗೆ ಮುಱುಗುವ ತುಷಾರವ |
ನಳೆವ ನೀರೊಳು ಬೆಣ್ಣೆಗಳೆವ |
ಗ್ಗಳದ ವೇಶ್ಯಾಮಾತೆಯರನವನೀಶನೀಕ್ಷಿಸಿದ || ೪೬
ವರನಿರೀಕ್ಷಣವೊಂದು ಚಿಂತೆಯ |
ದೆರಡು ಸುಯ್ಲದು ಮೂಱು ಜ್ವರ ನಾ |
ಲ್ಕರೆಯುಹಣವೈದೂಟವ ಬಿಡವುದಾಱು ಮರುಳುತನ ||
ಬೆರಸಲೇೞತಿಮೋಹವೆಂಟಾ |
ಮಱವೆಯೊಂಬತ್ತೞಿವು ಹತ್ತಿವ |
ನಱಿ ದಶಾವಸ್ಥೆಗಳ ನೀನೆಂದಱುಹಿದಳು ಸುತೆಗೆ || ೪೭
ನಡೆಗೆ ಹಂಸೆಯು ಸರಕೆ ಪಿಕ ಮೆ |
ಲ್ನುಡಿಗೆ ಗಿಳಿ ಕಂಗಳಿಗೆ ಮಿಗ ಸೆಳೆ |
ನಡುವಿನೊಪ್ಪಕೆ ಸಿಂಹ ಕುಚಕೆ ರಥಾಂಗ ಮುಖಕೆ ಶಶಿ ||
ಮುಡಿಗೆ ನವಿಲಳಕಕ್ಕೆ ತುಂಬಿಗ |
ಳಡಸಿ ಕಾಡುವುವಲ್ಲಿಗೊಂದಡಿ |
ಯಿಡಲು ಬೇಡೆಂದೊರ್ವ ಸತಿ ಕೊಂಡಾಡಿದಳು ಮಗಳ || ೪೮

ಸ್ಮರಸಮಾನಾಕಾರನಾಗಲಿ |
ಸರಸಸುಕಲಾಪ್ರೌಢನಾಗಲಿ |
ಕರೆಯದಿರು ಕದಲದಿರು ನಿರ್ಧನಿಕರನು ಧನವುಳ್ಳ ||
ನರ ಮೃಗಾಧಮನಾಗಲವನೊಳು |
ನೆರೆದು ನೇಹವ ಮಾಡಿ ವಸ್ತುವ |
ಹೆಱುವುದೇ ಕುಲಧರ್ಮವೆಮಗೆಂದೊರ್ವಳಱುಹಿದಳು || ೪೯
ಮರುಳುಮಗಳೇ ರೂಪಗುಣವದು |
ಸರಕೆ ವಸ್ತುವೆ ಬಾತೆ ಜವ್ವನ |
ಜರಿಯದಂದೇ ಗಳಿಸಬೇಕೀಪ್ರಾಯವದು ಹೋಗಿ ||
ಮರಳಿ ಬರಲುಯ್ಯಾಲೆಯಲ್ಲೀ |
ಹರೆಯದಲ್ಲಿಯೆ ಧನವನಾರ್ಜಿಸು |
ನರೆತ ಬಳಿಕಾರ್ಗೇನು ಫಲ ನೀನೆಂದಳಿಂದುಮುಖಿ || ೫೦
ಪರಿಮಳವನುಳಿದಳಿ ಕುಗಂಧ |
ಕ್ಕೆಱಗುವುದೆ ಹಾಲಿರೆ ಮರಾಳನು |
ಸುರೆಗೆ ಮನವೆಳಸುವುದೆ ಚೂತಫಲಕ್ಕೆ ತೊಲಗಿ [ಗಿಳಿ] ||
ಎರೆದ [ಪಣ್ಗಡಸುವುದೆ] ಕೂರ್ಪನ |
ತೊಱೆದು ಧನದಳುಪಿಂಗ ಕುವಿಟನ |
ನೆರೆವೆನೆಂತೆಲೆ ತಾಯೆ ನೀ ಹೇಳೆಂದು ಮಱುಗಿದಳು || ೫೧
ಕೆಂದಳಿರ ಕುಟುಕಿತ್ತು ಪಿಕವರ |
ವಿಂದಶೋಕದ್ವಯವ ಗಿಳಿ ಚಂ |
ಚಿಂದ ಸೀಳಿತೆನುತ್ತ ಬೆಡಗಿಂದೊರ್ವ ವಿಟನೆನಲು ||
ಮುಂದಹಾಸದೊಳಧರವನು ಕರ |
ದಿಂದ ಮುಚ್ಚಿಯೆ ನೊಳೆಗೆ ಮೇಲುದ |
ನೊಂದಿಸುವ ಭಾಮಿನಿಯ ಜಾಣುಮೆಗರಸ ಬೆಱಗಾದ || ೫೨
ಶಶಿವದನೆ ಹರಿಮಧ್ಯೆ ನವಪವಿ |
ದಶನೆ ಕೈರವನೇತ್ರೆಯೊತ್ತೆಯ |
ನುಸಿರೆನಲು ಕಂಜಾಕ್ಷ ಗಜಪತಿಗಮನ ಗಿರಿಧೈರ್ಯ ||
ದಶಶತಾಂಶು ಸುತೇಜ ಕುಳ್ಳಿರು |
ಬೆಸಸು ನೀನೆನೆ ತಲೆಯ ತೂಗುತ |
ರಸಿಕ ಮಗುಳಿದ ಕಾರಣಕೆ ನಗುತರಸ ನಡೆತಂದ || ೫೩

ವಿವಿಧಗುಣಜಾಲಾಂಕಗೀತೋ |
ತ್ಸವ ಮಹಾಬಲ ಜೀವಿತೇಶ್ವರ |
ಭುವನರಕ್ಷ ವಿಶಾಲತರಪಶುಪತಿಸಮಾಕಾರ ||
ಯುವತಿನಿವಹಾಲೋಕ · · |
ಭುವನಶೃಂಗಾರಾನ್ವಿತನೆಯೆಂ |
ದವನಿಪತಿ ನಗುತಿರಲು ಕಾಡಿದಳೊರ್ವ ಸತಿ ವಿಟನ || ೫೪

ಅಳಿ ಸಕಲಪುಷ್ಪಗಳ ನವಪರಿ |
ಮಳವ ಕೊಂಬಂದದಲಿ ಧನಿಕರಿ |
ಗೊಲುಮೆಗಳನಳವಡಿಸಿ ತನುಹೊಱತೆಲ್ಲವನು ಸೆಳೆದು ||
ಜಲಜಪತ್ರೋದಕವೊಲು ಮನ |
ನಿಲುಕಿ ನಿಲುಕದ ತೆಱದಿ ನಿಲಬೇ |
ಕೆಲೆ ರಮಣಿ ಗಣಿಕೆಯರಿಗಿದು ಕುಲಧರ್ಮವವನಿಯಲಿ || ೫೫

ಮದನನೇಱುವ ಕೆಲೆವ ಸುರಗಿಯ |
ತಿರುಹುವನು ನರ್ತಿಸುವ ಪಾಡುವ |
ಹರಿವ ಭಂಡಿಯನೆತ್ತುವನು ಬಾವಿಗಳ ಲಂಘಿಸುವ ||
ಬಱಿದೆ ನಗುವನು ತನ್ನ ತಾನೇ |
ಬೆಱತು ಕೊಂಡಿಹನೆನಿಪ ವಿಟರನು |
ಕರೆಯದಿರಲರ್ಥಹತನೆಂದಱುಹಿದಳು ಸುತೆಗೊರ್ವೆ || ೫೬

ಧರೆಯ ಹೊಯ್ದರೆ ನುಂಗುವುದೆ ದೇ|
ವರ ನಿಲುಕೆ ಹತ್ತುವುದೆ ಕರತಳ |
ನಿಱಿಯ ದಾಂಟಲು ಕಚ್ಚುವುದೆ ಬಱಿನೀರ್ಗುಡಿಯಲೀಯುದರ ||
ಉರಿವುದೇ ತಾಯುಱಿದಳೆನಲಸು|
ಕರಗುವುದೆ ನೀನಿಂತು ಸೂರುಳ |
ಸೊರಹಿ ತೆಗೆಯರ್ಥವನು ನೀನೆಂದೋರ್ವಳಱುಹಿದಳು || ೫೭

ಹರಿಯ ನಿಖಿಳೋಪಾಯದಲಿ ವಾ |
ಗ್ವರನ ವಿದ್ಯದೊಳಂಗಜನ ಸೌಂ |
ದರಿಯದಲಿ ನೂತನಜಯಂತನನಖಿಳಕಲೆಗಳಲಿ ||
ಸುರಪತಿಯ ಭೋಗದಲಿ ದಾನದೊ |
ಳುರುವ ಕಲ್ಪದ್ರುಮವನೇಱಿಪ |
ನೆರೆದ ಚತುರ ವಿಟಾವಳಿಯನವನೀಶನೀಕ್ಷಿಸಿದ || ೫೮

ಧನವಿಹೀನಂಗೊಲಿದಳಿವಳಕ |
ಟೆನುತ ಸಾವಿಲ್ಲದೆ ವಿಶೋಕಿಸಿ |
ಕನಲಿ ಬಱುಸಾಲಕ್ಕೆ ಹುಸಿದನವಿತ್ತು ದಾಸಿಯರ ||
ಅನುಚಿತದಿ ಜಡಿದರ್ಥ ಹೋದಂ |
ತೊಣಗಿ ನೋಯದೆ ನರಳಿ . . . . . . |
. . . . . . ಹೊಱಡಿಸುವ ಮುದುಗುಂಟಣಿಯನೀಕ್ಷಿಸಿದ || ೫೯
ತರುಣಿ ನೆರೆಯದೊಡೇನು ನುಡಿಗಳು |
ಬಱನೆ ನುಡಿ ಬಱನಾದೊಡೀಕ್ಷಿಪು |
ದರಿದೆ ನೋಡದೊಡೇನು ನುಡಿದೊಡೆ ಕುಂದೆ ನುಡಿಯದಿರೆ ||
ಮರದ ಕೈಯಿಂದೆನ್ನ ಱಲ ಪರಿ |
ಹರಿಸಲಾಗದೆಯೆಂದು ವಿರಹದಿ |
ಹೊರಱ ಬಾಗಿಲೊಳಿಪ್ಪ ವಿಟನ ನೃಪಾಲನೀಕ್ಷಿಸಿದ || ೬೦
ಧರೆಗೆ ಬಾಹಿಯನಾದೆ ಮನೆಯ |
ಲ್ಲರಿಗೆ ಹಗೆಯಾದೆನು ಮನೋಜನ |
ಶರಕೆ ಗುಱಿಯಾದೆನು ವಿಚಾರಿಸಲಲ್ಪಸುಖವೆಂದು ||
ಅಱಿಯಬಾದೆನು ಜಾತಿವೃತ್ತಿಗೆ |
ಹೊಱಬಿಗನು ತಾನಾದೆನಿನ್ನಾ |
ದರೆ ಸಲಹಬೇಕೆಂಬ ವಿಟರ ನೃಪಾಲನೀಕ್ಷಿಸಿದ || ೬೧
ನಾಳೆ ಬರುತಿದೆ ಹಬ್ಬ ಸಿರಿಯಂ |
ತಾಲಯದಿ ಹೂಱರದೆ ಮರುಳೆ ಕ |
ರಾಳನನು ನೂಕುವುದು ಬೀಯಕ್ಕೇನ ಮಾಡುವೆನು ||
ಏಱ ಮಂದಿರ ಹುಣಿಸೆಗೊಂದಿದ |
ಕೋಲಿನಾಣಿಲಿನೆಲ್ಲ ಹಡೆಗೆ ವಿ |
ಲೋಲೆಯೆಂದುಱಿ ಜಡಿವ ಮುದುಗುಂಟಣಿಯನೀಕ್ಷಿಸಿದ || ೬೨
ಒಡವೆಯುಳ್ಳಂದಾತ್ಮಜೆಯ ಕರೆ |
ದೆಡೆಗೆ ತವಕದಲಟ್ಟಿ ಧನ ತೀ |
ರ್ದೊಡೆ ಕನಲಿ ನಿಂದೆಡೆಯ ನೀರನು ಚೆಲ್ಲಿ ಲಜ್ಜೆಯಲಿ ||
ಜಡಿದು ಕುಳ್ಳಿರ್ದೆಡೆಯ ಕೊಡದವ |
ಗಡಿಸಿ ಬಲುಹಿಂದೊಪರನು ಪೊಱ |
ಮಡಿಸುತಿಪ ಸಂಪನ್ನೆಯರ ಭೂಪಾಲನೀಕ್ಷಿಸಿದ || ೬೩

ಇತ್ತುದೊಂದರೆಕಾಸು ಬಿಡದುದ |
ಯಾಸ್ತಮಾನವು ಕದಲನಿವನೇಂ |
ಸತ್ತನೋ ಮೇಣ್ ದೈವ ಸೋಕಿತೊ ಬ್ರಹ್ಮರಾಕ್ಷಸನು ||
ತುತ್ತಿದನೊ ನೆಲಕಿಱಿದನೋ ಸುತೆ |
ಗೆತ್ತ ಬಂದುದು ಮಾರಿ ಕೆಟ್ಟೆನೆ |
ನುತ್ತ ಮೊರೆಯಿಡುತಿರ್ಪ ಮುದುಗುಂಟಣಿಯನೀಕ್ಷಿಸಿದ || ೬೪

ಸುಡುಸುಡೆಲೆ ಮುದುದೊತ್ತೆ ಸೌಖ್ಯವ |
ಕಡಿವ ಕೊಡಲಿ ಕಠೋರೆ ಖಳೆ ಹೆ |
ಣ್ಣೊಡನೆ ಹುಟ್ಟಿದ ನೀಚೆ ಚಿಕ್ಕಂದರಳ ನರದಿಂದ ||
ಬಿಡದೆ ಬಾಯುಂಟೆಂದು ಬೂತು |
ಗ್ಗಡಿಸುತಿಹ ಮಾಣೆಂದು ಜನನಿಯ |
ಜಡಿದು ನುಡಿವ ಲತಾಂಗಿಯರ ನಗುತರಸನೀಕ್ಷಿಸಿದ || ೬೫

ತರುಣಿ ರೋಷದೊಳಪರಮುಖವಾ |
ಗಿರಲು ನಿನ್ನ ಕುಚಾಸ್ಯವೀಕ್ಷಿಸಿ |
ನೆರೆಯಲೆನ್ನಯ ಕಂಗಳೆಂದೆಂದೆಸಗೆ ನಿನ್ನ ಕಟಿ ||
ತುಱುಬು ಸಾಲದೆ ಸುರನದಿಯ ತಡಿ |
ಯೆರಡಕುಂಟೆ ವಿಭೇದವೆಂದಡಿ |
ಗೆಱಗಿ ತಿಳುಹುವ ವಿಟನನವನೀಪಾಲನೀಕ್ಷಿಸಿದ || ೬೬

ಅಳಿಯು ಸಲೆ ಪೂಗಾಶ್ವಶುಕಕೋ |
ಕಿಳಲತಾವೀಣಾಶ್ರು ಫಣಿ ಸ |
ಜ್ಜಳಜ ಕಂಬು ಪತಿವ್ರತಾಸುರಚಾಪ ಸೊಡರಕ್ಕೆ ||
ಬಲೆ ಜಿಗುಳೆ ಕಿಚ್ಚೆರಳೆ ಸೋಗೆಗ |
ಳೆಳಗನಂ ಮಧುವಂಚೆ ಹಂಸಾ |
ವಳಿಯು ಹೊತ್ತಿರು ಮಗಳೆ ನೀನೆಂದೊರ್ವಳಱುಹಿದಳು || ೬೭

ಒಬ್ಬನೊಳು ಮಾತಾಡುತೊಬ್ಬಗೆ |
ಹುಬ್ಬಹಾಯ್ಕುತ ಕೆಲೆಯುತೊಬ್ಬನ |
ನುಬ್ಬಿಸುತ ಮತ್ತೊಬ್ಬನೊಳು ನಗುತೊಬ್ಬಗೊಲವೆಸಗಿ ||
ಒಬ್ಬ ಬರಲೊಬ್ಬರ ನಿರೀಕ್ಷಿಸ |
ಲೊಬ್ಬನಿವಳೆನಗೊಲಿದಳೆಂದುಲಿ |
ದುಬ್ಬುತಿರ್ದಳು ವಿಟವಿದಗ್ಧೆಯದೊರ್ವಳಿರುಳಿನೊಳ್ || ೬೮

ನೋಟ ಸವಿ ನುಡಿಯೊಂದು ಸವಿ ಹೊ |
ಯ್ದಾಟ ಸವಿ ಬಯ್ಯತಿಸವಿಯು ಬೂ |
ತಾಟ ಸವಿ [ಚುಂಬನವು ಸವಿ ಬಿಡೆಯುಪ್ಪು]ದಧಿಕಸವಿ ||
ತೋಟಿ ಸವಿ ಮುಳಿಸೊಂದು ಸವಿಯೊಡ |
ಗೂಟ ಸವಿಯೆನಿಪಬಲೆಯರ ತನಿ |
ಬೇಟಕಿಂದಿಳೆಯೊಳಗೆ ಸವಿಯಿಲ್ಲೆಂದು ವಿಟ ನುಡಿದ || ೬೯
ಹರಿದು ರಾಗಿಸಿ ಗಳಹಿ ಮಣಿಯೋ |
ವರಿಯ ವೀಣೆಯ ಕಳೆಯ ಖಡ್ಡಿಯ |
ಸಿರದೆ ಕಸವೆಂದುಚ್ಚಿ ದನು ಪಡಿಗವಸು ತಂದಿಡಲು ||
ತರುಣಿ ತೆಗೆ ಹಸಿವಾಗದೆನಲಾ |
ಶ್ಚರಿಯುದಲಿ ಸಿರಿಗಂದಪತ್ತರೆ |
ಸುರಿವ ಗಾವಿಲವಿಟರ ನಗುವಬಲೆಯರಸೀಕ್ಷಿಸಿದ || ೭೦
ಸಿರಿಯು ಸಪ್ರಭೆ ವೃದ್ಧಿ ವಿವಿಧಾ |
ಭರಣವಿತ್ತಡೆ ಹಾನಿ . . . ಯುನ |
ವರತ ರಮಿಸಲು ನಿಂದೆಯಿಲ್ಲೋಕರಿಕೆ ಬಱಿಕೆಲ್ಲ ||
ಗರುವನಹನೆಲ್ಲರೊಳು ಸುತರವ |
ತರಿಸಿ ಸುಗತಿ ಕುಲಾಂಗನೆಯೊಳಿದ |
ನಱಿದು ಬಿಡ ದುರ್ಮಾರ್ಗವೇಶಿಯುನೆಂದು ವಿಟ ಜಱಿದ || ೭೧
ಹರೆದಳಕ ಬೆಳುಪಾದಧರ ನೀ |
ರೂರೆವ ತನು ಬಿಗುಹಡಗಿದುತ್ಕುಚ |
ವರನಖಾಂಕಿತವಕ್ಷ ಡಗೆ ಹೊಯ್ವಳ್ಳೆ ಕೆಂಗಣ್ಣು ||
ಜರಿದ ನಿಱಿ ಬಿಡುಮುಡಿ ಪಸಾನನ |
ಮೆಱೆಯುತಿರೆ ಸುರತಾಂತದಲಿ ತೆಂ |
ಬೆಲರ ತಾವುತ್ತಿರ್ದ ಸೌಧದ ಸತಿಯನೀಕ್ಷಿಸಿದ || ೭೨
ತನುವ ತೊಯ್ ಕುಸುಮಗಳ ತಿಗುರರ |
ಗಿಣಿಯನರೆ ಕುಂಕುಮವನೊಂದಿಸು |
ಮನೆಯ ತೆಯ್ ಮಲಯಜವ ಧವಳಿಸು ಜರೆಯ ತರಿ ಫಲವ ||
ಪಣೆ ಲಲಾಮವ ಕಟ್ಟು ಪಾನವ |
ಹಣೆಗೆ ರಚಿಸೆಂದೂರ್ವಳಬಲಾ |
ಜನದೊಡನೆ ತಾ ನುಡಿದಳಿನಿಯುನನುಱಿದ ಪಕಳದಲಿ || ೭೩

ಹರೆದುವಳಕವಿದೇನು ಗಾಳಿಯೊ |
ಳುರುಱೆತೇಕೆ ಸುಗಂಧ ಮೇಲಿದೆ |
ನೆರಸಿತೇಕೆ ಬೆವರ್ತುಱ ಬಿಸಿಲಿಂ ಕೆಟ್ಟುದೇಕ ನಿಱ ||
ಹರಿದು ನಖವೆನೆ ಕೇತಕಿಯ ಮು |
ಳ್ಳೊರಸಿದಂತೋಪರೊಳು ನೆರೆದೀ |
ಪರಿಯೊಳೊಡತಿಗೆ ಹುಸಿವ ಕೆಳದಿಯನರಸನೀಕ್ಷಿಸಿದ || ೭೪
ಜಱಿದೊಡದ ಲೆಕ್ಕಿಸನು ಬೈದರೆ |
ಪರಿಹರಿಸಿ ಬಗೆಗೊಳ್ಳದೀ ಮುಖ |
ಸರಸಿಜವ ಚುಂಬಿಸುವ ನೂಕಿದೊಡಪ್ಪುವನು ಹೊಡೆಯೆ ||
ಕರವನೊತ್ತುವನೊದೆದೊಡಡಿವಿಡಿ |
ದೆಱಗುವನು ತಾನೆಂತವಗೆ ನಿ |
ಷ್ಕರುಣದಲಿ ತಾಳುವೆನು ರೋಷವನೆಂದಳಿಂದುಮುಖಿ || ೭೫
ಸರಸವಚನಾಮೃತವ ಕರ್ಣದಿ |
ಸುರಿಯುತಾಲಿಂಗನವೆಸಗಿ ಚಾ |
ತುರದಿ ಚುಂಬಿಸಿ ಲಲ್ಲೆಗೈದು ಮನೋಜರಸವುದಿಸೆ ||
ಪುರುಷಗಿನಶಿರಸವು ತೀವಿರೆ |
ನೆರೆವುದನು ಸದ್ವಿಟನು ಯಮಕಿಂ |
ಕರನವೊಲು ಕೂಡುವನು ನರಪಶುವೆಂದಳಿಂದುಮುಖಿ || ೭೬
ಇನಿಯ ಬಾರಂದೆ ಹೊತ್ತು ಹೋಯ್ತು ಕ |
ಟೆನುತ ಸುಯ್ದು ನಿರಾಶೆಯಾಯಿ |
ತ್ತೆನುತ ಬೇಸತ್ತಱಲಿ ಮುಳಿದು ವಿಲೇಪನವನುಱಿದು ||
ವಿನುತ ಮಾಲ್ಯವನುಗಿದು ಮಣಿಮಂ |
ಡನವ ತೆಗೆದೀಡಾಡಿ ದೀಪವ |
ಕನಲಿ ಸೆಱಗಲಿ ಬೀಸಿದಬಲೆಯನರಸನೀಕ್ಷಿಸಿದ || ೭೭
ಸುರಧನುವಿನಂದದಲಿ ನೀರ |
ಕ್ಷರದ ವೊಲು ಮಿಂಚಂತೆ ಕನಸಿನ |
ಪರಿಯೊಳಭ್ರಚ್ಛಾಯೆಯಂತೆ ನಿಹಾರದಂದದಲಿ ||
ತೆರೆಯವೊಲು ಮೃಗತೃಷ್ಣೆಯವೊಲಂ |
ಬುರುಹನೇತ್ರೆಯರೊಲುಮೆಗಳು ಸು |
ಸ್ಥಿರಗಳಲ್ಲೆಂದೊರ್ವ ವಿಟನೊರ್ವಂಗೆ ನೇಮಿಸಿದ || ೭೮

ತರುಣಿಯರಿಗಾಕಾರವನು ವಿ |
ಸ್ತರದಿ ತೋಱಿಸಿ ಭದ್ರವಶ್ಯಾ |
ಕರುಷ ಮಾಯುದಿ ಕೂಚಿಮಾರ ವಚೋವಿಲಾಸದಲಿ ||
ನೆಱೆವನಾಪಾಂಚಾಲ ವಸ್ತ್ರಾ |
ಭರಣಕಾಂಚನವಿತ್ತು ದತ್ತಕ |
ನೆರೆವನವರಂಗಿತವನಱಿ ಸುತೆಯೆಂದಳೆಂದುಮುಖಿ || ೭೯

ಸರಸ ಶೂರನುದಾರನೊಳು ಚಾ |
ತುರಿಯನೊಳು ರತಿಯೊಳು ಪ್ರಗಲ್ಭನೊ |
ಘುರುಕಳಾವಿದ ಸತ್ಯವಿದನಲಿ ಕನ್ನೆ ತನವೞಿದ ||
ಪುರುಷನೊಳು ಗಾಯಕನೊಳಿಷ್ಟವ |
ಭರದಿ ಮಾಡುವನೊಳು ಪ್ರಸಿದ್ಧನೊ |
ಳೆಱಕವುಂಟಂಗನೆಯರಿಗೆ ದಿಟವೆಂದು ವಿಟ ನುಡಿದ || ೮೦

ಘನದಶನೆ ಲಂಬೋಷ್ಠಿ ವಿಷಮ |
ಸ್ತನೆ ನತಶ್ರುತೆ ಶೂರ್ಪನಖಿ ವಾ |
ಮನೆ ವಿಕಳೆ ರೋಮಾಂಗಿ ಮಾರ್ಜಾಲಾಕ್ಷಿ ಕಪಿಲಕಚೆ ||
ಶುನಕಯಾನೆ ಶಿಲಾಂಘ್ರಿ ಸೂಚ್ಯಾ |
ನನೆ ಖುಜಾದುರ್ಗಂಧೆಯೆನಿಪಂ |
ಗನೆಯರಿಂದ ಗತಾಯು ಪುರುಷಂಗೆಂದು ವಿಟ ನುಡಿದ || ೮೧

ಪುರುಷವಿದ್ವೇಷಿಣಿ ನಪುಂಸಕ |
ನರಸಿ ರೋಗಿಯ ಭಾರ್ಯೆ ಮೂಢನ |
ತರುಣಿ ವೃದ್ಧನ ವಧು ಮಲಿನವಧು ದರಿದ್ರವಧು ||
ವರಕಲಾವಿದೆ ಬಾಲೆ ಕಾಮಾ |
ತುರೆ ವಿದಗ್ಧ ಪ್ರಕಟದಂಗನೆ |
ಯರುಗಳೊಂದುನರಪ್ರಯತ್ನದೊಳೆಂದು ವಿಟ ನುಡಿದ || ೮೨

ನೂತನಪ್ರಸವಾಂಗನೆಯರು |
ಸ್ನಾತೆ ನಾಟ್ಯಸ್ವರದದಾಂಗಿ ರ |
ತಾತುರೆ ನವಜ್ವರಿತೆ ಪಥೇಷಣೊನ್ಮೇಷೆ ಗರ್ಭವತಿ ||
ಖ್ಯಾತೆ ವಿರ್ರ ಪ್ರಣಯಕಲಹೋ |
ಪೇತೆ ಮಧುಮುದೆಯೆನಿಪ ಸತಿಗೆ ಮ |
ಹಾತಿಕಾಮೋದ್ರೇಕ ಜನಿಸಿಹುದೆಂದು ವಿಟ ನುಡಿದ || ೮೩

ಫಲಕುಸುಮತಾಂಬೂಲಮಧುರಾ |
ವಳಿಗಳತಿಬಾಲೆಯನು ಭೂಷಣ |
ಲಲಿತವಸ್ತ್ರ ಪ್ರತತಿಯಿತ್ತೊಡಬಡಿಸು ಯೌವನೆಯ ||
ಹಲವು ಪರಿಯ ಕಳಾವಿಧೋಕ್ತಿಯೊ |
ಳೊಲಿಸು ಪ್ರೌಢೆಯನಿಚ್ಛೆಯಿಂದು |
ಜ್ವಲಗುರುತ್ವದೊಳೊಲಿಸು ಲೋಲೆಯನೆಂದು ವಿಟ ನುಡಿದ || ೭೪

ದಾಸಿ ರಜಕಕ್ಷೌರಕಸ್ತ್ರೀ |
ವೇಸಿ ವೈದ್ಯಸಗೋತ್ರೆ ಭಿಕ್ಷುಕಿ |
ದೇಶಕಾಲೋಪಾಯಕೋವಿದೆ ಪೂತೆ ಚಿತ್ರಕರ ||
ಯೋಷಿ ರೋಗಿಣಿ ಸೂಲಗಿತ್ತಿ ನಿ |
ರೋಷಿ ಸೂಚನೆಗೂಡಿ ಗುಣಮೆಱಿ |
ವಾಸತಿಯರನು ಮಾಡು ದೂತಿಯನೆಂದು ವಿಟ ನುಡಿದ || ೭೫

ವಿರಳರಂತಸ್ಥೂಲನಾಸಿಕ |
ದುರಿಯುಚಾಂಕದ ರೋಮ ಪೃಷ್ಠಾಂ|
ತರದ ಸುಟಿ ನಸುನಾಭಿಕೂಪ ಕಪೋಲ ಭ್ರೂಬಂಧ ||
ಧರಣಿ ಸೋಂಕದ ಕಿಱುವೆರಳು ಪೆ |
ರ್ಬೆರಲು ಮಿಕ್ಕುಟಿದಂಘ್ರಿಯಂಗುಲಿ |
ಮೆಱಿಯುತಿರಲತಿಜಾರೆಯುವಳೆಂದೊರ್ವ ವಿಟ ನುಡಿದ || ೭೬

ಮಾಲಿಕ ವ್ಯವಹಾರ ಕಮ್ಮಡಿ |
ವಾಳ ಚಿಪ್ಪಿಗ ಚಿನ್ನಗೈಕ ನೃ |
ಪಾಲಸೇವಕನಕ್ಕಸಾಲೆ ವಿದೂಷ ತಳವಾಱ ||
ಜಾಲೆಗಾಱ ಕಳಾಕುಶಲ ತಾಂ |
ಬೂಲಿಕರ ಶುಕವಿಶ್ವವಾಗ್ಮಿಯ |
ನಾಳಬೇಹುದು ಚದುರ ಕುಶಲರಿಗೆಂದು ವಿಟ ನುಡಿದ || ೭೭

ಧರಣಿಪತಿ ಕೇಳಿಂತು ಜೇವಂ |
ಧರನು ವಿವಿಧವಿಚಿತ್ರರಚನೆಯ |
ನುರುತರದಿ ನೋಡುತ್ತ ವಿಟರು ವಿನೋದಿಗಳು ಸಹಿತ ||
ಪುರವ ರಾತ್ರಿಯ ಚರಿಸಿ ವಹಿಲದಿ |
ಮರಳಿ ತನ್ನರಮನೆಯನೆಯ್ದಿಯೆ |
ಪರನು ಹರ್ಷದೊಳಿರ್ದನಮರೇಂದ್ರನ ಸುತೇಜದಲಿ || ೭೮

ಇದು ವಿನಮದಮರೇಂದ್ರ ಶ್ರೀಜಿನ |
ಪದಕಮಲಷಟ್ಚರಣ ವಾಣೀ |
ವದನದರ್ಪಣ ಭೂಸುರೋತ್ತಮ ಬಸವಣಾಂಕಸುತ ||
ಚದುರ ಭಾಸ್ಕರರಚಿತ ಧರ್ಮ |
ಪ್ರದನ ಜೀವಂಧರನ ಚರಿತೆಯೊ |
ಳಿದುವೆ ಪುರ ರಾತ್ರೀವಿಹಾರಣವರಸ ಕೇಳೆಂದ || ೮೯

ಹದಿನೇಳನೆಯ ಸಂಧಿ ಮುಗಿದುದು.

---

## ಹದಿನೆಂಟನೆಯ ಸಂಧಿ

---

ಸೂಚನೆ|| ಕ್ಷಿತಿಯನತಿ ವೈರಾಗ್ಯದಿಂದವೆ |
ಸುತ ವಸುಂಧರಗಿತ್ತು ತಪದು |
ನ್ನತದಿ ಜೀವಂಧರನು ಪಡೆದನು ಮೋಕ್ಷಸಂಪದವ ||

ಧರಣಿಪತಿ ಕೇಳಿಂತು ಜೀವಂ |
ಧರನು ಸಕಲಮಹೀತಳವ ಸ |
ಚ್ಚರಿತದಿಂ ಪಾಲಿಸುತ ಮುಱಿಹೊಕ್ಕವರ ಮನ್ನಿಸುತ ||
ಎಱಗಿದವರಿಂಗಭಿಮತವನಿ |
ತ್ತರಿಗಳನು ಸಂಹರಿಸುತ ನಿರ್ಭಯ |
ಕರದಿ ರಾಜ್ಯವನಾಳಿದನು ಹಲಕಾಲವೊಲವಿನಲಿ || ೧

ಖ್ಯಾತಿಯಲಿ ರಘುರಾಮನನು ನಯ |
ನೀತಿಯಲಿ ಭರತನನು ಸದ್ಧ |
ರ್ಮಾತಿಶಯದಲಿ ಧರ್ಮಜನ ವಿಕ್ರಮದೊಳರ್ಜುನನ ||
ನೂತನಾಕಾರದಲಿ ಮದನನ |
ವೀತರಾಗನ ಭಕ್ತಿಯಲಿ ಪುರು |
ಹೂತನನು ಪೋಲ್ತಿಂತು ಜೀವಂಧರನು ರಂಜಿಸಿದ || ೨

ಹುಸಿ ಕಪಟ ಕುಲಧರ್ಮವನು ಬಿ |
ಟ್ಟಿಸಗುವಣ ಪಾದರ ಪರಸ್ತ್ರೀ |
ವ್ಯಸನವತ್ಯಾಸ್ವಾದವಾತ್ಮಸ್ತುತಿ ಸುರಾಪಾನ ||
ನುಸುಳು ಹಿಂಸೆ ಮಹಾಕಲುಷ ಕ |
ರ್ಕಶವಚನ ಬಕವೃತ್ತಿ ಮಧುದು |
ರ್ವ್ಯಸನವಿಲ್ಲಾ ನೃಪನ ಕಾಲದೊಳರಸ ಕೇಳೆಂದ || ೩

ಒಂದುದಿನ ಜೀವಂಧರನು ತ |
ನ್ನ ಮಂದಿರದ ದವಳಾರದಲಿ ಸಾ |
ನಂದದಲಿ ತನ್ನರಸಿಯರು ಸಹಿತೆಯ್ದಿ ವಿಹರಿಸುತ ||
ನಂದನದೊಳಿದಿರಿನಲಿ ವನಚರ |
ವೃಂದವತಿ ಬೆಡಗಿಂದಲಾಡಲು |
ಮಂದಹಾಸದೊಳಿರದೆ ನೋಡುತ್ತಿರ್ದನೊಲವಿನಲಿ || ೪

ವನಚರಿಯನೊಂದನ್ಯವನಚರ |
ನನುನಯದಿ ನೆರೆಯಲ್ಕೆ ಕಂಗನೆ |
ಕನಲಿ ತದ್ವನಚರಿಯ ವಲ್ಲಭ ಬಂದು ತಾನದನು ||
ಹನನವೆಯ್ದಿಸಲುಭಯಪಕ್ಷದ |
ವನಚರಾವಳಿ ಕಾದಿ ಮಡಿಯಲು |
ಜನಪ ಜೀವಂಧರನು ಕಂಡೋರಂತೆ ಬೆಱಗಾದ || ೫

ಈಗ ನೋಡುತ್ತಿರಲು ಕಪಿಗಳು |
ರಾಗಿಸಿದ್ದುವು ಮಗುೞ ತಾನಿಂ |
ತೀಗಳೀಕ್ಷಿಸುತಿರಲು ಮಡಿದುವು ನರರ ಸಂಸಾರ ||
ಆಗದೀವನಚರಗಳಂತೆ ವಿ |
ಯೋಗವಸ್ಥಿರವೆನುತ ನೃಪ ವೈ |
ರಾಗಿಯದೊಳುದ್ಯುಕ್ತನಾದನು ತಪಕೆ ವಹಿಲದಲಿ || ೬

ಮಲರುಧಿರರೋಮಾಸ್ಥಿತುಂಬಿಹ |
ಗೞಗೆ ಮೂತ್ರೇಂದ್ರಿಯವಿಳಾಸದ |
ನಿಲಯ ವಾತದ ಪಿತ್ತದ ಶ್ಲೇಷ್ಮಾದಿರೋಗಗಳ ||
ನೆಲೆ ಮಹಾ ದುರ್ಗಂಧ ದೋಷಾ |
ವಳಿಗೆ ಸೀಮೆಯದಾದೊಡೆಯಿಹದ |
ಬೆಳವಿಗೆಯ ಸೌಖ್ಯವನು ಸುಡಸುಡಲೆಂದನಾಭೂಪ || ೭

ಧಾರೆಯೊಳು ಪುದಿದಿರ್ದ ಮಧುವಿಗೆ |
ಸೇರುವಳೆಯಂತೋವದರ್ಕ |
ಕ್ಷೀರವನು ಹಾಲೆಂದು ಸವಿವಂದದಲಿ ಲವಣವನು ||
ಚಾರುಶರ್ಕರೆಯೆಂದು ಮೆಲುವಂ |
ತಾರಯಲು ಲೋಕದಿ ನರರ ಸಂ |
ಸಾರವೀಪರಿಯೆಂದು ತನ್ನೊಳು ನೆನೆದನಾಭೂಪ || ೮

ಎಂದು ಸುರಪನ ಸಂಪದಕೆ ಸರಿ |
ಯೆಂದೆನಿಪ ತದ್ರಾಜ್ಯಲಕ್ಷ್ಮಿಯು |
ನಂದು ತೃಣಸಮವಾಗಿ ಕಂಡತಿಹೇಸಿ ಪರಿಹರಿಸಿ ||
ಕುಂದದೆ ತಪೋಲಕ್ಷ್ಮಿಯನು ಸಾ |
ನಂದದಿಂದಿಚ್ಛೈಸಿ ನೃಪ ಜೀ |
ವಂಧರನು ತನ್ನಯ ಕುಮಾರ ವಸುಂಧರಗೆ ನುಡಿದ || ೯

ಎಲೆ ಮಗನೆ ನಾನೀಸು ದಿನ ಭೂ |
ತಲವನಭಿರಕ್ಷಿಸಿದೆ ನೀನಿ |
ನ್ನೆಳೆಯ ಭಾರವ ತಾಳ್ದು ಪಟ್ಟವ ಧರಿಸು ರಾಜ್ಯವನು ||
ತಳೆಯಲಾನಿನ್ನಾಱೆ ನೀ ಕೈ |
ಕೊಳುವುದೆನೆ ಬೆಂಬೞಿದು ಮುಱುಗುತ |
ಲಲಿತದಶನಾಂಶುಗಳು ಪಸರಿಸೆ ನುಡಿದನವ ಪಿತಗೆ || ೧೦

ಗಜ ಹೊಱುವ ಭಾರವನು ಭಾವಿಸ |
ಲಜನು ತಾನೇಂ ಹೊಱುವುದೇ ಭೂ |
ಭುಜಶಿರೋಮಣಿ ನೀವು ಹೊಱುವೀರಾಜ್ಯಭಾರವನು ||
ನಿಜದಿ ನಾನೆಂತಾನುವೆನು ರಿಪು |
ವಿಜಯ ನೀವ್ ಕೆಲಕಾಲವೆಲ್ಲಿಗೆ |
ಬಿಜಯಮಾಡದೆ ರಾಜ್ಯವನು ಪಾಲಿಸಲು ಬೇಕೆಂದ || ೧೧

ಎಂದೊಡಾನಿಹುದಿಲ್ಲವೆಂದು ವ |
ಸುಂಧರಗೆ ನಯನೀತಿಯಲಿ ಜೀ |
ವಂಧರನು ನೆರೆ ತಿಳುಹಿ ಪಟ್ಟಕೆ ಭದ್ರಹಸ್ತಿಗಳ ||
ಒಂದು ತರಿಸಿಯೆ ಭೂಸುರರ ಮತ |
ದಿಂದಲಾರಾಜ್ಯಾಭಿಷೇಕವ |
ನಂದು ಮಾಡಿಸಿ ಸರ್ವರನು ಕಾಣಿಸಿದನೊಲವಿನಲಿ || ೧೨

ಧುರದಳೋಡಿದರನ್ಯಸತಿಯರ |
ನೆರೆಯದಿರು ನನ್ನಾಣೆಯಾಜ್ಞೆಯ |
ಕೊಱತೆಯನು ಮಾಡದಿರು ಕಾರ್ಯವ ಬಿಡದಿರಾವನೊಳು ||
ಜಱೆಯದಿರು ಹಿರಿಯರನು ಧರ್ಮವ |
ತೊಱೆಯದಿರು ಜಿನಪಾದಪದ್ಮವ |
ಮಱೆಯದಿರು ಸುತಯೆಂದು ಬೋಧಿಸಿದನು ಕುಮಾರಕನ || ೧೩

ವರಕುಮಾರವಸುಂಧರನನೀ |
ಪರಿಯ ಬೋಧಿಸಿ ಬೞಿಕ ಜೀವಂ |
ಧರನು ತನ್ಮುನಿವರರ ಕೈಯಲಿ ದೀಕ್ಷೆಯನು ಕೊಂಡು ||
ಅರುಹ ನೆಲಸಿಹ ಸಮವಸರಣದಿ |
ನಿರಶನದೊಳುಗ್ರೋಗ್ರತಪವನು |
ವಿರಚಿಸಿಯೆ ಮೋಕ್ಷವನು ಪಡೆದನು ಭೂಪ ಕೇಳೆಂದ || ೧೪
ಪರಮಮೋಕ್ಷವ ಪಡೆದು ಸರ್ವೇ |
ಶ್ವರನು ದಿಟ ತಾನಾದ ಜೀವಂ |
ಧರನೃಪಾಲಕನೀತನೆಂದಾಶ್ರೇಣಿಕಗೆ ಮೊದಲ ||
ತೆಱನನಾಗೌತಮಮುನೀಶ್ವರ |
ನಱುಹೆ ವಿಸ್ಮಯಬಟ್ಟು ಹರುಷದ |
ಶರಧಿಯೊಳಗೋಲಾಡಿದನು ಮಗಧೇಂದ್ರನನವರತ || ೧೫
ಬೞಿಕ ಶ್ರೇಣಿಕನಾಮುನೀಶರು |
ಗಳಿಗೆಱಗಿ ಬೀೞ್ಕೊಂಡು ತನ್ನಯ |
ಹೊೞಲಿಗೆಯ್ದಿಯೆ ಬಿಡದೆ ಜೀವಂಧರನ ನೆನೆನೆನೆದು ||
ಪುಳಕಿತಾಂಕಿತನಾಗಿ ಧರಣೀ |
ತಳವನಮಳಕ್ಷಾತ್ರಧರ್ಮದೊ |
ಳೊಲಿದು ಮಗಧಾಧೀಶ ಪಾಲಿಸುತಿರ್ದನೊಲವಿನಲಿ || ೧೬
ಧರೆಯೊಳೀಜೀವಂಧರನ ಭಾ |
ಸುರದ [ಪಾವನದ] ಚರಿತೆಯನು ಪ |
ಸರಿಸದರ ದಾರಿದ್ರ್ಯಭವದುಷ್ಕರ್ಮವಡಗುವುವು ||
ಸಿರಿ ಸುತೇಜಾಯುಷ್ಯ ಸಂಪದ |
ಪರಮಸದ್ಗತಿಯಹುದು ಸರ್ವೇ |
ಶ್ವರನ ಮತವಿದು ನಂಬೆನುತ ಭಾಸ್ಕರನು ಬೋಧಿಸಿದ || ೧೭
ಧರಣಿಯೊಳಗುಳ್ಳಖಿಳ ತೀರ್ಥಂ |
ಕರರ ಸದ್ದರ್ಶನದ ಫಲ ವಿ |
ಸ್ತರದಿ ಚಾತುರ್ವಿಧದ ದಾನವ ಮಾಡಿದನಿತು ಫಲ ||
ಸುರುಚಿರದೊಳರ್ಹತ್ಪ್ರತಿಷ್ಠೆಯ |
ವಿರಚಿಸಿದ ಫಲವಹುದು ಜೀವಂ |
ಧರನ ಚರಿತೆಯೊಳೊಂದು ಪದವನು ಕೇಳ್ದ ಮನುಜರಿಗೆ || ೧೮

ಶರಗತಿತ್ರಯಚಂದ್ರಸಂಖ್ಯೆಯ |
ವರಶಕಾಬ್ದ ಕ್ರೋಧಿಸಂವ |
ತ್ಸರದ ಫಾಲ್ಗುಣಶುದ್ಧ ದಶಮಿ ದಿನೇಶವಾರದಲಿ ||
ಮೆಱಿವ ಪೆನುಗೊಂಡೆಯ ಸುಶಾಂತೀ |
ಶ್ವರನ ಜಿನವಾಸದಲಿ ಜೀವಂ |
ಧರನ ಚರಿತೆಯ ರಚಿಸಿದನು ಜಾಣ್ಮೆಯಲಿ ಭಾಸ್ಕರನು || ೧೯
ಇದು ವಿನಮದಮರೇಂದ್ರಶ್ರೀಜಿನ |
ಪದಕಮಲಷಟ್ಚರಣ ವಾಣೀ |
ವದನದರ್ಪಣ ಭೂಸುರೋತ್ತಮ ಬಸವಣಾಂಕಸುತ ||
ಚದುರ ಭಾಸ್ಕರರಚಿತ ಧರ್ಮ |
ಪ್ರದನ ಜೀವಂಧರನ ಚರಿತೆಯೊ |
ಳಿದುವೆ ನಿರ್ವಾಣಾದಿವರ್ಣನೆಯೀಪ್ರಬಂಧದಲಿ || ೨೦

ಹದಿನೆಂಟನೆಯ ಸಂಧಿ ಮುಗಿದುದು.

---

ಜೀವಂಧರಚರಿತೆ ಸಂಪೂರ್ಣ.

---